ಬುಧವಾರ, ಅಕ್ಟೋಬರ್ 4, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 275 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮಾನವನ ದೇಹದೊಳಗೆ ಕಾರ್ಯನಿರ್ವಹಿಸಬಲ್ಲ ಮೈಕ್ರೋರೋಬೋಟ್‌ಗಳ ಸಂಶೋಧನೆ ನಡೆದಿದೆ



ಆಳ-ಅಗಲ
ಎನ್‌ಡಿಎ ಸೇರಲು ಬಯಸಿದ್ದ ಕೆಸಿಆರ್: ಮೋದಿ 7
ಸಾಬರಮತಿ ದಡದಲ್ಲಿ ಕ್ರಿಕೆಟ್ ಘಮಲು
ಖರೀದಿಯಾಗದ 3 ವರ್ಷಗಳ ಪುಸ್ತಕ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,512 ▼	19,528 ▼	₹58,280 (ಬೆಂಗಳೂರು)	₹69,100 (ಬೆಂಗಳೂರು)	83.20 ▼

ಜಾತಿಗಣತಿ ಅಜ್ಞಾತವಾಸಕ್ಕೆ ಕೊನೆ?

ಕಾಂತರಾಜ ಆಯೋಗದ ವರದಿಯೋ, ಹಾಲಿ ಆಯೋಗ ಪರಿಷ್ಕರಿಸಿದ ವರದಿಯೋ ಎಂಬ ಜಿಜ್ಞಾಸೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಐದು ವರ್ಷಗಳ ಹಿಂದೆಯೇ ಸಿದ್ಧಗೊಂಡಿರುವ ಕರ್ನಾಟಕದ ಜಾತಿ ಗಣತಿಯ (ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ) ವರದಿ ಈಗಲಾದರೂ ಅಜ್ಞಾತವಾಸದಿಂದ ಹೊರಬರಲಿದೆಯೇ ಎಂಬ ತುರುಸಿನ ಚರ್ಚೆ ಶುರುವಾಗಿದೆ. ಬಿಹಾರ ಸರ್ಕಾರವು ಜಾತಿಗಣತಿ ವರದಿ ಬಿಡುಗಡೆ ಮಾಡಿದ್ದರಿಂದ ಈ ಚರ್ಚೆ ಈಗ ಇನ್ನಷ್ಟು ಕಾವು ಪಡೆದುಕೊಂಡಿದೆ.

ವರದಿಯನ್ನು ತಕ್ಷಣ ಬಿಡುಗಡೆ ಮಾಡುವಂತೆ ಹಿಂದುಳಿದ, ಅತಿ ಹಿಂದುಳಿದ ಜಾತಿ ಒಕ್ಕೂಟಗಳು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತಿವೆ. ಯಾವುದೇ ಕಾರಣಕ್ಕೂ ವರದಿ ಬಿಡುಗಡೆ ಮಾಡದಂತೆ ರಾಜಕೀಯ ಪ್ರಾತಿನಿಧ್ಯದಲ್ಲಿ ಹೆಚ್ಚು ಪಾಲು ಪಡೆದಿರುವ ಪ್ರಬಲ ಜಾತಿಗಳ ಸಂಘಟನೆಗಳು ಒತ್ತಡ ಹಾಕುತ್ತಿವೆ. ಇದು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ ವರದಿ ಸ್ವೀಕರಿಸುವುದಾಗಿ ಹೇಳಿದ್ದ ಸಿದ್ದರಾಮಯ್ಯ, ಅಧಿಕಾರ ಹಿಡಿದ ಬಳಿಕ ವರದಿ ಸ್ವೀಕರಿಸಲು ಸಿದ್ಧವಿರುವುದಾಗಿ ಘೋಷಿಸಿದ್ದರು.

6ನೇ ಪುಟ ನೋಡಿ

ವಿರೋಧದ ವಾದವೇನು?

- ಜಾತಿ ಕಾರಣಕ್ಕೆ ಪ್ರಬಲ ಜಾತಿಗಳಿಗೆ ಸಿಕ್ಕಿರುವ ಹೆಚ್ಚಿನ ಪ್ರಾತಿನಿಧ್ಯ ಕೈತಪ್ಪುತ್ತದೆ ಎಂಬ ಭಾವನೆ
- ವರದಿ ಸ್ವೀಕರಿಸಿದರೆ ಬಹಿರಂಗಪಡಿಸುವಂತೆ ರಾಜಕೀಯ ಪಕ್ಷಗಳು, ಜಾತಿ ಸಂಘಟನೆಗಳಿಂದ ಒತ್ತಡ ಸಾಧ್ಯತೆ
- ಇಲ್ಲಿಯವರೆಗೆ ಮೀಸಲಾತಿ ವಂಚಿತವಾದ ಸಮುದಾಯಗಳಿಗೆ ಹೆಚ್ಚಿನ ಪಾಲು ಕೊಡಬೇಕಾಗುತ್ತದೆ ಎಂಬ ಆತಂಕ

ಪರ ವಾದವೇನು?

- ಹಿಂದುಳಿದಿರುವಿಕೆ ಆಧಾರದ ಮೇಲೆ ಪ್ರತಿ ಜಾತಿಗೆ ಸರ್ಕಾರಿ ಉದ್ಯೋಗ, ರಾಜಕೀಯ ಪ್ರಾತಿನಿಧ್ಯ ಲಭ್ಯವಾಗಲಿದೆ
- ವೈಜ್ಞಾನಿಕವಾಗಿ ‘ಪ್ರವರ್ಗ’ಗಳ ಮರು ವರ್ಗೀಕರಣ ಸಾಧ್ಯ
- ಸೌಲಭ್ಯ ವಂಚಿತ ಸಮುದಾಯಗಳಿಗೆ ಅನುಕೂಲ ಕಲ್ಪಿಸಬಹುದು. ಸಾಮಾಜಿಕ, ಶೈಕ್ಷಣಿಕ ಅಳತೆಗೋಲಿನಲ್ಲಿ ಮೀಸಲಾತಿ ನೀಡಬಹುದು

- 2011ರ ಜನಗಣತಿ ಪ್ರಕಾರ ರಾಜ್ಯದ ಜನಸಂಖ್ಯೆ 6.30 ಕೋಟಿ
- 6 ಕೋಟಿ ಜನರನ್ನು ಸಮೀಕ್ಷೆ ಒಳಗೊಂಡಿದೆ
- ಗ್ರಾಮೀಣ ಭಾಗದಲ್ಲಿ ಶೇ 99, ಬೆಂಗಳೂರಿನಲ್ಲಿ ಶೇ 84ರಷ್ಟು ಸಮೀಕ್ಷೆ ನಡೆದಿದೆ
- ಪರಿಶಿಷ್ಟ ಜಾತಿಯಲ್ಲಿ 101, ಪರಿಶಿಷ್ಟ ಪಂಗಡದಲ್ಲಿ 51 ಜಾತಿಗಳಿವೆ
- ಸರ್ಕಾರ ಗುರುತಿಸಿರುವ 816 ಇತರ ಹಿಂದುಳಿದ ಜಾತಿ ಮತ್ತು ಉಪಜಾತಿಗಳು ಸೇರಿ ಒಟ್ಟು 1,351 ಜಾತಿಗಳ ಕುರಿತು 55 ಮಾನದಂಡ ಆಧರಿಸಿ ಸಮೀಕ್ಷೆ ನಡೆದಿದೆ

‘ನವೆಂಬರ್ ಅಂತ್ಯದೊಳಗೆ ಸಲ್ಲಿಕೆ’



‘ಸಮೀಕ್ಷೆಯ ವರದಿಯನ್ನು ನವೆಂಬರ್ ಅಂತ್ಯದೊಳಗೆ ಸರ್ಕಾರಕ್ಕೆ ಸಲ್ಲಿಸುತ್ತೇವೆ. ನಮ್ಮ ಅವಧಿಯೂ ನವೆಂಬರ್‌ಗೆ ಮುಗಿಯಲಿದೆ. ವರದಿ ಬಿಡುಗಡೆಗೆ ಪ್ರಬಲ ಸಮುದಾಯದವರು ವಿರೋಧ ವ್ಯಕ್ತಪಡಿಸುತ್ತಿರುವುದು ಗೊತ್ತಿಲ್ಲ’ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬಿಹಾರದಲ್ಲಿ ಕೇವಲ ಜಾತಿ ಜನಗಣತಿ ಮಾಡಲಾಗಿದೆ. ಸರ್ಕಾರದಿಂದ ಸೌಲಭ್ಯ ಕಲ್ಪಿಸುವ ಸಲುವಾಗಿ ನಮ್ಮ ವರದಿಯಲ್ಲಿ ಹೆಚ್ಚಿನ ಮಾಹಿತಿ ಸಂಗ್ರಹಿಸಲಾಗಿದೆ. ವರದಿ ಕೊಡುವಂತೆ ನಮ್ಮ ಮೇಲೆ ಯಾರ ಒತ್ತಡವೂ ಇಲ್ಲ. ಸಮೀಕ್ಷೆ ಕೆಲಸಕ್ಕೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡಲಾಗಿದೆ. ಹೀಗಿರುವಾಗ ಸರ್ಕಾರಕ್ಕೆ ವರದಿ ಸಲ್ಲಿಸದೇ ಇದ್ದರೆ ಹೇಗೆ’ ಎಂದರು.

‘ಜಾತಿ ಗಣತಿ ವರದಿ ಇನ್ನೂ ನೀಡಿಲ್ಲ’

‘ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಜಾತಿ ಗಣತಿ ವರದಿಯನ್ನು ಇನ್ನೂ ನಮಗೆ ನೀಡಿಲ್ಲ. ವರದಿ ಕೇಳಿದ್ದೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

‘ಜಾತಿ ಗಣತಿ ಹಾಗೂ ಸಾಮಾಜಿಕ ಆರ್ಥಿಕ ಸರ್ವೆಗೆ ನಾನೇ ಆದೇಶಿಸಿದ್ದೆ. ವರದಿ ಪೂರ್ಣಗೊಳ್ಳುವ ಮುನ್ನ ನಮ್ಮ ಅವಧಿ ಮುಗಿಯಿತು. ನಂತರ ಬಂದ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿ ಆಗಿದ್ದ ಕುಮಾರಸ್ವಾಮಿ ವರದಿ ತೆಗೆದುಕೊಳ್ಳಲಿಲ್ಲ. ಹಾಗಾಗಿ, ಅದು ಹಾಗೇ ಬಿದ್ದಿದೆ’ ಎಂದರು.

‘ವರದಿ ನೀಡುವುದು ಆಯೋಗದ ಈಗಿನ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರ ಕೆಲಸ. ಅವರು ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರ ನೇಮಿಸಿದ ಅಧ್ಯಕ್ಷರಾಗಿದ್ದಾರೆ. ಇದೊಂದು ತೊಡಕಾಗಿದೆ’ ಎಂದರು.

ಹೊಸ ದಾಖಲೆಯ ಹೊಸ್ತಿಲಲ್ಲಿ ಭಾರತ

ಇತಿಹಾಸ ಬರೆದ ಚಿನ್ನದ ‘ರಾಣಿ’



ಚಿನ್ನ
ಅನ್ನು ರಾಣಿ
ಮಹಿಳೆಯರ ಜಾವೆಲಿನ್ ಥ್ರೋ
62 ಮೀ

ಹಾಂಗ್‌ಝೌ (ಪಿಟಿಐ): ಭಾರತ ತಂಡವು ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿ ಪದಕ ಗಳಿಕೆಯ ಹೊಸ ದಾಖಲೆಯ ಹೊಸ್ತಿಲಲ್ಲಿ ಬಂದು ನಿಂತಿದೆ. ಹತ್ತನೇ ದಿನವಾದ ಮಂಗಳವಾರ ಒಂಬತ್ತು ಪದಕಗಳನ್ನು ಭಾರತ ಗೆದ್ದುಕೊಂಡಿತು. ಪದಕಗಳ ಒಟ್ಟು ಸಂಖ್ಯೆಯು 69ಕ್ಕೇರಿತು. 2018ರಲ್ಲಿ ಬಾರತವು ಒಟ್ಟು 70 ಪದಕಗಳನ್ನು ಜಯಿಸಿತ್ತು. ಕೂಟದ ಇತಿಹಾಸದಲ್ಲಿ ಅದು ಭಾರತದ ಸರ್ವಶ್ರೇಷ್ಠ ಸಾಧನೆಯಾಗಿತ್ತು. ಈಗ ಆ ಸಾಧನೆಯನ್ನು ಮೀರಲು ಸಿದ್ಧವಾಗಿದೆ.

ಪುಟ 12

ಚಿನ್ನ
ಪಾರುಲ್ ಚೌಧರಿ
ಮಹಿಳೆಯರ 5000 ಮೀ ಓಟ
ಕಾಲ: 15ನಿ,14.75ಸೆ

ಬೆಳ್ಳಿ
- **ತೇಜಸ್ವಿನ್ ಶಂಕರ್** ಡೆಕಾಥ್ಲಾನ್ ಅಂಕ: 7666
- **ಮೊಹಮ್ಮದ್ ಅಫ್ಜಲ್** 800 ಮೀ ಓಟ 1ನಿ,48.43ಸೆ

ಕಂಚು
- **ಪ್ರೀತಿ ಪವಾರ್** ಬಾಕ್ಸಿಂಗ್ ಮಹಿಳೆಯರ 54 ಕೆ.ಜಿ
- **ನರೇಂದರ್ ಬೆರ್ವಾಲ್** ಬಾಕ್ಸಿಂಗ್ ಪುರುಷರ +92 ಕೆ.ಜಿ

ಕಂಚು
- **ಕೆನೊಯಿಂಗ್** ಅರ್ಜುನ್ ಸಿಂಗ್–ಸುನಿಲ್ ಸಿಂಗ್ ಪುರುಷರ ಡಬಲ್ಸ್ 1000 ಮೀ

ಗ್ರಾಮಗಳಲ್ಲಿ 66 ಸರ್ಕಾರಿ ಸೇವೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಜನರಿಗೆ ಅವಶ್ಯವಿರುವ 22 ಸೇವೆಗಳ ಜತೆ ಇನ್ನೂ 44 ಅಗತ್ಯ ಸೇವೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆಯು ಗ್ರಾಮ ಪಂಚಾಯಿತಿ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಆರಂಭಿಸಿದೆ.

ಗ್ರಾಮೀಣಾಭಿವೃದ್ಧಿ ಇಲಾಖೆಯ ಸೇವೆಗಳ ಜೊತೆಯಲ್ಲಿ ಇನ್ನುಮುಂದೆ ಸಾರ್ವಜನಿಕರಿಗೆ ಕಂದಾಯ, ಕಾರ್ಮಿಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಇಂಧನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸೇವೆಗಳನ್ನು ಪಡೆಯಬಹುದಾಗಿದೆ ಎಂದು ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಪ್ರತಿಯೊಂದು ಹೋಬಳಿಯು 6–7 ಗ್ರಾಮ ಪಂಚಾಯಿತಿಗಳನ್ನು ಹೊಂದಿದೆ.

11ನೇ ಪುಟ ನೋಡಿ

ನ್ಯೂಸ್‌ಕ್ಲಿಕ್ ಮೇಲೆ ದಾಳಿ ಸಂಪಾದಕ ಬಂಧನ

ನವದೆಹಲಿ (ಪಿಟಿಐ): ಆನ್‌ಲೈನ್ ಸುದ್ದಿತಾಣ ನ್ಯೂಸ್‌ಕ್ಲಿಕ್ ಹಾಗೂ ಅಲ್ಲಿ ಕೆಲಸ ಮಾಡುವ ಪತ್ರಕರ್ತರಿಗೆ ಸೇರಿದ 30 ಸ್ಥಳಗಳಲ್ಲಿ ಮಂಗಳವಾರ ಶೋಧ ನಡೆಸಿರುವ ದೆಹಲಿ ಪೊಲೀಸರು, ಸುದ್ದಿತಾಣದ ಕಚೇರಿಯ ಬಾಗಿಲಿಗೆ ಬೀಗ ಜಡಿದು, ಮೊಹರು ಹಾಕಿದ್ದಾರೆ. ಅಲ್ಲದೆ, ಅದರ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರನ್ನು ರಾತ್ರಿ ಬಂಧಿಸಿದ್ದಾರೆ.

ಸುದ್ದಿತಾಣವು ಚೀನಾ ಪರ ಪ್ರಚಾರಾಂದೋಲನ ನಡೆಸಲು ಹಣ ಪಡೆದಿದೆ ಎಂಬ ಆರೋಪದ ಅಡಿಯಲ್ಲಿ ಅದರ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಯುಎಪಿಎಯನ್ನು ಭಯೋತ್ಪಾದಕ ಚಟುವಟಿಗಳನ್ನು ನಿಗ್ರಹಿಸಲು ಬಳಸಲಾಗುತ್ತದೆ.

ನ್ಯೂಸ್‌ಕ್ಲಿಕ್ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 37 ಮಂದಿ ಪುರುಷರನ್ನು ದೆಹಲಿ ಪೊಲೀಸ್ ವಿಶೇಷ ಘಟಕದ ಕಚೇರಿಯಲ್ಲಿ ವಿಚಾರಣೆಗೆ ಗುರಿಪಡಿಸಲಾಗಿದೆ. ಒಂಬತ್ತು ಮಂದಿ ಮಹಿಳೆಯರನ್ನು ಅವರ ನಿವಾಸದಲ್ಲಿ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡಿಜಿಟಲ್ ಸಾಧನಗಳು, ದಾಖಲೆಗಳು ಮತ್ತು ಇತರ ಕೆಲವು ವಸ್ತುಗಳನ್ನು ಪರಿಶೀಲನೆಗಾಗಿ ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಪುರಕಾಯಸ್ಥ ಮಾತ್ರವಲ್ಲದೆ ನ್ಯೂಸ್‌ಕ್ಲಿಕ್‌ನ ಮಾನವ ಸಂಪನ್ಮೂಲ ವಿಭಾಗದ ಅಮಿತ್ ಚಕ್ರವರ್ತಿ ಅವರನ್ನು ಕೂಡ ಬಂಧಿಸಲಾಗಿದೆ.

ದೆಹಲಿ–ರಾಷ್ಟ್ರ ರಾಜಧಾನಿ

ನ್ಯೂಸ್‌ಕ್ಲಿಕ್ ಕಚೇರಿಯ ಬಾಗಿಲಿಗೆ ಪೊಲೀಸರು ಬೀಗ ಹಾಕಿ, ಮೊಹರು ಮಾಡಿದ್ದಾರೆ (ಪಿಟಿಐ ಚಿತ್ರ)

ಪ್ರದೇಶದಲ್ಲಿ ಮಂಗಳವಾರ ಬೆಳಿಗ್ಗೆಯಿಂದ ಶೋಧ ಪ್ರಕ್ರಿಯೆ ಶುರುವಾಗಿತ್ತು. ನ್ಯೂಸ್‌ಕ್ಲಿಕ್‌ನ ಸಂಸ್ಥಾಪಕರೂ ಆಗಿರುವ ಪುರಕಾಯಸ್ಥ ಅವರನ್ನು ಸುದ್ದಿತಾಣದ ಕಚೇರಿಗೆ ಕರೆತರಲಾಗಿತ್ತು.

ಊರ್ಮಿಳೇಶ್, ಅಭಿಸಾರ್ ಶರ್ಮ, ಅವನಿಂದ್ಯೊ ಚಕ್ರವರ್ತಿ, ಪರಂಜಯ್ ಗುಹಾ ಠಾಕುರ್ತ ಸೇರಿದಂತೆ ಕೆಲವು ಪತ್ರಕರ್ತರನ್ನು, ಇತಿಹಾಸಕಾರ ಸೊಹೇಲ್ ಹಶ್ಮಿ, ಸೆಂಟರ್ ಫಾರ್ ಟೆಕ್ನಾಲಜಿ ಆ್ಯಂಡ್ ಡೆವಲಪ್‌ಮೆಂಟ್‌ನ ಡಿ. ರಘುನಂದನ್ ಅವರನ್ನು ವಿಚಾರಣೆಗೆ ಗುರಿಪಡಿಸಲಾಗಿದೆ. ಅವರ ಮುಂದೆ 25 ಪ್ರಶ್ನೆಗಳನ್ನು ಇರಿಸಲಾಗಿದೆ ಎಂದು ಗೊತ್ತಾಗಿದೆ. ‘ಅವರ ವಿದೇಶ ಪ್ರವಾಸ, ಪೌರತ್ವ (ತಿದ್ದುಪಡಿ) ಕಾಯ್ದೆ ವಿರೋಧಿಸಿ ಶಾಹೀನ್ ಬಾಗ್‌ನಲ್ಲಿ ನಡೆದ ಪ್ರತಿಭಟನೆಗಳು, ರೈತರ ಪ್ರತಿಭಟನೆಗಳ ಬಗ್ಗೆ ಪ್ರಶ್ನೆ ಕೇಳಲಾಗಿದೆ’ ಎಂದು ಮೂಲವೊಂದು ತಿಳಿಸಿದೆ. ಇವರನ್ನು ಮೂರು ತಂಡಗಳನ್ನಾಗಿ (ಎ, ಬಿ ಮತ್ತು ಸಿ) ವಿಭಜಿಸಿ ಪ್ರಶ್ನಿಸಲಾಗಿದೆ ಎಂದು ಗೊತ್ತಾಗಿದೆ.

7ನೇ ಪುಟ ನೋಡಿ

ಎನ್‌ಎಲ್‌ಎಫ್‌ಟಿ, ಎಟಿಟಿಎಫ್ ನಿಷೇಧ

ನವದೆಹಲಿ: ತ್ರಿಪುರಾವನ್ನು ಸ್ವತಂತ್ರ ರಾಷ್ಟ್ರವಾಗಿಸಲು ಯತ್ನಿಸುತ್ತಿವೆ ಎಂಬ ಆರೋಪದಡಿ ರಾಷ್ಟ್ರೀಯ ತ್ರಿಪುರಾ ಮುಕ್ತಿ ರಂಗ (ಎನ್‌ಎಲ್‌ಎಫ್‌ಟಿ) ಮತ್ತು ಆಲ್ ತ್ರಿಪುರಾ ಟೈಗರ್ ಫೋರ್ಸ್ ಸಂಘಟನೆಗಳನ್ನು ಕೇಂದ್ರ ಸರ್ಕಾರ 5 ವರ್ಷ ನಿಷೇಧಿಸಿದೆ. 7

‘ರಾಜತಾಂತ್ರಿಕರನ್ನು ಕರೆಸಿಕೊಳ್ಳಿ’

ನವದೆಹಲಿ (ಪಿಟಿಐ): ದೇಶದಲ್ಲಿರುವ ರಾಜತಾಂತ್ರಿಕರ ಪೈಕಿ 41 ಮಂದಿಯನ್ನು ಅಕ್ಟೋಬರ್ 10ರ ಒಳಗಾಗಿ ವಾಪಸ್ ಕರೆಸಿಕೊಳ್ಳುವಂತೆ ಕೆನಡಾಕ್ಕೆ ಭಾರತ ಸೂಚಿಸಿದೆ ಎಂದು ‘ಫೈನಾನ್ಶಿಯಲ್ ಟೈಮ್ಸ್’ ಮಂಗಳವಾರ ವರದಿ ಮಾಡಿದೆ. 7

ಭೌತವಿಜ್ಞಾನ: ಮೂವರಿಗೆ ನೊಬೆಲ್

ಸ್ಟಾಕ್‌ಹೋಮ್(ಎಪಿ): ಎಲೆಕ್ಟ್ರಾನ್‌ಗಳ ಚಲನೆ ಮತ್ತು ವರ್ತನೆ ಕುರಿತು ಹೊಸ ಒಳನೋಟ ಒದಗಿಸುವ ಸಂಶೋಧನೆಗಾಗಿ ಮೂವರು ವಿಜ್ಞಾನಿಗಳನ್ನು ಈ ಬಾರಿಯ ಭೌತವಿಜ್ಞಾನ ಕ್ಷೇತ್ರದ ನೊಬೆಲ್ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

‘ತುಳಿತಕ್ಕೆ ಒಳಗಾದವರ ಸಮಾವೇಶ ತಪ್ಪಲ್ಲ’ 6
ನಾಂದೇಡ್: ಸಮಗ್ರ ತನಿಖೆಗೆ ಖರ್ಗೆ ಆಗ್ರಹ 7
ತಯಾರಿಕಾ ಚಟುವಟಿಕೆ 5 ತಿಂಗಳ ಕನಿಷ್ಠ 10
‘₹800 ಕೋಟಿ ಹೂಡಿಕೆ: ಕ್ರಿಪ್ಟನ್ ಆಸಕ್ತಿ’ 10
ದಾಖಲೆ ಪತ್ರ ಸಲ್ಲಿಕೆಗೆ ‘ಸುಪ್ರೀಂ’ ಸೂಚನೆ 11

ಪರಿಷ್ಕೃತ ದರದಲ್ಲಿ 6,664 ದಸ್ತಾವೇಜುಗಳ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಪರಿಷ್ಕೃತ ಮಾರ್ಗಸೂಚಿ ದರಗಳ ಆಧಾರದಲ್ಲಿ ಮಂಗಳವಾರದಿಂದ ಸ್ಥಿರಾಸ್ತಿ ಖರೀದಿ, ಮಾರಾಟಕ್ಕೆ ಸಂಬಂಧಿಸಿದ ದಸ್ತಾವೇಜುಗಳ ನೋಂದಣಿ ಆರಂಭವಾಗಿದೆ. ಮೊದಲ ದಿನ 6,664 ದಸ್ತಾವೇಜುಗಳ ನೋಂದಣಿ ಆಗಿದೆ.

ಮೊದಲ ದಿನ ₹14 ಕೋಟಿ ನೋಂದಣಿ ಮತ್ತು ಮುದ್ರಾಂಕ ತೆರಿಗೆ ಸಂಗ್ರಹವಾಗಿದೆ. ನೋಂದಣಿಗೆ 3,232 ಅರ್ಜಿಗಳೂ ಸಲ್ಲಿಕೆಯಾಗಿವೆ ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಮೂಲಗಳು ತಿಳಿಸಿವೆ.

ಸ್ಥಿರಾಸ್ತಿಗಳ ಮಾರ್ಗಸೂಚಿ ದರದಲ್ಲಿ ಸರಾಸರಿ ಶೇಕಡ 30ರಿಂದ ಶೇ 50 ರವರೆಗೂ ಹೆಚ್ಚಳವಾಗಿದೆ. ಸ್ಥಿರಾಸ್ತಿ ಖರೀದಿ, ಮಾರಾಟದ ವಹಿವಾಟು ಅಧಿಕವಾಗಿರುವ ಪ್ರದೇಶಗಳಲ್ಲಿ ಮಾರ್ಗಸೂಚಿ ದರವೂ ಹೆಚ್ಚಿದೆ. ಭಾನುವಾರದಿಂದ ಪರಿಷ್ಕೃತ ದರಗಳು ಜಾರಿಯಾಗಿವೆ.

ಬೃಹತ್ ರಿಯಾಯಿತಿ ಮಾರಾಟ
ಇಂದು ಉದ್ಘಾಟನೆ
hakoba SINCE 1960
FABRICS • SUITS • CUT PIECES • SAREES • KURTIS
ಲೇಡಿ ಜಹಾಂಗೀರ್ ಕೋಠಾರಿ ಹಾಲ್
14, ಕ್ವೀನ್ಸ್ ರಸ್ತೆ, ವೃತ್ತ, ಶಿವಾಜಿ ನಗರ, ಇಂಡಿಯನ್ ಎಕ್ಸ್‌ಪ್ರೆಸ್ ಹತ್ತಿರ, ಬೆಂಗಳೂರು – 560001.
ಕ್ಲಿಯರೆನ್ಸ್ ಸೇಲ್ 50% ವರೆಗೆ ರಿಯಾಯಿತಿ
www.hakoba.in
FRESH ARRIVALS NOW ON DISPLAY
All Cards Accepted • 10 am to 9 pm • 7080904360 Car Parking Available

ಅರಣ್ಯ ಜಮೀನಿನ ದಾಖಲೆ ಬದಲು!

₹500 ಕೋಟಿ ಮೌಲ್ಯದ 18 ಎಕರೆ ದಾಖಲೆ ತಿದ್ದುಪಡಿ– ವಿಚಕ್ಷಣಾ ದಳದ ತನಿಖೆಯಲ್ಲಿ ಪತ್ತೆ

• ಚಿರಂಜೀವಿ ಕುಲಕರ್ಣಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಉತ್ತರ ಉಪ ವಿಭಾಗದ ವ್ಯಾಪ್ತಿಯ ಭಾರತೀಯ ಸಿಟಿಯಲ್ಲಿ ಹಿಂದಿನ ಉಪ ವಿಭಾಗಾಧಿಕಾರಿ ಎಂ.ಜಿ. ಶಿವಣ್ಣ ಅವರು ₹500 ಕೋಟಿ ಮೌಲ್ಯದ 18 ಎಕರೆ ಅರಣ್ಯ ಜಮೀನಿನ ದಾಖಲೆಗಳನ್ನು ಅಕ್ರಮವಾಗಿ ‘ಸರ್ಕಾರಿ ಕಂದಾಯ ಜಮೀನು’ ಎಂದು ತಿದ್ದುಪಡಿ ಮಾಡಿರುವುದು ಪತ್ತೆಯಾಗಿದೆ.

ಸಾರ್ವಜನಿಕರಿಂದ ಬಂದ ದೂರುಗಳನ್ನು ಆಧರಿಸಿ ಈ ಬಗ್ಗೆ ತನಿಖೆ ನಡೆಸುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ಅರಣ್ಯ ಇಲಾಖೆಯ ವಿಚಕ್ಷಣಾ ದಳಕ್ಕೆ ನಿರ್ದೇಶನ ನೀಡಿದ್ದರು. ತನಿಖಾ ವರದಿಯ ಪ್ರತಿ ‘ಪ್ರಜಾವಾಣಿ’ಗೆ ಲಭ್ಯವಾಗಿದ್ದು, ‘ಅರಣ್ಯ ಜಮೀನನ್ನು ಕಬಳಿಸುವ ಸಂಚಿನ ಭಾಗವಾಗಿ ಜಮೀನಿನ ದಾಖಲೆಗಳನ್ನು ಬದಲಾವಣೆ ಮಾಡಲಾಗಿದೆ’ ಎಂಬ ಉಲ್ಲೇಖ ಅದರಲ್ಲಿದೆ.

ಕೆ.ಆರ್.ಪುರ ಹೋಬಳಿ ವ್ಯಾಪ್ತಿಯ ಕೊತ್ತನೂರು ಗ್ರಾಮದ ಸರ್ವೆ ನಂಬರ್ 47ರಲ್ಲಿ 17 ಎಕರೆ 34 ಗುಂಟೆ ವಿಸ್ತೀರ್ಣವನ್ನು ಅರಣ್ಯ ಜಮೀನು ಎಂಬುದಾಗಿ ವರ್ಗೀಕರಣ ಮಾಡಿ ಬೆಂಗಳೂರು ನಗರ ಜಿಲ್ಲಾಧಿಕಾರಿ 2006ರಲ್ಲಿ ಆದೇಶ ಹೊರಡಿಸಿದ್ದರು. ಅಲ್ಲಿ ಅರಣ್ಯೀಕರಣ ಚಟುವಟಿಕೆಗಳನ್ನು ಇಲಾಖೆ ಕೈಗೊಂಡಿದ್ದರೂ ಜಮೀನಿನ ಮೇಲೆ ಸಂಪೂರ್ಣ ಹಕ್ಕು ಸಾಧಿಸಲು ಕಾನೂನು ಹೋರಾಟವೂ ಮುಂದುವರಿದಿತ್ತು.

ಸ್ಥಳೀಯ ಸಂಘಟನೆಯೊಂದು ಜಿಲ್ಲಾಧಿಕಾರಿಯವರ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ನಂತರ ಜಂಟಿ ಸರ್ವೆ ನಡೆಸಿದ್ದ ಬೆಂಗಳೂರು ಪೂರ್ವ ತಹಶೀಲ್ದಾರ್ ಮತ್ತು ಭೂ ಮಾಪನ ಇಲಾಖೆ ಸಹಾಯಕ ನಿರ್ದೇಶಕರು, ಸದರಿ ಜಮೀನಿನ ಗಡಿಗಳನ್ನು ಗುರುತಿಸಿದ್ದರು. ಜಂಟಿ ಸರ್ವೆ ವರದಿಯನ್ನು ಆಧರಿಸಿ ಸ್ಥಳೀಯರ ಅರ್ಜಿಯನ್ನು ತಿರಸ್ಕರಿಸಿದ್ದ ಸುಪ್ರೀಂ ಕೋರ್ಟ್, 17 ಎಕರೆ 34 ಗುಂಟೆ ಅರಣ್ಯ ಪ್ರದೇಶ ಎಂದು 2017ರ ಮಾರ್ಚ್ 24ರಂದು ಆದೇಶ ಹೊರಡಿಸಿತ್ತು.

2023ರ ಜನವರಿಯಲ್ಲಿ ಇದೇ ಜಮೀನನ್ನು ‘ಸರ್ಕಾರಿ ಜಮೀನು’ ಎಂದು ದಾಖಲೆಗಳನ್ನು ತಿದ್ದುಪಡಿ ಮಾಡಿ ಉಪ ವಿಭಾಗಾಧಿಕಾರಿ ಎಂ.ಜಿ. ಶಿವಣ್ಣ ಆದೇಶ ಹೊರಡಿಸಿದ್ದರು. ಆ ಮೂಲಕ, ಸದರಿ ಜಮೀನನ್ನು ವಾಣಿಜ್ಯ, ರಿಯಲ್ ಎಸ್ಟೇಟ್ ಚಟುವಟಿಕೆಗಳೂ ಸೇರಿದಂತೆ ಅರಣ್ಯೇತರ ಉದ್ದೇಶಕ್ಕೆ ಬಳಸಲು ಅನುವು ಮಾಡಿಕೊಟ್ಟಿದ್ದರು.

‘ಉಪ ವಿಭಾಗಾಧಿಕಾರಿಯವರ ಆದೇಶವು ನೇರವಾಗಿ ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆಯಾಗುತ್ತದೆ. ನ್ಯಾಯಾಂಗ ನಿಂದನೆಯೂ ಹೌದು. ಉಪ ವಿಭಾಗಾಧಿಕಾರಿಯವರು ಈ ರೀತಿ ಆದೇಶ ಹೊರಡಿಸುವ ಮೂಲಕ ಅರಣ್ಯ ಸಂರಕ್ಷಣಾ ಕಾಯ್ದೆ–1980ರ ಸೆಕ್ಷನ್ 2 ಅನ್ನು ಉಲ್ಲಂಘಿಸಿದ್ದಾರೆ’ ಎಂದು ಅರಣ್ಯ ಇಲಾಖೆಯ ವಿಚಕ್ಷಣಾ ದಳ ತನಿಖಾ ವರದಿಯಲ್ಲಿ ಹೇಳಿದೆ.

‘ಉಪ ವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ಯಾವುದೇ ಕಾರಣವಿಲ್ಲದೆ ಅರಣ್ಯ ಜಮೀನಿನ ದಾಖಲೆಗಳನ್ನು ‘ಸರ್ಕಾರಿ ಜಮೀನು’ ಎಂಬುದಾಗಿ ಬದಲಿಸಿದ್ದಾರೆ. ಈ ರೀತಿ ಏಕಪಕ್ಷೀಯವಾಗಿ ದಾಖಲೆ ಬದಲಾವಣೆ ಮಾಡಿದ ಬಳಿಕ ಅಲ್ಲಿ ಒತ್ತುವರಿ ಪ್ರಯತ್ನಗಳು ನಡೆದಿವೆ. ಭೂಕಬಳಿಕೆಯ ಪ್ರಯತ್ನಗಳು ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಉಪ ವಿಭಾಗಾಧಿಕಾರಿಯವರ ಅದೇಶದ ವಿರುದ್ಧ ಮೇಲ್ಮನವಿಯನ್ನೂ ಸಲ್ಲಿಸಿಲ್ಲ’ ಎಂದು ವಿಚಕ್ಷಣಾ ದಳ ತಿಳಿಸಿದೆ. ಇದೇ ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನಿಸಿದ ಹಲವರ ವಿರುದ್ಧ ಯಲಹಂಕ ವಲಯ ಅರಣ್ಯಾಧಿಕಾರಿ ಎರಡು ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಈಶ್ವರ ಖಂಡ್ರೆ, ‘ಸುಪ್ರೀಂ ಕೋರ್ಟ್ ಆದೇಶಕ್ಕೆ ವಿರುದ್ಧವಾಗಿ ಉಪ ವಿಭಾಗಾಧಿಕಾರಿ ಆದೇಶ ಹೊರಡಿಸಿರುವುದು ಅಚ್ಚರಿ ಉಂಟುಮಾಡಿದೆ. ಪ್ರಕರಣವನ್ನು ಕಂದಾಯ ಇಲಾಖೆಯ ಗಮನಕ್ಕೆ ತರಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದರು.

ದಕ್ಷಿಣ ಪಿನಾಕಿನಿ ಜಲ ವಿವಾದ ಇತ್ಯರ್ಥಕ್ಕೆ ಯತ್ನ

ನವದೆಹಲಿ: ಕರ್ನಾಟಕ ಹಾಗೂ ತಮಿಳುನಾಡು ನಡುವಿನ ದಕ್ಷಿಣ ಪಿನಾಕಿನಿ ಜಲವಿವಾದವನ್ನು ಮಾತುಕತೆಯ ಮೂಲಕ ಇತ್ಯರ್ಥಪಡಿಸಲು ಪ್ರಯತ್ನ ಮಾಡುತ್ತಿರುವುದಾಗಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ತಿಳಿಸಿದೆ.

ನ್ಯಾಯಮಂಡಳಿ ರಚಿಸುವ ಬದಲು ಮಾತುಕತೆಯ ಮೂಲಕವೇ ಈ ವಿವಾದವನ್ನು ಕೇಂದ್ರ ಸರ್ಕಾರ ಬಗೆಹರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕದ ಮುಖ್ಯಮಂತ್ರಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದರು. ಹೀಗಾಗಿ, ಸಂಧಾನದ ಮೂಲಕ ವಿವಾದ ಬಗೆಹರಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರದ ವಕೀಲರು ನ್ಯಾಯಪೀಠಕ್ಕೆ ತಿಳಿಸಿದರು.

ಈ ಸಂಬಂಧ ಪ್ರಮಾಣಪತ್ರ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಹಾಗೂ ಸಂಜಯ್ ಕರೋಲ್ ಅವರನ್ನು ಒಳಗೊಂಡ ಪೀಠ ಸೂಚಿಸಿತು.

ಈ ಜಲವಿವಾದ ಬಗೆಹರಿಸಲು ನ್ಯಾಯಮಂಡಳಿ ರಚಿಸುವಂತೆ ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ ಸುಪ್ರೀಂ ಕೋರ್ಟ್ ಈ ಹಿಂದೆ ಸೂಚಿಸಿತ್ತು. ಇದಕ್ಕೆ ಕರ್ನಾಟಕ ಸರ್ಕಾರ ವಿರೋಧ ವ್ಯಕ್ತಪಡಿಸಿತ್ತು. ಈ ಬಳಿಕ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿಯಾಗಿದ್ದ ರಾಜ್ಯದ ಜಲಸಂಪನ್ಮೂಲ ಸಚಿವರು, ಜಲವಿವಾದ ಇತ್ಯರ್ಥಕ್ಕೆ ಯಾವುದೇ ಕಾರಣಕ್ಕೆ ನ್ಯಾಯಮಂಡಳಿ ರಚಿಸಬಾರದು. ಮಾತುಕತೆಯ ಮೂಲಕವೇ ವಿವಾದ ಬಗೆಹರಿಸಬೇಕು ಎಂದು ಒತ್ತಾಯ ಮಾಡಿದ್ದರು.

‘ಒಂದು ವರ್ಷದಲ್ಲಿ ಸಿಡಿಪಿ ಕರಡು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರ ಅಭಿವೃದ್ಧಿ ಯೋಜನೆ (ಸಿಡಿಪಿ) ಬಹಳ ವರ್ಷಗಳಿಂದ ನನೆಗುದಿಗೆ ಬಿದ್ದಿದ್ದು, ಅದನ್ನು ಸಿದ್ಧಪಡಿಸಲು ಪ್ರಥಮ ಆದ್ಯತೆ ನೀಡಲಾಗುತ್ತದೆ. ಒಂದು ವರ್ಷದಲ್ಲಿ ಕರಡು ಸಿದ್ಧಪಡಿಸುವ ಗುರಿ ಹೊಂದಲಾಗಿದೆ’ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತ ಎನ್. ಜಯರಾಮ್ ತಿಳಿಸಿದರು.

‘ಕೆಲವೇ ದಿನಗಳಲ್ಲಿ ಸಿಡಿಪಿ ಸಿದ್ಧಪಡಿಸುವುದು ಸಾಧ್ಯವಿಲ್ಲ. ಅದಕ್ಕಾಗಿ ಪೂರ್ವ ತಯಾರಿಬೇಕಿದೆ. ಎಲ್ಲ ಸಂಸ್ಥೆಗಳು, ನಾಗರಿಕರನ್ನು ಸಂಪರ್ಕಿಸಬೇಕು. ನಕ್ಷೆಗಳಾಗಬೇಕು. ಇದಕ್ಕೆಲ್ಲ ಒಂದು ವರ್ಷಕ್ಕೂ ಹೆಚ್ಚಿನ ಸಮಯ ಬೇಕಾಗುತ್ತದೆ. ಆದ್ದರಿಂದ ಶೀಘ್ರವೇ ಈ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತದೆ’ ಎಂದು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

’ಬಿಡಿಎ ಬಡಾವಣೆಗಳಲ್ಲಿ ಮೂಲ ಸೌಕರ್ಯದ ಕೊರತೆಗಳಿರುವುದು ನಿಜ. ಇವುಗಳನ್ನು ಆದ್ಯತೆ ಮೇರೆಗೆ ನಿವಾರಿಸಲಾಗುತ್ತದೆ. ಅಭಿವೃದ್ಧಿ ಹೊಂದಿದ ಬಡಾವಣೆಗಳನ್ನು ಬಿಬಿಎಂಪಿಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಹೇಳಿದರು.

‘ನಾಗರಿಕರ ಸಮಸ್ಯೆಗಳನ್ನು ಪರಿಹರಿಸಲು ಆಗಾಗ್ಗೆ ಸಭೆಗಳನ್ನು ಮಾಡಲಾಗುತ್ತದೆ. ನಾಡಪ್ರಭು ಕೆಂಪೇಗೌಡ ಬಡಾವಣೆ ಹಾಗೂ ಶಿವರಾಮ ಕಾರಂತ ಬಡಾವಣೆ ನಿರ್ಮಾಣದಲ್ಲಿ ಸಾಕಷ್ಟು ವೇಗ ಅಗತ್ಯವಿದೆ’ ಎಂದು ಹೇಳಿದರು.

ಬಿಡಿಎ ಆಯುಕ್ತರಾಗಿ ಮಂಗಳವಾರ ಅಧಿಕಾರ ಸ್ವೀಕರಿಸಿದ ಎನ್. ಜಯರಾಮ್ ಅವರನ್ನು ಅಧಿಕಾರಿಗಳು ಅಭಿನಂದಿಸಿದರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

WANTED OPERATION MANAGER (Defense personal can also apply)
Who can get results of Targeted Productivity with Quality, Maintenance, Implementation of SOP, Safety Procedure, Data Management, Overhead & Cost control, Monitoring & handling of personal, conflict management, house keeping, General Admin for Non Ferrous Foundry / CNC Machine Shop/SSI Unit at Veerasandra Indu. Area, Hosur Road, Bangalore.
E-mail: hr.numax@gmail.com Mo.: 93410 18766

WANTED SECURITY Guards and Kitchen Workers Contact: MGP College, Kanmanike, Mysore Road Bangalore. Phone: 9886236341.

SOUNDARYA COLLEGE OF LAW
SOUNDARYA EDUCATIONAL TRUST
Affiliated to KSLU & Approved by BCI, New Delhi.
Soundarya Nagar, Sidedahalli, Nagasandra Post, Bengaluru – 560073.
Web: soundarya-lawcollege.com
FACULTY RECRUITMENT
Applications are invited from Eligible candidates for the post of
Assistant Professor
Eligibility Criteria
• LL.M. with Minimum 55%Marks and NET/SLET/ Ph.D.
• Have actively engaged in research activity of high quality with evidence of published materials in Books and UGC approved Journals.
Specializations required: Constitutional Law, Commercial Law, Business Law, International Law, Intellectual Property and Labour Law.
Candidates Committed to professionalism, dynamism and expertise to create competitiveness, leadership and innovation skills among the students will be preferred.
Interested candidates may submit the applications along with their updated CV to hr@soundaryainstituions.in on or before 20.10.2023.
Call: 99028 50725 / 77609 33289

NABH Accredited P. D. Hinduja Sindhi Multispeciality Hospital, Bangalore Requires
• Junior Specialist - OB&G - D.N.B / D.G.O / M.S Salary Negotiable
• Ophthalmologist on sharing basis
• Medical Officers MBBS, 40K
Mail Resume to sandhya@hindujasindhihospital.com
Ph: 78995 85377 080-49030307

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

REAL ESTATE BUYING

Industrial & Factory

Multiple Locations

WANTED RUNNING INDUSTRY, Sick Industry, Industrial land in Bangalore. Looking 4000 to 20000sft Property Jayanagar, Basavangudi, JP Nagar and CBD surrounding areas. Verna Developers, Bangalore. 9353128035/ 9916310226

RENTAL PROPERTIES

Accommodation Wanted

Flat

WANTED RENT 2, 3, 4BHK Flats Houses Basavanagudi, Surrounding Owners Only Contact: 9886019240 080 26603673

PUBLIC NOTICE

PERSONAL

Change of Name

CHANGE OF NAME
I, RUBEN SYLVESTER, R/at # 148, 3rd Cross, Anwar Layout, Shampura Road, Bengaluru- 560045 have changed my name to NIXON YOAN vide affidavit dated 03-10-2023, before Notary N. Narayana Swamy, Bangalore. Henceforth I shall be called NIXON YOAN only.

CHANGE OF NAME
I, A. SOMASHEKAR, R/at # 346, Arogyamathe Nilaya, St. Peter's Road, Mariyan Palya, Bangalore-560024 have changed my name to SOWMYA A and I have changed my Gender from Male to Female, vide affidavit dated 03-10-2023, before Notary A. Idinabba, Bangalore. Henceforth I shall be called SOWMYA A only.

I, TEJASHRI JANMALE R/o#5/165, Shiva Sadhana, GandhiNagar Chowk, Dombilvi(E), Thane-421204 (Maharashtra State) New R/o#1,Near Veterinary Hospital, Trishul Chowk, Main Road, Shahabad, Tq:Shahabad, Dist:Kalburgi- 585228 Karnataka. have changed my`Name from TEJASHRI JANMALE to TEJASHRI MUTATHI vide affidavit`dated 20.9.2023 before Notary Appasaheb B.Sunagar, Kalburgi

CHANGE OF NAME
I, KALPESH UPKAR SHARMA, S/o Late Upkar Sharma, R/at # 12, L No. 10th Street, Shivajinagar, Bangalore-01 have changed my name to KALPESH SHARMA vide affidavit dated 03-10-2023, before Notary A.R. Muneer Ahmed, Bengaluru. Henceforth I shall be called KALPESH SHARMA only.

I, SANDEEP MUTATHI Major,R/o.Main Road, HPC Dealers, Shahabad, Kalaburgi, Karnataka. have changed my Name from SANDEEP MUTHATI to SANDEEP MUTATHI vide affidavit`dated 25.8.2023 before Notary Appasaheb B Sunagar, Kalaburgi

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು ಇಲ್ಲಿ ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಲಾಗಿರುವ ಕೃಷಿ ಜಮೀನುಗಳನ್ನು ಅವುಗಳ ಪ್ರಸಕ್ತ ಮಾಲೀಕರಾಗಿರುವ (1) **i) ಶ್ರೀ ಗುರುಮೂರ್ತಪ್ಪ, ಎಂ. ಆರ್,** (ಆಧಾರ್ ನಂ. 7249 6724 7010) ಬಿನ್ ಲೇಟ್ ಶ್ರೀ ಹನುಮಂತಯ್ಯ, ವಿಳಾಸ ವೀರೇಗೌಡನದೊಡ್ಡಿ ಗ್ರಾಮ, ಹಂಚಿಕುಪ್ಪೆ ಅಂಚೆ, ಮಾಡಬಾಳ್ ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ, **ii) ಶ್ರೀಮತಿ ಗೌರಮ್ಮ** (ಆಧಾರ್ ನಂ. 9429 7127 0987) ಕೋಂ. ಲೇಟ್ ಶ್ರೀ ಶಿವರಾಜಯ್ಯ, ವಿಳಾಸ ನಂ. 738, 1ನೇ ಮುಖ್ಯರಸ್ತೆ, ಕಾಮಾಕ್ಷಿಪಾಳ್ಯ, ಕಾವೇರಿಪುರ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು, **iii) ಶ್ರೀಮತಿ ರತ್ನಮ್ಮ** (ಆಧಾರ್ ನಂ.3102 0165 3059) ಬಿನ್ ಲೇಟ್ ಶ್ರೀ ಹನುಮಂತಯ್ಯ, ವಿಳಾಸ ನಂ.182, 9ನೇ ಅಡ್ಡರಸ್ತೆ, ಅರುಂಧತಿ ನಗರ, ಚಂದ್ರಾಲೇಔಟ್, ವಿಜಯನಗರ, ಬೆಂಗಳೂರು ಮತ್ತು ಇತರರು ಹಾಗೂ (2) **i) ಶ್ರೀಮತಿ ಧನಲಕ್ಷ್ಮೀ ಅಲಿಯಾಸ್ ಧನಲಕ್ಷ್ಮಮ್ಮ** (ಆಧಾರ್ ನಂ. 4154 9532 9285) ಕೋಂ. ಲೇಟ್ ನರಸಿಂಹಮೂರ್ತಿ, ವಿಳಾಸ ವೆಂಕಟೇಶಪುರಂ, 3ನೇ ಮಹಡಿ, ನೆಹರೂ ಸ್ಟ್ರೀಟ್, ಅರೆಬಿಕ್ ಕಾಲೇಜ್ ಅಂಚೆ, ಬೆಂಗಳೂರು **ii) ಶ್ರೀಮತಿ ಪಾರ್ವತಮ್ಮ** (ಆಧಾರ್ ನಂ. 8694 3241 6287) ಕೋಂ. ಲೇಟ್ ಶ್ರೀ ರಂಗಸ್ವಾಮಿ, ವಿಳಾಸ ನಂ. 485, ಸರ್ಕಾರಿ ಶಾಲೆ ಹತ್ತಿರ, ಸಿದ್ದಣ್ಣ ಹೊಸಹಳ್ಳಿ, ಮಾದಾವರ, ಬೆಂಗಳೂರು ಮತ್ತು ಅಗ್ರಿಮೆಂಟ್ ಹೋಲ್ಡರ್ ಆಗಿರುವ **(1) ಶ್ರೀ. ಸಿ. ನಟರಾಜ್** (ಆಧಾರ್ ನಂ. 6607 0819 0843) ಬಿನ್ ಶ್ರೀ ಚಿಕ್ಕೇಗೌಡ, ವಿಳಾಸ ಸೋಮೆದೇವನಹಳ್ಳಿ ಗ್ರಾಮ, ಸೋಲೂರ ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ, **(2) ಶ್ರೀ ಶಿವರಾಜು. ಟಿ. ಎಸ್.** (ಆಧಾರ್ ನಂ. 8599 7346 6273) ಬಿನ್ ಲೇಟ್ ಶ್ರೀ ಶ್ರೀನಿವಾಸ ಗೌಡ, ವಿಳಾಸ ತಿರುಮಲೆ ಗ್ರಾಮ, ಮಾಗಡಿ ಪಟ್ಟಣ, ಕಸಬಾ ಹೋಬಳಿ, ಮಾಗಡಿ ತಾಲ್ಲೂಕು, ಮತ್ತು **(3) ಶ್ರೀ ನರಸಿಂಹಮೂರ್ತಿ** (ಆಧಾರ್ ನಂ. 5643 4775 7703) ಬಿನ್ ಲೇಟ್ ಶ್ರೀ ಚಲುವಯ್ಯ, ವಿಳಾಸ ಕೆಎಸ್‌ಆರ್‌ಟಿಸಿ ಲೇಔಟ್, ಹೇರೋಹಳ್ಳಿ, ಬೆಂಗಳೂರು ಉತ್ತರ ತಾಲ್ಲೂಕು ಇವರುಗಳ ಮುಖಾಂತರ ಖರೀದಿಸಲು ಉದ್ದೇಶಿಸಿದ್ದು, ಸದರಿಯವರು ಇದು ತಮಗೆ ನಮ್ಮ ಪೂರ್ವಜರಿಂದ ಬಂದಿರುತ್ತದೆ ಹಾಗೂ ತಮ್ಮ ಹೊರತಾಗಿ ಇನ್ನಾರದೂ ಇದರ ಮೇಲೆ ಹಕ್ಕುದಾರಿಕೆ ಇರುವುದಿಲ್ಲ ಮತ್ತು ಉಲ್ಲೇಖಿತ ಷೆಡ್ಯೂಲ್ ಸ್ವತ್ತಿಗೆ ತಾವೇ ಸಂಪೂರ್ಣ ಜಂಟಿ ಮಾಲೀಕರು ಎಂದು ಪ್ರತಿಪಾದಿಸುತ್ತಿದ್ದು, ಈ ಅಗ್ರಿಮೆಂಟ್ ಹೋಲ್ಡರ್‌ಗಳು ಸದರಿ ಷೆಡ್ಯೂಲ್ ಪ್ರಾಪರ್ಟಿಯ ಮೇಲೆ ಇನ್ನಿತರ ಯಾವುದೇ ವ್ಯಕ್ತಿಯು ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಅಥವಾ ಚಾರ್ಜ್ ಹೊಂದಿರುವುದಿಲ್ಲ ಎಂದು ಕ್ಲೇಮ್ ಮಾಡುತ್ತಿದ್ದಾರೆ.

ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಅನುವಂಶಿಕ, ಮಾರಾಟ, ಅಡಮಾನ, ವರ್ಗಾವಣೆ, ಭೋಗ್ಯ, ಬಾಡಿಗೆ, ಲೀಸ್, ಚಾರ್ಜ್, ಈಸ್‌ಮೆಂಟ್, ನಿರ್ವಹಣೆ, ಉಡುಗೊರೆ, ವಿನಿಮಯ, ಸ್ವಾಧೀನತೆ ಅಥವಾ ಋಣಭಾರಗಳ ರೂಪದಲ್ಲಿ ಅಥವಾ ಇನ್ನಿತರ ಯಾವುದೇ ವಿಧಾನದಲ್ಲಿ ಯಾವುದೇ ಕ್ಲೇಮ್, ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ ಹೊಂದಿದ್ದಲ್ಲಿ, ಅಂತಹವರು ಈ ಪ್ರಕಟಣೆಯ ಪ್ರಕಟಗೊಂಡ ದಿನಾಂಕದಿಂದ **ಏಳು ದಿನಗಳ** ಒಳಗೆ ಕೆಳಗೆ ನೀಡಲಾಗಿರುವ ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಅಗತ್ಯ ದಾಖಲಾತಿ ಪುರಾವೆಗಳ ಸಮೇತ ಸಲ್ಲಿಸತಕ್ಕದ್ದು/ಮಾಹಿತಿ ನೀಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಯಾವುದೇ ಪಕ್ಷಗಾರರ ಯಾವುದೇ ಕ್ಲೇಮ್‌ಗಳನ್ನು ಎಲ್ಲಾ ಕಾನೂನಾತ್ಮಕ ಉದ್ದೇಶಗಳಿಂದ ಕೈಬಿಡಲಾಗುತ್ತದೆ ಮತ್ತು ಸದರಿ ಷೆಡ್ಯೂಲ್ ಪ್ರಾಪರ್ಟಿಯ ಮೇಲೆ ಇನ್ನಿತರ ಯಾವುದೇ ವ್ಯಕ್ತಿಯ ಯಾವುದೇ ಕ್ಲೇಮ್, ಹಕ್ಕು, ಅಧಿಕಾರ, ಹಿತಾಸಕ್ತಿ ಅಥವಾ ಚಾರ್ಜ್ ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ ಹಾಗೂ ನಮ್ಮ ಕಕ್ಷಿದಾರರು ಉದ್ದೇಶಿತ ತಮ್ಮ ಖರೀದಿ ವ್ಯವಹಾರ ಪೂರ್ಣಗೊಳಿಸಿಕೊಳ್ಳಲು ಮುಂದುವರಿಯುತ್ತಾರೆ.

ಷೆಡ್ಯೂಲ್

1) ಗ್ರಾಮಗಳ ವಿಂಗಡಣೆಗೂ ಮುನ್ನ ಹಂಚಿಕುಪ್ಪೆ ಗ್ರಾಮದ ಸರ್ವೆ ನಂ. 63/4 ರಲ್ಲಿರುವ, ಮಾಡಬಾಳ್ ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ವಿಳಾಸದ ಮಾರೇಗೌಡನದೊಡ್ಡಿ ಗ್ರಾಮದ ಸರ್ವೆ ನಂ.5ರಲ್ಲಿ ಸ್ಥಿತಗೊಂಡಿರುವ, ಎರಡು ಎಕರೆ ಇಪ್ಪತ್ತು ಗುಂಟೆ ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:– **ಪೂರ್ವಕ್ಕೆ:** ಶ್ರೀ ರೇಣುಕಪ್ಪ ಬಿನ್ ಶ್ರೀ ವೀರಭದ್ರಯ್ಯನವರ ಜಮೀನು; **ಪಶ್ಚಿಮಕ್ಕೆ:** ಸರ್ಕಾರಿ ರಸ್ತೆ; **ಉತ್ತರಕ್ಕೆ:** ಶ್ರೀ ಶ್ರೀಕಂಠಯ್ಯ ಬಿನ್ ಶ್ರೀ ರುದ್ರೇಗೌಡರವರ ಜಮೀನು; **ದಕ್ಷಿಣಕ್ಕೆ:** ಶ್ರೀಮತಿ ಧನಲಕ್ಷ್ಮಮ್ಮ ಮತ್ತು ಶ್ರೀಮತಿ ಪಾರ್ವತಮ್ಮನವರ ಜಮೀನು.

2) ಗ್ರಾಮಗಳ ವಿಂಗಡಣೆಗೂ ಮುನ್ನ ಹಂಚಿಕುಪ್ಪೆ ಗ್ರಾಮದ ಸರ್ವೆ ನಂ. 63/4 ರಲ್ಲಿರುವ, ಮಾಡಬಾಳ್ ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ವಿಳಾಸದ ಮಾರೇಗೌಡನದೊಡ್ಡಿ ಗ್ರಾಮದ ಸರ್ವೆ ನಂ.5ರಲ್ಲಿ ಸ್ಥಿತಗೊಂಡಿರುವ, ಎರಡು ಎಕರೆ ಇಪ್ಪತ್ತು ಗುಂಟೆ ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:– **ಪೂರ್ವಕ್ಕೆ:** ಶ್ರೀ ರೇಣುಕಪ್ಪ ಬಿನ್ ಶ್ರೀ ವೀರಭದ್ರಯ್ಯನವರ ಜಮೀನು; **ಪಶ್ಚಿಮಕ್ಕೆ:** ಸರ್ಕಾರಿ ರಸ್ತೆ; **ಉತ್ತರಕ್ಕೆ:** ಶ್ರೀ ಗುರುಪೂರ್ತಪ್ಪನವರ ಜಮೀನು; **ದಕ್ಷಿಣಕ್ಕೆ:** ಶ್ರೀ ಗಟ್ಟಪ್ಪ ಬಿನ್ ಶ್ರೀ ವೀರಭದ್ರಯ್ಯನವರ ಜಮೀನು.

ಎ. ನಾಗರಾಜ, ವಕೀಲರು ಮತ್ತು ನೋಟರಿ
ನಂ. 6, ಕೆಹೆಚ್‌ಬಿ ಬಿಲ್ಡಿಂಗ್ಸ್, 2ನೇ ಬ್ಲಾಕ್, 13ನೇ ಅಡ್ಡರಸ್ತೆ, ಇಂದಿರಾನಗರ 2ನೇ ಹಂತ, ಬೆಂಗಳೂರು – 560 038. ಫೋನ್: 9448067511
ಸ್ಥಳ: ಬೆಂಗಳೂರು ದಿನಾಂಕ: 03–10–2023

Accounts & Finance

'WANTED-ACCOUNTANT for a Pvt Ltd company. M.Com/ MBA, B.Com. With Computer Literacy is Must. Interested candidates may apply to: pvteye88@gmail.com prescribing expected salary.'

FEMALE TEACHER Wanted for English and Social. Primary English School, Vyalikaval, Bangalore. 8884128882 (WhatsApp only)

Part-Time Jobs

TOP MNC Company Licensed By Central Govt. Retired/ VRS Persons 2nd Career Opportunity Age above 45 Years 35K to 40K: 7019215243/ 9886641282

HEALTH BLOOM POLYCLINIC Whitefield,BANGALORE
With Clinical lab,Pharmacy, Dental with Multispeciality also with online services requires
LAB TECHNICIAN / LAB IN CHARGE
Degree /Diploma in Lab Technology with minimum 2 yrs experience of managing clinical lab independently. Those living in and around Whitefield and willing to work in flexible shifts will be preferred.
Those meeting job specs may apply immediately within 7 days of this advt to mail info@healthbloomclinics.com & radicalreality@live.com or by whatsapp to 97413 33222 99621 82221
For more details visit www.healthbloom.in

Sites

Banashankari

BDA SITES Wanted,Banashankari 6th Stage,Anjanapura,JPNagar 8th /9th Phase BCC Layout,Immediate Settlement: 9845444588

Teachers/ Professors

WANTED Maths And PT Teacher For Highschool Sagar Convent Kanakapura Main Bangalore-82 Near APS Engineering College Good Salary: 9342552428

ST SOPHIA Convent School (CBSE) Nagarabhavi requires Female Trained and Experienced Academic Coordinator,Office assistants,Nursery Teachers (NTT or MTT) & Librarian Email: principal@stsophiaconvent.org 9243031872

Hospital & Medical Jobs

REQUIRED GENERAL PRACTITIONER For Dream Smile Dental Clinic, Uttarahalli, Bangalore. Eligibility: BDS with atleast 1 year experience. Contact: 9980529726

Security & Detectives

ELECTRONICS CITY INDUSTRIAL TOWNSHIP AUTHORITY
ELCITA
No. 7 (P), West Phase, Electronics City, Bengaluru - 560 100
Website : www.elcita.in Phone : 080- 4660 2222
ELCITA invites applications from suitable candidates for the position of Assistant Manager – Security.
Candidate should be a graduate with 5 years of experience in managing security and transport in industry or ex-serviceman with 15 years of relevant experience. Knowledge of Kannada and English are essential. Candidates with suitable experience in armed forces will be preferred.
For details refer to : www.elcita.in
Last date for receipt of applications along with CV and ELCITA Biodata form: 15-10-2023 before 5PM
Email id : harshana.r@elcita.in

DH DECCAN HERALD Classifieds More value, more impact
JOB HUNT
ಪ್ರಜಾವಾಣಿ
Get your HIRING NEEDS answered
JOB
Get the right people for your company... Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 | +91 9900428036 | +91 9731810277 | +91 9901641752 | 080-45557163/164

Marketing & Sales

WANTED MANAGERS, Sales Executives, field executives, collection executives Telecallers. Opportunity to earn upto 25000. 8867627879

BUSINESS

Business Offers

Finance

WANTED BUSINESS Partner Veg Hotel Investment 15 Lakhs Contact: 8892501007/ 9606701007

General

General

WE DO RESIDENTIAL, Commercial, IndustrialConversions, Change of land use,Revenue and KIADB Department work, MG Road,Bangalore. vernadevelopers.com 9353128035/ 9916310226

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

I, SUDHEERA, residing at No. 803, Ghaana Apartment Road, Dr. Vishnuvardhana Road, Rajarajeshwari Nagar, Bangalore 560098, have changed my Name to SUDHEERA SHETTY, Vide Affidavit dated 03.10.2023 sworn before advocate and notary S.R. Thulasikrishna, Bangalore

PUBLIC NOTICE
To Place your Classified Ads Contact 9731810277

CONNECT

pan Office Systems Pvt. Ltd.
ಪ್ಯಾನ್ ನಿಂದ ಮಹಾಗನಿ ಬಣ್ಣದಲ್ಲಿ ಆಫೀಸ್ ಟೇಬಲ್ ಗಳು
ನಮ್ಮ ಉತ್ಪನ್ನಗಳ ಸಂಪೂರ್ಣ ಶ್ರೇಣಿಗಳನ್ನು ನೋಡಲು QR ಅನ್ನು ಸ್ಕ್ಯಾನ್ ಮಾಡಿ
ನಂ. 3/4 ಲ್ಯಾಂಗ್‌ಫೋರ್ಡ್ ರಸ್ತೆ, ಸೆಟ್ಲೂರ್ ಸ್ಟ್ರೀಟ್, ಬೆಂಗಳೂರು - 560025
9341221125
sales@panofficesystems.com
www.panfurniture.com

ATTENTION TRADERS!!!
INDIA'S FIRST &ONLY PREMIER COLLABORATIVE TRADING FLOOR
A GIFT TO THE TRADING COMMUNITY
INTRODUCING proptradingfloor
ONE MEMBERSHIP, ALL ACCESS
TRADING DESK & STATION | WORLD CLASS INFRASTRUCTURE | FOOD COURT | OPEN 24 HRS
TRAINING & EDUCATON | COMMUNITY | TOOLS & RESOURCES | EVENTS & SEMINARS
FOR MEMBERSHIP DETAILS
"TRADING IS A SERIOUS BUSINESS, TRADE LIKE A PROFESSIONAL"
#01-107, WEWORK EMBASSY TECH VILLAGE, OUTER RING ROAD BELLANDUR, BANGALORE
reserve your slot today! LIMITED MEMBERSHIPS
OPENING THIS NOV 1ST, 2023
support@proptradingfloor.com
www.proptradingfloor.com

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಬಾರ್‌ವಾಲ್ ವ್ಯೆಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)



ಮೆಟ್ರೊ ಹಸಿರು ಮಾರ್ಗದಲ್ಲಿ ನವರಂಗ್ ಸಮೀಪ ಹಳಿಯಲ್ಲಿ ಸಿಲುಕಿದ್ದ ಆರ್‌ಆರ್‌ವಿ (ಎಡಚಿತ್ರ) ಕ್ರೇನ್ ಸಹಾಯದಿಂದ ಆರ್‌ಆರ್‌ವಿಯನ್ನು ತೆರವು ಮಾಡಲಾಯಿತು ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌.ಜಿ.

ರಾಜಾಜಿನಗರದ ಬಳಿ ಅವಘಡ • ಹಳಿಯಲ್ಲಿ ಸಿಲುಕಿದ್ದ ಆರ್‌ಆರ್‌ವಿ • ಸಂಚಾರದಲ್ಲಿ ವ್ಯತ್ಯಯ

ಮೆಟ್ರೊ ಪ್ರಯಾಣಿಕರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರ ಸಮೀಪ (ನವರಂಗ್ ವೃತ್ತ) 'ನಮ್ಮ ಮೆಟ್ರೊ'ದ ಹಸಿರು ಮಾರ್ಗದಲ್ಲಿ ಆರ್.ಆರ್.ವಿ (ರೋಡ್ ಕಂ ರೈಲು ವೆಹಿಕಲ್) ಹಳಿಯಲ್ಲಿ ಸಿಲುಕಿದ ಪರಿಣಾಮ, ಈ ಮಾರ್ಗದಲ್ಲಿ ಮಂಗಳವಾರ ಸಂಜೆವರೆಗೂ ಸಂಚಾರ ವ್ಯತ್ಯಯ ಉಂಟಾಗಿತ್ತು. 'ನಮ್ಮ ಮೆಟ್ರೊ' ಅವಲಂಬಿತರು ಸಮಸ್ಯೆಗೆ ಸಿಲುಕಿದ್ದರು.

ಸತತ ಕಾರ್ಯಾಚರಣೆ ನಡೆಸಿದ ಸಿಬ್ಬಂದಿ ಮಂಗಳವಾರ ಮಧ್ಯಾಹ್ನ 3 ಗಂಟೆ ವೇಳೆಗೆ ಬೃಹತ್ ಕ್ರೇನ್ ಸಹಾಯದಿಂದ ವಾಹನ ತೆರವು ಮಾಡಲು ಯಶಸ್ವಿಯಾದರು. ಟ್ರ್ಯಾಕ್ ದುರಸ್ತಿಗೊಳಿಸಿದ ಮೇಲೆ ಸಂಜೆ 4 ಗಂಟೆ ವೇಳೆಗೆ ಮೆಟ್ರೊ ಓಡಾಟ ಆರಂಭವಾಯಿತು. ಮೆಟ್ರೊ ಪ್ರಯಾಣ ಆರಂಭವಾದ ತಕ್ಷಣ ಈ ಮಾರ್ಗದಲ್ಲಿ ನೂಕುನುಗ್ಗಲು ಉಂಟಾಗಿತ್ತು.

ಮೆಟ್ರೊ ರೈಲು ಮಾರ್ಗದಲ್ಲಿ ತಾಂತ್ರಿಕ ತೊಂದರೆ ಎದುರಾದರೆ ಅಥವಾ ನಿತ್ಯ ಮಾರ್ಗದಲ್ಲಿ ತಪಾಸಣೆ ನಡೆಸಲು ಆರ್.ಆರ್.ವಿ ವಾಹನ ಬಳಕೆ ಮಾಡಲಾಗುತ್ತದೆ. ಭಾನುವಾರ ರಾತ್ರಿ 11.30ಕ್ಕೆ ಕೊನೆಯ ಮೆಟ್ರೊ ರೈಲು ಸಂಚರಿಸಿದ ಮೇಲೆ ನ್ಯಾಷನಲ್ ಕಾಲೇಜು ಕಡೆಗೆ ಈ ವಾಹನ ತಪಾಸಣೆಗೆ ತೆರಳುತ್ತಿತ್ತು. ಪೀಣ್ಯ ಡಿಪೊದಿಂದ ಹೊರಟ ಆರ್‌ಆರ್‌ವಿ, ರಾಜಾಜಿನಗರದ ಸಮೀಪಕ್ಕೆ ಬಂದಾಗ ಹಳಿಯಲ್ಲಿ ಸಿಲುಕಿಕೊಂಡಿತು. ರಾತ್ರಿಯೇ ಸಿಬ್ಬಂದಿ ವಾಹನ ತೆರವುಗೊಳಿಸಲು ಪ್ರಯತ್ನಿಸಿದರೂ ಸಾಧ್ಯವಾಗಿರಲಿಲ್ಲ. ಬೆಳಿಗ್ಗೆ ಕಾರ್ಯಾಚರಣೆಗೆ ಇಳಿದರೂ ವಾಹನ ಮುಂದಕ್ಕೆ ಚಲಿಸಲಿಲ್ಲ. ಇದರಿಂದ ಹಸಿರು ಮಾರ್ಗದಲ್ಲಿ ಮೆಟ್ರೊ ರೈಲು ಓಡಾಟಕ್ಕೆ ಅಡಚಣೆ ಉಂಟಾಯಿತು.

ಯಶವಂತಪುರದಿಂದ ಮಂತ್ರಿ ಸ್ಕ್ವೇರ್‌ವರೆಗೆ ಏಕಮುಖ ಮಾರ್ಗದಲ್ಲಿ ಮಾತ್ರ ಅರ್ಧ ಗಂಟೆಗೊಮ್ಮೆ ಮೆಟ್ರೊ ಸಂಚಾರ ನಡೆಸಿದವು. ನಾಗಸಂದ್ರ–ಯಶವಂತಪುರ ಹಾಗೂ ಮಂತ್ರಿ ಸ್ಕ್ವೇರ್‌ನಿಂದ ರೇಷ್ಮೆ ಸಂಸ್ಥೆವರೆಗೆ ಎರಡು ಹಳಿಗಳಲ್ಲೂ ಮೆಟ್ರೊ ಸಂಚಾರವಿದ್ದರೂ ನಿಗದಿತ ಸಮಯಕ್ಕೆ ಮೆಟ್ರೊ ಓಡಾಟ ಇರಲಿಲ್ಲ.

ಬೃಹತ್ ಕ್ರೇನ್ ನೆರವು: ವಾಹನವನ್ನು ಹಳಿಗೆ ತರಲು ಸಾಧ್ಯವಾಗದ ಕಾರಣಕ್ಕೆ ಇಡೀ ವಾಹನವನ್ನೇ ಟ್ರ್ಯಾಕ್ ಮೇಲಿಂದ ಕೆಳಕ್ಕೆ ಇಳಿಸಲು ನಿರ್ಧರಿಸಲಾಯಿತು. ಬೆಸ್ಕಾಂ ಸಿಬ್ಬಂದಿ ನೆರವು ಪಡೆದು ಬೃಹತ್ ಕ್ರೇನ್ ತರಿಸಿ ಮಧ್ಯಾಹ್ನದ ವೇಳೆಗೆ ವಾಹನ ಕೆಳಕ್ಕೆ ಇಳಿಸಲಾಯಿತು.

ಯಶವಂತಪುರದಲ್ಲಿ ವಾಗ್ವಾದ: ಮಾಹಿತಿ ತಿಳಿಯದೇ ಯಶವಂತಪುರ ಮೆಟ್ರೊ ನಿಲ್ದಾಣಕ್ಕೆ ಬಂದ ಪ್ರಯಾಣಿಕರು ಸಿಬ್ಬಂದಿ ಜತೆಗೆ ವಾಗ್ವಾದ ನಡೆಸಿದರು. ಪ್ರಯಾಣಿಕರೊಬ್ಬರು ಕಾರ್ಡ್ ಸ್ವೈಪಿಂಗ್ ಯಂತ್ರವನ್ನು ಕಾಲಿನಲ್ಲಿ ಒದ್ದು ಒಳಗೆ ನುಗ್ಗಲು ಪ್ರಯತ್ನಿಸಿದರು.

'ಕೆಲಸಕ್ಕೆ ತೆರಳಲು ವಿಳಂಬವಾಗುತ್ತಿದೆ. ಕಚೇರಿಯಲ್ಲಿ ಕಾರಣ ಹೇಳಿದರೆ ಕೇಳುವುದಿಲ್ಲ. ನಮ್ಮ ಅಳಲು ಯಾರೂ ಕೇಳಿಸಿಕೊಳ್ಳುತ್ತಿಲ್ಲ. ರೇಷ್ಮೆ ಸಂಸ್ಥೆಗೆ ಬಸ್‌ನಲ್ಲಿ ತೆರಳಿದರೆ ಸಾಕಷ್ಟು ತಡವಾಗುತ್ತದೆ' ಎಂದು ಆಕ್ರೋಶ ಭರಿತವಾಗಿ ಮಾತನಾಡಿದರು. ಮಾಹಿತಿ ತಿಳಿಯದೇ ಹಸಿರು ಮಾರ್ಗದ ವಿವಿಧ ನಿಲ್ದಾಣಕ್ಕೆ ಬಂದ ವಿದ್ಯಾರ್ಥಿಗಳು ಬೆಳಿಗ್ಗೆ ಸಮಸ್ಯೆಗೆ ಸಿಲುಕಿದ್ದರು.

ನಿತ್ಯ ರೇಷ್ಮೆ ಸಂಸ್ಥೆಗೆ ಮೆಟ್ರೊದಲ್ಲೇ ತೆರಳುತ್ತಿದ್ದೆ. ಮಧ್ಯರಾತ್ರಿಯೇ ವಾಹನ ಹಳಿ ತಪ್ಪಿದೆ. ಬಿಎಂಆರ್‌ಸಿಎಲ್ ಅಧಿಕಾರಿಗಳು ಬೆಳಿಗ್ಗೆ ಮಾಹಿತಿ ನೀಡಿದ್ದಾರೆ. ರಾತ್ರಿಯೇ ಮಾಹಿತಿ ನೀಡಿದ್ದರೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದೆವು ಎಂದು ಸುಷ್ಮಾ ಹೇಳಿದರು.

ಕಳೆದ ವಾರ ಸಾಲು ಸಾಲು ರಜೆ ಇತ್ತು. ಹೀಗಾಗಿ ಊರಿಗೆ ತೆರಳಿದ್ದವರು ಮಂಗಳವಾರ ಬೆಳಿಗ್ಗೆ ನಗರಕ್ಕೆ ವಾಪಸ್ ಬರುತ್ತಿದ್ದರು. ಬಸ್‌ನಲ್ಲಿ ಬಂದವರು ನಾಗಸಂದ್ರ ನಿಲ್ದಾಣಕ್ಕೆ, ರೈಲಿನಲ್ಲಿ ಬಂದವರು ಯಶವಂತಪುರ ಮೆಟ್ರೊ ನಿಲ್ದಾಣದಲ್ಲಿ ಜಮಾವಣೆಗೊಂಡಿದ್ದರು. ಅಲ್ಲಿಂದ ಹರಸಾಹಸಪಟ್ಟು ತಮ್ಮ ಸ್ಥಳಕ್ಕೆ ತೆರಳಿದರು.

ಕಳೆದ ಜುಲೈನಲ್ಲೂ ನೇರಳೆ ಮಾರ್ಗದಲ್ಲಿ ಎಲೆಕ್ಟ್ರಿಕ್ ಸಿಗ್ನಲ್ ಸಮಸ್ಯೆಯಿಂದ ಅರ್ಧ ದಿನ ಪ್ರಯಾಣಿಕರು ಪರದಾಡಿದ್ದರು. ರೈಲುಗಳ ವಿಳಂಬ ಸಂಚಾರ ಹಾಗೂ ಕೆಲವು ರೈಲುಗಳ ರದ್ದತಿಯಿಂದ ಪ್ರಯಾಣಿಕರು ಸಮಸ್ಯೆ ಎದುರಿಸಿದ್ದರು.

ಮೆಜೆಸ್ಟಿಕ್ ಮೆಟ್ರೊ ನಿಲ್ದಾಣದಲ್ಲಿ ಜನದಟ್ಟಣೆ ಉಂಟಾಗಿದ್ದ ದೃಶ್ಯ –ಪ್ರಜಾವಾಣಿ ಚಿತ್ರ/ರಂಜು ಪಿ

ಅಂದಾಜು 15 ಟನ್ ತೂಕ

ಮಿನಿಟ್ರಕ್ ರೂಪದಲ್ಲಿ ಆರ್‌ಆರ್‌ವಿ ವಾಹನವಿದ್ದು ಈ ವಾಹನ ಸುಮಾರು 15 ಟನ್ ತೂಕ ಇರುತ್ತದೆ. ವಾಹನದಲ್ಲಿ ಮೆಟ್ರೊ ರೈಲು ದುರಸ್ತಿಗೆ ಆಧುನಿಕ ಸಲಕರಣೆಗಳು ಇರುತ್ತವೆ. ಸಾಮಾನ್ಯವಾಗಿ ದೈನಂದಿನ ಸಂಚಾರ ಇರದಿದ್ದಾಗ ರಾತ್ರಿ ಹೊತ್ತು ಮೆಟ್ರೊ ಮಾರ್ಗದ ದುರಸ್ತಿಗೆ ಬಳಕೆ ಮಾಡಿಕೊಳ್ಳಲಾಗುತ್ತದೆ. 200 ಟನ್ ಭಾರ ಎತ್ತುವ ಕ್ರೇನ್ ಸಹಾಯದಿಂದ ಆರ್‌ಆರ್‌ವಿ ಕೆಳಕ್ಕೆ ಇಳಿಸಲಾಯಿತು.

ಸಿಬ್ಬಂದಿ ನಿರ್ಲಕ್ಷ್ಯ?

ಆರ್.ಆರ್.ವಿ ನಿರ್ವಹಣೆ ಸಿಬ್ಬಂದಿಯ ನಿರ್ಲಕ್ಷ್ಯದಿಂದ ಈ ಅವಘಡ ಸಂಭವಿಸಿದೆ ಎಂದು ಮೆಟ್ರೊ ಪ್ರಯಾಣಿಕರು ಸಾಮಾಜಿಕ ಮಾಧ್ಯಮದಲ್ಲಿ ಕಿಡಿಕಾರಿದ್ದಾರೆ.

ಸಿಬ್ಬಂದಿ ಎಚ್ಚರ ವಹಿಸಿದ್ದರೆ ಈ ರೀತಿಯ ಸಮಸ್ಯೆ ಉಂಟಾಗುತ್ತಿರಲಿಲ್ಲ. ಕೆಲವು ಸಿಬ್ಬಂದಿಯ ನಿರ್ಲಕ್ಷ್ಯದಿಂದ ಸಾವಿರಾರು ಪ್ರಯಾಣಿಕರು ದಿನವಿಡೀ ತೊಂದರೆ ಅನುಭವಿಸಬೇಕಾಯಿತು. ಸಂಬಂಧಪಟ್ಟವರ ವಿರುದ್ಧ ಬಿಎಂಆರ್‌ಸಿಎಲ್ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಹೆಚ್ಚುವರಿ ಬಿಎಂಟಿಸಿ ಬಸ್ ವ್ಯವಸ್ಥೆ

ಯಶವಂತಪುರದಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಾದ ಮೇಲೆ ಬಿಎಂಟಿಸಿ ಹೆಚ್ಚುವರಿ ಬಸ್ ವ್ಯವಸ್ಥೆ ಕಲ್ಪಿಸಿತ್ತು. ನಾಗಸಂದ್ರ, ಟಿ.ದಾಸರಹಳ್ಳಿ, ಜಾಲಹಳ್ಳಿ ಕಡೆಯಿಂದ ಬರುತ್ತಿದ್ದ ಬಸ್‌ಗಳೂ ಪ್ರಯಾಣಿಕರಿಂದ ಭರ್ತಿಯಾಗಿರುತ್ತಿದ್ದವು. ಹೀಗಾಗಿ ಯಶವಂತಪುರದಿಂದಲೇ ನಗರದ ವಿವಿಧ ಸ್ಥಳಕ್ಕೆ ತೆರಳಲು ಬಿಎಂಟಿಸಿ ಬಸ್ ವ್ಯವಸ್ಥೆ ಮಾಡಿತ್ತು.

ಸಂಚಾರ ನಿಯಮ ಉಲ್ಲಂಘಿಸಿದ್ದರೆ ದಂಡ ಪ್ರಯೋಗ

ಹೆದ್ದಾರಿಗೆ ಎ.ಐ ಕ್ಯಾಮೆರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನಗಳ ಅತಿಯಾದ ವೇಗ ಹಾಗೂ ಸಂಚಾರ ನಿಯಮ ಉಲ್ಲಂಘನೆ ಮೇಲೆ ಕಣ್ಗಾವಲು ಇಡಲು ರಾಜ್ಯದ ಪ್ರಮುಖ ಹೆದ್ದಾರಿಗಳಲ್ಲಿ ಎ.ಐ (ಕೃತಕ ಬುದ್ಧಿಮತ್ತೆ) ಕ್ಯಾಮೆರಾ ಅಳವಡಿಸಲು ಸಾರಿಗೆ ಇಲಾಖೆ ಮುಂದಾಗಿದೆ.

ಈ ತಿಂಗಳ ಅಂತ್ಯದ ವೇಳೆಗೆ ಆರು ಹೆದ್ದಾರಿಗಳಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಅನುಷ್ಠಾನಕ್ಕೆ ಬರಲಿದೆ. ಸಂಚಾರ ನಿಯಮ ಉಲ್ಲಂಘಿಸಿದ್ದರೆ ವಾಹನದ ಮಾಲೀಕರಿಗೆ ದಂಡ ಸಹ ಬೀಳಲಿದೆ.

ಬೆಂಗಳೂರು–ಮೈಸೂರು ಹೆದ್ದಾರಿ, ರಾಷ್ಟ್ರೀಯ ಹೆದ್ದಾರಿ–4ರ ಪಾರ್ಲೆ–ಜಿ ಕಾರ್ಖಾನೆ ಬಳಿ, ತುಮಕೂರಿನ ಕ್ಯಾತ್ಸಂದ್ರ, ರಾಷ್ಟ್ರೀಯ ಹೆದ್ದಾರಿ 7ರ ದೇವನಹಳ್ಳಿ ಟೋಲ್‌ಗೇಟ್, ಹೊಸೂರು ರಸ್ತೆಯ ಅತ್ತಿಬೆಲೆ ಹಾಗೂ ರಾಷ್ಟ್ರೀಯ ಹೆದ್ದಾರಿ 73ರ ಹಿಟ್ನಾಳ ಟೋಲ್‌ಗೇಟ್ ಬಳಿ ಎ.ಐ ಕ್ಯಾಮೆರಾ ಅಳವಡಿಸಲು ಇಲಾಖೆ ತೀರ್ಮಾನಿಸಿದೆ.

ಇತ್ತೀಚೆಗೆ ಹೆದ್ದಾರಿಗಳಲ್ಲಿ ಅಪಘಾತ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿವೆ. ವಾಹನಗಳ ಅತಿಯಾದ ವೇಗದಿಂದ ಸಾವು ಸಂಭವಿಸುತ್ತಿವೆ. ವಾಹನಗಳ ವೇಗ ತಗ್ಗಿಸಲು ಈ ಕ್ರಮ ಕೈಗೊಳ್ಳಲಾಗಿದೆ.

ವಾಹನ ಸಂಚಾರ ನಿಯಮ ಉಲ್ಲಂಘನೆ ಹಾಗೂ ಅಪಘಾತಗಳ ಪ್ರಕರಣ ಹೆಚ್ಚಿರುವ ಹೆದ್ದಾರಿಗಳನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಎ.ಐ (ಕೃತಕ ಬುದ್ಧಿಮತ್ತೆ) ಕ್ಯಾಮೆರಾ ಅಳವಡಿಕೆ ಕಾರ್ಯ ಆರಂಭವಾಗಿದೆ. ಇದು ಫಲ ನೀಡಿದರೆ ರಾಜ್ಯದಾದ್ಯಂತ ಅಪಘಾತ ವಲಯಗಳಲ್ಲಿ ಕ್ಯಾಮೆರಾ ಅಳವಡಿಸುವ ಆಲೋಚನೆಯಲ್ಲಿ ಸಾರಿಗೆ ಇಲಾಖೆ ಇದೆ.

ವಾಹನಗಳ ವೇಗದ ವಿವರದ ಪ್ರದರ್ಶನಕ್ಕೆ ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ನ ವ್ಯವಸ್ಥೆ ಮಾಡಲಾಗುವುದು. ಈ ಕ್ಯಾಮೆರಾಗಳು ವಾಹನಗಳ ವೇಗ, ಚಾಲಕರು ಸೀಟ್ ಬೆಲ್ಟ್ ಧರಿಸದಿರುವುದೂ ಸೇರಿದಂತೆ ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದ ದೃಶ್ಯಾವಳಿಯನ್ನು ಸೆರೆ ಹಿಡಿಯಲಿವೆ. 200 ಮೀಟರ್ ದೂರದವರೆಗಿರುವ ದೃಶ್ಯವೂ ಸೆರೆಯಾಗಲಿದೆ.

ಎ.ಐ ಕ್ಯಾಮೆರಾಗಳನ್ನು ಸಾರಿಗೆ ಇಲಾಖೆಯ ವೆಬ್ ಆಧಾರಿತ ಸಾರಥಿ–4 ಮತ್ತು ವಾಹನ್–4 ತಂತ್ರಾಂಶದ ಜತೆ ಜೋಡಣೆ ಮಾಡಲಾಗುವುದು. ನಿಯಮ ಉಲ್ಲಂಘನೆಯಾಗಿದ್ದರೆ ವಾಹನದ ನೋಂದಣಿ ಸಂಖ್ಯೆ ಕ್ಯಾಮೆರಾದಲ್ಲಿ ಸೆರೆಯಾಗಲಿದೆ. ಇಲಾಖೆ ಅಧಿಕಾರಿಗಳಿಗೂ ಮಾಹಿತಿ ಲಭಿಸಲಿದೆ.

'ಹತ್ತಿದ ಏಣಿ ಒದೆಯುವ ಚಾಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಕುರಿತು ಕೀಳುಮಟ್ಟದ ಹೇಳಿಕೆ ನೀಡುವ ಮೂಲಕ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಹತ್ತಿದ ಏಣಿ ಒದೆಯುವ ಚಾಳಿ ಪ್ರದರ್ಶಿಸಿದ್ದಾರೆ' ಎಂದು ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಟಿ.ಎ. ಶರವಣ ಟೀಕಿಸಿದ್ದಾರೆ.

ಟಿ.ಎ.ಶರವಣ

ಜಮೀರ್ ಹೇಳಿಕೆ ಕುರಿತು ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಜಮೀರ್ ಅವರು ತಾವೇ ಬಸ್ ಚಲಾಯಿಸಿಕೊಂಡು ರಾಜಭವನಕ್ಕೆ ಕರೆದೊಯ್ದಾಗ ಕುಮಾರಸ್ವಾಮಿ ಅವರು ಯಾವ ಚಡ್ಡಿ ಹಾಕಿದ್ದರೋ, ಈಗಲೂ ಅಂತಹದ್ದೇ ಚಡ್ಡಿ ಹಾಕಿದ್ದಾರೆ. ಕುಮಾರಸ್ವಾಮಿ ಯಾವತ್ತೂ ಬದಲಾಗಿಲ್ಲ. ರಾಜಭವನಕ್ಕೆ ಕರೆದೊಯ್ಯುವಾಗ ಜಮೀರ್ ಅವರಿಗೆ ಪರಿವೆ ಇರಲಿಲ್ಲವೆ' ಎಂದು ಕೇಳಿದ್ದಾರೆ.

'ಕುಮಾರಸ್ವಾಮಿ ಅವರು ಅಲ್ಪಸಂಖ್ಯಾತರ ವಿರುದ್ಧ ಮಾತನಾಡಿಲ್ಲ. ಅಲ್ಪಸಂಖ್ಯಾತರು ತಮ್ಮ ಸ್ವತ್ತು ಎಂದು ಭಾವಿಸಿ ಸಚಿವರು ಹೇಳಿಕೆ ನೀಡುವುದು ಸರಿಯಲ್ಲ. ಕುಮಾರಸ್ವಾಮಿ ಅವರ ಜತೆಗಿದ್ದು, ಅವರಿಂದಲೇ ರಾಜಕೀಯವಾಗಿ ಎತ್ತರಕ್ಕೇರಿ ಈಗ ಅವರನ್ನೇ ನಿಂದಿಸುತ್ತಿದ್ದಾರೆ. ಇದು ಅವರ ಮಟ್ಟವನ್ನು ತೋರಿಸುತ್ತದೆ' ಎಂದಿದ್ದಾರೆ.

'ಜಮೀರ್ ಅವರಿಗೆ ರಾಜಕೀಯ ಜೀವನ ನೀಡಿದ್ದು ಜೆಡಿಎಸ್. ಅದನ್ನು ಮರೆತು ನಮ್ಮ ಪಕ್ಷ ಮತ್ತು ನಾಯಕರನ್ನು ನಿಂದಿಸುತ್ತಿದ್ದಾರೆ. ಹತ್ತಿದ ಏಣಿಯನ್ನು ಒದೆಯುವ ಈ ನಡತೆ ಸರಿಯಲ್ಲ' ಎಂದು ಅವರು ಹೇಳಿದ್ದಾರೆ.

262 ರೈಲುಗಳ ವೇಳಾಪಟ್ಟಿ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಭಾಗದಿಂದ ಸಂಚರಿಸುವ 264 ರೈಲುಗಳ ವೇಳಾಪಟ್ಟಿ ಪರಿಷ್ಕರಿಸಲಾಗಿದೆ ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ (ಆಡಳಿತ) ಕುಸುಮಾ ಹರಿಪ್ರಸಾದ್ ತಿಳಿಸಿದರು.

ರೈಲುಗಳ ಆಗಮನ ಮತ್ತು ನಿರ್ಗಮನದ ನೂತನ ವೇಳಾಪಟ್ಟಿ ಕುರಿತು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಬೆಂಗಳೂರು ವಿಭಾಗದಿಂದ ದೈನಂದಿನ, ವಾರದ ಹಾಗೂ ಎರಡು-ಮೂರು ವಾರಕ್ಕೊಮ್ಮೆ ಒಟ್ಟು 396 ರೈಲು ಸಂಚರಿಸುತ್ತವೆ. ಅದರಲ್ಲಿ 264 ರೈಲುಗಳ ವೇಳಾಪಟ್ಟಿ ಪರಿಷ್ಕರಿಸಲಾಗಿದೆ' ಎಂದರು.

205 ಎಕ್ಸ್‌ಪ್ರೆಸ್ ಹಾಗೂ 59 ಲೋಕಲ್ ರೈಲು ಸಂಚಾರದ ಸಮಯ ಬದಲಾವಣೆ ಮಾಡಲಾಗಿದೆ. ಅನಗತ್ಯ ವಿಳಂಬ ತಡೆಯಲು ಇಲಾಖೆ ಮುಂದಾಗಿದೆ ಎಂದು ಹೇಳಿದರು.

ಕೆಎಸ್‌ಆರ್ ಬೆಂಗಳೂರು-ಧಾರವಾಡ ಹಾಗೂ ಧಾರವಾಡ–ಬೆಂಗಳೂರು ಕೆಎಸ್‌ಆರ್ ವಂದೇಭಾರತ್ ಎಕ್ಸ್‌ಪ್ರೆಸ್, ಕಾಚಿಗುಡ-ಯಶವಂತಪುರ ಹಾಗೂ ಯಶವಂತಪುರ-ಕಾಚಿಗುಡ ವಂದೇಭಾರತ್ ಎಕ್ಸ್‌ಪ್ರೆಸ್ ಸೇರಿದಂತೆ ನೈರುತ್ಯ ರೈಲ್ವೆಯಿಂದ ಒಟ್ಟು 4 ಜೋಡಿ ಹೊಸ ರೈಲುಗಳನ್ನು ಆರಂಭಿಸಲಾಗಿದೆ ಎಂದು ಹೇಳಿದರು.

ಎಸ್‌ಎಂವಿಟಿ – ಮುರುಡೇಶ್ವರ ಹಾಗೂ ಮುರುಡೇಶ್ವರ–ಎಸ್‌ಎಂವಿಟಿ ಬೆಂಗಳೂರು ರೈಲು ಪ್ರಯಾಣಿಕರ ಅನುಕೂಲಕ್ಕಾಗಿ ವಾರದ ಆರು ದಿನಗಳ ಬದಲಾಗಿ 7 ದಿನಗಳು ಸಂಚರಿಸಲಿದೆ. ಇನ್ನು ಮೈಸೂರು-ಸೊಲ್ಲಾಪುರ ರೈಲು ಸಂಚಾರವನ್ನು ಫಂಡರಾಪುರದವರೆಗೆ ಹಾಗೂ ಬೆಂಗಳೂರು–ಮಂಗಳೂರು ರೈಲು ಸಂಚಾರವನ್ನು ಮುರುಡೇಶ್ವರದವರೆಗೆ ವಿಸ್ತರಿಸಲಾಗಿದೆ ಎಂದರು.

ಹೊರವರ್ತುಲ ರಸ್ತೆ: ಭಾರಿ ವಾಹನ ಸಂಚಾರಕ್ಕೆ ನಿರ್ಬಂಧ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊರವರ್ತುಲ ರಸ್ತೆಯಲ್ಲಿ ನಿತ್ಯವೂ ವಿಪರೀತ ದಟ್ಟಣೆ ಉಂಟಾಗುತ್ತಿದೆ. ಇದರ ನಿಯಂತ್ರಣಕ್ಕಾಗಿ ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಭಾರಿ ವಾಹನಗಳ ಸಂಚಾರ ನಿರ್ಬಂಧಿಸಿ' ಎಂದು ಹೊರವರ್ತುಲ ರಸ್ತೆಯ ಕಂಪನಿಗಳ ಒಕ್ಕೂಟ (ಒಆರ್‌ಆರ್‌ಸಿಎ) ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಇತ್ತೀಚೆಗೆ ಭೇಟಿಯಾಗಿ ಮಾತುಕತೆ ನಡೆಸಿದ್ದ ಪದಾಧಿಕಾರಿಗಳು, 'ಸಂಚಾರ ದಟ್ಟಣೆಯಿಂದ ಸಾಕಷ್ಟು ಸಮಸ್ಯೆಗಳು ಉದ್ಭವಿಸುತ್ತಿವೆ. ದಟ್ಟಣೆ ನಿಯಂತ್ರಣಕ್ಕೆ ತುರ್ತು ಕ್ರಮಗಳನ್ನು ಕೈಗೊಳ್ಳಿ' ಎಂದು ಕೋರಿದ್ದಾರೆ.

'ಹೊರ ವರ್ತುಲ ರಸ್ತೆಯಲ್ಲಿ ಸಾಕಷ್ಟು ಕಂಪನಿಗಳ ಕಚೇರಿಗಳಿವೆ. ಸಾವಿರಾರು ಉದ್ಯೋಗಿಗಳು ಹೊರವರ್ತುಲ ರಸ್ತೆ ಮೂಲಕ ಕಚೇರಿಗೆ ಬಂದು ಹೋಗುತ್ತಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಹೊರವರ್ತುಲ ರಸ್ತೆಯಲ್ಲಿ ವಿಪರೀತ ದಟ್ಟಣೆ ಉಂಟಾಗುತ್ತಿದೆ. ಉದ್ಯೋಗಿಗಳು ಕಚೇರಿಗೆ ಬಂದು ಹೋಗಲು ಕಷ್ಟಪಡುತ್ತಿದ್ದಾರೆ. ಇದು ಕಂಪನಿಗಳ ಆರ್ಥಿಕ ಸಂಕಷ್ಟಕ್ಕೆ ಕಾರಣವಾಗುತ್ತಿದೆ' ಎಂದು ಪದಾಧಿಕಾರಿಗಳು ದೂರಿದ್ದಾರೆ.

'ಭಾರಿ ವಾಹನಗಳ ಸಂಚಾರವನ್ನು ತ್ವರಿತವಾಗಿ ನಿರ್ಬಂಧಿಸಬೇಕು. ಸರ್ವೀಸ್ ರಸ್ತೆ, ಪಾದಚಾರಿ ಮಾರ್ಗ ಹಾಗೂ ಬಸ್ ತಂಗುದಾಣಗಳನ್ನು ಅಭಿವೃದ್ಧಿಪಡಿಸಬೇಕು. ಪಾದಚಾರಿ ಮಾರ್ಗ ಒತ್ತುವರಿ ತೆರವು ಮಾಡಬೇಕು. ಅಕ್ರಮವಾಗಿ ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದ್ದಾರೆ.

ಉಪಮುಖ್ಯಮಂತ್ರಿ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ಒಆರ್‌ಆರ್‌ಸಿಎ ಅಧ್ಯಕ್ಷರಾದ ಮಾನಸ್ ದಾಸ್, 'ನಮ್ಮ ಬೇಡಿಕೆ ಈಡೇರಿಕೆಗೆ ಕ್ರಮ ಕೈಗೊಳ್ಳುವಂತೆ ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ಅವರಿಗೆ ಉಪಮುಖ್ಯಮಂತ್ರಿ ಅವರು ಸೂಚನೆ ನೀಡಿದ್ದಾರೆ. ಜೊತೆಗೆ, ಹೊರವರ್ತುಲ ರಸ್ತೆಗೆ ಬಂದು ಪರಿಶೀಲನೆ ನಡೆಸುವುದಾಗಿಯೂ ಆಶ್ವಾಸನೆ ನೀಡಿದ್ದಾರೆ' ಎಂದರು.

ಲಂಚ: ಬಿಎಂಟಿಸಿಯ 7 ಮಂದಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಲಕರು ಹಾಗೂ ನಿರ್ವಾಹಕರಿಂದ ಆನ್‌ಲೈನ್ ಮೂಲಕ ಲಂಚ ಪಡೆದಿದ್ದ ಬಿಎಂಟಿಸಿಯ ಘಟಕ 33ರ ಏಳು ಮಂದಿಯನ್ನು ಅಮಾನತು ಮಾಡಲಾಗಿದೆ.

ಡಿಪೊ ಮ್ಯಾನೇಜರ್ ಸತ್ಯನಾರಾಯಣ, ಇನ್‌ಸ್ಪೆಕ್ಟರ್ ರಂಜಿತ್, ಸಂಚಾರ ನಿಯಂತ್ರಕ ಗುರುಮೂರ್ತಿ, ಹಾಜರಾತಿ ನಿರ್ವಾಹಕ ಧನಂಜಯ್, ಕಿರಿಯ ಸಹಾಯಕ ಶಬೀರ್, ಚಾಲಕ ಮೆಹಬೂಬ್, ನಿರ್ವಾಹಕ ರವಿ ಅಮಾನತುಗೊಂಡವರು.

ದೈನಂದಿನ ರಜೆ, ಓ.ಟಿ ಕಾರ್ಯಾಚರಣೆ ಹಾಗೂ ರಜೆ ತೆಗೆದುಕೊಳ್ಳಲು ಚಾಲಕ, ಚಾಲಕ ಕಂ ನಿರ್ವಾಹಕ, ತಾಂತ್ರಿಕ ಸಿಬ್ಬಂದಿಯಿಂದ ಘಟಕದ ಆಡಳಿತ ಹಾಗೂ ಸಂಚಾರ ಸಿಬ್ಬಂದಿ ಲಂಚ ಪಡೆಯುತ್ತಿದ್ದಾರೆ ಎಂಬ ದೂರು ಬಂದಿತ್ತು. ದೂರು ಆಧರಿಸಿ ಬಿಎಂಟಿಸಿ ಸಹಾಯಕ ಭದ್ರತಾ ಹಾಗೂ ಜಾಗೃತಾಧಿಕಾರಿ ಸಿ.ಕೆ.ರಮ್ಯಾ ತನಿಖೆ ನಡೆಸಿದ್ದರು. ಒಟ್ಟು ₹ 4.25 ಲಕ್ಷ ಪಡೆದಿರುವುದು ಸಾಬೀತಾಗಿದೆ.

'ಲಂಚ ಪಡೆದ ಸಿಬ್ಬಂದಿ ವಿರುದ್ಧ ಕಠಿಣ ಕ್ರಮಕ್ಕೆ ಸೂಚನೆ ನೀಡಿದ್ದೆ. ಅದರಂತೆ ಕ್ರಮ ಕೈಗೊಂಡಿದ್ದಾರೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಎ.ವಿ.ಆರ್ ಸ್ವರ್ಣ ಮಹಲ್ ಜುವೆಲರ್ಸ್‌ನ 20ನೇ ಮಳಿಗೆಯನ್ನು ಮಲ್ಲೇಶ್ವರದ ಸಂಪಿಗೆ ಚಿತ್ರಮಂದಿರ ಮುಂಭಾಗ ಆರಂಭಿಸಲಾಗಿದೆ. ಮಳಿಗೆಯ ಉದ್ಘಾಟನೆ ವೇಳೆ ಜುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಎ.ಬಿ.ಎಸ್ ಸಂಜಯ್, ನಿರ್ದೇಶಕರಾದ ಸೌಮ್ಯ ಸಂಜಯ್, ಎ.ವಿ.ಆರ್ ಸಿದ್ಧಾಂತ್ ಮತ್ತು ಎ.ವಿ.ಆರ್ ಸ್ಮರಣ ಇದ್ದರು

'ಆಜ್‌ತಕ್ ವಿರುದ್ಧ ಬಲವಂತದ ಕ್ರಮ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ಸ್ವಾವಲಂಬಿ ಸಾರಥಿ ಯೋಜನೆಯನ್ನು ಟೀಕಿಸಿದ್ದರ ಹಿಂದೆ ಯಾವುದೇ ದುರುದ್ದೇಶವಿರಲಿಲ್ಲ' ಎಂದು 'ಆಜ್‌ತಕ್' ಹಿಂದಿ ಸುದ್ದಿ ವಾಹಿನಿ ಮತ್ತು ಅದರ ಮುಖ್ಯ ಸಂಪಾದಕ ಸುಧೀರ್ ಚೌಧರಿ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಸ್ಪಷ್ಟಪಡಿಸಿದರು.

'ನನ್ನ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಸುಧೀರ್ ಚೌಧರಿ ಮತ್ತು ಸಂಸ್ಥೆ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸುಧೀರ್ ಚೌಧರಿ ಪರ ವಾದ ಮಂಡಿಸಿದ ಹಿರಿಯ ವಕೀಲ ಉದಯ ಹೊಳ್ಳ ಅವರು, 'ಅರ್ಜಿದಾರರು ಸುಳ್ಳು ಸುದ್ದಿ ಪ್ರಕಟಿಸಿ ಕೋಮು ಗಲಭೆಗೆ ಪ್ರಚೋದನೆ ನೀಡುವ ಕೃತ್ಯ ಎಸಗಿದ್ದಾರೆ ಎಂಬ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಸರ್ಕಾರದ ನೀತಿಗಳನ್ನು ಟೀಕಿಸುವುದನ್ನು ಐಪಿಸಿ ಕಲಂ 153 ಎ (ಧರ್ಮದ ಆಧಾರದ ಮೇಲೆ ದ್ವೇಷವನ್ನು ಉತ್ತೇಜಿಸುವುದು) ಅಡಿಯಲ್ಲಿ ಪರಿಗಣಿಸಲಾಗದು' ಎಂದು ಪ್ರತಿಪಾದಿಸಿದರು. ವಿಚಾರಣೆಯನ್ನು ಇದೇ 9ರಂದು ಮುಂದುವರಿಸುವುದಾಗಿ ತಿಳಿಸಿದ ನ್ಯಾಯಪೀಠವು ಈ ಮೊದಲು ನೀಡಿದ್ದ, 'ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಜರುಗಿಸಬಾರದು' ಎಂಬ ಮಧ್ಯಂತರ ಆದೇಶವನ್ನು ವಿಸ್ತರಿಸಿತು.

ನಗರದಲ್ಲಿ ಇಂದು

ಡಿಜಿಟಲ್ ವೈಯಕ್ತಿಕ ಡೇಟಾ ರಕ್ಷಣೆ ಕಾಯಿದೆ-2023 ಮೌಲ್ಯಗಳು ಮತ್ತು ಸವಾಲುಗಳು: ಅತಿಥಿಗಳು: ಜೆ.ವಿ. ಪ್ರಸಾದ್, ಪಿ.ಎಂ. ಹೆಬ್ಳೀಕರ್, ರಿಂಕಿ ಶರ್ಮಾ, ವಿನೀತ್ ಕುಮಾರ್, ಸಿ. ವಂಶಿ ಕೃಷ್ಣ, ಆಯೋಜನೆ ಮತ್ತು ಸ್ಥಳ: ವೈದ್ಯಕೀಯ ಕಾಲೇಜಿನ ಕಟ್ಟಡ, ಎಂ.ಎಸ್. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್ ಜ್ಞಾನಗಂಗೋತ್ರಿ ಆವರಣ, ಬೆಳಿಗ್ಗೆ 10ರಿಂದ

ಎನ್.ಎಸ್. ಹೇಮಾ ಸ್ಮಾರಕ ಉಪನ್ಯಾಸ ಮತ್ತು ಪ್ರಶಸ್ತಿ ಪ್ರದಾನ: ಅತಿಥಿಗಳು: ಡಾ. ಸಿ.ಆರ್. ಚಂದ್ರಶೇಖರ್, ಸಿದ್ದೇಶ್ವರ್ ಎನ್., ಮಹಾಂತೇಶ್ ಕಿವಡಸಣ್ಣವರ, ಶ್ರೀನಿವಾಸ್ ಗರುಡಾಚಾರ್, ಜಯಂತಿ ಯಶವಂತ್, ಆಯೋಜನೆ: ದಿ ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿ, ಸ್ಥಳ: ಇಂಡಿಯಾ ಕ್ಯಾಂಪಸ್ ಕ್ರೂಸೇಡ್ ಫಾರ್ ಕ್ರೈಸ್ಟ್, ಹೆಣ್ಣೂರು ಮುಖ್ಯರಸ್ತೆ, ಥಾಮಸ್ ಟೌನ್, ಲಿಂಗರಾಜಪುರ, ಬೆಳಿಗ್ಗೆ 10

ಕರ್ನಾಟಕ ಜರ್ಮನ್ ಬಹುಕೌಶಲ್ಯ ಅಭಿವೃದ್ಧಿ ಕೇಂದ್ರದ ಉದ್ಘಾಟನೆ: ಡಿ.ಕೆ. ಶಿವಕುಮಾರ್, ಡಾ. ಶರಣಪ್ರಕಾಶ್ ಪಾಟೀಲ, ಉಪಸ್ಥಿತಿ: ಕಾಜ್ಯುಟೋಶಿ, ಮಿಟ್ಸುನೋರಿ ಸಾಯಿಟೋ, ಬಸವರಾಜ್ ಎಸ್. ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ಎಸ್. ಮುನಿರಾಜು, ಆಯೋಜನೆ: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸ್ಥಳ: ಕೆಜಿಟಿಟಿಐ ಬೆಂಗಳೂರು, ನಾಗಸಂದ್ರ ಮೆಟ್ರೊ ನಿಲ್ದಾಣದ ಹತ್ತಿರ, ಮಂಜುನಾಥನಗರ, ಬೆಳಿಗ್ಗೆ 11

ಬಂಜಾರ ಭವನದ ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಪ್ರತಿಮೆ ಅನಾವರಣ: ರುದ್ರಪ್ಪ ಲಮಾಣಿ, ಅತಿಥಿಗಳು: ಉಮೇಶ್ ಜಾಧವ, ಎಚ್.ಸಿ. ಮಹದೇವಪ್ಪ, ಕೃಷ್ಣ ಬೈರೇಗೌಡ, ಡಿ.ಕೆ. ಸುರೇಶ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಉಪಸ್ಥಿತಿ: ಬಿ.ಟಿ. ಲಲಿತಾ ನಾಯಕ್, ಆಯೋಜನೆ: ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ, ಸ್ಥಳ: ಬಂಜಾರ ಭವನ, ವಸಂತನಗರ, ಮಧ್ಯಾಹ್ನ 12

ವಿವೇಕ್ ಶಾನಭಾಗ್ ಅವರ 'ಸಕೀನಾಸ್ ಕಿಸ್' ಕಾದಂಬರಿ ಕುರಿತು ಸಂವಾದ: ಭಾಗವಹಿಸುವವರು: ವಿವೇಕ್ ಶಾನಭಾಗ್, ಶ್ರೀನಾಥ್ ಪೆರೂರ್, ಅರ್ಶಿಯಾ ಸತ್ತಾರ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು, ಸಂಜೆ 6.30

ಪ್ರವಚನ ವಾಹಿನಿ: 'ಸಮನ್ವಯ ಸೂತ್ರದಾರ ಶಂಕರ' ಕುರಿತು ಉಪನ್ಯಾಸ: ಮಂಜುನಾಥ ಭಟ್ ವಿನಾಯಕ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಬೆಳ್ಳಿ ತೆರೆಯ ಬೇಲಾ' ನಾಟಕ ಪ್ರದರ್ಶನ: ಮೂಲ ರಚನೆ: ಸ್ವಾನಂದ ಕಿರ್ಕಿರೆ, ನಿರ್ದೇಶನ: ವೀಣಾ ಶರ್ಮಾ ಭೂಸನೂರಮಠ, ಆಯೋಜನೆ: ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಮೆ॥ ಎನರ್ ಪಾರ್ಕ್ ಸೋಲಾರ್ ಪವರ್ 5 ಪ್ರೈವೇಟ್ ಲಿಮಿಟೆಡ್, ಇವರು ಯಾದಗಿರಿ ಜಿಲ್ಲೆ, ಯಾದಗಿರಿ ತಾಲ್ಲೂಕು, ಮುಂಡರ್ಗಿ ಗ್ರಾಮ (ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನಲ್ಲಿ ಸವಿವರವಾಗಿ ವಿವರಿಸಿರುವ) ಇದರ ಒಟ್ಟಾರೆ ವಿಸ್ತೀರ್ಣ 264 ಎಕರೆ ಜಮೀನಿಗೆ ಸಂಬಂಧಿಸಿದಂತೆ ಸಂಪೂರ್ಣ ಸ್ವತ್ತನ್ನು ವ್ಯವಹಾರ ನಡೆಸಲು ಇಚ್ಛಿಸಿರುತ್ತಾರೆ.

ಯಾವುದೇ ವ್ಯಕ್ತಿಗಳು ಅಥವಾ ಸಂಸ್ಥಗಳು (ಬ್ಯಾಂಕ್/ಸೊಸೈಟಿಗಳು, ಹಣಕಾಸಿನ ಸಂಸ್ಥೆಗಳು) ಹಾಗೂ ಮಾಲೀಕರನ್ನು ಹೊರತುಪಡಿಸಿ ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಕ್ಕು ಬಾಧ್ಯತೆ, ಹಿತಾಸಕ್ತಿ, ಅಥವಾ ಅದರ ಯಾವುದೇ ಭಾಗ ಅಥವಾ ಅಂಶದ ಸಂಬಂಧದಲ್ಲಿ ಮಾರಾಟ, ವಿನಿಮಯ, ಈಡು, ಪ್ರಭಾರ, ಉಡುಗೊರೆ, ದತ್ತ, ಪಿತ್ರಾರ್ಜಿತ, ಉತ್ತರಾಧಿಕಾರ, ಕುಟುಂಬದ ವ್ಯವಸ್ಥೆ/ಒಪ್ಪಂದ, ಅಂತಿಮ ಇಷ್ಟಪತ್ರ, ಅನುಭೋಗದ ಹಕ್ಕು, ಒಡಂಬಡಿಕೆ, ಪರವಾನಗಿ, ಹಂಚಿಕೆ, ಧರಣಾಧಿಕಾರ, ಜಪ್ತಿ, ಎಫ್‌ಎಸ್‌ಐ ಕನ್‌ಸಮ್‌ಷನ್, ಅಭಿವೃದ್ಧಿ ಹಕ್ಕು, ಯಾವುದೇ ನ್ಯಾಯಾಂಗ/ಅರೆ ನ್ಯಾಯಾಂಗ ಪ್ರಾಧಿಕಾರಿಯ ಡಿಕ್ರಿ ಅಥವಾ ಆದೇಶ, ಅಥವಾ ಸದರಿ ಷೆಡ್ಯೂಲ್ ಸ್ವತ್ತಿನ ಯಾವುದೇ ಸ್ವರೂಪದ ಯಾವುದೇ ಕ್ಲೇಮ್‌ಗಳನ್ನು ಹೊಂದಿದ್ದರೆ ಸೂಕ್ತ ಸಾಕ್ಷಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ 10 (ಹದಿನೈದು) ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ, ಇಲ್ಲದಿದ್ದರೆ ಅಂತಹ ಯಾವುದೇ ತರಹದ ಹಕ್ಕುಗಳು ಬಂಧನೆಯಾಗುವುದಿಲ್ಲ/ ಮನ್ನಮಾಡಲಾಗಿದೆ ಮತ್ತು ಮಾಲೀಕರನ್ನು ಹೊರತು ಪಡಿಸಿ ಯಾವುದೇ ವ್ಯಕ್ತಿಗಳು ಅಥವಾ ಸಂಸ್ಥೆಗಳು ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು, ಹಕ್ಕು ಬಾಧ್ಯತೆ, ಕ್ಲೇಮು ಮತ್ತು/ಅಥವಾ ಹಿತಾಸಕ್ತಿ, ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

(ಷೆಡ್ಯೂಲ್ ಸ್ವತ್ತು)

ಕರ್ನಾಟಕ ರಾಜ್ಯ, ಯಾದಗಿರಿ ಜಿಲ್ಲೆ, ಯಾದಗಿರಿ ತಾಲೂಕು, ಮುಂಡರ್ಗಾ ಗ್ರಾಮದಲ್ಲಿ ಒಳಗೊಂಡಿರುವ ಕೆಳಕಂಡ ಸರ್ವೆ ನಂಬರುಗಳ ಒಟ್ಟಾರೆ ಜಮೀನಿನ ವಿಸ್ತೀರ್ಣ 270.30 ಎಕರೆಗಳು.

ಸರ್ವೆ ನಂಬರು	ಎಕರೆ	ಗುಂಟೆ	ರೈತರುಗಳ ಹೆಸರುಗಳು	ಸರ್ವೆ ನಂಬರು	ಎಕರೆ	ಗುಂಟೆ	ರೈತರುಗಳ ಹೆಸರುಗಳು
256/1	2	35	ಗಲೀಮ್‌ಸಾಬ್ ಬಿನ್ ಹುಸೇನ್‌ಸಾಬ್ ಮತ್ತು (ಜಂಟಿ)		1	29	ನರಸಪ್ಪ ಬಿನ್ ಸಾಯಿಬಣ್ಣ
			ಮಲ್ಲಿಕ ಸಾಬ್ ಬಿನ್ ಹುಸೇನ್‌ಸಾಬ್		1	29	ಸಾಬಣ್ಣ ಬಿನ್ ಮಲ್ಲಪ್ಪ
			ಮುನ್ನಿ ಬೇಗಂ ಕೋಂ ದಸ್ತಾಗಿರಿ				ನಾಗಮ್ಮ ಕೋಂ ಪೋಲಪ್ಪ
	2	34	ಗಲೀಬ್ ಬೀ ಕೋಂ ಗುಡುಬಾಯಿ (ಜಂಟಿ)				ಸಾಬಣ್ಣ ಬಿನ್ ಆಶಪ್ಪ
			ಖಸೀಮ್ ಸಾಬ್ ಬಿನ್ ಗುಡುಬಾಯಿ	272/2	1	30	ಸಾಬಣ್ಣ ಬಿನ್ ಸಾಬಣ್ಣ
256/2	2	34	ಗಲೀಮ ಸಾಬ್ ಬಿನ್ ದವಲ ಸಾಬ್	272/3	1	30	ಸಾಬಣ್ಣ ಬಿನ್ ಸಾಬಣ್ಣ
256/3	2	35	ಹುಸೇನ್ ಸಾಬ್ ಬಿನ್ ದವಲ ಸಾಬ್	268/A	0	30	ಸಾಬಣ್ಣ ಬಿನ್ ಗಾಲೆಪ್ಪ
258/*	1	36	ದೇವೀಂದ್ರಮ್ಮ ಕೋಂ ಬಸಪ್ಪ ಮತ್ತು (ಜಂಟಿ)		0	30	ಲಕ್ಷ್ಮಣ ಬಿನ್ ಗಾಲೆಪ್ಪ
			ಮಸಮ್ಮ ಕೋಂ ಬಸಪ್ಪ		0	30	ಮಲ್ಲಪ್ಪ ಬಿನ್ ಗಾಲೆಪ್ಪ
	1	10	ಭೀಮಣ್ಣ ಬಿನ್ ಸಕ್ಕರಪ್ಪ		0	30	ಭೀಮ್‌ಸಪ್ಪ ಬಿನ್ ಗಾಲೆಪ್ಪ
	1	9	ಬಸಪ್ಪ ಬಿನ್ ಸಕ್ಕರಪ್ಪ	268/AA	0	30	ಈರಪ್ಪ ಬಿನ್ ಗಾಲೆಪ್ಪ
	7	17	ಮೋನಪ್ಪ ಬಿನ್ ಸಾಯಿಬಣ್ಣ		0	30	ಎಸ್ ಬೀರಪ್ಪ ಬಿನ್ ಬೀರಪ್ಪ
	1	34	ಅಮತ್ತೆಪ್ಪ ಬಿನ್ ಉತ್ತಪ್ಪ ಬಸನೆ		0	30	ಗಾಲೆಪ್ಪ ಬಿನ್ ಬೀರಪ್ಪ
	1	10	ಅಮತ್ತೆಪ್ಪ ಬಿನ್ ಉತ್ತಪ್ಪ ಬಸನೆ		0	30	ಮಲ್ಲಪ್ಪ ಬಿನ್ ನಿಂಗಪ್ಪ
259/A	1	14	ರಹೀಮ್ ಸಾಮ್ ಅಬ್ದುಲ್‌ಸಾಬ್ ಮತ್ತು (ಜಂಟಿ)	268/E	1	0	ಎಸ್ ಬೀರಪ್ಪ ಬಿನ್ ಬೀರಪ್ಪ ಮತ್ತು ಇತರರು
	1	13	ಹಾಸನ್ ಸಾಬ್ ಬಿನ್ ಅಬ್ದುಲ್ ಸಾಬ್		1	0	ಸಾಬಣ್ಣ ಬಿನ್ ಬೀರಪ್ಪ
259/AA	1	14	ಮಶಾಖ್ ಸಾಬ್ ಬಿನ್ ಅಬ್ದುಲ್ ಸಾಬ್ ಮತ್ತು ಇತರರು		1	0	ಬೀರಪ್ಪ ಬಿನ್ ದೊಡ್ಡ ಬೀರಪ್ಪ
	1	13	ಖಸೀಮ್ ಆಲಿ ಬಿನ್ ಅಬ್ದುಲ್ ಸಾಬ್ ಮತ್ತು (ಜಂಟಿ)	268/EE	3	0	ಗಾಲೆಪ್ಪ ಬಿನ್ ಬೀರಪ್ಪ
			ಅಬ್ದುಲ್ ಸಾಬ್ ಬಿನ್ ಹುಸ್ಸೇನ್ ಸಾಬ್	268/U	1	0	ಮಲ್ಲಪ್ಪ ಬಿನ್ ನಾಗಪ್ಪ
260/*	1	14	ಲಚ್ಚಮ್ಮಣ್ಣ ಬಿನ್ ಶಿವಣ್ಣ		0	39	ಬೀರಪ್ಪ ಬಿನ್ ನಿಂಗಪ್ಪ ಬೆಲೆಗೇರಿ
	0	30	ದ್ಯಾವಮ್ಮ ಕೋಂ ಚಂದಪ್ಪ		1	0	ಕಾಸಮ್ಮ ಕೋಂ ಸಾಬಣ್ಣ
	1	4	ಪಾರ್ವತಮ್ಮ ಕೋಂ ಬೀಮ್‌ಶಪ್ಪ	274/1	1	3	ಆಶಪ್ಪ ಬಿನ್ ಮಲ್ಲಪ್ಪ
	3	8	ಈರಪ್ಪ ಬಿನ್ ಮರಗಪ್ಪ ಮತ್ತು (ಜಂಟಿ)	274/2	1	3	ಸಾಬಣ್ಣ ಬಿನ್ ಸಾಬಣ್ಣ
			ಮರಲಿಂಗಪ್ಪ ಬಿನ್ ತಮ್ಮಣ್ಣ	274/3	0	31	ಅಯ್ಯಪ್ಪ ಬಿನ್ ಮರೆಪ್ಪ
			ನಾಗಪ್ಪ ಬಿನ್ ತಮ್ಮಣ್ಣ	274/4	0	31	ಸಿದ್ದಮ್ಮ ಕೋಂ ಸಾಬಣ್ಣ
			ರವಿ ಬಿನ್ ತಮ್ಮಣ್ಣ	274/5	1	0	ಸಾಬಣ್ಣ ಬಿನ್ ಸಾಬಣ್ಣ
	3	9	ಬುಗ್ಗಪ್ಪ ಬಿನ್ ಚಂದಪ್ಪ	274/6	1	1	ಮಲ್ಲಪ್ಪ ಬಿನ್ ಲಚಮಣ್ಣ (ಜಂಟಿ)
			ಶಿವಪ್ಪ ಬಿನ್ ಚಂದಪ್ಪ				ಸಾಬಣ್ಣ ಲಚ್ಚಮಣ
			ಈರಪ್ಪ ಬಿನ್ ಚಂದಪ್ಪ	275/1	1	8	ಸಿದ್ದಮ್ಮ ಕೋಂ ಸಾಬಣ್ಣ
	3	8	ಶಿವಣ್ಣ ಬಿನ್ ನರಸಪ್ಪ	275/2	1	24	ಸಾಬಣ್ಣ ಬಿನ್ ಮಲ್ಲಪ್ಪ
			ದೊಡ್ಡ ಅಯ್ಯಪ್ಪ ಬಿನ್ ನರಸಪ್ಪ	275/3	0	35	ಮಲ್ಲಪ್ಪ ಬಿನ್ ಲಚಮಣ್ಣ (ಜಂಟಿ)
			ಸಣ್ಣ ಅಯ್ಯಪ್ಪ ಬಿನ್ ನರಸಪ್ಪ				ಸಾಬಣ್ಣ ಬಿನ್ ಲಚಮಣ್ಣ
	8	8	ಬಣ್ಣಪ್ಪ ಬಿನ್ ಈರಪ್ಪ ಬಸನಯ	275/4	0	35	ಮಲ್ಲಪ್ಪ ಬಿನ್ ಲಚಮಣ್ಣ (ಜಂಟಿ)
			ಬಣ್ಣಪ್ಪ ಬಿನ್ ಲಚ್ಚಮಣ್ಣ ಬಸನಯ				ಸಾಬಣ್ಣ ಬಿನ್ ಲಚಮಣ್ಣ
			ಸಾಬಣ್ಣ ಬಿನ್ ಸಾಬಣ್ಣ ಬಸನಯ	275/5	1	0	ಮರೆಪ್ಪ ಬಿನ್ ಸಾಬಣ್ಣ
261/1	4	27	ರಾಚಪ್ಪ ಬಿನ್ ನರಸಪ್ಪ ಮತ್ತು (ಜಂಟಿ)	275/6	0	22	ಸಿದ್ದಮ್ಮ ಕೋಂ ಸಾಬಣ್ಣ
			ಬಣ್ಣಪ್ಪ ಬಿನ್ ನರಸಪ್ಪ	275/7	0	24	ಮಲ್ಲಪ್ಪ ಬಿನ್ ಲಚಮಣ್ಣ (ಜಂಟಿ)
			ಮಲ್ಲಿಕಾರ್ಜುನ ಬಿನ್ ನರಸಪ್ಪ				ಸಾಬಣ್ಣ ಬಿನ್ ಲಚಮಣ್ಣ
	2	13	ಬಣ್ಣಪ್ಪ ಬಿನ್ ಬಸಲಿಂಗಪ್ಪ	275/8	1	17	ಸಾಬಣ್ಣ ಬಿನ್ ಸಾಬಣ್ಣ
	2	13	ಬಣ್ಣಪ್ಪ ಬಿನ್ ಬಸಲಿಂಗಪ್ಪ	275/9	1	24	ಸಿದ್ದಮ್ಮ ಕೋಂ ಸಾಬಣ್ಣ
	2	13	ಚಂದಪ್ಪ ಬಿನ್ ಅಮತೆಪ್ಪ	275/10	1	29	ಸಾಬಣ್ಣ ಬಿನ್ ಮಲ್ಲಪ್ಪ
	2	13	ಬಣ್ಣಪ್ಪ ಬಿನ್ ಬಸವರಾಜಪ್ಪ	275/11	0	24	ಸಾಬಣ್ಣ ಬಿನ್ ಮಲ್ಲಪ್ಪ
			ಶಿವಪ್ಪ ಬಿನ್ ಅಮತೆಪ್ಪ	275/12	1	21	ಬೀಮಣ್ಣ ಬಿನ್ ಸಾಬಣ್ಣ
261/2	1	24	ಸಿದ್ದಪ್ಪ ಬಿನ್ ಬಸವರಾಜ	275/13	2	1	ಗಾಲೇಪ್ಪ ಬಿನ್ ಸಾಬಣ್ಣ
261/3	0	31	ಬಣ್ಣಪ್ಪ ಬಿನ್ ಅಮತೆಪ್ಪ	275/14	1	0	ಆಶಾಪ್ಪ ಬಿನ್ ಮಲ್ಲಪ್ಪ
261/4	0	31	ಬಣ್ಣಪ್ಪ ಬಿನ್ ಅಮತೆಪ್ಪ	275/15	0	28	ಸಾಬಣ್ಣ ಬಿನ್ ಸಾಬಣ್ಣ
261/5	1	24	ಶಂಕರಪ್ಪ ಬಿನ್ ಸಾಬಣ್ಣ	275/16	1	6	ಮರೆಪ್ಪ ಬಿನ್ ಸಾಬಣ್ಣ
267/1	2	24	ಬೀರಪ್ಪ ಬಿನ್ ನಾಗಪ್ಪ ಕುರುಬೂರು	275/17	0	26	ಮಲ್ಲಪ್ಪ ಬಿನ್ ಲಚಮಣ್ಣ (ಜಂಟಿ)
267/2	1	30	ಯಸ್ಮಿನ್ ಫಾತಿಮ ಕೋಂ ಮಹಮದ್ ಫುಜಲ್ ಆಲಿ				ಸಾಬಣ್ಣ ಬಿನ್ ಲಚಮಣ್ಣ
267/3	1	25	ಯಮುನಪ್ಪ ಬಿನ್ ಭಾಗಪ್ಪ	276/*	4	35	ಸಣ್ಣ ಮಲ್ಲಪ್ಪ ಬಿನ್ ಬೀರಪ್ಪ ಪೂಜಾರಿ
	1	25	ಯಮುನಪ್ಪ ಬಿನ್ ಸಣ್ಣ ಭಾಗಪ್ಪ	276/*	4	0	ಮೊನಪ್ಪ ಬಿನ್ ಡಿ ದುರ್ಗಪ್ಪ (ಜಂಟಿ)
	1	12	ಶ್ರೀಮಲಿಕ್ ಪೀರ ಮೊಹಮದ್ ಬಿನ್ ಪೀರ್ ಸಾಬ್				ಸಾಬಣ್ಣ ಬಿನ್ ಲೇಟ್ ದುರ್ಗಪ್ಪ
267/4	2	0	ಆಂಜನೇಯ ಬಿನ್ ಸಾಬಣ್ಣ ಕುರುಬೂರು	276/*	4	1	ಮಲ್ಲಪ್ಪ ಬಿನ್ ದುರ್ಗಪ್ಪ
267/5	1	0	ದೇವಮ್ಮ ಬಿನ್ ಲಕ್ಷಣ್ ಬದ್ದನರಸನ್ನನೂರ್	276/*	4	1	ಹೊನ್ನಪ್ಪ ಬಿನ್ ಆಶಪ್ಪ
267/6	2	0	ಈಶ್ವರಪ್ಪ ಬಿನ್ ಸಾಬಣ್ಣ	279/1	3	0	ಗಲೇಪ್ಪ ಬಿನ್ ಸಾಬಣ್ಣ ಅಲ್ಲೂರು
267/7	1	0	ಶಕುಂತಲ ಬಿನ್ ಅಯ್ಯಪ್ಪ	279/2	2	0	ಮಲ್ಲ ಬಿನ್ ಮಲ್ಲ ಅಲ್ಲೂರು (ಜಂಟಿ)
267/8	1	0	ಮಲ್ಲಪ್ಪ ಬಿನ್ ಯೆಲ್ಲಪ್ಪ				ಸೋಮಲಿಂಗಮ್ಮ ಕೋಂ ನಾಗಪ್ಪ
267/9	1	0	ಮಹದೇವಪ್ಪ ಬಿನ್ ಯೆಲ್ಲಪ್ಪ	279/3	1	30	ಶ್ರೀ ಮೊನಪ್ಪ ಬಿನ್ ಸಾಬಣ್ಣ
269/270A	2	34	ಸಾಬಣ್ಣ ಬಿನ್ ನಿಂಗಪ್ಪ ಕುರುಬೂರು	279/4	3	17	ಮಲ್ಲ ಬಿನ್ ಮಲ್ಲ ಅಲ್ಲೂರು
269/270AA	2	34	ಗಲೆಪ್ಪ ಬಿನ್ ನಾಗಪ್ಪ ಕುರುಬೂರು				ಸೋಮಲಿಂಗಮ್ಮ ಕೋಂ ನಾಗಪ್ಪ
269/270E	2	36	ಹನಮವ್ವ ಕೋಂ ಲಕ್ಷಣ್	279/5	2	16	ಗಾಲೇಪ್ಪ ಬಿನ್ ಸಾಬಣ್ಣ ಅಲ್ಲೂರು
269/270EE	4	11	ಲಚ್ಚಮ ಬಿನ್ ಮೈಲಾರಿ ಕುರುಬೂರು	279/6	1	30	ಶ್ರೀ ತಾಯಪ್ಪ ಬಿನ್ ಸಣ್ಣ ಬುಗ್ಗಪ್ಪ
269/270U	4	12	ಸಾಯಬಾ ಬಿನ್ ಗಲೆಪ್ಪ ಕುರುಬೂರು	279/7	1	36	ಶ್ರೀ ಬೀಮರಾಯ ಬಿನ್ ದೊಡ್ಡ ಬುಗ್ಗಪ್ಪ
269/EE270	4	11	ಲಚ್ಚಮ ಬಿನ್ ಮೈಲಾರಿ	280/284AA	2	0	ಸೋಮಲಿಂಗಪ್ಪ ಬಿನ್ ನಾಗಪ್ಪ
269/U270	1	1	ಸಾಯಬಾ ಬಿನ್ ಗಲೆಪ್ಪ ಮತ್ತು ಇತರರು	280/284E	2	0	ಲಚ್ಚಮಣ್ಣ ಬಿನ್ ಕಾಶಪ್ಪ
	2	6	ಹನಮವ್ವ ಕೋಂ ಲಕ್ಷಮಣ ಪಸ್ಪೂಲ್ದೊರ				ಸಾಬಣ್ಣ ಬಿನ್ ಕಾಶಪ್ಪ
	1	5	ಸಾಬಣ್ಣ ಬಿನ್ ನಿಂಗಪ್ಪ ಕುರುಬೂರು				ಶರಣಪ್ಪ ಬಿನ್ ಕಾಶಪ್ಪ
269/UU270	1	18	ಸಾಬಣ್ಣ ಬಿನ್ ದೊಡ್ಡ ಬೀರಪ್ಪ ಮತ್ತು ಇತರರು				ಮಲ್ಲಿಕಾರ್ಜುನ ಬಿನ್ ಕಾಶಪ್ಪ
	2	34	ಶಿವಣ್ಣ ಬಿನ್ ನರಸಪ್ಪ				ಸಣ್ಣ ಸಾಬಯ್ಯ ಬಿನ್ ಕಾಶಪ್ಪ
			ಶರಣಪ್ಪ ಬಿನ್ ನರಸಪ್ಪ				ತಾಯಪ್ಪ ಬಿನ್ ಕಾಶಪ್ಪ
	1	17	ನಾಗಮ್ಮ ಕೋಂ ಸಣ್ಣ ನರಸಪ್ಪ				ಮಹಾಲಕ್ಷ್ಮಿ ಕೋಂ ಹುಸೇನಪ್ಪ
			ಹೊನ್ನಪ್ಪ ಬಿನ್ ನರಸಪ್ಪ	280/284EE	1	3	ತಾಯಿಮ್ಮ ಕೋಂ ಶರಣಪ್ಪ
269/YE270	2	39	ಯಮುನಪ್ಪ ಬಿನ್ ಸಾಬಣ್ಣ		1	3	ಮಲ್ಲಮ್ಮ ಕೋಂ ಶಿವಶರಣಪ್ಪ
269/YEE270	1	16	ಮೈಲಾರಿ ಬಿನ್ ಬೀರಪ್ಪ ಕುರುಬೂರು		2	11	ಲಚ್ಚಮಯ್ಯ ಬಿನ್ ಕಾಶಪ್ಪ
269/I270	0	28	ಸಾಯಬಾ ಬಿನ್ ಭಾಗಪ್ಪ ಕುರುಬೂರು				ಸಾಬಣ್ಣ ಬಿನ್ ಕಾಶಪ್ಪ
269/O270	0	28	ಲಚ್ಚಮ ಬಿನ್ ಭಾಗಪ್ಪ ಕುರುಬೂರು				ಶರಣಪ್ಪ ಬಿನ್ ಕಾಶಪ್ಪ
269/OO270	2	39	ಭೀಮಣ್ಣ ಬಿನ್ ಆಶಾಪ್ಪ ಕುರುಬೂರು				ಮಲ್ಲಿಕಾರ್ಜುನ ಬಿನ್ ಕಾಶಪ್ಪ
269/AUO270	1	16	ದಂಡಪ್ಪ ಬಿನ್ ಮಲ್ಲಪ್ಪ ಕುರುಬೂರು				ಸಣ್ಣ ಸಾಬಯ್ಯ ಬಿನ್ ಕಾಶಪ್ಪ
269/270KA	1	16	ಮಲ್ಲಪ್ಪ ಬಿನ್ ಮರಗಪ್ಪ				ತಾಯಪ್ಪ ಬಿನ್ ಕಾಶಪ್ಪ
271/1	4	11	ಶಿವಪ್ಪ ಬಿನ್ ಭೀಮಣ್ಣ (ಜಂಟಿ)				ಮಹಾಲಕ್ಷ್ಮಿ ಕೋಂ ಹುಸೇನಪ್ಪ
			ಮಲ್ಲಮ್ಮ ಕೋಂ ಚಂದ್ರಪ್ಪ	280/284U	2	0	ಗಾಲೇಪ್ಪ ಬಿನ್ ಸಾಬಣ್ಣ ಪಸಪುಲ್
271/2	2	34	ಗಲೇಪ್ಪ ಬಿನ್ ಸಾಬಣ್ಣ ಮತ್ತು ಇತರರು	280/284	2	0	ದೊಡ್ಡ ಮಲ್ಲಪ್ಪ ಬಿನ್ ಹೊನ್ನಪ್ಪ
			ನಾಗಮ್ಮ ಕೋಂ ಪೊಲೆಪ್ಪ		2	0	ಸಣ್ಣ ಮಲ್ಲಪ್ಪ ಬಿನ್ ಹೊನ್ನಪ್ಪ
			ಸಾಬಣ್ಣ ಬಿನ್ ಆಶಾಪ್ಪ		2	1	ಬುಗ್ಗಮ್ಮ ಕೋಂ ಬಸವರಾಜು
	2	34	ವೀರಭದ್ರಪ್ಪ ಬಿನ್ ಬಸಪ್ಪ				ಕಾಶಿನಾಥ ಬಿನ್ ಬಸವರಾಜು
			ಸಾಬಣ್ಣ ಬಿನ್ ಬಸಪ್ಪ	280/284	3	1	ಲಚಮಣ್ಣ ಬಿನ್ ದ್ಯಾವಪ್ಪ (ಜಂಟಿ)
	2	5	ಹನಮಂತ ಬಿನ್ ಬೀಮ್‌ಸಪ್ಪ				ಅಮ್ಮಣ್ಣ ಬಿನ್ ತಿಮ್ಮಣ್ಣ
	2	6	ಲಕ್ಷ್ಮಣ ಬಿನ್ ಬೀಮ್ಸ್‌ಪ್ಪ	280/A284	3	9	ಮಲ್ಲಪ್ಪ ಬಿನ್ ಬಸಪ್ಪ
	2	32	ಸಾಯಿಬಣ್ಣ ಬಿನ್ ಗಂಗಪ್ಪ				ರಾಯಣ್ಣ ಬಸಪ್ಪ
272/1	2	21	ಭೀಮ ಬಿನ್ ಚಂದಪ್ಪ ಬೆಲಗೇರಿ				ಲಚಮಣ್ಣ ಬಿನ್ ಬಸಪ್ಪ
	1		ಮರಗಪ್ಪ ಬಿನ್ ಹನಮಂತ	280/ I284	3	0	ಮಲ್ಲಯ್ಯ ಬಿನ್ ಸಾಬಯ್ಯ
	2	7	ಹನಮಂತ ಬಿನ್ ಬೀಮ್‌ಸಪ್ಪ				ರಾಮಣ್ಣ ಬಿನ್ ಸಾಬಯ್ಯ
	1	9	ಲಕ್ಷ್ಮಣ ಬಿನ್ ಭೀಮ್‌ಸಪ್ಪ				ಲಚಮಣ್ಣ ಬಿನ್ ಸಾಬಯ್ಯ

ನಮ್ಮ ಕಕ್ಷೀದಾರರ ಪರವಾಗಿ

ಲಿಂಕ್ ಲೀಗಲ್

4ನೇ ಮಹಡಿ ವೇಸ್ಟ್ ವಿಂಗ್, ರಾಜರಾಜೇಶ್ವರಿ ಟವರ್ಸ್, ನಂ.51, ಡಾ. ಆರ್.ಕೆ.ಸಾಲಾಯಿ, ಮೈಲಾಪುರ್, ಚೆನ್ನೈ – 600004, ಇಂಡಿಯಾ.



ಶಬ್ದನಿಯಂತ್ರಿತ ಮೈಕ್ರೋರೋಬೋಟ್

ಮಾನವನ ದೇಹದೊಳಗೆ ಕಾರ್ಯನಿರ್ವಹಿಸಬಲ್ಲ ಮೈಕ್ರೋರೋಬೋಟ್‌ಗಳ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆ. ಇವು ಯಶಸ್ವಿಯಾದರೆ ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿಯೇ ಉಂಟಾಗುತ್ತದೆ.

ಅಮೃತೇಶ್ವರಿ ಬಿ.



ಪ್ರಾತಿನಿಧಿಕ ಚಿತ್ರ

ಇಂದಿನ ಆಧುನಿಕ ಯುಗದಲ್ಲಿ ಕೃತಕ ಬುದ್ಧಿಮತ್ತೆ, ಯಾಂತ್ರಿಕ ಕಲಿಕೆ, ರೋಬೋಟ್ – ಇವುಗಳನ್ನು ಅನ್ವಯಿಸಿ ಬಳಸುವುದು ಸರ್ವೇಸಾಮಾನ್ಯವಾಗಿಬಿಟ್ಟಿದೆ. ಅನಿವಾರ್ಯತೆಯೂ ಇದೆಯೆನ್ನಿ. ಈಗಂತೂ ಮಿಲಿಟರಿ, ದೊಡ್ಡ ದೊಡ್ಡ ಕಾರ್ಖಾನೆಗಳು, ವೈದ್ಯಕೀಯ ಕ್ಷೇತ್ರ ಮುಂತಾದ ಕಡೆಯೆಲ್ಲಾ ರೋಬೋಟ್‌ಗಳು ಪ್ರಧಾನ ಪಾತ್ರ ವಹಿಸುತ್ತಿವೆ. ಎಲ್ಲಾ ಕ್ಷೇತ್ರಗಳನ್ನೂ ಆವರಿಸಿಕೊಂಡು ಸರ್ವವ್ಯಾಪಿಯಾಗುತ್ತಿರುವ ರೋಬೋಟ್‌ಗಳನ್ನು ನಮ್ಮ ದೇಹದೊಳಗೂ ಕಾರ್ಯನಿರ್ವಹಿಸಲು ಬಳಸುವಂತಾದರೆ ಹೇಗೆ? ಇದೋ ಇದರ ಒಂದು ಹಂತವನ್ನು ಸಾಧಿಸಿ ತೋರಿಸಿದ್ದಾರೆ, ಜರ್ಮನಿಯ 'ಅಕಾಸ್ಟಿಕ್ ರೋಬೋಟಿಕ್ಸ್ ಸಿಸ್ಟಮ್ಸ್ ಲ್ಯಾಬ್'ನ ಇಂಜಿನಿಯರು ಹಾಗೂ ಸಂಶೋಧಕರಾದ ಡೇನಿಯಲ್ ಅಹಮದ್ ಮತ್ತು ಸಂಗಡಿಗರು.

ರೋಬೋಟ್‌ಗಳು ವೈದ್ಯಕೀಯ ಕ್ಷೇತ್ರದಲ್ಲಿ ಈಗಾಗಲೇ ಬಳಕೆಯಾಗುತ್ತಿವೆ. ಆದರೆ ಅವೆಲ್ಲವೂ ಮಾನವನ ದೇಹದೊಳಗೆ ಕಾರ್ಯನಿರ್ವಹಿಸಬಲ್ಲವಂತವಲ್ಲ. ಮನುಷ್ಯನ ದೇಹದೊಳಗೆ ಇದ್ದುಕೊಂಡು ಕಾರ್ಯನಿರ್ವಹಿಸಬೇಕಾದರೆ ಬೇರೆ ರೀತಿಯದ್ದೇ ರಚನೆಯಿರುವ ರೋಬೋಟ್‌ಗಳಾಗಬೇಕು. ಒಂದು ಅವು ಬಲು ಸಣ್ಣ ಗಾತ್ರದ್ದಾಗಿಯೂ ತೆಳುವಾಗಿಯೂ ಇರಬೇಕು. ಮತ್ತು ಸುಲಭವಾಗಿ ದೇಹದ ನಾಳದೊಳಗೆ ಚಲಿಸುತ್ತಾ ಹೋಗುವಂತಿರಬೇಕು. ಹೊರಗಿನಿಂದ ನಿಯಂತ್ರಿಸಲು ಸುಲಭವಾಗಿರಬೇಕು. ಇವನ್ನೇ 'ಮೈಕ್ರೋರೋಬೋಟ್'ಗಳು ಎನ್ನುತ್ತೇವೆ. ಜೊತೆಗೆ ಇವು ಶರೀರದ ಅಂಗಗಳಿಗೆ ಯಾವುದೇ ರೀತಿಯ ಹಾನಿಯನ್ನು ಉಂಟುಮಾಡಬಾರದು. ಇದು ಸಾಧ್ಯವಾಗಿಬಿಟ್ಟರೆ ವೈದ್ಯಕೀಯ ಕ್ಷೇತ್ರದಲ್ಲಿ ರೋಬೋಟ್‌ಗಳ ಕ್ರಾಂತಿಯೇ ಆಗಿಬಿಡುತ್ತದೆ. ಇದಲ್ಲದೇ ಸಣ್ಣ ಉತ್ಪಾದನಾ ಕೈಗಾರಿಕೆಗಳು, ಎಲೆಕ್ಟ್ರಾನಿಕ್ಸ್, ಮೈಕ್ರೋಫ್ಲ್ಯುಯಿಡಿಕ್ಸ್ ಹಾಗೂ ಟಿಷ್ಯು ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿಯೂ ಬಹಳಷ್ಟು ಸುಧಾರಣೆಗಳಾಗುತ್ತವೆ.

ಈ ಮೈಕ್ರೋರೋಬೋಟ್‌ಗಳಿಗೆ ಪ್ರೇರಕವೇ ಸಿಫಿಲಿಸ್ ರೋಗವನ್ನು ತರುವ 'ಸ್ಪೈರೋಕೀಟ್' ಎನ್ನುವ ಬ್ಯಾಕ್ಟೀರಿಯಾದ ಚಲನೆ. ಇವು ಲೋಳೆಯಂತಹ ದ್ರವ, ರಕ್ತ, ದುಗ್ದರಸ – ಇವೇ ಮೊದಲಾದ ದ್ರವಪರಿಸರದಲ್ಲಿ ಈಜಾಡಬಲ್ಲವು. ಇವುಗಳನ್ನು ಅನುಕರಿಸಿ ರೋಬೋಟ್‌ಗಳನ್ನು ಸೃಷ್ಟಿಸುವುದು ಸುಲಭವೇನಲ್ಲ ಆದರೆ ಮುಂದಿನ ಹಂತದ ರೋಬೋಟ್‌ಗಳ ಅಭಿವೃದ್ಧಿಗಾಗಿ ಇದು ಅತಿ ಮುಖ್ಯ. ಇವನ್ನು ದೇಹದೊಳಗೆ ಬಳಸಿಕೊಳ್ಳಬೇಕಾದರೆ ಈಗಾಗಲೇ ಹೇಳಿದಂತೆ ಅವು ಸಣ್ಣ ಹಾಗೂ ತೆಳುವಾಗಿರುವುದಲ್ಲದೇ ಹೊರಗಿನಿಂದ ನಿಯಂತ್ರಿಸಲು ಸುಲಭವಾಗಿರಬೇಕು. ಇವನ್ನು ದೇಹದೊಳಗೆ ತೂರಿಸಿ ಚಲಾಯಿಸಬೇಕಾದರೆ ಕನಿಷ್ಠಬಲವನ್ನು ಪ್ರಯೋಗಿಸುವ ಅವಶ್ಯಕತೆಯಿದೆ. ಬಯೋಹೈಬ್ರಿಡ್, ರಾಸಾಯನಿಕ ಕ್ರಿಯೆಗಳು, ಆಪ್ಟಿಕ್ಸ್, ಕಿಣ್ವಗಳು, ವಿದ್ಯುತ್ ಹಾಗೂ ಅಯಸ್ಕಾಂತೀಯ ಕ್ಷೇತ್ರಗಳನ್ನು ಬಳಸಿಕೊಂಡು ಈಗಾಗಲೇ ಬಲವನ್ನು ನೀಡಲು ಪ್ರಯೋಗಿಸಲಾಗಿದೆ. ಆದರೆ ಇವು ಶರೀರದ ಅಂಗಗಳಿಗೆ ತೊಂದರೆಯನ್ನು ಉಂಟುಮಾಡುಬಹುದಾದ್ದರಿಂದ ಯಾವುವೂ ಯಶಸ್ವಿಯಾಗಲಿಲ್ಲ. ಹಾಗೂ ಇವುಗಳು ಚಲಿಸುವ ವೇಗ, ಬಲ ಹಾಗೂ ದಿಕ್ಕನ್ನು ನಿರ್ವಹಿಸುವುದು ಕಠಿಣವಾದ್ದರಿಂದ ಈ ವಿಧಾನಗಳು ವೈದ್ಯಕೀಯ ಕ್ಷೇತ್ರಕ್ಕೆ ಸೂಕ್ತವಲ್ಲ. ಬೆಳಕಿಗೆ ಸ್ಪಂದಿಸುವಂತಹ ದ್ರವ-ಸ್ಫಟಿಕ ಎಲಾಸ್ಟೋಮರುಗಳನ್ನು ಬಳಸಿಕೊಂಡೂ ಬಲವನ್ನು ಪ್ರಯೋಗಿಸಲು ವಿಜ್ಞಾನಿಗಳು ಪ್ರಯತ್ನಿಸಿದ್ದಾರೆ. ಇದು ಶರೀರದ ಅಂಗಗಳಿಗೆ ಹಾನಿಕಾರಕವಲ್ಲದಿದ್ದರೂ ಯಶಸ್ವಿಯಾಗಲಿಲ್ಲ. ಏಕೆಂದರೆ ಬೆಳಕು ಮಾನವನ ಶರೀರದ ಒಳಗೆಲ್ಲಾ ಪ್ರವೇಶಿಸದೇ ಕೆಲವೇ ಮಿಲಿಮೀಟರುಗಳಷ್ಟೇ ತೂರಬಲ್ಲದು. ಜೊತೆಗೆ ಹಾದು ಹೋದ ಬೆಳಕು ಸುತ್ತಲಿನ ಅಂಗಗಳಿಂದ ಚದುರಿಹೋಗಿಬಿಡಬಹುದು. ಹೀಗಾಗಿ ಬೆಳಕನ್ನು ಬಳಸಿ ಮೈಕ್ರೋರೋಬೋಟ್ ಅನ್ನು ಚಲಾಯಿಸುವುದು ಸಾಧ್ಯವಾಗುವುದಿಲ್ಲ. ಇದಕ್ಕೆ ಡೇನಿಯಲ್ ಮತ್ತು ಸಂಗಡಿಗರು ಬಳಸಿಕೊಂಡದ್ದು ಶಬ್ದವನ್ನು.

ಶಬ್ದವು ದೇಹದ ಆಳಕ್ಕೆ ತೂರಬಲ್ಲದು ಹಾಗೂ ಒಳಗಿರುವ ರೋಬೋಟ್ ಅನ್ನು ಚಲಾಯಿಸಲುಬೇಕಾದ ಶಕ್ತಿಯನ್ನು ಸಮರ್ಥವಾಗಿ ಉತ್ಪಾದಿಸಬಲ್ಲದು. ದೇಹದ ಅಪಾರದರ್ಶಕತೆಯಿಂದಾಗಿ ಅವುಗಳ ಚಲನೆ ಅಥವಾ ಕಾರ್ಯಕ್ಕೆ ಯಾವುದೇ ರೀತಿಯ ತೊಡಕೂ ಆಗುವುದಿಲ್ಲ. ಹಾಗಾಗಿ ಶಬ್ದನಿಯಂತ್ರಿತ ಮೈಕ್ರೋರೋಬೋಟ್‌ಗಳನ್ನು ಸೃಷ್ಟಿಸಿ ವೈದ್ಯಕೀಯ ಕ್ಷೇತ್ರದಲ್ಲಿ ಉಪಯೋಗಿಸಿಕೊಳ್ಳಬಹುದೇ ಎಂದು ನೋಡಿದ್ದಾರೆ. ಇದಕ್ಕೂ ಮೊದಲು ಶಬ್ದ ಹಾಗೂ ರೋಬೋಟ್ ಅನ್ನು ತಯಾರಿಸುವ ಸಾಮಗ್ರಿಗಳ ನಡುವಿನ ಹೊಂದಾಣಿಕೆ ಹಾಗೂ ಅವುಗಳ ರಚನೆಯನ್ನು ಅಧ್ಯಯನ ಮಾಡಬೇಕಾಗುತ್ತದೆ. ಉದಾಹರಣೆಗೆ, ಪಾಲಿಮರಿನ ಕುಳಿಯೊಳಗಿನ ಸಣ್ಣಕಣಗಳ ಮೇಲೆ ಶಬ್ದವನ್ನು ಹಾಯಿಸಿದಾಗ ಅದನ್ನು ತೀವ್ರವಾಗಿ ಚದುರಿಸಿ, ಹೆಚ್ಚಿನ ಶಕ್ತಿ ಉತ್ಪಾದನೆಯಾಗುತ್ತದೆ. ಹೆಚ್ಚಿನ ಶಕ್ತಿಯನ್ನು ನೀಡಿದಾಗ ರೋಬೋಟ್‌ನ ಚಲನೆಯಲ್ಲಿಯೂ ತೀವ್ರ ವ್ಯತ್ಯಾಸವಾಗುತ್ತದೆ. ಇದು ದೇಹದೊಳಗೆ ಬಳಸಿಕೊಳ್ಳಲು ಸೂಕ್ತವಲ್ಲ. ಹಾಗಾಗಿ ಈ ಅಂಶಗಳ ಮೇಲೆ ನಿಗಾ ವಹಿಸಬೇಕಾದ್ದು ಮುಖ್ಯ. ಡೇನಿಯಲ್ ಸ್ಪೈರೋಕೀಟ್ ಬ್ಯಾಕ್ಟೀರಿಯಾವನ್ನು ಅನುಕರಿಸುವ ಶಬ್ದದ ತರಂಗಗಳಿಂದ ಪ್ರಚೋದನೆಗೊಂಡು ಚಲಿಸಬಲ್ಲಂತಹ ರೆಕ್ಕೆಗಳಿರುವ ದ್ವಿಸುರುಳಿ ರೋಬೋಟ್ ಅನ್ನು ನ್ಯಾನೋಕಣಗಳನ್ನು ಬಳಸಿಕೊಂಡು ರಚಿಸಿ, ಅದರ ಚಲನೆಯನ್ನು ಪರೀಕ್ಷಿಸಿದ್ದಾರೆ. ಅರ್ಥಾತ್, ಬ್ಯಾಕ್ಟೀರಿಯಾದಂತಹ ಸೂಕ್ಷ್ಮಜೀವಿಗಳಲ್ಲಿ ಹೇಗೆ 'ಫ್ಲಾಜೆಲ್ಲಾ' ಅಥವಾ 'ಸೀಲಿಯಾ' ಅಂಗಗಳು ಚಲನೆಗೆ ನೆರವಾಗುತ್ತದೊ ಹಾಗೆ. ದ್ವಿಸುರುಳಿ ಆಕಾರವು ಪ್ರಯೋಗಿಸಲ್ಪಟ್ಟ ಶಬ್ದದೊಡನೆ ವರ್ತಿಸಿ ರೋಬೋಟ್ ಅನ್ನು ಸ್ಪೈರೋಕೇಟ್ ಬ್ಯಾಕ್ಟೀರಿಯಾದಂತೆ ಉರುಳುತ್ತಾ ಚಲಿಸುವಂತೆ ಮಾಡಿತ್ತಂತೆ. ಅರ್ಥಾತ್, ನ್ಯಾನೋರೋಬೋಟ್‌ನ ಚಲನೆ ದೇಹಕ್ಕೆ ಯಾವುದೇ ತೊಂದರೆ ಮಾಡದೇ ಸಾಗಿತ್ತು. ಅಂತೂ ಇವರ ಸಂಶೋಧನೆ ಯಶಸ್ವಿಯಾಯಿತು.

ಹೀಗೆ ಡೇನಿಯಲ್ ಹಾಗೂ ಸಂಗಡಿಗರ ಈ ಸಂಶೋಧನೆಯು ಮುಂದಿನ ಹಂತದ ಸುರಕ್ಷಿತವಾದ ಶಸ್ತ್ರಚಿಕಿತ್ಸೆಯಲ್ಲಿ ಉಪಯೋಗಿಸಬಹುದಾದ ಸಣ್ಣ ರೋಬೋಟ್‌ಗಳ ಅಭಿವೃದ್ಧಿಗೆ ಅನುಕೂಲಿಯಾಗಲಿವೆ.

ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿರುವ ನಮ್ಮ ಇಂದಿನ ಕಾಲದಲ್ಲಿ, ದೇಹದೊಳಗಿರುವ ಸೂಕ್ಷ್ಮನಾಳಗಳಲ್ಲಿಯೂ ಯಾವ ರೀತಿಯ ಸಮಸ್ಯೆಗಳು ಕಾಣಿಸಿ ಕೊಳ್ಳಬಹುದೋ ತಿಳಿಯದು. ಆಗಿರುವ ತೊಂದರೆಗಳನ್ನು ನಿಖರವಾಗಿ ಗುರುತಿಸಿ ಸರಿಪಡಿಸುವಲ್ಲಿ ಸಣ್ಣ ರೋಬೋಟ್‌ಗಳು ಕೂಡ ತಮ್ಮ ಸೇವೆಯನ್ನು ನೀಡಲಿರುವುದು ಸಂತಸದ ವಿಷಯ.

❖

'ವರ್ಚುವಲ್ ಸ್ಪೇಸ್' ಇದ್ದರೆ ಅಂತರ್ಜಾಲವೇ ಬೇಕಿಲ್ಲ!

ನೇಸರ ಕಾಡನಕುಪ್ಪೆ

ನಿಮ್ಮಲ್ಲಿ ಕೆಲವರು ಜನಪ್ರಿಯ 'ಸ್ಟಾರ್ ಟ್ರೆಕ್' ಧಾರಾವಾಹಿಗಳನ್ನು ನೋಡಿರಬಹುದು. ಇಂಗ್ಲಿಷ್ ಟೆಲಿವಿಷನ್ ಕ್ಷೇತ್ರದಲ್ಲಿ ಇಂದಿಗೂ ಅತಿ ಹೆಚ್ಚು ಜನಪ್ರಿಯತೆಯನ್ನು ಉಳಿಸಿಕೊಂಡಿರುವ ಅತಿ ಹಳೆಯ ಧಾರಾವಾಹಿಗಳಿವು. ಈ ಧಾರಾವಾಹಿಗಳ ಉಲ್ಲೇಖ ಇಲ್ಲೇಕೆ ಆಗುತ್ತಿದೆ ಎಂಬುದಕ್ಕೆ ಒಂದು ಪ್ರಮುಖ ಕಾರಣವಿದೆ.

ನಾವೀಗ ಹೇಳಲೊರಟಿರುವುದು 'ವರ್ಚುವಲ್ ಸ್ಪೇಸ್' ಅಥವಾ 'ಕೃತಕ ಭೌತಿಕ ಸ್ಥಳ'ಗಳ ಬಗ್ಗೆ. ಮಾರ್ಕ್ ಜೂಕರ್ ಬರ್ಗ್ 'ಮೆಟಾ ವರ್ಸ್' ಬಗ್ಗೆ ಎರಡು ವರ್ಷಗಳ ಹಿಂದೆ ಪ್ರಸ್ತಾಪಿಸಿದಾಗ ಅನೇಕರು ಹುಬ್ಬೇರಿಸಿದ್ದರು. ಆದರೆ, ಅದೇನು ಹೊಸ ಪರಿಕಲ್ಪನೆಯಲ್ಲ. ಸುಮಾರು 30 ವರ್ಷಗಳ ಹಿಂದೆಯೇ ಮೇಲೆ ಉಲ್ಲೇಖಿಸಿದ 'ಸ್ಟಾರ್ ಟ್ರೆಕ್' ಧಾರಾವಾಹಿ- ಸರಣಿಗಳಲ್ಲಿ 'ಹಾಲೋಡೆಕ್' ಎನ್ನುವ ಪರಿಕಲ್ಪನೆಯನ್ನು ಪರಿಚಯಿಸಲಾಗಿತ್ತು. ಆ ಪರಿಕಲ್ಪನೆ ಈಗ ಸಿನಿಮಾ ಅಥವಾ ಧಾರಾವಾಹಿ ಹಂತವನ್ನು ದಾಟಿ ನಿಜಜೀವನದಲ್ಲೇ ಕಾಲಿಡಲು ಹೊರಟಿದೆ.

ಪ್ರತಿಷ್ಠಿತ 'ನೇಚರ್ ಹ್ಯೂಮನ್ ಬಿಹೇವಿಯರ್' ನಿಯತಕಾಲಿಕೆಯಲ್ಲಿ ಅಮೆರಿಕದ ನಾಟ್ರೆ ಡೇಮ್ಸ್ ವಿಶ್ವವಿದ್ಯಾನಿಲಯದ ವಿಜ್ಞಾನಿ ಡಿಯಾಗೋ ಗೊಮೆನ್ಸ್ ಝುರಾ ಹಾಗೂ ಯೇಲ್ ವಿಶ್ವವಿದ್ಯಾನಿಲಯದ ಪೀಟರ್ ಸ್ಕೈಫರ್, ನಾರ್ತ್ ವೆಸ್ಟರ್ನ್ ವಿಶ್ವವಿದ್ಯಾನಿಲಯದ ಡಾಶುನ್ ವ್ಯಾಂಗ್ ಅವರು 'ವಿಜ್ಞಾನದಲ್ಲಿ ಮೆಟಾ ವರ್ಸ್ ಭರವಸೆ ಹಾಗೂ ಇತಿಮಿತಿಗಳು' ಎಂಬ ವೈಜ್ಞಾನಿಕ ಪ್ರಬಂಧವನ್ನು ಮಂಡಿಸಿದ್ದಾರೆ. ಈ ಪ್ರಬಂಧವು ಕೆಲವು ಅಚ್ಚರಿಯ ವಿಚಾರಗಳನ್ನು ಪ್ರಸ್ತಾಪಿಸಿದೆ. ಇದರ ಪ್ರಕಾರ ಬಹುತೇಕ ಮುಂದಿನ ಹತ್ತು ವರ್ಷಗಳಲ್ಲಿ 'ಮೆಟಾ ವರ್ಸ್' ಅಥವಾ 'ಕೃತಕ ಭೌತಿಕ ಸ್ಥಳಗಳು ನಮ್ಮೆಲ್ಲ ಭೌತಿಕ ಕಾರ್ಯಕ್ಷೇತ್ರಗಳನ್ನು ಸಂಪೂರ್ಣ ಆಕ್ರಮಿಸಿಕೊಂಡಿರುತ್ತವೆ. ಅದರಿಂದ ಇಂಟರ್‌ನೆಟ್, ವಿದ್ಯುತ್ ಇತ್ಯಾದಿ ಶಕ್ತಿಮೂಲಗಳ ಅಗತ್ಯವೇ ಇರುವುದಿಲ್ಲ' ಎಂದಿದ್ದಾರೆ.

ಇಂದು ನಮ್ಮೆಲ್ಲ ವೃತ್ತಿಸಂಬಂಧಿತ ಕೆಲಸಗಳಿಗೆ ಕಚೇರಿಯ ಅಗತ್ಯವಿದೆ. ಅದು ಕಚೇರಿಯಾಗಿರಬಹುದು, ಶಾಲಾ, ಕಾಲೇಜು ಆಗಿರಬಹುದು. ಜನರು ಒಮ್ಮೆಗೆ ಒಂದು ಕಡೆ ಸೇರಿ ಬೌದ್ಧಿಕ ಚರ್ಚೆಯ ಮೂಲಕ ಗುರಿಯೊಂದನ್ನು ಮುಟ್ಟಲು ಅಥವಾ ಸಾಧಿಸಲು ಪ್ರಯತ್ನ ಪಡುತ್ತಿರುತ್ತಾರೆ. ಆದರೆ 'ಮೆಟಾ ವರ್ಸ್' ಅಥವಾ 'ಕೃತಕ ಭೌತಿಕ ಸ್ಥಳಗಳ ಪ್ರಕಾರ ಈ ಬೌದ್ಧಿಕ ಮಂಥನಕ್ಕೆ ಈಗಿನಂತೆ ಭೌತಿಕವಾದ ಜಾಗದ ಅಗತ್ಯವಿಲ್ಲ. ಎಲ್ಲವೂ ಕೃತಕ ಭೌತಿಕ ಸ್ಥಳದಲ್ಲೇ ಆಗಬಲ್ಲದು. ಆದರೆ, ಇದು 'ವರ್ಕ್ ಫ್ರಂ ಹೋಂ' ರೀತಿಯ ಪರಿಕಲ್ಪನೆಯಲ್ಲ.

ಇದನ್ನೇ 'ಸ್ಟಾರ್ ಟ್ರೆಕ್ನ' 'ಹಾಲೋಡೆಕ್'ನಲ್ಲಿ ತೋರಿಸಲಾಗಿತ್ತು. ಅಂತರಿಕ್ಷ ವಾಹನದ ಖಾಲಿ ಕೊಠಡಿಯೊಂದರಲ್ಲಿ ಕಂಪ್ಯೂಟರ್ ನಿಯಂತ್ರಿತ ಸಾಧನಗಳನ್ನು ಅಳವಡಿಸಿರಲಾಗುತ್ತದೆ. ವ್ಯಕ್ತಿಗಳು ಈ ಕೊಠಡಿಯನ್ನು ಪ್ರವೇಶಿಸಿ ತಮ್ಮಿಷ್ಟದ ಜಾಗದ ಹೆಸರನ್ನು ಹೇಳಿದರೆ ಸಾಕು. ಆ ಜಾಗ ಅಲ್ಲಿ ಸೃಷ್ಟಿಯಾಗುತ್ತದೆ. ಆ ಜಾಗದಲ್ಲಿ ನೀವು ಎಲ್ಲಿ ಬೇಕಾದರೂ ಓಡಾಡಬಹುದು. ಅಲ್ಲಿರುವ ಕೃತಕ ಜನರ ಜೊತೆಗೆ ಸಂವಾದಿಸಬಹುದು. ಹಸ್ತಲಾಘವ ಮಾಡಬಹುದು. ನೆನಪಿರಲಿ ಅವೆಲ್ಲವೂ ಕೃತಕ. ಆದರೆ ನಿಮ್ಮ ಮಿದುಳು ಅವನ್ನು ಸತ್ಯ ಎನ್ನುವಷ್ಟರ ಮಟ್ಟಿಗೆ ತಂತ್ರಜ್ಞಾನ ನಕಲನ್ನು ಸೃಷ್ಟಿ ಮಾಡಿರುತ್ತದೆ!

ಡಿಯಾಗೋ ಗೊಮೆಸ್ ಅವರ ಪ್ರಕಾರ, 'ಬೆಳಕು ಹಾಗೂ ಶಕ್ತಿಯನ್ನು ಬಳಸಿಕೊಂಡು ಯಾವುದೇ ವಸ್ತುವನ್ನು ಕೃತಕವಾಗಿ ಸೃಷ್ಟಿಸಬಹುದು. ಅದು ಮಾತನಾಡಬಲ್ಲದು, ಉಸಿರಾಡಬಲ್ಲದು. ಇದು ಸಾಪೇಕ್ಷತಾ ಸಿದ್ಧಾಂತವನ್ನು ಆಧರಿಸಿರುವಂಥದ್ದು. ಈ ಅನ್ವೇಷಣೆ ಈಗ ಬಹುತೇಕ ಪೂರ್ಣಗೊಂಡಿದ್ದು ಮಾರುಕಟ್ಟೆಗೆ ಹಲವು ಹೆಸರುಗಳಲ್ಲಿ ಲಗ್ಗೆ ಇಡಲಿದೆ. ಇದು ಮಾರ್ಕ್ ಜೂಕರ್ ಬರ್ಗ್ ಅವರ ಆಸ್ತಿಯೂ ಆಗಿರುವುದಿಲ್ಲ. ಏಕೆಂದರೆ, ತಾತ್ವಿಕವಾಗಿ ಸಂಶೋಧನೆಯು ಒಟ್ಟು ಪ್ರಪಂಚದ ಆಸ್ತಿ. ಮೊದಲ ಕೆಲವು ವರ್ಷಗಳು ಮಾತ್ರ ಸಂಶೋಧನೆಯ ಮೇಲೆ ಹಕ್ಕು ಇರುತ್ತದೆ.

ಇಂಟರ್‌ನೆಟ್ ಕಾಲ ಅಂತ್ಯ

'ಮೆಟಾ ವರ್ಸ್' ಅಥವಾ ಆ ಮಾದರಿಯ ಇತರೇ 'ವರ್ಚುಯಲ್ ಸ್ಪೇಸ್' ವೇದಿಕೆಗಳು ಆರಂಭದಲ್ಲಿ ನಿರ್ದಿಷ್ಟ ಕಾರ್ಯಾಧಾರಿತ ದ್ವೀಪಗಳಂತೆ ಸೃಷ್ಟಿಯಾಗಿ, ಬಳಿಕ ಅವುಗಳ ಸಂಖ್ಯೆ ಹೆಚ್ಚಾಗಿ ಅವು ಒಂದನ್ನೊಂದು ಸಂಧಿಸುತ್ತವೆ. ಉದಾಹರಣೆಗೆ, ಸಾಮಾಜಿಕ ಜಾಲತಾಣಗಳಲ್ಲಿ ಒಂದು ಸಾಮಾಜಿಕ ಜಾಲತಾಣದಲ್ಲಿನ ಚಟುವಟಿಕೆಗಳು ಮತ್ತೊಂದು ಸಾಮಾಜಿಕ ಜಾಲತಾಣದಲ್ಲೂ ಕಾಣುವಂತಾಗಿರುವುದು. ಈ ರೀತಿ 'ವರ್ಚುವಲ್ ಸ್ಪೇಸ್'ಗಳು ಸಂಧಿಸಿದಾಗ ವಿಚಾರ ಹಾಗೂ ಶಕ್ತಿಗಳ ವಿನಿಮಯವಾಗುತ್ತದೆ. ಮುಂದೊಂದು ದಿನ ಈಗ ಚಾಲ್ತಿಯಲ್ಲಿರುವ ಲೋಕಲ್ ಏರಿಯಾ ನೆಟ್‌ವರ್ಕ್(ಲ್ಯಾನ್)ನಂತೆ ಇಂಟರ್‌ನೆಟ್ ಸಂಪರ್ಕವೇ ಇಲ್ಲದೇ ದತ್ತಾಂಶ ರವಾನೆ ಸಾಧ್ಯವಾಗಬಲ್ಲದು ಎಂದು ವಿಜ್ಞಾನಿಗಳು ಭವಿಷ್ಯ ನುಡಿದಿದ್ದಾರೆ. ಇದರಿಂದ ಉಳಿಯುವ ಹಣವೂ ಅಪಾರ ಎಂದಿದ್ದಾರೆ.

ಅಪಾಯಗಳೇನು?

ಪ್ರಾತಿನಿಧಿಕ ಚಿತ್ರ

ಜನರ ಸಂಪರ್ಕವೇ ಇಲ್ಲದಿರುವ ಕಾರಣ ಸಾಮಾಜಿಕ ವ್ಯವಸ್ಥೆಯ ಅರಿವೇ ಇಲ್ಲದಂತಾಗಬಹುದು. ಸುಖ-ಕಷ್ಟಗಳು ಗೊತ್ತಾಗದೆಯೇ ಇರಬಹುದು. ಜನರ ಜೊತೆಗೆ ಬೆರೆಯದ ಕಾರಣ ದೇಹದಲ್ಲಿನ ರೋಗನಿರೋಧಕ ಶಕ್ತಿ ಕುಂದಬಹುದು. ಸೃಜನಶೀಲತೆ, ಚಿಂತನಾಶಕ್ತಿ ಕಡಿಮೆಯಾಗಬಹುದು. ಶಾಲಾ- ಕಾಲೇಜುಗಳಲ್ಲಿ ವಿದ್ಯಾರ್ಥಿ- ಶಿಕ್ಷಕ ಸಂಪರ್ಕ ಭೌತಿಕವಾಗಿ ಆಗದ ಕಾರಣ ಕಲಿಕೆ ಪರಿಣಾಮಕಾರಿಯಾಗಿ ಇರದಿರಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಆದರೆ, ವಿಜ್ಞಾನಿಗಳು ಈ ಅಡ್ಡಪರಿಣಾಮಗಳಲ್ಲಿ ಕೆಲವನ್ನು ಅಲ್ಲಗಳೆಯುತ್ತಾರೆ. ಇವೆಲ್ಲ ಈಗಿನ ನಮ್ಮ ಪರಿಮಿತಜ್ಞಾನದ ವ್ಯಾಖ್ಯಾನ ಎನ್ನುತ್ತಾರೆ. ನಾವು ಅನುಭವಿಸುವ ಪ್ರತಿಯೊಂದು ವಿಚಾರವೂ ವಿಜ್ಞಾನಿಗಳ ಪ್ರಕಾರ ಅಂಕಿಗಳಷ್ಟೇ. ಮಿದುಳು ಈ ಅಂಕಿಗಳನ್ನು ಗ್ರಹಿಸಿ, ಬದಲಿಸಿಕೊಂಡು ಅರ್ಥ ಮಾಡಿಕೊಳ್ಳುತ್ತದೆ. ಉದಾಹರಣೆಗೆ, ಕಣ್ಣಿನ ಮೂಲಕ ಬೆಳಕು ಮಿದುಳಿಗೆ ತಲುಪುವುದು. ಚರ್ಮ ಸ್ಪರ್ಶಿಸುವುದು. ಬಳಿಕ ಮಿದುಳು ಅದನ್ನು ಅರ್ಥೈಸುವುದು. ಹಾಗಾಗಿ, ವ್ಯಕ್ತಿಯ ದೇಹದ ಸುತ್ತಲೂ ಸೃಷ್ಟಿಯಾಗುವ ಅಂಕಿ-ಸಂಖ್ಯೆಗಳು ಭೌತಿಕವಾಗಿದ್ದರೂ ಒಂದೇ ಕೃತಕವಾಗಿದ್ದರೂ ಒಂದೇ ಎಂದು ವಿಜ್ಞಾನಿಗಳು ಸಮರ್ಥಿಸಿಕೊಂಡಿದ್ದಾರೆ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಲೋಹಗಳು ಮತ್ತು ಲೋಹಗಳು

21) ಕ್ರಿಯಾಶೀಲತೆಯ ಸರಣಿಯಲ್ಲಿ ಮಧ್ಯದ ಲೋಹಗಳನ್ನು ಉದ್ಧರಿಸುವುದರ ಕುರಿತು ಬರೆಯಿರಿ

ಉತ್ತರ:- ಕ್ರಿಯಾಶೀಲತೆಯ ಸರಣಿಯಲ್ಲಿ ಮಧ್ಯದ ಲೋಹಗಳಾದ ಕಬ್ಬಿಣ, ಸತು, ಸೀಸ, ತಾಮ್ರಗಳು ಮಧ್ಯಮ ಕ್ರಿಯಾಪಟುತ್ವ ಹೊಂದಿವೆ. ನಿಸರ್ಗದಲ್ಲಿ ಸಾಮಾನ್ಯವಾಗಿ ಇವು ಸಲ್ಫೈಡ್ ಅಥವಾ ಕಾರ್ಬೋನೇಟ್‌ಗಳ ರೂಪದಲ್ಲಿರುತ್ತವೆ. ಸಲ್ಫೈಡ್ ಮತ್ತು ಕಾರ್ಬೋನೇಟ್‌ಗಳಿಂದ ಲೋಹಗಳನ್ನು ಉದ್ಧರಿಸುವುದಕ್ಕಿಂತ ಆಕ್ಸೈಡ್‌ಗಳಿಂದ ಉದ್ಧರಿಸುವುದು ಸುಲಭ ಆದ್ದರಿಂದ ಅಪಕರ್ಷಿಸುವ ಮೊದಲು ಲೋಹದ ಸಲ್ಫೈಡ್ ಮತ್ತು ಕಾರ್ಬೋನೇಟ್‌ಗಳನ್ನು ಲೋಹೀಯ ಆಕ್ಸೈಡ್‌ಗಳನ್ನಾಗಿ ಪರಿವರ್ತಿಸಬೇಕು. ಸಲ್ಫೈಡ್ ಅದುರನ್ನು ಆಕ್ಸೈಡ್‌ನ್ನಾಗಿ ಪರಿವರ್ತಿಸಲು ಅಧಿಕ ಪ್ರಮಾಣದ ಗಾಳಿಯಲ್ಲಿ ಹೆಚ್ಚಿನ ಉಷ್ಣತೆಯಲ್ಲಿ ಕಾಯಿಸಬೇಕು. ಈ ವಿಧಾನವನ್ನು ಹುರಿಯುವಿಕೆ ಎನ್ನುವರು.

ಕಾರ್ಬೋನೇಟ್ ಅದುರನ್ನು ಆಕ್ಸೈಡ್ ಆಗಿ ಪರಿವರ್ತಿಸಬೇಕಾದರೆ ಕಡಿಮೆ ಗಾಳಿಯಲ್ಲಿ ಹೆಚ್ಚಿನ ಉಷ್ಣತೆಯಲ್ಲಿ ಕಾಯಿಸಬೇಕು. ಈ ವಿಧಾನವನ್ನು ಕಾಯಿಸುವಿಕೆ ಎನ್ನುವರು. ಕಾರ್ಬನ್‌ನಂಥ ಸೂಕ್ತ ಅಪಕರ್ಷಣಕಾರಿಯನ್ನು ಬಳಸಿ ಲೋಹದ ಆಕ್ಸೈಡ್‌ಗಳನ್ನು ಆಯಾ ಲೋಹಗಳನ್ನಾಗಿ ಅಪಕರ್ಷಿಸಲಾಗುವುದು. ಉದಾಹರಣೆಗೆ ಸತುವಿನ ಆಕ್ಸೈಡ್ ಅನ್ನು ಕಾರ್ಬನ್‌ನೊಂದಿಗೆ ಕಾಯಿಸಿದಾಗ ಅದು ಅಪಕರ್ಷಿಸಲ್ಪಟ್ಟು ಸತುವಾಗುತ್ತದೆ.

ಲೋಹೀಯ ಆಕ್ಸೈಡ್‌ಗಳಿಂದ ಲೋಹಗಳನ್ನು ಅಪಕರ್ಷಿಸಲು ಕಾರ್ಬನ್ (ಕೋಕ್) ಬಳಸುವುದರ ಜೊತೆಗೆ ಕೆಲವೊಮ್ಮೆ ಇದನ್ನು ಸ್ಥಾನಪಲ್ಲಟ ಕ್ರಿಯೆಗೂ ಬಳಸುವರು. ಹೆಚ್ಚು ಕ್ರಿಯಾಪಟುತ್ವ ಹೊಂದಿದ ಲೋಹಗಳಾದ ಸೋಡಿಯಂ, ಕ್ಯಾಲ್ಸಿಯಂ, ಅಲ್ಯುಮಿನಿಯಂ ಇತ್ಯಾದಿಗಳನ್ನು ಅಪಕರ್ಷಣಕಾರಿಯಾಗಿ ಬಳಸುವರು ಏಕೆಂದರೆ ಇವು ಕಡಿಮೆ ಕ್ರಿಯಾಪಟುತ್ವ ಹೊಂದಿದ ಲೋಹಗಳನ್ನು ಅವುಗಳ ಸಂಯುಕ್ತಗಳಿಂದ ಪಲ್ಲಟಗೊಳಿಸುತ್ತವೆ. ಉದಾಹರಣೆಗೆ ಮ್ಯಾಂಗನೀಸ್ ಡೈ ಆಕ್ಸೈಡ್ ಅನ್ನು ಅಲ್ಯುಮಿನಿಯಂ ಪುಡಿಯೊಂದಿಗೆ ಕಾಸಿದಾಗ ಈ ಕೆಳಗಿನ ರಾಸಾಯನಿಕ ಕ್ರಿಯೆ ನಡೆಯುತ್ತದೆ.

$3MnO_2(s) + 4Al(s) - 3Mn(l) + 2Al_2O_3(s) +$ ಉಷ್ಣ

22) ಕ್ರಿಯಾಶೀಲತೆ ಸರಣಿಯ ಮೇಲ್ಭಾಗದಲ್ಲಿರುವ ಲೋಹಗಳನ್ನು ಉದ್ಧರಿಸುವುದರ ಕುರಿತು ಬರೆಯಿರಿ

ಉತ್ತರ:- ಕ್ರಿಯಾಶೀಲತೆ ಸರಣಿಯಲ್ಲಿ ಮೇಲ್ಭಾಗದಲ್ಲಿರುವ ಲೋಹಗಳು ಅತ್ಯಂತ ಕ್ರಿಯಾಶೀಲವಾಗಿವೆ. ಕಾರ್ಬನ್‌ನೊಂದಿಗೆ ಕಾಯಿಸುವುದರ ಮೂಲಕ ಇವುಗಳನ್ನು ಪಡೆಯಲು ಸಾಧ್ಯವಿಲ್ಲ. ಉದಾಹರಣೆಗೆ ಸೋಡಿಯಂ, ಮೆಗ್ನೀಸಿಯಂ, ಕ್ಯಾಲ್ಸಿಯಂ, ಅಲ್ಯುಮಿನಿಯಂ ಇತ್ಯಾದಿ ಲೋಹಗಳ ಆಕ್ಸೈಡ್‌ಗಳನ್ನು ಅಪಕರ್ಷಿಸಲು ಕಾರ್ಬನ್‌ನಿಂದ ಸಾಧ್ಯವಿಲ್ಲ ಕಾರಣ ಈ ಲೋಹಗಳು ಕಾರ್ಬನ್‌ಗಿಂತ ಆಕ್ಸಿಜನ್ ಕಡೆಗೆ ಹೆಚ್ಚು ಆಕರ್ಷಣೆ ಹೊಂದಿರುತ್ತವೆ. ಈ ಲೋಹಗಳನ್ನು ವಿದ್ಯುದ್ವಿಭಜನೆ ಕ್ರಿಯೆಯಿಂದ ಪಡೆಯುವರು

23) ಅಶುದ್ಧ ಲೋಹಗಳನ್ನು ಸಂಸ್ಕರಿಸಲು ವ್ಯಾಪಕವಾಗಿ ಬಳಸುವ ವಿಧಾನ ಯಾವುದು?

ಉತ್ತರ:- ಅಶುದ್ಧ ಲೋಹಗಳನ್ನು ಸಂಸ್ಕರಿಸಲು ವ್ಯಾಪಕವಾಗಿ ಬಳಸುವ ವಿಧಾನವೆಂದರೆ ವಿದ್ಯುದ್ವಿಭಜನೀಯ ಶುದ್ಧೀಕರಣ.

24) ವಿದ್ಯುದ್ವಿಭಜನೀಯ ಶುದ್ಧೀಕರಣದ ಕುರಿತು ಬರೆಯಿರಿ

ಉತ್ತರ:- ತಾಮ್ರ, ಸತು, ತವರ, ನಿಕ್ಕಲ್, ಬೆಳ್ಳಿ, ಚಿನ್ನ ಇತ್ಯಾದಿಗಳಂಥ ಅನೇಕ ಲೋಹಗಳನ್ನು ವಿದ್ಯುದ್ವಿಭಜನೀಯ ವಿಧಾನದಿಂದ ಶುದ್ಧೀಕರಿಸುವರು. ಈ ವಿಧಾನದಲ್ಲಿ ಅಶುದ್ಧ ಲೋಹವನ್ನು ಧನಾಗ್ರಕ್ಕೆ, ಶುದ್ಧಲೋಹದ ತೆಳು ತಗಡನ್ನು ಋಣಾಗ್ರಕ್ಕೆ ಜೋಡಿಸುವರು. ಲೋಹೀಯ ಲವಣದ ದ್ರಾವಣವನ್ನು ವಿದ್ಯುದ್ವಿಭಜನೀಯವಾಗಿ ಬಳಸುವರು.

ವಿದ್ಯುದ್ವಿಭಾಜ್ಯದ ಮೂಲಕ ವಿದ್ಯುತ್ ಅನ್ನು ಹಾಯಿಸಿದಾಗ ಧನಾಗ್ರದ ಅಶುದ್ಧ ಲೋಹವು ವಿದ್ಯುದ್ವಿಭಜನೀಯ ದ್ರಾವಣದಲ್ಲಿ ಕರಗುವುದು. ಅಷ್ಟೇ ಪ್ರಮಾಣದ ಶುದ್ಧ ಲೋಹವು ವಿದ್ಯುದ್ವಿಭಜನೀಯ ದ್ರಾವಣದಿಂದ ಋಣಾಗ್ರದ ಮೇಲೆ ಸಂಗ್ರಹಗೊಳ್ಳುವುದು. ಕರಗುವ ಕಶ್ಮಲಗಳು ದ್ರಾವಣಕ್ಕೆ ಸೇರಿಕೊಂಡರೆ, ಕರಗದೇ ಇರುವ ಕಶ್ಮಲಗಳು ಧನಾಗ್ರದ ಕೆಳಭಾಗದಲ್ಲಿ ಸಂಗ್ರಹಗೊಳ್ಳುತ್ತವೆ.

25) ಯಾವುದರ ಮೂಲಕ ಕಬ್ಬಿಣ ತುಕ್ಕು ಹಿಡಿಯುವುದನ್ನು ತಡೆಗಟ್ಟಬಹುದು?

ಉತ್ತರ:- ಬಣ್ಣ ಹಚ್ಚುವುದು, ಎಣ್ಣೆ ಸವರುವುದು, ಗ್ರೀಸ್ ಹಚ್ಚುವುದು, ಗ್ಯಾಲ್ವನೀಕರಣ, ಕ್ರೋಮಿಯಂ ಲೇಪನ, ಆನೋಡೀಕರಣ ಅಥವಾ ಮಿಶ್ರಲೋಹಗಳನ್ನಾಗಿ ಮಾಡುವುದರ ಮೂಲಕ ಕಬ್ಬಿಣ ತುಕ್ಕು ಹಿಡಿಯುವುದನ್ನು ತಡೆಗಟ್ಟಬಹುದು.

26) ಮಿಶ್ರ ಲೋಹದ ಬಗ್ಗೆ ಬರೆಯಿರಿ

ಉತ್ತರ:- ಮಿಶ್ರಲೋಹವು ಎರಡು ಅಥವಾ ಹೆಚ್ಚು ಲೋಹ ಅಥವಾ ಲೋಹ-ಅಲೋಹಗಳ ಸಮರೂಪದ ಮಿಶ್ರಣವಾಗಿದೆ. ಇದನ್ನು ಮೊದಲು ಪ್ರಾಥಮಿಕ ಲೋಹವನ್ನು ಕರಗಿಸಿ ನಂತರ ನಿರ್ದಿಷ್ಟ ಅನುಪಾತದಲ್ಲಿ ಬೇರೆ ಧಾತುಗಳನ್ನು ವಿಲೀನಗೊಳಿಸಿ ತಯಾರಿಸಲಾಗುತ್ತದೆ.

ಮಿಶ್ರಲೋಹಗೊಳಿಸುವಿಕೆಯು ಲೋಹದ ಗುಣಗಳನ್ನು ಹೆಚ್ಚಿಸಬಲ್ಲ ಒಂದು ಉತ್ತಮ ವಿಧಾನವಾಗಿದೆ. ಇದರಿಂದ ನಮಗೆ ಬೇಕಾದ ಗುಣಗಳನ್ನು ಪಡೆಯಬಹುದು. ಉದಾಹರಣೆಗೆ ಕಬ್ಬಿಣವು ಅತ್ಯಂತ ವ್ಯಾಪಕವಾಗಿ ಬಳಸುವ ಲೋಹ. ಆದರೆ ಇದನ್ನು ಶುದ್ಧರೂಪದಲ್ಲಿ ಎಂದಿಗೂ ಉಪಯೋಗಿಸಲು ಸಾಧ್ಯವಿಲ್ಲ. ಕಾರಣ ಶುದ್ಧ ಕಬ್ಬಿಣವು ತುಂಬಾ ಮೃದುವಾಗಿರುತ್ತದೆ ಮತ್ತು ಉಷ್ಣತೆ ನೀಡಿದಾಗ ಸುಲಭವಾಗಿ ಹಿಗ್ಗುತ್ತದೆ. ಆದರೆ ಇದಕ್ಕೆ ಸ್ವಲ್ಪ ಕಾರ್ಬನ್ ಅನ್ನು (0.05 %) ಸೇರಿಸಿದರೆ ಗಟ್ಟಿ ಮತ್ತು ಬಲಯುತವಾಗುತ್ತದೆ. ಕಬ್ಬಿಣಕ್ಕೆ ನಿಕ್ಕಲ್ ಮತ್ತು ಕ್ರೋಮಿಯಂ ಅನ್ನು ಸೇರಿಸಿದರೆ ಕಲೆರಹಿತ ಉಕ್ಕನ್ನು ಪಡೆಯಬಹುದು. ಇದು ಗಟ್ಟಿಯಾಗಿರುತ್ತದೆ ಮತ್ತು ತುಕ್ಕು ಹಿಡಿಯುವುದಿಲ್ಲ. ಹಾಗೆಯೇ ಕಬ್ಬಿಣವನ್ನು ಬೇರೆ ವಸ್ತುಗಳ ಜೊತೆ ಮಿಶ್ರಗೊಳಿಸಿದರೆ ಅದರ ಗುಣದಲ್ಲಿ ಬದಲಾವಣೆಯಾಗುತ್ತದೆ. ವಾಸ್ತವವಾಗಿ, ಕೆಲವು ವಸ್ತುಗಳ ಮಿಶ್ರಣದಿಂದ ಯಾವುದೇ ಲೋಹದ ಗುಣಗಳನ್ನು ಬದಲಾಯಿಸಬಹುದು. ಸೇರಿಸುವ ವಸ್ತುವು ಲೋಹ ಅಥವಾ ಅಲೋಹವಾಗಿರಬಹುದು.

27) ಬಿಟ್ಟ ಸ್ಥಳ ತುಂಬಿ

1) ಲೋಹಗಳನ್ನು ಅವುಗಳ ಕ್ರಿಯಾಶೀಲತೆಯ ಆಧಾರದ ಮೇಲೆ ಇಳಿಕೆ ಕ್ರಮದಲ್ಲಿ ಬರೆಯುವುದಕ್ಕೆ.......................... ಎನ್ನುವರು

ಉತ್ತರ:- ಕ್ರಿಯಾಶೀಲತೆ ಸರಣಿ

2) ಕ್ರಿಯಾಶೀಲತೆಯ ಸರಣಿಯಲ್ಲಿ ಹೈಡ್ರೋಜನಿಗಿಂತ ಮೇಲ್ಭಾದಲ್ಲಿರುವ ಲೋಹಗಳು ಸಾರರಿಕ್ತ ಆಮ್ಲಗಳಲ್ಲಿರುವ... .... ಅನ್ನು ಪಲ್ಲಟಗೊಳಿಸುತ್ತವೆ

ಉತ್ತರ:- ಹೈಡ್ರೋಜನ್

3) ಹೆಚ್ಚು ಕ್ರಿಯಾಪಟತ್ವ ಹೊಂದಿರುವ ಲೋಹವು ತನಗಿಂತ ಕಡಿಮೆ ಕ್ರಿಯಾಪಟತ್ವ ಹೊಂದಿರುವ ಲೋಹವನ್ನು ಅದರ........................ ಪಲ್ಲಟಗೊಳಿಸುತ್ತದೆ

ಉತ್ತರ:- ಲವಣ ದ್ರಾವಣದಿಂದ

II PUC BIOLOGY

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REPRODUCTION

Reproduction in flowering plants

32. What is Chiropterophily?

Ans:- Chiropterophily is the mode of pollination where the bats are the agents.

33. Name some of the common Chiropterophilous Flowers.

Ans:- Some of the common Chiropterophilous Flowers are – Anthocephalus, Bauhinia megalandra, Adansonia, Kigelia pinnata.

34. Mention the characteristics of Chiropterophilous Flowers.

Ans:- The characteristics of Chiropterophilous Flowers are –

(i) Flowers are stout and large sized.
(ii) They are dull coloured with strong fruity odour.
(iii) Stamens are numerous.
(iv) Corolla is often funnel shaped.
(v) Pollen grains are abundant.
(vi) Flowers secrete abundant dilute nectar.

35. Identify the type of pistil with the help of diagram given here.



Ans:- (a) Multicarpellary syncarpous
(b) Multicarpellary apocarpous

36. Label the following parts in the given figure.
a) male gametes, b) egg cell, c) nuclei, d) synergid, and e) pollen tube.



Ans:-



37. In the given diagram, write the names of the parts 1 - 7.



Ans:- 1. Scutellum
2. Coleoptile
3. Plumule
4. Epiblast
5. Radicle
6. Root cap
7. Coleorhiza

38. Mention some of the differences between the Parthenocarpy and Apomixis and also mention some of their benefits.

Ans:- Parthenocarpy – is the formation of seedless fruits, embryo is absent and it has no role in reproduction.
Apomixis - is the formation of seeds asexually. an embryo is formed asexually, it takes part in reproduction.

Benefits

Parthenocarpy - is economically important since irritant seeds are absent.
Apomixis – can maintain hybrid vigour indefinitely.

39. In the diagram given, show the path of a pollen tube from the pollen on the stigma into the embryo sac. Name the components of egg apparatus.

Ans:- (a)

(Contd....)

ಅಪಘಾತ: ತಾಯಿ–ಕಿರಿಯ ಮಗಳು ಸಜೀವ ದಹನ

ಪ್ರಜಾವಾಣಿ ವಾರ್ತೆ

ಅಪಘಾತದಲ್ಲಿ ಸಂಪೂರ್ಣ ಸುಟ್ಟಿರುವ ಟಾಟಾ ನೆಕ್ಸಾನ್ ಕಾರು (ಎಡಚಿತ್ರ). ಪತ್ನಿ ಸಿಂಧು, ಮಕ್ಕಳಾದ ಕಾಸವಿ ಹಾಗೂ ಪ್ರಣವಿ ಜೊತೆ ಮಹೇಂದ್ರನ್

ಬೆಂಗಳೂರು: ನೈಸ್ ರಸ್ತೆಯ ಸೋಂಪುರ ಬಳಿ ಕಾರು ಹಾಗೂ ಲಾರಿ ನಡುವೆ ಮಂಗಳವಾರ ನಸುಕಿನಲ್ಲಿ ಅಪಘಾತ ಸಂಭವಿಸಿದ್ದು, ಕಾರಿನಲ್ಲಿದ್ದ ತಾಯಿ–ಕಿರಿಯ ಮಗಳು ಸಜೀವವಾಗಿ ದಹನವಾಗಿದ್ದಾರೆ. ಹಿರಿಯ ಮಗಳು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ.

ರಾಮಮೂರ್ತಿನಗರದ ಸಿಂಧು (31), ಅವರ ಕಿರಿಯ ಮಗಳು ಕಾಸವಿ (4) ಹಾಗೂ ಹಿರಿಯ ಮಗಳು ಪ್ರಣವಿ (6) ಮೃತರು. ಕಾರು ಚಲಾಯಿಸುತ್ತಿದ್ದ ಸಿಂಧು ಅವರ ಪತಿ ಬಿ. ಮಹೇಂದ್ರನ್ (35) ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ತಮಿಳುನಾಡಿನ ಮಹೇಂದ್ರನ್, ನಗರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಪತ್ನಿ ಸಿಂಧು ಹಾಗೂ ಇಬ್ಬರು ಮಕ್ಕಳ ಜೊತೆ ರಾಮಮೂರ್ತಿನಗರದಲ್ಲಿ ನೆಲೆಸಿದ್ದರು. ನಾಲ್ವರು ಮಂಗಳವಾರ ನಸುಕಿನ 3 ಗಂಟೆ ಸುಮಾರಿಗೆ ಟಾಟಾ ನೆಕ್ಸಾನ್ ಕಾರಿನಲ್ಲಿ ಹೋಗುತ್ತಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ತಲಘಟ್ಟಪುರ ಠಾಣೆ ಪೊಲೀಸರು ತಿಳಿಸಿದರು.

ಬಾಡಿಗೆ ಕಾರಿನಲ್ಲಿ ಸಂಚಾರ: ‘ಮಹೇಂದ್ರನ್ ಹಾಗೂ ಕುಟುಂಬ, ಟಾಟಾ ನೆಕ್ಸಾನ್ (ಕೆಎ 03 ಎಎಲ್ 0602) ಬಾಡಿಗೆ ಕಾರಿನಲ್ಲಿ ಸೋಮವಾರ ರಾತ್ರಿ ನಾಗಸಂದ್ರ ಬಳಿಯ ಪೀಠೋಪಕರಣ ಮಳಿಗೆಗೆ ಹೋಗಿತ್ತು. ಅಲ್ಲಿಯೇ ಊಟ ಮಾಡಿದ್ದ ಕುಟುಂಬ, ತಡರಾತ್ರಿ ಕಾರಿನಲ್ಲಿ ನೈಸ್ ರಸ್ತೆಯ ಮೂಲಕ ಮನೆಯತ್ತ ಹೊರಟಿತ್ತು’ ಎಂದು ಪೊಲೀಸರು ಹೇಳಿದರು.

ಉರುಳಿಬಿದ್ದ ಕಾರಿನಲ್ಲಿ ಬೆಂಕಿ: ‘ಮಹೇಂದ್ರನ್ ಅವರು ನೈಸ್ ರಸ್ತೆಯಲ್ಲಿ ಅತೀ ವೇಗವಾಗಿ ಕಾರು ಚಲಾಯಿಸಿದ್ದರು. ಸೋಂಪುರ ಬಳಿ ನಿಯಂತ್ರಣ ತಪ್ಪಿದ್ದ ಕಾರು, ಏಕಮುಖ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಚಲಿಸಿ ಎದುರಿಗೆ ಬರುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿತ್ತು. ಲಾರಿ ರಸ್ತೆ ಪಕ್ಕದ ತಗ್ಗಿಗೆ ಬಿದ್ದು ಉರುಳಿತ್ತು. ರಸ್ತೆಯಲ್ಲಿ ಉರುಳಿಬಿದ್ದಿದ್ದ ಕಾರಿನಲ್ಲಿ ಡೀಸೆಲ್ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿತ್ತು. ಈ ಬಗ್ಗೆ ಪ್ರತ್ಯಕ್ಷದರ್ಶಿಗಳು ಮಾಹಿತಿ ನೀಡಿದ್ದಾರೆ’ ಎಂದು ಪೊಲೀಸರು ವಿವರಿಸಿದರು.

ಅಪರಾಧ ಸುದ್ದಿ

ತಂದೆ ಕಣ್ಣೆದುರೇ ಪತ್ನಿ–ಮಗಳು ದಹನ: ‘ಅಪಘಾತವಾಗುತ್ತಿದ್ದಂತೆ ಕಾರು ಚಾಲಕನ ಸೀಟಿನ ಎದುರಿಗಿದ್ದ ಜೋಡಿ ಏರ್‌ಬ್ಯಾಗ್‌ಗಳು ತೆರೆದಿದ್ದವು. ಮಹೇಂದ್ರನ್ ಅವರು ಕಾರಿನಿಂದ ಹೊರಗೆ ಬಂದಿದ್ದರು. ಅಷ್ಟರಲ್ಲೇ ಕಾರಿನಲ್ಲಿ ಬೆಂಕಿ ಆವರಿಸಿತ್ತು. ಸಿಂಧು, ಕಾಸವಿ ಹಾಗೂ ಪ್ರಣವಿ ಅವರಿಗೆ ಬೆಂಕಿ ತಗುಲಿತ್ತು’ ಎಂದು ಪೊಲೀಸರು ಹೇಳಿದರು.

‘ಮೂವರನ್ನೂ ಹೊರಗೆ ಎಳೆದುಕೊಳ್ಳಲು ಮಹೇಂದ್ರನ್ ಪ್ರಯತ್ನಿಸಿದ್ದರು. ಆದರೆ, ಪ್ರಣವಿಯನ್ನು ಮಾತ್ರ ಹೊರಗೆ ತೆಗೆಯಲು ಸಾಧ್ಯವಾಗಿತ್ತು. ಸಿಂಧು ಹಾಗೂ ಕಾಸವಿಯನ್ನು ರಕ್ಷಿಸಲು ಸಾಧ್ಯವಾಗಲಿಲ್ಲ. ಅಷ್ಟರಲ್ಲೇ ಮಹೇಂದ್ರನ್ ಸಹ ಅಸ್ವಸ್ಥಗೊಂಡು ಬಿದ್ದಿದ್ದರು. ಅವರ ಕಣ್ಣೆದುರೇ ಪತ್ನಿ ಸಿಂಧು ಹಾಗೂ ಮಗಳು ಕಾಸವಿ ದಹನವಾದರು’ ಎಂದು ತಿಳಿಸಿದರು.

> **ವೇಗದಲ್ಲಿ ಕಾರು ಚಲಾಯಿಸಿದ್ದರಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಬೆಂಕಿಗೆ ಕಾರಣವೇನು ಎಂಬುದು ತಿಳಿಯಬೇಕಿದೆ**
> **ಶಿವಪ್ರಕಾಶ್ ದೇವರಾಜ್,** ಸಂಚಾರ ವಿಭಾಗದ ಡಿಸಿಪಿ

‘ದಾರಿಹೋಕರು ಸ್ಥಳದಲ್ಲಿ ಸೇರಿದ್ದರು. ಮಹೇಂದ್ರನ್ ಹಾಗೂ ಪ್ರಣವಿ ಅವರನ್ನು ಆಸ್ಪತ್ರೆಗೆ ಸಾಗಿಸಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದರು. ಅಷ್ಟರಲ್ಲೇ ತಾಯಿ–ಮಗಳು ಸಂಪೂರ್ಣ ಸುಟ್ಟಿದ್ದರು. ತಲೆ ಬುರುಡೆ ಹಾಗೂ ಮೂಳೆಗಳು ಮಾತ್ರ ಕಾಣಿಸುತ್ತಿದ್ದವು’ ಎಂದು ಹೇಳಿದರು.

‘ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಡೀಸೆಲ್ ಸೋರಿಕೆಯಿಂದ ಬೆಂಕಿ ಹೊತ್ತಿಕೊಂಡಿದ್ದ ಬಗ್ಗೆ ಅನುಮಾನವಿದೆ. ಮಾದರಿ ಪರೀಕ್ಷೆ ವರದಿ ಬಂದ ನಂತರ ನಿಖರ ಮಾಹಿತಿ ತಿಳಿಯಲಿದೆ. ಪ್ರತ್ಯಕ್ಷದರ್ಶಿಗಳ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮಹೇಂದ್ರನ್ ಅವರ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ. ಅವರ ಆರೋಗ್ಯ ಸುಧಾರಿಸಿದ ಬಳಿಕ ಹೇಳಿಕೆ ಪಡೆಯಲಾಗುವುದು. ಲಾರಿ ಚಾಲಕ ಭಾರತಿ ರಾಜನ್ ಸಹ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿದ್ದಾರೆ’ ಎಂದು ತಿಳಿಸಿದರು.

ಬಾಟಲಿಯಿಂದ ಅನಾಹುತ ?

‘ಮಕ್ಕಳಾದ ಕಾಸವಿ ಹಾಗೂ ಪ್ರಣವಿಗೆ ಕಾರು ಎಂದರೆ ತುಂಬಾ ಇಷ್ಟವಿತ್ತು. ಮಹೇಂದ್ರನ್, ಮಕ್ಕಳ ಖುಷಿಗಾಗಿ ಬಾಡಿಗೆ ಕಾರಿನಲ್ಲಿ ರಾತ್ರಿ ನೈಸ್ ರಸ್ತೆಯಲ್ಲಿ ಹೊರಟಿದ್ದರು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಮಹೇಂದ್ರನ್ ಅತೀ ವೇಗದಲ್ಲಿ ಕಾರು ಚಲಾಯಿಸುತ್ತಿದ್ದರು. ಚಾಲನೆ ಮಾಡುವಾಗ ಬಾಯಾರಿಕೆ ಆಗಿತ್ತು. ಕೈಯಲ್ಲಿ ಬಾಟಲಿ ಹಿಡಿದು ನೀರು ಕುಡಿಯಲು ಮುಂದಾಗಿದ್ದರು. ಇದೇ ಸಂದರ್ಭದಲ್ಲಿ ಕೈಯಿಂದ ಜಾರಿದ್ದ ಬಾಟಲಿ, ಬ್ರೇಕ್ ಅಡಿ ಬಿದ್ದು ಸಿಲುಕಿತ್ತು. ಇದಾದ ಕೆಲ ಕ್ಷಣದಲ್ಲೇ ಕಾರು ಲಾರಿಗೆ ಡಿಕ್ಕಿ ಹೊಡೆದು, ಉರುಳಿಬಿದ್ದಿರುವ ಬಗ್ಗೆ ಮಾಹಿತಿ ಇದೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ತಿಳಿಸಿದರು.

₹ 50 ಲಕ್ಷ ಮೌಲ್ಯದ ವಸ್ತುಗಳ ಜಪ್ತಿ

3 ವಿದ್ಯಾರ್ಥಿಗಳ ಬಂಧನ • ಅಪ್ಪನ ಗೂಡ್ಸ್ ವಾಹನದಲ್ಲಿ ಕದ್ದ ಮಾಲು ಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯೂ ಬಿಇಎಲ್ ರಸ್ತೆಯಲ್ಲಿರುವ ‘ಗ್ಯಾಡ್ಜೆಟ್ ಕ್ಲಬ್’ ಎಲೆಕ್ಟ್ರಾನಿಕ್ಸ್ ವಸ್ತುಗಳ ಮಾರಾಟ ಮಳಿಗೆಯಲ್ಲಿ ಕಳ್ಳತನ ಮಾಡಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಎಚ್‌ಎಸ್‌ಆರ್ ಲೇಔಟ್ ನಿವಾಸಿಗಳಾದ ಪ್ರಭು, ಮೌಲೇಶ್ ಹಾಗೂ ಅಜಯ್ ಬಂಧಿತರು. ಇವರಲ್ಲಿ ಇಬ್ಬರು ಬಿ.ಕಾಂ ವಿದ್ಯಾರ್ಥಿಗಳು. ಒಬ್ಬ ಬಿ.ಎಸ್ಸಿ. ವಿದ್ಯಾರ್ಥಿ. ಬೆಲೆಬಾಳುವ ಮೊಬೈಲ್ ಇಟ್ಟುಕೊಳ್ಳಬೇಕು ಹಾಗೂ ದುಬಾರಿ ಬಟ್ಟೆಗಳನ್ನು ಖರೀದಿಸಿ, ಐಷಾರಾಮಿ ಜೀವನ ನಡೆಸಬೇಕು ಎಂದುಕೊಂಡಿದ್ದ ಮೂವರು, ಸಂಚು ರೂಪಿಸಿ ಕಳ್ಳತನ ಮಾಡಿದ್ದರು’ ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಸೆ. 28ರಂದು ರಾತ್ರಿ ಆರೋಪಿಗಳು ಕೃತ್ಯ ಎಸಗಿದ್ದರು. ಇದಾದ 36 ಗಂಟೆಯೊಳಗೆ ಆರೋಪಿಗಳನ್ನು ಬಂಧಿಸಲಾಗಿದೆ. ₹50 ಲಕ್ಷ ಮೌಲ್ಯದ 52 ಮೊಬೈಲ್‌ಗಳು (ಐ–ಫೋನ್, ಒನ್ ಪ್ಲಸ್, ಸ್ಯಾಮ್‌ಸಂಗ್, ಗೂಗಲ್, ಒಪ್ಪೊ), ಲ್ಯಾಪ್‌ಟಾಪ್‌ಗಳು, ಕ್ಯಾಮೆರಾಗಳು, ವಿವಿಧ ಕಂಪನಿಯ 202 ಕೈ ಗಡಿಯಾರಗಳನ್ನು ಜಪ್ತಿ ಮಾಡಲಾಗಿದೆ. ಕಳ್ಳತನದ ವಸ್ತುಗಳನ್ನು ಸಾಗಿಸಲು ಆರೋಪಿ ಅಜಯ್, ತನ್ನ ತಂದೆಯ ಗೂಡ್ಸ್ ವಾಹನ ಬಳಸಿದ್ದ. ಅದನ್ನೂ ಜಪ್ತಿ ಮಾಡಲಾಗಿದೆ’ ಎಂದು ಹೇಳಿದರು.

ಕಳ್ಳತನಕ್ಕೂ ಮೊದಲು ವಿಡಿಯೊ ಚಿತ್ರೀಕರಣ: ‘ಮೂವರು ಆರೋಪಿಗಳು, ಒಂದೇ ಪ್ರದೇಶದಲ್ಲಿ ವಾಸವಿದ್ದರು. ಹಲವು ವರ್ಷಗಳ ಸ್ನೇಹಿತರು. ‘ಗ್ಯಾಡ್ಜೆಟ್ ಕ್ಲಬ್’ಗೆ ತಿಂಗಳ ಹಿಂದೆಯಷ್ಟೇ ಭೇಟಿ ನೀಡಿದ್ದ ಆರೋಪಿ ಪ್ರಭು, ಐ–ಫೋನ್ ಖರೀದಿಸಿದ್ದ. ಅದೇ ಐ–ಫೋನ್‌ನಲ್ಲಿ ಮಳಿಗೆಯ ವಿಡಿಯೊ ಚಿತ್ರೀಕರಣ ಮಾಡಿಟ್ಟುಕೊಂಡಿದ್ದ’ ಎಂದು ಪೊಲೀಸರು ತಿಳಿಸಿದರು.

‘ವಿಡಿಯೊವನ್ನು ಸ್ನೇಹಿತರಾದ ಮೌಲೇಶ್ ಹಾಗೂ ಅಜಯ್‌ಗೆ ತೋರಿಸಿದ್ದ ಪ್ರಭು, ‘ಮಳಿಗೆಯಲ್ಲಿರುವ ವಸ್ತುಗಳನ್ನು ಕಳ್ಳತನ ಮಾಡೋಣ. ನಂತರ, ಅದೇ ವಸ್ತುಗಳ ಫೋಟೊವನ್ನು ಒಎಲ್‌ಎಕ್ಸ್ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿ ಮಾರೋಣ’ ಎಂದಿದ್ದ. ಅದಕ್ಕೆ ಸ್ನೇಹಿತರು ಒಪ್ಪಿದ್ದರು’ ಎಂದು ಹೇಳಿದರು.

ಬೀಗ ಮುರಿದು ಕೃತ್ಯ: ‘ಸೆ. 28ರಂದು ರಾತ್ರಿ ಮಳಿಗೆ ಬಳಿ ಹೋಗಿದ್ದ ಆರೋಪಿಗಳು, ಬೀಗ ಮುರಿದು ಶಟರ್ ತೆರೆದಿದ್ದರು. ನಂತರ, ಕೈಗೆ ಸಿಕ್ಕ ಎಲ್ಲ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಬಾಕ್ಸ್‌ಗಳಲ್ಲಿ ಹಾಕಿಕೊಂಡಿದ್ದರು. ಅದೇ ಬಾಕ್ಸ್‌ಗಳನ್ನು ಗೂಡ್ಸ್ ವಾಹನದಲ್ಲಿ ತುಂಬಿಕೊಂಡು ಸ್ಥಳದಿಂದ ಪರಾರಿಯಾಗಿದ್ದರು. ಮರುದಿನ ಮಳಿಗೆಗೆ ಕೆಲಸಗಾರರು ಬಂದಿದ್ದಾಗ ಕಳ್ಳತನ ನಡೆದಿರುವುದು ಗಮನಕ್ಕೆ ಬಂದಿತ್ತು’ ಎಂದು ಪೊಲೀಸರು ಹೇಳಿದರು.

‘ಮಾಲೀಕರು ಠಾಣೆಗೆ ದೂರು ನೀಡುತ್ತಿದ್ದಂತೆ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಯಿತು. ಮನೆಯಲ್ಲಿ ಪೋಷಕರು ಹಣ ನೀಡುತ್ತಿರಲಿಲ್ಲ. ಹಣ ಸಂಪಾದಿಸಲು ಕೃತ್ಯ ಎಸಗಿದ್ದಾಗಿ ಆರೋಪಿಗಳು ಹೇಳಿಕೆ ನೀಡಿದ್ದಾರೆ’ ಎಂದು ತಿಳಿಸಿದರು.

ಕಸ್ಟಡಿಗಾಗಿ ಅರ್ಜಿ

ಬೆಂಗಳೂರು: ಸಾಹಿತಿ ಹಾಗೂ ಹೋರಾಟಗಾರರಿಗೆ ಜೀವ ಬೆದರಿಕೆ ಪತ್ರ ಬರೆಯುತ್ತಿದ್ದ ಪ್ರಕರಣದಲ್ಲಿ ಬಂಧಿಸಲಾಗಿರುವ ಹಿಂದೂ ಜಾಗರಣಾ ವೇದಿಕೆಯ ದಾವಣಗೆರೆ ಜಿಲ್ಲಾ ಘಟಕದ ಸಹ ಸಂಚಾಲಕ ಶಿವಾಜಿರಾವ್ ಜಾಧವ್ (30) ಅವರನ್ನು ಕಸ್ಟಡಿಗೆ ನೀಡುವಂತೆ ಬೆಳಗಾವಿ ಜಿಲ್ಲಾ ಪೊಲೀಸರು ನಗರದ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಸಿಸಿಬಿ ಪೊಲೀಸರ ವಶದಲ್ಲಿರುವ ಶಿವಾಜಿರಾವ್ ಕೃತ್ಯದ ವಿರುದ್ಧ ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ಪೊಲೀಸ್ ಠಾಣೆಯಲ್ಲೂ 3 ಪ್ರಕರಣ ದಾಖಲಾಗಿವೆ. ಇದರ ತನಿಖೆ ಕೈಗೊಂಡಿರುವ ಪೊಲೀಸರು, ಆರೋಪಿಯನ್ನು ಕಸ್ಟಡಿಗೆ ಪಡೆಯಲು ಮುಂದಾಗಿದ್ದಾರೆ.

‘ಬೈಲೂರು ನಿಷ್ಕಲ ಮಂಟಪದ ನಿಜಗುಣಾನಂದ ಸ್ವಾಮೀಜಿಗೆ ಜೀವ ಬೆದರಿಕೆ ಪತ್ರ ಬಂದಿದ್ದವು. ವಿಚಾರಣೆಗಾಗಿ ಕಸ್ಟಡಿಗೆ ಪಡೆಯಬೇಕಿದೆ’ ಎಂದು ಬೆಳಗಾವಿ ಜಿಲ್ಲಾ ಎಸ್ಪಿ ಭೀಮಾಶಂಕರ್ ಗುಳೇದ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮೈ ಮೇಲೆ ಪುಡಿ ಎರಚಿ ಚಿನ್ನಾಭರಣ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ವ್ಯವಹಾರ ಕಂಪನಿಯೊಂದರ ವ್ಯವಸ್ಥಾಪಕರೊಬ್ಬರ ಮೈ ಮೇಲೆ ಪುಡಿ ಎರಚಿ ಕಳ್ಳತನ ಮಾಡಲಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಠಾಣೆ ವ್ಯಾಪ್ತಿಯ ಆಸ್ಪತ್ರೆ ರಸ್ತೆಯಲ್ಲಿ ಸೆ. 27ರಂದು ನಡೆದಿರುವ ಕಳ್ಳತನ ಸಂಬಂಧ ಲಕ್ಷ್ಮಣ್ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಲಕ್ಷ್ಮಣ ಕೆಲಸ ಮುಗಿಸಿ ಕಂಪನಿ ಕಚೇರಿಗೆ ಬೀಗ ಹಾಕಿ ಸಂಜೆ ಮನೆಯತ್ತ ಹೊರಟಿದ್ದರು. ₹ 50 ಸಾವಿರ ನಗದು ಹಾಗೂ 70 ಗ್ರಾಂ ತೂಕದ ಚಿನ್ನಾಭರಣವನ್ನು ಬ್ಯಾಗ್‌ನಲ್ಲಿ ಇರಿಸಿಕೊಂಡಿದ್ದರು. ಕಚೇರಿ ಎದುರಿನ ರಸ್ತೆಯಲ್ಲಿ ದ್ವಿಚಕ್ರ ವಾಹನ ನಿಲ್ಲಿಸಿದ್ದ ಜಾಗಕ್ಕೆ ಹೋಗಿದ್ದರು. ಇದೇ ಸಂದರ್ಭದಲ್ಲಿ ಹಿಂದಿನಿಂದ ಬಂದಿದ್ದ ಆರೋಪಿ, ಮೈ ಮೇಲೆ ಪುಡಿ ಎರಚಿದ್ದ.’

‘ಪುಡಿ ಬಿದ್ದ ಕೆಲ ಕ್ಷಣಗಳ ನಂತರ ದೂರುದಾರರ ಮೈಯಲ್ಲಿ ಅಲರ್ಜಿ ಉಂಟಾಗಿ ಕೆರೆತ ಶುರುವಾಗಿತ್ತು. ನೋವು ತಡೆಯಲಾಗದ ದೂರುದಾರ, ಕಚೇರಿ ಪಕ್ಕದಲ್ಲಿದ್ದ ಶೌಚಾಲಯಕ್ಕೆ ಹೋಗಿದ್ದರು. ಶೌಚಾಲಯದ ಹೊರಗೆ ಬ್ಯಾಗ್ ಇರಿಸಿದ್ದರು. ಇದೇ ಸಂದರ್ಭದಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿ, ಬ್ಯಾಗ್ ಕದ್ದುಕೊಂಡು ಹೋಗಿದ್ದಾನೆ. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ’ ಎಂದು ಮೂಲಗಳು ತಿಳಿಸಿವೆ.

ಯುವತಿ ಬಂಧನ

ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಯುವಕರೊಬ್ಬರ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಯುವತಿ ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ಸಾದಿಯಾ, ಸುಹೈಲ್, ಉಮರ್ ಬಂಧಿತರು. ಹಲ್ಲೆಗೀಡಾಗಿದ್ದ ಇಮ್ರಾನ್ ನೀಡಿದ್ದ ದೂರು ಆಧರಿಸಿ ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಇಮ್ರಾನ್, ಮೊಬೈಲ್ ಫ್ಲ್ಯಾಶ್ ಬಗ್ಗೆ ತಿಳಿದುಕೊಂಡಿದ್ದ. ಕೆಲ ಯುವಕರನ್ನು ಬಳಸಿಕೊಂಡು ಮೊಬೈಲ್ ಕಳ್ಳತನ ಮಾಡಿಸುತ್ತಿದ್ದ ಸಾದಿಯಾ, ಅದೇ ಮೊಬೈಲ್‌ಗಳನ್ನು ಇಮ್ರಾನ್‌ಗೆ ಕೊಟ್ಟು ಫ್ಲ್ಯಾಶ್ ಮಾಡಿಸುತ್ತಿದ್ದರು. ಪರಿಚಯಸ್ಥರ ಮೊಬೈಲ್ ಎಂಬುದಾಗಿ ಇಮ್ರಾನ್‌ಗೆ ಸುಳ್ಳು ಹೇಳುತ್ತಿದ್ದರು.’

‘ಸಾದಿಯಾ ಕಳ್ಳತನದ ಮೊಬೈಲ್ ತರುತ್ತಿದ್ದ ಸಂಗತಿ ಇತ್ತೀಚೆಗೆ ಇಮ್ರಾನ್‌ಗೆ ಗೊತ್ತಾಗಿತ್ತು. ಹೀಗಾಗಿ, ಫ್ಲ್ಯಾಶ್ ಮಾಡಲು ನಿರಾಕರಿಸಿದ್ದರು. ಅಷ್ಟಕ್ಕೆ ಕೋಪಗೊಂಡ ಸಾದಿಯಾ ಹಾಗೂ ಇತರರು, ಹಲ್ಲೆ ಮಾಡಿದ್ದರು. ಗಾಯಗೊಂಡಿದ್ದ ಇಮ್ರಾನ್, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು’ ಎಂದು ಪೊಲೀಸರು ತಿಳಿಸಿದರು.

ಮದುವೆಗಿಟ್ಟಿದ್ದ 2.5 ಕೆ.ಜಿ ಚಿನ್ನಾಭರಣ

ನಕಲಿ ಕೀ ಬಳಸಿ ಕಳ್ಳತನ: ಬಂಧನ

ಪ್ರಜಾವಾಣಿ ವಾರ್ತೆ

ತಿಲಕ್‌ನಗರ ಠಾಣೆ ಪೊಲೀಸರು ಆರೋಪಿಯಿಂದ ಜಪ್ತಿ ಮಾಡಿರುವ ಚಿನ್ನಾಭರಣ

ಬೆಂಗಳೂರು: ತಿಲಕ್‌ನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಚಿನ್ನಾಭರಣ ಕಳ್ಳತನ ಮಾಡಿದ್ದ ಆರೋಪದಡಿ ಮೊಹಮ್ಮದ್ ರಫೀಕ್ (35) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ರಫೀಕ್, ಸಂಬಂಧಿಕರ ಮನೆಯಲ್ಲಿ ಕಳ್ಳತನ ಮಾಡಿದ್ದ. ಈತನನ್ನು ಬಂಧಿಸಿ, ₹1.10 ಕೋಟಿ ಮೌಲ್ಯದ 1 ಕೆ.ಜಿ 800 ಗ್ರಾಂ ಚಿನ್ನಾಭರಣ ಹಾಗೂ ₹74 ಸಾವಿರ ನಗದು ಜಪ್ತಿ ಮಾಡಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ತಿಳಿಸಿದರು.

‘ಗುಜರಿ ವ್ಯಾಪಾರಿ ಶಹನವಾಜ್, ಎಸ್.ಆರ್.ಕೆ ಗಾರ್ಡನ್‌ನಲ್ಲಿ ಕುಟುಂಬ ಸಮೇತ ವಾಸವಿದ್ದಾರೆ. ಇವರ ಸಂಬಂಧಿಯಾಗಿದ್ದ ಆರೋಪಿ ರಫೀಕ್, ಆಗಾಗ ಮನೆಗೆ ಬಂದು ಹೋಗುತ್ತಿದ್ದ. ಶಹನವಾಜ್ ಮನೆಯಲ್ಲಿ ಮದುವೆ ತಯಾರಿ ನಡೆದಿತ್ತು. ಇದಕ್ಕಾಗಿ 2.5 ಕೆ.ಜಿ ಚಿನ್ನಾಭರಣ ಹಾಗೂ ₹ 10 ಲಕ್ಷ ನಗದು ತಂದು ಮನೆಯಲ್ಲಿಟ್ಟಿದ್ದರು’ ಎಂದು ತಿಳಿಸಿದರು.

‘ಚಿನ್ನಾಭರಣ ಹಾಗೂ ನಗದು ಇರುವುದನ್ನು ತಿಳಿದುಕೊಂಡಿದ್ದ ಆರೋಪಿ ರಫೀಕ್, ಕಳ್ಳತನ ಮಾಡಲು ಸಂಚು ರೂಪಿಸಿದ್ದ. ಮನೆಯ ಕೀ ಅಚ್ಚು ಬಳಸಿಕೊಡು, ನಕಲಿ ಕೀ ಮಾಡಿಸಿದ್ದ. ಸೆ. 23ರಂದು ಶಹನವಾಜ್ ಕುಟುಂಬ ಸಮೇತ ರಾಮನಗರಕ್ಕೆ ಹೋಗಿದ್ದರು. ಇದೇ ಸಂದರ್ಭದಲ್ಲಿ ನಕಲಿ ನೋಂದಣಿ ಫಲಕವಿದ್ದ ಬೈಕ್‌ನಲ್ಲಿ ಮನೆ ಬಳಿ ಬಂದಿದ್ದ ಆರೋಪಿ, ಬಾಗಿಲು ತೆರೆದು ಚಿನ್ನಾಭರಣ ಹಾಗೂ ನಗದು ಕದ್ದುಕೊಂಡು ಪರಾರಿಯಾಗಿದ್ದ.’

‘ಸೆ. 25ರಂದು ರಾತ್ರಿ ಶಹನವಾಜ್ ಅವರು ವಾಪಸು ಮನೆಗೆ ಬಂದಾಗ, ಕೃತ್ಯ ಗಮನಕ್ಕೆ ಬಂದಿತ್ತು. ಠಾಣೆಗೆ ದೂರು ನೀಡಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾ ಹಾಗೂ ಇತರೆ ಪುರಾವೆ ಆಧರಿಸಿ ಆರೋಪಿಯನ್ನು ಸೆರೆ ಹಿಡಿಯಲಾಯಿತು’ ಎಂದು ಹೇಳಿದರು.

ಸಾಲ ತೀರಿಸಿರುವ ಆರೋಪಿ: ‘ಹಲವರ ಬಳಿ ಸಾಲ ಪಡೆದಿದ್ದ ರಫೀಕ್, ಅದನ್ನು ತೀರಿಸಲಾಗದೇ ಸಂಕಷ್ಟಕ್ಕೆ ಸಿಲುಕಿದ್ದ. ಇದೇ ಕಾರಣಕ್ಕೆ ಚಿನ್ನಾಭರಣ ಹಾಗೂ ನಗದು ಕದ್ದಿದ್ದ. ಅದೇ ಚಿನ್ನಾಭರಣ ಮಾರಿ ಬಂದಿದ್ದ ಹಣದಲ್ಲಿ ಸಾಲ ತೀರಿಸಿದ್ದ. ಉಳಿದ ಚಿನ್ನಾಭರಣ ಹಾಗೂ ನಗದು ತನ್ನ ಬಳಿ ಇಟ್ಟುಕೊಂಡಿದ್ದ’ ಎಂದು ಪೊಲೀಸರು ತಿಳಿಸಿದರು.

ಬಿಬಿಎಂಪಿ ಗುತ್ತಿಗೆದಾರರ ಆರೋಪ, ಕಾಮಗಾರಿ ಆರಂಭಿಸದಿರಲು ನಿರ್ಧಾರ

ಬಿಲ್ ಪಾವತಿಯಲ್ಲಿ ತಾರತಮ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಿಲ್ ಪಾವತಿ ಮಾಡುವಲ್ಲಿ ತಾರತಮ್ಯವಾಗುತ್ತಿದ್ದು, ಭರವಸೆಯಂತೆ ಹಣ ಬಿಡುಗಡೆ ಮಾಡುತ್ತಿಲ್ಲ ಎಂದು ಗುತ್ತಿಗೆದಾರರು ದೂರಿದ್ದಾರೆ.

ಬಿಬಿಎಂಪಿ ಅನುದಾನದ ಕಾಮಗಾರಿಗಳಿಗೆ 2022ರ ಮಾರ್ಚ್‌ವರೆಗೆ ಹಣ ಬಿಡುಗಡೆಯ ಭರವಸೆ ದೊರೆತಿತ್ತು. ಆದರೆ, 2021ರ ಸೆಪ್ಟೆಂಬರ್‌ವರೆಗೆ ಶೇ 75ರಷ್ಟು ಹಣ ಬಿಡುಗಡೆ ಮಾಡಲಾಗುತ್ತಿದೆ. ರಾಜ್ಯ ಸರ್ಕಾರದ ನಗರೋತ್ಥಾನ ಅನುದಾನ ಕಾಮಗಾರಿಗಳಿಗೆ ₹675 ಕೋಟಿ ಬಿಡುಗಡೆ ಮಾಡಲಾಗುತ್ತಿದೆ. ಇದರಲ್ಲಿ ನಗರೋತ್ಥಾನದಡಿ ವಾರ್ಡ್ ಕಾಮಗಾರಿಗಳ ಬಿಲ್ ಪಾವತಿ ತಡೆಹಿಡಿಯಲಾಗಿದೆ. ಹೀಗಾಗಿ, ಗುತ್ತಿಗೆದಾರರು ಅ.7ರಿಂದ ಸ್ಥಗಿತಗೊಳಿಸಿರುವ ಕಾಮಗಾರಿಗಳನ್ನು ಸದ್ಯಕ್ಕೆ ಆರಂಭಿಸದಿರಲು ನಿರ್ಧರಿಸಿದ್ದಾರೆ.

'2022ರ ಮಾರ್ಚ್‌ವರೆಗೆ ₹700 ಕೋಟಿ ಬಿಡುಗಡೆ ಮಾಡುವುದಾಗಿ ಬಿಬಿಎಂಪಿ ಮುಖ್ಯ ಆಯುಕ್ತರು ಸಭೆಯಲ್ಲಿ ಭರವಸೆ ನೀಡಿದ್ದರು. ಆದರೆ ಇದೀಗ ₹411 ಕೋಟಿಯನ್ನು ಮಾತ್ರ ಬಿಡುಗಡೆ ಮಾಡಲಾಗುತ್ತಿದೆ. 2022ರ ಮಾರ್ಚ್‌ವರೆಗೆ ಬಿಲ್ ಪಾವತಿಸುವವರೆಗೆ ಸ್ಥಗಿತಗೊಳಿಸಿರುವ ಕಾಮಗಾರಿಗಳನ್ನು ಮುಂದುವರಿಸುವುದಿಲ್ಲ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಅಂಬಿಕಾಪತಿ ತಿಳಿಸಿದರು.

'ಉಪ ಮುಖ್ಯಮಂತ್ರಿ ಹಾಗೂ ಮುಖ್ಯ ಆಯುಕ್ತರು ನೀಡಿದ್ದ ಭರವಸೆ ಈಡೇರಿಲ್ಲ. ಒಂದೊಂದು ದಿನ ಒಂದೊಂದು ಆದೇಶ ಮಾಡುತ್ತಿದ್ದಾರೆ. ಎಲ್ಲ ತೆರಿಗೆ ಕಡಿತ ಮಾಡಿ ಹಣ ನೀಡಲಾಗುತ್ತಿದ್ದು, ಸಾಲ, ಬಡ್ಡಿ ತೀರಿಸಲೂ ಸಾಕಾಗುತ್ತಿಲ್ಲ. ಹೀಗಾಗಿ ಕಾಮಗಾರಿ ಆರಂಭಿಸುವ ಸಾಧ್ಯತೆ ಇಲ್ಲ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ರವೀಂದ್ರ ಹೇಳಿದರು.

ವಾರ್ಡ್ ಕಾಮಗಾರಿಗಳಿಗೆ ಹಣ ಇಲ್ಲ: ರಾಜ್ಯ ಸರ್ಕಾರದ ಅನುದಾನದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಆಗಸ್ಟ್ 2023ರವರೆಗೆ ಬಿಲ್ ಪಾವತಿಸಲಾಗಿದೆ. ಅ.3ರಂದು ಒಂದೇ ದಿನದಲ್ಲಿ ವಾರ್ಡ್ ಕಾಮಗಾರಿಗಳನ್ನು ಹೊರತುಪಡಿಸಿ ₹510 ಕೋಟಿಯನ್ನು ಬಿಬಿಎಂಪಿ ಬಿಡುಗಡೆ ಮಾಡಿದೆ. ₹75 ಕೋಟಿಯನ್ನು ಬೃಹತ್ ನೀರುಗಾಲುವೆಗೆ ಮೊದಲೇ ಬಿಡುಗಡೆ ಮಾಡಲಾಗಿತ್ತು.

'ಒಟ್ಟು ₹675 ಕೋಟಿಗಳಲ್ಲಿ, ಬೃಹತ್ ನೀರುಗಾಲುವೆ (ಕೆ–100 ಯೋಜನೆ ಸಹಿತ) ಕಾಮಗಾರಿಗಳಿಗೆ ಶೇ 30, ಮೇಲ್ಸೇತುವೆ, ಅಂಡರ್‌ಪಾಸ್, ರೈಲು ಮೇಲ್ಸೇತುವೆ, ಕೆಳಸೇತುವೆ–ಶೇ 10, ಪಾದಚಾರಿ ಮಾರ್ಗ, ಟೆಂಡರ್‌ಶ್ಯೂರ್ ರಸ್ತೆಗಳು ಸೇರಿದಂತೆ ಮುಖ್ಯ, ಉಪಮುಖ್ಯ ರಸ್ತೆಗಳು– ಶೇ 30, ವೈಟ್‌ಟಾಪಿಂಗ್ ಮತ್ತು ಕಟ್ಟಡಗಳು– ಶೇ 15, ವಾರ್ಡ್ ಕಾಮಗಾರಿಗಳಿಗೆ ಶೇ 15ರಷ್ಟು ಹಣ ಬಿಡುಗಡೆ ಮಾಡಲು ಆದೇಶಿಸಲಾಗಿತ್ತು. ಆದರೆ, ವಾರ್ಡ್ ಕಾಮಗಾರಿಗಳ ₹90 ಕೋಟಿಯನ್ನು ತಡೆಹಿಡಿಯಲಾಗಿದೆ. ಇದು ಬೇಕಾದವರಿಗೆ ಮಾತ್ರ ಹಣ ಬಿಡುಗಡೆ ಮಾಡುವ ಹುನ್ನಾರ' ಎಂದು ಗುತ್ತಿಗೆದಾರರು ಆರೋಪಿಸಿದ್ದಾರೆ.

ಮುಖ್ಯ ಎಂಜಿನಿಯರ್‌ರಿಂದ ವಿಳಂಬ –ಅಧ್ಯಕ್ಷರ ಆರೋಪ

'ಬಿಬಿಎಂಪಿ ಅನುದಾನದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಲು ವಲಯ ಮುಖ್ಯ ಎಂಜಿನಿಯರ್‌ಗಳು ವಿಳಂಬ ಮಾಡುತ್ತಿದ್ದಾರೆ. ದಾಸರಹಳ್ಳಿ ಹಾಗೂ ಯಲಹಂಕ ವಲಯದಲ್ಲಿ ಹಣ ಪಾವತಿಸಲಾಗಿದೆ. ಆದರೆ, ಉಳಿದ ವಲಯಗಳಲ್ಲಿ ನಿಧಾನದ ಜೊತೆಗೆ ಜೇಷ್ಠತೆಯನ್ನೂ ಕಡೆಗಣಿಸಲಾಗುತ್ತಿದೆ' ಎಂದು ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ಆರೋಪಿಸಿದರು.

'ಗುತ್ತಿಗೆದಾರರು ಪೂರ್ಣಗೊಳಿಸಿರುವ ಎಲ್ಲ ಕಾಮಗಾರಿಗಳಿಗೆ ಯಾವುದೇ ರೀತಿಯ ತಾರತಮ್ಯ ಇಲ್ಲದಂತೆ ಹಣ ಬಿಡುಗಡೆ ಮಾಡಬೇಕು. 24 ತಿಂಗಳ ಬಾಕಿ ಎಂದು ಉಳಿಸಿಕೊಳ್ಳಬಾರದು. ಇದೆಲ್ಲ ಸರಿಹೋಗದ ಹೊರತು ಕಾಮಗಾರಿಗಳನ್ನು ಆರಂಭಿಸಲು ಗುತ್ತಿಗೆದಾರರು ಸಿದ್ಧರಿಲ್ಲ' ಎಂದು ಹೇಳಿದರು.

ಶೀಘ್ರ ಬಿಡುಗಡೆ: ಶಿವಾನಂದ

'ರಾಜ್ಯ ಸರ್ಕಾರ ಅನುದಾನದ ಕಾಮಗಾರಿಗಳಿಗೆ ₹675 ಕೋಟಿ ಬಿಡುಗಡೆ ಮಾಡಲಾಗುತ್ತಿದೆ. ಶೇ 85ರಷ್ಟು ಹಣವನ್ನು ಮಂಗಳವಾರ ಪಾವತಿಸಲಾಗಿದೆ. ವಾರ್ಡ್ ಕಾಮಗಾರಿ ಸೇರಿದಂತೆ ಎಲ್ಲ ಕಾಮಗಾರಿಗಳಿಗೂ ಬುಧವಾರ ಸಂಜೆಯೊಳಗೆ ಹಣ ಸಂದಾಯವಾಗುತ್ತದೆ. ವಲಯಗಳಲ್ಲಿ ಮುಖ್ಯ ಎಂಜಿನಿಯರ್‌ಗಳಿಂದ ಬಿಲ್ ಪಾವತಿ ವಿಳಂಬದ ಬಗ್ಗೆ ಪರಿಶೀಲಿಸಲಾಗುವುದು ' ಎಂದು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ ಕಲಕೇರಿ ಹೇಳಿದರು.

'ಆರ್‌ಟಿಐ ಕಾರ್ಯಕರ್ತರ ಹತ್ತಿಕ್ಕಲು ಯತ್ನ'

ಸರ್ಕಾರದಿಂದ ಪಟ್ಟಿ ತಯಾರಿ– ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸರ್ಕಾರ ಮಾಹಿತಿ ಹಕ್ಕು ಕಾರ್ಯಕರ್ತರನ್ನು ಬಗ್ಗು ಬಡಿಯಲು ಮುಂದಾಗಿದ್ದು, ಇದಕ್ಕಾಗಿ ಮಾಹಿತಿ ಹಕ್ಕು ಕಾರ್ಯಕರ್ತರ ವಿವರಗಳನ್ನು ಸಂಗ್ರಹಿಸಿ ಪಟ್ಟಿಯೊಂದನ್ನು ಸಿದ್ಧಪಡಿಸುತ್ತಿದೆ ಎಂದು ಬಿಜೆಪಿ ಶಾಸಕ ಡಾ. ಸಿ. ಎನ್. ಅಶ್ವತ್ಥನಾರಾಯಣ ಆರೋಪಿಸಿದರು.

ಇದು ಕಾನೂನಿನ ಉಲ್ಲಂಘನೆ ಮಾತ್ರವಲ್ಲ, ಅಧಿಕಾರದ ದುರ್ಬಳಕೆಯೂ ಆಗಿದೆ ಎಂದು ಅವರು ಬಿಜೆಪಿ ಕಚೇರಿಯಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಡಾ.ಸಿ.ಎನ್‌. ಅಶ್ವತ್ಥ ನಾರಾಯಣ

'ಮಾಹಿತಿ ಹಕ್ಕು (ಆರ್‌ಟಿಐ) ಕಾರ್ಯಕರ್ತರ ಪಟ್ಟಿ ಮಾಡಲು ಕಾನೂನಿನಲ್ಲಿ ಅವಕಾಶ ಇಲ್ಲ. ಆದರೆ, ತಾವು ಮಾಡುವ ಅಕ್ರಮಗಳು, ಕರ್ಮಕಾಂಡಗಳ ರಕ್ಷಣೆಗಾಗಿ ಮತ್ತು ಆರ್‌ಟಿಐ ಕಾನೂನಿನ ಉದ್ದೇಶವನ್ನು ವಿಫಲಗೊಳಿಸಲು ಸರ್ಕಾರ ಮುಂದಾಗಿದೆ. ಆರ್‌ಟಿಐ ಕಾರ್ಯಕರ್ತರ ಪಟ್ಟಿ ಮಾಡುವಂತೆ ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಸೂಚನೆ ನೀಡಿದೆ' ಎಂದೂ ಅವರು ಹೇಳಿದರು.

'ಮಾಹಿತಿ ಪಡೆಯುವ ಕಾರ್ಯಕರ್ತರನ್ನು ಬೆದರಿಸುವುದಲ್ಲದೇ ಅಧಿಕಾರ ದುರ್ಬಳಕೆ ಮಾಡಿ ಮೊಕದ್ದಮೆಗಳನ್ನು ದಾಖಲಿಸುತ್ತಿದ್ದಾರೆ. ಅಲ್ಲದೇ, ಪ್ರಮುಖ ಕಾರ್ಯಕರ್ತರ ಚಲನವಲನಗಳ ಮೇಲೆ ನಿಗಾ ಇಡಲಾಗಿದೆ. ಬಾಯಿಮಾತಿನಲ್ಲಿ ಮಾತ್ರ ಪಾರದರ್ಶಕ ಸರ್ಕಾರ' ಎಂದು ಕಿಡಿಕಾರಿದರು.

ಹಿಂದೆ ಲೋಕಾಯುಕ್ತ ಮುಚ್ಚಿದ್ದರು. ಈಗ ಆರ್‌ಟಿಐ ಕಾನೂನನ್ನು ನಿಷ್ಕ್ರಿಯಗೊಳಿಸಲು ಮುಂದಾಗಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೇ ಭ್ರಷ್ಟಾಚಾರ ಆರಂಭವಾಗಿದೆ. ಮುಖ್ಯಮಂತ್ರಿಯವರು ತಮ್ಮ ಆಡಳಿತ ವೈಫಲ್ಯದ ಕಾರಣಕ್ಕಾಗಿ ರಾಜೀನಾಮೆ ನೀಡಿ ಸರ್ಕಾರವನ್ನು ವಿಸರ್ಜಿಸಬೇಕು ಎಂದು ಅವರು ಆಗ್ರಹಿಸಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ಅವರು, ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಅತಿ ಹೆಚ್ಚು ಅರ್ಜಿ ಹಾಕುವವರ ಹೆಸರು ಮತ್ತು ವಿವರ ಪಡೆಯಲು ಸರ್ಕಾರದ ಉಪ ಕಾರ್ಯದರ್ಶಿ ಸೂಚಿಸಿದ್ದಾರೆ. ಮಾಹಿತಿ ಹಕ್ಕು ಕಾನೂನಿಗೆ ವ್ಯತಿರಿಕ್ತವಾಗಿ ಸರ್ಕಾರ ನಡೆದುಕೊಳ್ಳುತ್ತಿದೆ ಎಂದರು.

ಸರ್ಕಾರ ಮಾಹಿತಿಗಳನ್ನು ಹಂಚಿಕೊಳ್ಳಲು ಹಿಂದೇಟು ಹಾಕುತ್ತಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಇದು ಕಾಯ್ದೆಗೆ ವಿರುದ್ಧವಾಗಿದೆ. ಹಗರಣಗಳು ಬಹಿರಂಗ ಆಗಬಾರದು ಎಂಬುದು ಇವರ ಉದ್ದೇಶ. ಇವರ ನಡೆ ಭ್ರಷ್ಟಾಚಾರಕ್ಕೆ ಪೂರಕವಾಗಿದೆ ಎಂದು ಹೇಳಿದರು.

ಬಳ್ಳಾರಿ ಅಂತರರಾಜ್ಯ ಗಡಿ: ಗಣಿಗಳ ಜಂಟಿ ಸರ್ವೆಗೆ ಸಿದ್ಧತೆ

ಬೆಂಗಳೂರು: ಬಳ್ಳಾರಿ ಮೀಸಲು ಅರಣ್ಯದ ವ್ಯಾಪ್ತಿಯಲ್ಲಿನ, ಕರ್ನಾಟಕ–ಆಂಧ್ರಪ್ರದೇಶ ಅಂತರರಾಜ್ಯ ಗಡಿಗೆ ಹೊಂದಿಕೊಂಡಿರುವ ಏಳು ಗಣಿಗಳ ಜಂಟಿ ಸರ್ವೆಗೆ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿ ಒಂದು ವರ್ಷ ಕಳೆದ ಬಳಿಕ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಪ್ರಕ್ರಿಯೆ ಆರಂಭಿಸಿದೆ.

ಅಕ್ರಮ ಗಣಿಗಾರಿಕೆ ಆರೋಪದ ಕಾರಣದಿಂದ ಅವಿಭಜಿತ ಬಳ್ಳಾರಿ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿದ್ದ ಕಬ್ಬಿಣದ ಅದಿರಿನ ಎಲ್ಲ ಗಣಿ ಸ್ಥಗಿತಗೊಳಿಸಲಾಗಿತ್ತು. ಅಂತರರಾಜ್ಯ ಗಡಿಯಲ್ಲಿನ ಏಳು ಗಣಿಗಳನ್ನು ಬಿ–1 ಪಟ್ಟಿಯಲ್ಲಿ ಗುರುತಿಸಿದ್ದು, 2011 ರಿಂದಲೂ ಗಣಿಗಾರಿಕೆ ಸ್ಥಗಿತವಾಗಿದೆ.

ಬಳ್ಳಾರಿ ಜಿಲ್ಲೆಯ ತುಮಟಿ, ವಿಠಲಾಪುರ ಮತ್ತು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಎಚ್. ಸಿದ್ದಾಪುರ ಹಾಗೂ ಮಲಪನಗುಡಿ ಗ್ರಾಮಗಳು ಸಂಧಿಸುವ 'ಟ್ರೈ ಜಂಕ್ಷನ್' ಬಿಂದುವಿನಲ್ಲಿ ಅಂತರ ರಾಜ್ಯ ಗಡಿ ಹಾದುಹೋಗಿದೆ. ಗಡಿಗೆ ಹೊಂದಿಕೊಂಡಿರುವ ಏಳು ಗಣಿಗಳ ಜಂಟಿ ಸರ್ವೆ ನಡೆಸಿ, ನಕ್ಷೆ ಸಿದ್ಧಪಡಿಸಲು ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 28ರಂದು ಆದೇಶ ಹೊರಡಿಸಿತ್ತು.

ಸುಪ್ರೀಂ ಕೋರ್ಟ್ ಆದೇಶದಂತೆ ಈವರೆಗೆ ರಾಜ್ಯದಲ್ಲಿ 159 ಗಣಿ ಪ್ರದೇಶಗಳ ಜಂಟಿ ಸರ್ವೆ ನಡೆಸಲಾಗಿದೆ. ಎಲ್ಲ ಗಣಿಗಳಲ್ಲೂ ಮಂಗಳೂರಿನ ಸುರತ್ಕಲ್‌ನ ಎನ್‌ಐಟಿ-ಕೆಯ ಮೈನಿಂಗ್ ಎಂಜಿನಿಯರಿಂಗ್ ವಿಭಾಗದಿಂದ ಜಂಟಿ ಸರ್ವೆ ನಡೆದಿತ್ತು. ಅಂತರರಾಜ್ಯ ಗಡಿಯ ಏಳು ಗಣಿಗಳ ಜಂಟಿ ಸರ್ವೆಯನ್ನೂ ನಡೆಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಎನ್‌ಐಟಿ–ಕೆಯನ್ನು ಕೋರಿತ್ತು.

ಸೆ. 21ರಂದು ಪ್ರಸ್ತಾವ ಸಲ್ಲಿಸಿದ್ದ ಎನ್‌ಐಟಿ–ಕೆ ಮೈನಿಂಗ್ ಎಂಜಿನಿಯರಿಂಗ್ ವಿಭಾಗವು, ಪ್ರತಿ ಹೆಕ್ಟೇರ್ ಗಣಿ ಪ್ರದೇಶದ ಜಂಟಿ ಸರ್ವೆಗೆ ₹11,564 ಪಾವತಿಸುವಂತೆ ಕೋರಿತ್ತು. ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸಿರುವ ಕುರಿತು ತುರ್ತಾಗಿ ಅನುಪಾಲನಾ ವರದಿ ಸಲ್ಲಿಸಬೇಕಿರುವ ಕಾರಣದಿಂದ ಎನ್‌ಐಟಿ–ಕೆ ಸಲ್ಲಿಸಿರುವ ದರಪಟ್ಟಿಯನ್ನು ಇಲಾಖೆಯು ಅಂಗೀಕರಿಸಿದೆ.

ಸೆ. 27ರಂದು ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಹರ್ಷವರ್ಧನ್ ಅವರಿಗೆ ಪತ್ರ ಬರೆದಿರುವ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕ ಆರ್. ಗಿರೀಶ್, ಸುಪ್ರೀಂ ಕೋರ್ಟ್ ಹಾಗೂ ಕೇಂದ್ರ ಉನ್ನತಾಧಿಕಾರ ಸಮಿತಿಗಳ (ಸಿಇಸಿ) ಆದೇಶಗಳ ಅನುಸಾರ ಅಂತರರಾಜ್ಯ ಗಡಿಯಲ್ಲಿರುವ ಏಳು ಗಣಿಗಳ ಜಂಟಿ ಸರ್ವೆ ನಡೆಸಿ ವರದಿ ಸಲ್ಲಿಸುವಂತೆ ಕೋರಿದ್ದಾರೆ.

'ಪತ್ರಕರ್ತರ ಮೇಲೆ ದಾಳಿ: ಭಿನ್ನ ಧ್ವನಿ ಹತ್ತಿಕ್ಕುವ ಹುನ್ನಾರ'

ಬೆಂಗಳೂರು: 'ದೆಹಲಿ ಪೊಲೀಸರು ಹಲವು ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರ ಮನೆಗಳಿಗೆ ನುಗ್ಗಿ ಲ್ಯಾಪ್‌ಟಾಪ್, ಮೊಬೈಲ್, ಹಾರ್ಡ್ ಡಿಸ್ಕ್‌ಗಳು, ಇಬ್ಬರು ಪತ್ರಕರ್ತರನ್ನು ವಶಕ್ಕೆ ಪಡೆದಿರುವುದು ಖಂಡನೀಯ' ಎಂದು 'ಜಾಗೃತ ನಾಗರಿಕರು ಕರ್ನಾಟಕ' ಸಂಘಟನೆ ಹೇಳಿದೆ.

ಈ ಕುರಿತ ಹೇಳಿಕೆಗೆ ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ಎಸ್.ಜಿ.ಸಿದ್ದರಾಮಯ್ಯ, ವಿಜಯಾ, ರಾಜೇಂದ್ರ ಚೆನ್ನಿ, ಬಂಜಗೆರೆ ಜಯಪ್ರಕಾಶ, ಬಿ.ಶ್ರೀಪಾದ ಭಟ್, ವಿಮಲಾ ಕೆ.ಎಸ್, ಮೀನಾಕ್ಷಿ ಬಾಳಿ, ಎನ್.ಗಾಯತ್ರಿ, ಟಿ.ಸುರೇಂದ್ರರಾವ್, ಡಾ.ವಸುಂಧರಾ ಭೂಪತಿ, ಎನ್.ಕೆ.ವಸಂತ ರಾಜ್ ಸಹಿ ಮಾಡಿದ್ದಾರೆ.

'ಪ್ರಜಾಪ್ರಭುತ್ವದ ತಾಯ್ನೆಲ ಎಂದು ಬಣ್ಣಿಸಲಾಗುವ ಭಾರತದಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆ ನಡೆಯುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಲಾಗಿದೆ.

'ನ್ಯೂಸ್‌ಕ್ಲಿಕ್' ವಿರುದ್ಧ ಯುಎಪಿಎ ಅಡಿಯಲ್ಲಿ ಹೊಸ ಪ್ರಕರಣಗಳನ್ನು ದಾಖಲಿಸಿ ಕಚೇರಿಗೆ ಬೀಗ ಹಾಕಲಾಗಿದೆ. ಇದು ಭಿನ್ನ ಅಭಿಪ್ರಾಯಗಳನ್ನು ಹೊಂದಿರುವ ವ್ಯಕ್ತಿಗಳ ಧ್ವನಿ ಅಡಗಿಸುವ ಹುನ್ನಾರವಲ್ಲದೇ ಮತ್ತೇನೂ ಅಲ್ಲ ಎಂದು ಜಾಗೃತ ನಾಗರಿಕರು ಕರ್ನಾಟಕ ಹೇಳಿದೆ.

'ಹುಬ್ಬಳ್ಳಿ ಗಲಭೆ: ಪ್ರಕರಣ ಏಕಾಏಕಿ ಕೈ ಬಿಡಲ್ಲ'

ತುಮಕೂರು: ಹುಬ್ಬಳ್ಳಿಯಲ್ಲಿ 2022ರಲ್ಲಿ ನಡೆದ ಗಲಭೆ ಸಂಬಂಧ ಪ್ರಕರಣವನ್ನು ಕೈಬಿಡಲು ಕೋರಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪತ್ರ ಬರೆದ ತಕ್ಷಣ ಏಕಾಏಕಿ ಕೈಬಿಡಲಾಗದು ಎಂದು ಗೃಹ ಸಚಿವ ಜಿ.ಪರಮೇಶ್ವರ ಮಂಗಳವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಾಕಷ್ಟು ಶಾಸಕರು ಪತ್ರ ಬರೆದು ಪ್ರಕರಣ ವಾಪಸ್‌ಗೆ ಮನವಿ ಮಾಡಿರುತ್ತಾರೆ. ಅರ್ಜಿ ಬಂದ ತಕ್ಷಣ ನಿರ್ಧಾರ ಕೈಗೊಳ್ಳುವುದಿಲ್ಲ. ಇಲಾಖಾ ಹಂತದಲ್ಲಿ ಪರಿಶೀಲಿಸಿದ ನಂತರ ಸಚಿವ ಸಂಪುಟ ಉಪಸಮಿತಿಯ ಮುಂದೆ ತರಲಾಗುತ್ತದೆ. ಕೊನೆಯದಾಗಿ ಸಚಿವರ ಸಂಪುಟದಲ್ಲಿ ಒಪ್ಪಿಗೆ ಸಿಗಬೇಕಿದೆ. ಈ ಪ್ರಕರಣದಲ್ಲೂ ಅದೇ ನಿಯಮ ಪಾಲನೆಯಾಗುತ್ತದೆ. ಪತ್ರ ಬರೆದ ತಕ್ಷಣ ವಾಪಸ್ ಪಡೆಯಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

ಕ್ವಿಂಟಲ್‌ಗೆ ₹ 20 ಸಾವಿರ ನೀಡಲು ಒತ್ತಾಯ, ಧರಣಿ

ಕೊಬ್ಬರಿಗೆ ಬೆಂಬಲ ಬೆಲೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ವಿಂಟಲ್ ಕೊಬ್ಬರಿಗೆ ₹20 ಸಾವಿರ ಬೆಂಬಲ ಬೆಲೆ ನಿಗದಿಪಡಿಸಲು ಆಗ್ರಹಿಸಿ ಸಂಯುಕ್ತ ಹೋರಾಟ–ಕರ್ನಾಟಕ ಮತ್ತು ತೆಂಗು ಬೆಳೆಗಾರರ ರಾಜ್ಯ ಸಮನ್ವಯ ಸಮಿತಿ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸಿದರು.

'ಕರ್ನಾಟಕದಲ್ಲಿ 2.18 ಲಕ್ಷ ಮೆಟ್ರಿಕ್ ಟನ್ ಕೊಬ್ಬರಿ ಉತ್ಪಾದನೆಯಾಗುತ್ತಿದ್ದು, ಅದರಲ್ಲಿ 1.75 ಲಕ್ಷ ಮೆಟ್ರಿಕ್ ಟನ್ ಖರೀದಿ ಆಗದೇ ರೈತರ ಬಳಿ ಉಳಿದಿದೆ. ರಾಜ್ಯ ಸರ್ಕಾರ ಕೊಬ್ಬರಿ ಖರೀದಿಗೆ ಕ್ರಮ ಕೈಗೊಳ್ಳಬೇಕು' ಎಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಿದ ಪ್ರತಿಭಟನಕಾರರು ಆಗ್ರಹಿಸಿದರು.

'ಐದು ವರ್ಷಗಳಿಂದ ಹಸಿ ಬರ, ಒಣ ಬರದಿಂದ ತೆಂಗಿಗೆ ಕಪ್ಪುಮೂತಿ ಕೀಟಗಳ ಬಾಧೆ, ಕಪ್ಪು ಚುಕ್ಕೆ ರೋಗ, ಗರಿ ಉದುರುವ ರೋಗಗಳಿಗೆ ತೆಂಗಿನ ಮರಗಳು ಬಲಿಯಾಗುತ್ತಿದ್ದು, ಇದರಿಂದ ಸಾಕಷ್ಟು ನಷ್ಟವಾಗಿದೆ' ಎಂದರು.

'ತೆಂಗಿನ ಉತ್ಪನ್ನಗಳಿಂದ ಸೋಪು, ಡಿಟರ್ಜೆಂಟ್, ಶಾಂಪೂ, ರಬ್ಬರ್, ಗ್ಲಿಸರೀನ್ ಇತರೆ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ಆದರೆ, ಕೇಂದ್ರ ಇದಕ್ಕೆ ಪರ್ಯಾಯವಾಗಿ ತಾಳೆ ಮತ್ತು ಸೋಯಾ ಎಣ್ಣೆ, ತೆಂಗು, ತೆಂಗಿನ ಪುಡಿಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಇದರಿಂದ, ತೆಂಗಿನ ಉತ್ಪನ್ನಗಳಿಗೆ ಬೇಡಿಕೆ ಕುಗ್ಗಿದೆ' ಎಂದು ದೂರಿದರು.

ಕೊಬ್ಬರಿಗೆ ಬೆಂಬಲ ಬೆಲೆ ನಿಗದಿಪಡಿಸಲು ಆಗ್ರಹಿಸಿ ಸಂಯುಕ್ತ ಹೋರಾಟ–ಕರ್ನಾಟಕ ಮತ್ತು ತೆಂಗು ಬೆಳೆಗಾರರ ರಾಜ್ಯ ಸಮನ್ವಯ ಸಮಿತಿಯ ಸದಸ್ಯರು ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

'ಎಳನೀರು ಮತ್ತು ತೆಂಗಿನಕಾಯಿಗೂ ಕನಿಷ್ಠ ಬೆಂಬಲ ಬೆಲೆ ನಿಗದಿ ಪಡಿಸಬೇಕು. ಮುಕ್ತ ಮಾರುಕಟ್ಟೆಯಡಿ ತೆಂಗಿನ ಉತ್ಪನ್ನ ಮತ್ತು ಖಾದ್ಯ ತೈಲ ಆಮದು ಸ್ಥಗಿತಗೊಳಿಸಬೇಕು. ಕೇಂದ್ರದ ಅಧೀನದ ಎಲ್ಲ ಕಾರ್ಖಾನೆಗಳು ತೆಂಗಿನ ಎಣ್ಣೆಯನ್ನು ಉಪಯೋಗಿಸಬೇಕು. ಖರೀದಿ ಕೇಂದ್ರವನ್ನು ವರ್ಷಪೂರ್ತಿ ತೆರೆಯಬೇಕು. ತೆಂಗಿನ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸುವ ಕಾರ್ಖಾನೆಗಳಿಗೆ ಪ್ರೋತ್ಸಾಹಿಸಬೇಕು' ಎಂದು ಆಗ್ರಹಿಸಿದರು.

ತೆಂಗು ಬೆಳೆಗಾರರ ನಿಯೋಗವು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ರೈತ ಮುಖಂಡರಾದ ಬಡಗಲಪುರ ನಾಗೇಂದ್ರ, ಎಚ್. ಆರ್. ಬಸವರಾಜಪ್ಪ, ಟಿ.ಯಶವಂತ್, ಮಧುಸೂದನ್ ಅವರು ಇದ್ದರು.

ತ್ರಿಶೂಲ, ಗದೆ ಹೊರತೆಗೆದರೆ ಏನಾಗುತ್ತೆ ಗೊತ್ತೆ: ಸಿ.ಟಿ.ರವಿ

ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೋಲಾರ: 'ಟಿಪ್ಪು ಸುಲ್ತಾನ್ ಖಡ್ಗ ಅಳವಡಿಸುತ್ತೀರಾ? ಆ ಟಿಪ್ಪು ಕೊಂದ ನಮ್ಮ ಉರಿಗೌಡ, ನಂಜೇಗೌಡರ ಬಳಿಯೂ ಖಡ್ಗ ಇತ್ತು. ನಾವು ಪೂಜಿಸುವ ಹನುಮನ ಗದೆ, ಕೃಷ್ಣನ ಸುದರ್ಶನ ಚಕ್ರ, ಶಿವನ ತ್ರಿಶೂಲ ಹೊರಬಂದರೆ ಏನಾಗುತ್ತದೆ ಗೊತ್ತೇ' ಎಂದು ಮಾಜಿ ಸಚಿವ ಸಿ.ಟಿ.ರವಿ ಹೇಳಿದ್ದಾರೆ.

ನಗರದ ಕ್ಲಾಕ್ ಟವರ್ ಬಳಿ ಈದ್ ಮಿಲಾದ್‌ಗಾಗಿ ನಿರ್ಮಿಸಲಾದ ತಲ್ವಾರ್ ಕಮಾನು ವಿವಾದ, ಜನತಾ ದರ್ಶನ ಕಾರ್ಯಕ್ರಮದಿಂದ ಸಂಸದ ಎಸ್. ಮುನಿಸ್ವಾಮಿ ಹೊರದಬ್ಬಿದ ಪ್ರಕರಣ, ಶ್ರೀನಿವಾಸಪುರದಲ್ಲಿ ನಡೆಯುತ್ತಿರುವ ಒತ್ತುವರಿ ತೆರವು ಕಾರ್ಯಾಚರಣೆ ವಿರೋಧಿಸಿ ಮಂಗಳವಾರ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆ ಉದ್ದೇಶಿಸಿ ಅವರು ಮಾತನಾಡಿದರು.

'ಶಿವಮೊಗ್ಗದಲ್ಲಿ ಔರಂಗಜೇಬ್, ಟಿಪ್ಪುವಿನ ಪೋಟೊ ಹಾಕಲು ಅವಕಾಶ ಕೊಟ್ಟಿದ್ದೀರಿ. ಇಡೀ ಭಾರತವನ್ನು ಮೊಘಲ್ ಸಾಮ್ರಾಜ್ಯ ಮಾಡುವ ಸಂಚು ನಡೆದಿದೆ. ಇನ್ನು ಮೈಮರೆತು ಕುಳಿತರೆ ನಾವು, ನೀವು, ಮುಂದಿನ ಪೀಳಿಗೆ ಉಳಿಯಲ್ಲ. ಪೂರ್ವಿಕರ ತ್ಯಾಗ ಬಲಿದಾನದಿಂದ ನಮ್ಮ ಮೇಲೆ ವಿಭೂತಿ, ಕುಂಕುಮ ಉಳಿದಿದೆ' ಎಂದು ಹೇಳಿದರು.

'ನಾನು ಪಾಲ್ಗೊಳ್ಳುವುದಾದರೆ ಪ್ರತಿಭಟನೆಗೆ ಅವಕಾಶ ಕೊಡದಿರಲು ಜಿಲ್ಲಾಡಳಿತ ಮುಂದಾಗಿತ್ತು. ಕೋಲಾರ ಏನು ಪಾಕಿಸ್ತಾನದಲ್ಲಿದೆಯೇ? ಜಿಲ್ಲಾಧಿಕಾರಿ ಅಕ್ರಂ ಪಾಷ, ನವಾಜ್ ಷರೀಫ್ ತಮ್ಮನೋ, ಮಗನೋ?' ಎಂದು ಪ್ರಶ್ನಿಸಿದರು.

'ಸಂಸದರಿಗೆ ಆದ ಅವಮಾನ ಇಡೀ ದೇಶದ ಪ್ರಜಾತಂತ್ರಕ್ಕೆ ಆದ ಅವಮಾನ. ಕಾಂಗ್ರೆಸ್‌ನವರು ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಇಂಥ ಘಟನೆ ಸೃಷ್ಟಿಸುತ್ತಿದ್ದಾರೆ. ಭಯೋತ್ಪಾದನೆ ಹುಟ್ಟಿ ಹಾಕುವ ಕೆಲಸ ಮಾಡುತ್ತಿದ್ದಾರೆ' ಎಂದು ಸಂಸದ ಡಿ.ವಿ.ಸದಾನಂದಗೌಡ ಆರೋಪಿಸಿದರು.

'ಈದ್ ಮಿಲಾದ್ ದಿನ ಟಿಪ್ಪು ಸುಲ್ತಾನ್ ಖಡ್ಗವನ್ನು ಫ್ಲೆಕ್ಸ್, ಬ್ಯಾನರ್ ಮಾಡಿ ಹಾಕಿದ್ದಾರೆ. ನಾವು ತ್ರಿಶೂಲ, ಡಮರುಗ ತರುತ್ತೇವೆ. ಅದನ್ನು ಕ್ಲಾಕ್ ಟವರ್‌ನಲ್ಲಿ ಅಳವಡಿಸಲು ಅನುಮತಿ ನೀಡುತ್ತೀರಾ' ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಅವರು ಕೇಳಿದರು.

'ಶ್ರೀನಿವಾಸಪುರದಲ್ಲಿ ವಿಧಾನಸಭೆ ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಅವರ ಜಮೀನನ್ನು ಅರಣ್ಯ ಇಲಾಖೆ ಡಿಸಿಎಫ್ ಏಡುಕೊಂಡಲು ಒಂದಿಂಚೂ ಮುಟ್ಟಿಲ್ಲ ಏಕೆ' ಎಂದು ಪ್ರಶ್ನಿಸಿದರು.

'ಕೋಲಾರ ಜಿಲ್ಲಾಧಿಕಾರಿ ಅಕ್ರಂ ಪಾಷ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ, ಡಿಸಿಎಫ್ ಏಡುಕೊಂಡಲು ಅವರನ್ನು ಅಮಾನತುಗೊಳಿಸುವವರೆಗೆ ನಾವು ಸುಮ್ಮನಿರಲ್ಲ' ಎಂದರು.

ಸಂಸದ ಎಸ್.ಮುನಿಸ್ವಾಮಿ, ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ, ಮಾಜಿ ಸಚಿವ ವರ್ತೂರು ಪ್ರಕಾಶ್ ಇದ್ದರು.

ಇದಕ್ಕೂ ಮೊದಲು ಬಿಜೆಪಿ ಮುಖಂಡರು ಬಂಗಾರಪೇಟೆ ವೃತ್ತದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನೂರಾರು ಕಾರ್ಯಕರ್ತರೊಂದಿಗೆ ಮೆರವಣಿಗೆ ಮೂಲಕ ಗಾಂಧಿವನಕ್ಕೆ ಬಂದು ವೇದಿಕೆ ಕಾರ್ಯಕ್ರಮದಲ್ಲಿ ಭಾಗಿಯಾದರು.

ಕೋಲಾರದಲ್ಲಿ ಮಂಗಳವಾರ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತದ ವಿರುದ್ಧ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಬಿಜೆಪಿ ನಾಯಕರು ಒಗ್ಗಟ್ಟು ಪ್ರದರ್ಶಿಸಿದರು. ವಿಧಾನ ಪರಿಷತ್ ಸದಸ್ಯರಾದ ಛಲವಾದಿ ನಾರಾಯಣಸ್ವಾಮಿ, ಎನ್.ರವಿಕುಮಾರ್, ಸಂಸದ ಡಿ.ವಿ.ಸದಾನಂದಗೌಡ, ಮಾಜಿ ಸಚಿವರಾದ ಸಿ.ಟಿ.ರವಿ, ವರ್ತೂರು ಪ್ರಕಾಶ್, ಸಂಸದ ಎಸ್.ಮುನಿಸ್ವಾಮಿ ಹಾಗೂ ಮುಖಂಡರು ಇದ್ದಾರೆ

ಶಿವಮೊಗ್ಗ ಗಲಭೆ ಕುರಿತು ಎಸ್‌ಪಿ ಮಿಥುನ್‌ಕುಮಾರ್ ಹೇಳಿಕೆ

ಎರಡೂ ಸಮುದಾಯದ ದುಷ್ಕರ್ಮಿಗಳು ಭಾಗಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ರಾಗಿಗುಡ್ಡದಲ್ಲಿ ಭಾನುವಾರ ಈದ್ ಮಿಲಾದ್ ಮೆರವಣಿಗೆ ವೇಳೆ ನಡೆದ ಗಲಭೆಯಲ್ಲಿ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ದುಷ್ಕರ್ಮಿಗಳು ಭಾಗಿಯಾಗಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ. ಮಿಥುನ್‌ಕುಮಾರ್ ತಿಳಿಸಿದರು.

ಗಲಭೆಯಲ್ಲಿ ಎರಡೂ ಸಮುದಾಯದವರು ಪರಸ್ಪರ ಕಲ್ಲು ತೂರಾಟ ನಡೆಸಿದ್ದಾರೆ. ಪರಿಣಾಮ 12 ಜನರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ರಾಗಿಗುಡ್ಡಕ್ಕೆ ಒಮ್ನಿ ವಾಹನದಲ್ಲಿ ಹೊರಗಿನಿಂದ ಬಂದು ಗಲಭೆ ಸೃಷ್ಟಿಸಲಾಗಿದೆ ಎಂಬ ವದಂತಿಗೆ ಪ್ರತಿಕ್ರಿಯಿಸಿದ ಅವರು, 'ದಾವಣಗೆರೆ ಜಿಲ್ಲೆಯ ನ್ಯಾಮತಿಯ ಯುವಕರು ಈದ್ ಮಿಲಾದ್ ಮೆರವಣಿಗೆ ನೋಡಲು ಎರಡು ಒಮ್ನಿ ವಾಹನಗಳಲ್ಲಿ ಬಂದಿದ್ದರು. ಅವರಲ್ಲಿ ಎರಡೂ ಸಮುದಾಯದವರು ಇದ್ದರು. ಗಲಭೆ ಆರಂಭ ಆಗುತ್ತಿದ್ದಂತೆಯೇ ಅವರು ಸ್ಥಳದಿಂದ ತೆರಳಿದ್ದಾರೆ. ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ವಾಹನಗಳು ಸೆರೆಯಾಗಿದೆ. ತನಿಖೆ ನಡೆಸಿ, ವಾಹನದಲ್ಲಿದ್ದವರನ್ನು ಠಾಣೆಗೆ ಕರೆಸಿ ವಿಚಾರಿಸಲಾಗಿದೆ. ಅವರ ಹಿನ್ನೆಲೆಯನ್ನೂ ಪರಿಶೀಲಿಸಲಾಗಿದೆ. ಅವರು ನಿರ್ದೋಷಿಗಳು ಎಂದು ಸಾಬೀತಾದ ಕಾರಣ ಬಿಟ್ಟು ಕಳುಹಿಸಲಾಗಿದೆ' ಎಂದು ಹೇಳಿದರು.

'ರಾಗಿಗುಡ್ಡದಲ್ಲಿ ಗೋಲಿಬಾರ್‌ನಿಂದ ಯುವಕನೊಬ್ಬ ಮೃತಪಟ್ಟಿರುವುದಾಗಿ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹರಿದಾಡುತ್ತಿದೆ. ಯಾರೂ ಸತ್ತಿಲ್ಲ. ಆ ಸುದ್ದಿ ಹರಡಿದವರ ವಿರುದ್ಧ ಎಫ್‌ಐಆರ್ ಕೂಡ ದಾಖಲಿಸಲಾಗಿದೆ' ಎಂದು ಹೇಳಿದರು.

'ರಾಗಿಗುಡ್ಡದ ಗಲಭೆಯಿಂದ ಹಿಂದೂ, ಮುಸ್ಲಿಂ ಹಾಗೂ ಕ್ರೈಸ್ತ ಸಮುದಾಯದವರ ಮನೆ ಹಾಗೂ ವಾಹನಗಳು ಹಾನಿಗೀಡಾಗಿವೆ. ಕೆಲವರು ದೂರು ದಾಖಲಿಸಿದ್ದಾರೆ. ಉಳಿದ ಸಂತ್ರಸ್ತರೂ ದೂರು ನೀಡಿದಲ್ಲಿ ತನಿಖೆ ನಡೆಸಿ ಕ್ರಮ ಜರುಗಿಸಲಾಗುವುದು' ಎಂದು ಹೇಳಿದರು.

ಲೋಹದ ಆಯುಧ ಬಳಸಿಲ್ಲ

ಸಾಗರದಲ್ಲಿ ಅ.2ರಂದು ನಡೆದ ಈದ್ ಮಿಲಾದ್ ಮೆರವಣಿಗೆಯಲ್ಲಿ ಲೋಹದ ಆಯುಧ ಬಳಸಿಲ್ಲ. ಬದಲಿಗೆ, ಕಾರ್ಡ್‌ಬೋರ್ಡ್ ಹಾಗೂ ಪ್ಲಾಸ್ಟಿಕ್ ಆಯುಧ ಬಳಸಲಾಗಿದೆ. ಈ ಕುರಿತು ತನಿಖೆ ಕೂಡ ನಡೆದಿದೆ. ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡಬಾರದು. ಅದೇ ರೀತಿ ನಗರದ ಗಾಂಧಿ ಬಜಾರ್‌ನಲ್ಲಿಯೂ ಕಾರ್ಡ್ ಬೋರ್ಡ್‌ನಿಂದ ತಯಾರಿಸಿದ ಕತ್ತಿ ಬಳಕೆ ಮಾಡಲಾಗಿದೆ. ಘಟನೆಯ ಕುರಿತು ತನಿಖೆ ಜಾರಿಯಲ್ಲಿದೆ ಎಂದು ಮಿಥುನ್‌ಕುಮಾರ್ ಸ್ಪಷ್ಟಪಡಿಸಿದರು.

'ಗಲಭೆ ಮಾಡಿದವರ ವಿರುದ್ಧ ಕಠಿಣ ಕ್ರಮ'

ಬೆಳಗಾವಿ: 'ನಮ್ಮ ಸರ್ಕಾರ ಕೋಮು-ಗಲಭೆ ಹತ್ತಿಕ್ಕುತ್ತಿದೆ. ಯಾರೇ ಕೋಮು ಗಲಭೆ ಮಾಡಿದರೆ, ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ. ಶಿವಮೊಗ್ಗದಲ್ಲಿ ಈದ್-ಮಿಲಾದ್ ಮೆರವಣಿಗೆ ವೇಳೆ ನಡೆದ ಗಲಾಟೆಯಲ್ಲಿ ಕಲ್ಲು ತೂರಿದವರನ್ನು ಬಂಧಿಸಿ, ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶಿವಮೊಗ್ಗ ಘಟನೆ ವಿರೋಧಿಸಿ ಕೋಲಾರದಲ್ಲಿ ಬಿಜೆಪಿ ನಡೆಸುತ್ತಿರುವ ಪ್ರತಿಭಟನೆಗೆ ಮಂಗಳವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಅವರು ಪ್ರತಿಭಟನೆ ಮಾಡಲಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದಕ್ಕೆ ಅಡ್ಡಿಪಡಿಸುವುದಿಲ್ಲ. ಆದರೆ, ಪ್ರತಿಭಟನೆಗೆ ಸಕಾರಣ ಇರಬೇಕು ಮತ್ತು ಶಾಂತಿಯುತವಾಗಿ ಮಾಡಬೇಕು' ಎಂದರು.

> ರಾಜ್ಯ ಸರ್ಕಾರ ಅನವಶ್ಯಕವಾಗಿ ಹಿಂದೂ ಧರ್ಮ ರಕ್ಷಕರ ವಿರುದ್ಧ ಪ್ರಕರಣ ದಾಖಲಿಸುವ ಬದಲು ತನ್ನ ಗಂಡಸುತನವನ್ನು ಶಿವಮೊಗ್ಗದಲ್ಲಿ ಪ್ರದರ್ಶಿಸಬೇಕಾಗಿತ್ತು
>
> **ಬಸನಗೌಡ ಯತ್ನಾಳ**
> ವಿಜಯಪುರದ ಶಾಸಕ

'ಜಿಹಾದಿಗಳ ಸ್ವರ್ಗವಾಗುತ್ತಿರುವ ಕರ್ನಾಟಕ'

ಬೆಂಗಳೂರು: 'ತೈಲಪ, ಹೊಯ್ಸಳರಾಳಿದ ನಾಡು, ಡಂಕಣ ಜಕಣರ ನೆಚ್ಚಿನ ಬೀಡಾಗಿದ್ದ ಕರ್ನಾಟಕವನ್ನು ಕಾಂಗ್ರೆಸ್ ಪಕ್ಷ ಜಿಹಾದಿಗಳ ಸ್ವರ್ಗವನ್ನಾಗಿಸುತ್ತಿದೆ' ಎಂದು ಬಿಜೆಪಿ ಹೇಳಿದೆ.

ಈ ಕುರಿತು ಸರಣಿ 'ಎಕ್ಸ್' ಮಾಡಿರುವ ಬಿಜೆಪಿ, 'ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಾಲ್ಕೇ ತಿಂಗಳಲ್ಲಿ, ರಾಜ್ಯದಲ್ಲಿ ಜಿಹಾದಿಗಳ ಅಟ್ಟಹಾಸ ಮಿತಿ ಮೀರಿದೆ. ಮಲಗಿದ್ದ ಸ್ಲೀಪರ್ ಸೆಲ್‌ಗಳೆಲ್ಲಾ ಎದ್ದು ನಿಂತಿವೆ. ಈ ನೆಲದ ಕಾನೂನಿಗೆ ಗೌರವ ನೀಡದೇ, ಪೊಲೀಸರನ್ನು ಕಂಡರೆ ಭಯವಿಲ್ಲದೇ ರಾಜಾರೋಷವಾಗಿ ವಿಧ್ವಂಸಕ ಕೃತ್ಯಗಳನ್ನು ನಡೆಸುತ್ತಿದ್ದಾರೆ' ಎಂದು ತಿಳಿಸಿದೆ.

'ಹಿಂದೂಗಳಿಗೆ ಚೌತಿ ಸಮಯದಲ್ಲಿ ಗಣೇಶ ಪ್ರತಿಷ್ಠಾಪನೆಗೆ ನೂರೆಂಟು ಕಟ್ಟುಪಾಡು, ಷರತ್ತುಗಳನ್ನು ವಿಧಿಸುವ, ಬಾಂಡ್‌ಗಳನ್ನು ಕೇಳುವ ಕಾಂಗ್ರೆಸ್ ಸರ್ಕಾರ, ಶಿವಮೊಗ್ಗ ಮತ್ತು ಕೋಲಾರದಲ್ಲಿ ದ್ವೇಷಪೂರಿತ ಬರಹಗಳನ್ನು ಹೊಂದಿರುವ, ತಲ್ವಾರ್ ಮಾದರಿಯ ಕಮಾನುಗಳು, ಟಿಪ್ಪು, ಔರಂಗಜೇಬ್‌ನಂತಹ ಹಿಂದೂ ವಿರೋಧಿಗಳ ಕಟೌಟ್ ಹಾಕಲು ಯಾವುದೇ ಷರತ್ತುಗಳಿಲ್ಲದೇ ಅನುಮತಿ ನೀಡುತ್ತದೆ. ಇದು ಸರ್ಕಾರದ ಹಿಂದೂ ವಿರೋಧಿ ರಾಜಕಾರಣಕ್ಕೆ ಸ್ಪಷ್ಟ ಉದಾಹರಣೆ' ಎಂದು ಬಿಜೆಪಿ ಹೇಳಿದೆ. 'ಜಿಹಾದಿಗಳಿಗೆ ಈ ರೀತಿ ಕಾನೂನನ್ನು ಕೈಗೆತ್ತಿಕೊಳ್ಳುವ 'ಶಕ್ತಿ' ಒದಗಿಸಿದ್ದೇ ಕಾಂಗ್ರೆಸ್ ಸರ್ಕಾರ. ಜಿಹಾದಿಗಳು ಎಂತಹ ದೇಶದ್ರೋಹಿ ಕೃತ್ಯದಲ್ಲಿ ಭಾಗಿಯಾಗಿದ್ದರೂ ಅವರಿಗೆ ಅಮಾಯಕರು ಎಂಬ ಪಟ್ಟ ಕಟ್ಟಲು ಸರ್ಕಾರದಲ್ಲಿರುವ ಸಚಿವರೊಳಗೇ ಪೈಪೋಟಿ ಆರಂಭವಾಗುತ್ತದೆ' ಎಂದು ತರಾಟೆಗೆ ತೆಗೆದುಕೊಂಡಿದೆ.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_TATA Ace
YOM – 2015
Reg No – KA07BN9840
2) CB_MARUTI SUPER CARRY
YOM – 2022
Reg No – un reg
3) CB_AL_BADA_DOST
YOM – 2022
Reg No – KA14C4360
4) CB_BHARAT_BENZ_1917R_GOODS_CHASSIS
YOM – 2023, Reg No – un reg
5) TATA MOTORS LTD. - CB_TATA Ace, YOM – 2022
Reg No – KA02AJ0618
6) CB_LPT_1512_CABIN_CHASIS_TATAMOTORS, YOM – 2022
Reg No – KA705495
7) CB_MARUTI SUPER CARRY
YOM – 2022
Reg No – KA09AA1343
8) CB_BACKHOE_LOADER_JCB_3DX_JCB
YOM – 2021
Reg No – KA06MA0887
9) CB_PRO_2095_B_14_N_AB_PKN9PS_HSD_EICHR_VECV
YOM – 2022
Reg No – KA01AM9825
10) TATA MOTORS LTD. - TATA1212
YOM – 2020
Reg No – KA16D8125

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 04.10.2023
(Please note that closing Auction date would not be a Weekly off / Holiday).

BRANCH ADDRESS:
KOTAK MAHINDRA BANK LTD.,
22, MG ROAD, BANGALORE,
KARNATAKA – 560001
OR
Contact: Muzzammilkhan N
Kotak Mahindra Bank Ltd.
Contact / 080 - 61564205

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು–560 029. ಫೋನ್ 25536625, 25536789

IFT NO. ಕಹಾಮ/ಅಭಿ/ಸಿಎಫ್‌ಪಿಹೆಚ-ಬಾಯ್ಲರ್ ದುರಸ್ತಿ/1768/2023–24 ದಿನಾಂಕ: 03–10–2023

ಇ–ಪ್ರೋಕ್ಯೂರ್‌ಮೆಂಟ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರ ಹಾಲು ಮಂಡಳದ ಇ–ಪ್ರೋಕ್ಯೂರ್‌ಮೆಂಟ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಸರಬರಾಜು ಹಾಗೂ ಚಾಲನೆಗೊಳಿಸುವ ಕೆಲಸಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ಹಾಸನದ ಪಶು ಆಹಾರ ಘಟಕದಲ್ಲಿ ಬಾಯ್ಲರ್ ಟ್ಯೂಬ್‌ಗಳ ಬದಲಾವಣೆ ಹಾಗೂ ಸಂಬಂಧಿಸಿದ ಮತ್ತಿತರೆ ಕೆಲಸಗಳು	1 ಜಾಬ್	17,500/–	1 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 04–10–2023 ರಿಂದ 13–10–2023 ರ ಸಾಯಂಕಾಲ 4:00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13–10–2023 ಸಾಯಂಕಾಲ 4:00 ಗಂಟೆಯವರೆಗೆ.
3. ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: 16–10–2023ರಂದು ಸಾಯಂಕಾಲ 4:30 ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/–
ನಿರ್ದೇಶಕರು (ಅಭಿಯಂತರ–2)

ಮೈಸೂರು ಅರಮನೆ ಮಂಡಳಿ, ಮೈಸೂರು

ಕಾರ್ಯನಿರ್ವಾಹಕ ಅಧಿಕಾರಿರವರ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರು
ದೂರವಾಣಿ: 0821–2421051. ಇಮೇಲ್: ddmysorepalace@gmail.com

ಸಂಖ್ಯೆ:ಕಾನಿಅ/ಅಮಂ/ಉನಿ/ಸಕಾಇಂ/ವಿದ್ಯುತ್/ಟೆಂಡರ್ ಸಂಖ್ಯೆ:10/2023–24 ದಿನಾಂಕ:03.10.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರು "ದಸರಾ–2023ರ ಜಂಬೂ ಸವಾರಿ ಮೆರವಣಿಗೆಗೆ ಅಗತ್ಯವಿರುವ ದಸರಾ ಸಾಂಪ್ರದಾಯಿಕ ಉಡುಗೆ ಹಾಗೂ ಬಿರುದುಗಳನ್ನು ಮೈಸೂರು ಅರಮನೆ ಮಂಡಳಿಗೆ ಖರೀದಿಸುವ" ಸಂಬಂಧದ 03 ಸಂಖ್ಯೆ ಕೆಲಸಗಳಿಗೆ ನೋಂದಾಯಿತ ಅರ್ಹ ಗುತ್ತಿಗೆದಾರರು/ಏಜೆನ್ಸಿ/ಸಂಸ್ಥೆಯವರಿಂದ ಟೆಂಡರ್‌ಅನ್ನು ಏಕಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ. (1) ವಿದ್ಯುನ್ಮಾನ (ಇ–ಟೆಂಡರ್) ವ್ಯವಸ್ಥೆ ಮುಖಾಂತರ ಮಾತ್ರ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ:10–10–2023 ಸಂಜೆ 18.00 ಗಂಟೆಯವರೆಗೆ.** (2) ಟೆಂಡರ್ ತೆರೆಯುವ **ದಿನಾಂಕ ಮತ್ತು ಸಮಯ:12–10–2023 ಬೆಳಿಗ್ಗೆ 11.00 ಗಂಟೆಯ ನಂತರ.** (3) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ ರೂ.19.38 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ. 10.81 ಲಕ್ಷಗಳು, ಟೆಂಡರ್‌ನ ನಿಬಂಧನೆಗಳು, ಷರತ್ತುಗಳು ಹಾಗೂ ಕಾಮಗಾರಿಯ ಹೆಚ್ಚಿನ ವಿವರಗಳಿಗೆ https://www.kppp.karnataka.gov.in ಅಂತರ್ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/–ಉಪ ನಿರ್ದೇಶಕರು
ಮೈಸೂರು ಅರಮನೆ ಮಂಡಳಿ, ಮೈಸೂರು

DIPR/MYS/KAVITA/458/2023-24

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ)

(ಕರ್ನಾಟಕ ಸರ್ಕಾರದ ನೋಂದಾಯಿತ ಸಂಸ್ಥೆ)
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ-ಅಟ್ಟೂರು ಲೇಔಟ್ ಹತ್ತಿರ, ಬೆಂಗಳೂರು - 560 064. ದೂರವಾಣಿ : 080 - 6735 5000.

ಸಂಖ್ಯೆ : ಕ.ರಾ.ನೈ.ವಿ.ಉ.ಕೇ./ಎ.ಸಿ.ಟಿ./13/2020 ದಿನಾಂಕ : 03–10–2023

ಇ–ಟೆಂಡರ್ ಅಧಿಸೂಚನೆ

ಈ ಕಛೇರಿಯು ಕೆಳಕಂಡ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮುಖಾಂತರ ಆಹ್ವಾನಿಸಿರುತ್ತದೆ.

1) ಟೆಂಡರ್ ಸಂಖ್ಯೆ : KSNDMC/2023-24/SE0005 - ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಸಿಬ್ಬಂದಿಗೆ ಅರೋಗ್ಯ ವಿಮೆ ನೀಡಲು.

2) ಟೆಂಡರ್ ಸಂಖ್ಯೆ : KSNDMC/2023-24/SE0006 - ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ – ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದಲ್ಲಿ ರಿವಾರ್ಡ್ ಯೋಜನೆಯ ಸಹಾಯ ವಾಣಿ ಸಲುವಾಗಿ ಮಾನವ ಸಿಬ್ಬಂದಿ ಗುತ್ತಿಗೆ ಆಧಾರದ ಮೇರಿಗೆ ಸೇವೆ ನೀಡಲು.

3) ಟೆಂಡರ್ ಸಂಖ್ಯೆ : KSNDMC/2023-24/IND0001 - ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರಕ್ಕೆ ಸರ್ವರ್, ಡೆಸ್ಕ್‌ಟಾಪ್ ಕಂಪ್ಯೂಟರ್ ಮತ್ತು ವರ್ಕ್ ಸ್ಟೇಷನ್ ಕಂಪ್ಯೂಟರ್ ಸರಬರಾಜು ಹಾಗೂ ಅವುಗಳ ನಿರ್ವಹಣೆ ಮಾಡಲು, ಯಂತ್ರಗಳನ್ನು ಸರಬರಾಜು ಮಾಡಿ, ಸ್ಥಾಪಿಸಿ ಹಾಗೂ ಐದು ವರ್ಷ ನಿರ್ವಹಣೆ ಮಾಡಲು.

ಈ ಟೆಂಡರ್ ಸಂಬಂದಿಸಿದ ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ "www.kppp.karnataka.gov.in" ಪಡೆಯಬಹುದು.

ಸಹಿ/– ನಿರ್ದೇಶಕರು.

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ನಂ. 16–ಡಿ, 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052.

ಸಂಖ್ಯೆ: ಕ.ಮ.ಮಾ.ಅ.ನಿ/ಕ್ರಿ.ಯೋ/ಸಿ.ಆರ್–03/2023–24 ದಿನಾಂಕ:03/10/2023.

ಪ್ರಕಟಣೆ

2023–24ನೇ ಸಾಲಿಗೆ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಿಗೆ ಅರ್ಜಿ ಆಹ್ವಾನ

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದಿಂದ 2023–24ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಹಾಗೂ ಈ ಯೋಜನೆಗಳಡಿ ಸಹಾಯಧನ/ಸಾಲ–ಸೌಲಭ್ಯವನ್ನು ಪಡೆಯಲು ಇಚ್ಛಿಸುವವರು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಸೇವಾಸಿಂಧು ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 03/11/2023. (ಶೈಕ್ಷಣಿಕ ಸಾಲ ಯೋಜನೆಗಳಿಗೆ ಕೊನೆ ದಿನಾಂಕ ಇರುವುದಿಲ್ಲ)

ಅರ್ಜಿ ಸಲ್ಲಿಸಲು ಇರಬೇಕಾದ ಸಾಮಾನ್ಯ ಅರ್ಹತೆಗಳು

1. ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
2. ನಿಗಮದ ಯೋಜನೆಗಳಲ್ಲಿ ಸೌಲಭ್ಯಗಳನ್ನು ಪಡೆಯಲು ಇಚ್ಛಿಸುವವರು ಸರ್ಕಾರದ ಆದೇಶ ಸಂಖ್ಯೆ:ಸಕಇ/225/ಬಿಸಿಎ/2000 ದಿನಾಂಕ:30/03/2002ರನ್ವಯ ಮಡಿವಾಳ ಹಾಗೂ ಅದರ ಉಪ ಜಾತಿಗಳಿಗೆ ಸೇರಿರಬೇಕು.
3. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಕಡ್ಡಾಯವಾಗಿರುತ್ತದೆ.
4. ವಯೋಮಿತಿ 18 ವರ್ಷಗಳಿಂದ 55 ವರ್ಷಗಳ ಮಿತಿಯಲ್ಲಿರಬೇಕು.
5. ನಿಗಮದ/ಸರ್ಕಾರದ ಯಾವುದಾದರೂ ಯೋಜನೆಗಳಡಿ ಈ ಹಿಂದೆ ಸೌಲಭ್ಯ ಪಡೆದಿರಬಾರದು.
6. ಕುಟುಂಬದ ಒಬ್ಬರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು.
7. ಅರಿವು ಯೋಜನೆಯಡಿ ವಯೋಮಿತಿ 18 ವರ್ಷಗಳಿಂದ 30 ವರ್ಷಗಳ ಮಿತಿಯಲ್ಲಿರಬೇಕು ವಾರ್ಷಿಕ ವರಮಾನ ರೂ.3.50/–ಲಕ್ಷಗಳು.
8. ಸ್ವಾವಲಂಬಿ ಸಾರಥಿ ಯೋಜನೆಯಡಿ ಅರ್ಜಿದಾರರು 21 ವರ್ಷ ಮೇಲ್ಪಟ್ಟು 45 ವರ್ಷದ ಮಿತಿಯಲ್ಲಿರಬೇಕು.
9. ಅರ್ಜಿದಾರರು ತಮ್ಮ ಮೊಬೈಲ್ ಸಂಖ್ಯೆಯನ್ನು ಹಾಗೂ ಬ್ಯಾಂಕ್ ಖಾತೆಯನ್ನು ತಮ್ಮ ಆಧಾರ್ ಸಂಖ್ಯೆಗೆ ಜೋಡಣೆ ಮಾಡಿರಬೇಕು.
10. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ರೂ. 98,000/– ಮತ್ತು ನಗರ ಪ್ರದೇಶದವರಿಗೆ ರೂ. 1,20,000/–ಗಳ ಮಿತಿಯೊಳಗಿರಬೇಕು. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಯೋಜನೆಯಲ್ಲಿ ಅರ್ಜಿಸಲ್ಲಿಸುವವರ ವಾರ್ಷಿಕ ವರಮಾನವು ರೂ. 8.00/– ಲಕ್ಷಗಳ ಮಿತಿಯಲ್ಲಿರಬೇಕು.
11. ಆಯ್ಕೆ ಮಾಡುವಾಗ ಮಹಿಳೆಯರಿಗೆ 33%, ವಿಕಲಚೇತನರಿಗೆ 5% ಹಾಗೂ ತೃತೀಯ ಲಿಂಗಿಗಳಿಗೆ ಶೇ1% ಮೀಸಲಾತಿ ಇರಿಸಿದೆ.

ರಾಜ್ಯ ಸರ್ಕಾರದ/ನಿಗಮದ ಯೋಜನೆಗಳ ವಿವರ

ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸುವ ಯೋಜನೆಗಳು:

1) ಸ್ವಯಂ ಉದ್ಯೋಗ ನೇರಸಾಲ ಯೋಜನೆ
2) ಗಂಗಾ ಕಲ್ಯಾಣ ಯೋಜನೆ. ಈ ಯೋಜನೆಯಲ್ಲಿ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು ಇತರೇ ಜಿಲ್ಲೆಗಳಲ್ಲಿ ಕನಿಷ್ಠ 2 ಎಕರೆ ಹೊಂದಿರಬೇಕು.
3) ಅರಿವು–ಶೈಕ್ಷಣಿಕ ನೇರಸಾಲ ಯೋಜನೆ (ಹೊಸತು)
4) ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ
5) ಸ್ವಾವಲಂಬಿ ಸಾರಥಿ ಯೋಜನೆ.
6) ಸ್ವಯಂ ಉದ್ಯೋಗ ಸಾಲ ಯೋಜನೆ (ವಾಣಿಜ್ಯ ಬ್ಯಾಂಕ್‌ಗಳ ಸಹಯೋಗದೊಂದಿಗೆ)

- ಅರ್ಜಿ ಸಲ್ಲಿಸುವಾಗ ಅರ್ಜಿದಾರರು ಕಡ್ಡಾಯವಾಗಿ ಆಧಾರ್ ಕಾರ್ಡ್‌ನಲ್ಲಿರುವಂತೆ ಅರ್ಜಿದಾರರ ಹೆಸರು/ವಿಳಾಸ/ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ಬ್ಯಾಂಕ್ ಪಾಸ್ ಪುಸ್ತಕಗಳಲ್ಲಿ ತಾಳೆಯಾಗಬೇಕು (ಶ್ರೀ /ಶ್ರೀಮತಿ /ಕುಮಾರಿ ಮುಂತಾದ ಮಾಹಿತಿಗಳು)
- ಬೆಂಗಳೂರು–ಒನ್/ಕರ್ನಾಟಕ–ಒನ್/ಅಟಲ್–ಜಿ, ಜನಸ್ನೇಹಿ ಕೇಂದ್ರ ಮತ್ತು ನಾಗರೀಕ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಸೇವಾಸಿಂಧು ಪೋರ್ಟಲ್‌ನಡಿ ಅರ್ಜಿಯನ್ನು ಸಲ್ಲಿಸಲು ತಿಳಿಸಿದೆ.
- ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್: www.kmmd.karnataka.gov.in ರಲ್ಲಿ ಅಥವಾ ನಿಗಮದ ಕೇಂದ್ರ ಕಛೇರಿಯ ದೂರವಾಣಿ/ಸಹಾಯವಾಣಿ ಸಂಖ್ಯೆ:080–22374832 ಮತ್ತು 8050770004 ಅಥವಾ 8050770005ಯಿಂದ ಪಡೆಯಬಹುದಾಗಿದೆ. ಹಾಗೂ ಜಿಲ್ಲೆಗಳಲ್ಲಿ ನಿಗಮದ ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಛೇರಿಗಳಲ್ಲಿ ಪೂರ್ವಾಹ್ನ 10.00ರಿಂದ ಸಂಜೆ 5.30 ರವರೆಗೆ ಸಂಪರ್ಕಿಸಬಹುದಾಗಿದೆ.

ಸೇವಾಸಿಂಧು ತಂತ್ರಾಂಶದ ಮೂಲಕ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.11.2023 ಆಗಿದ್ದು, ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ಸಹಿ/–
ಡಾ॥ ಸಿ.ಕೆ. ಜಗದೀಶ್‌ಕುಮಾರ್
ವ್ಯವಸ್ಥಾಪಕ ನಿರ್ದೇಶಕರು, ಕೆಎಂಎಂಡಿಸಿ.

ವಾಸಾಸಂಇ/ವಾಪ್ರ/ಜೆಎ/1534/2023–24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ, ಬೆಳಗಾವಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿ, ಬೆಳಗಾವಿ

ಫೋ.ನಂ:0831–2407241 ಫ್ಯಾಕ್ಸ್:0831–2407242 E-mail:dhobelgaum@gmail.com

ಸಂ:ಇ–ಟೆಂಡರ/25 /2023–24 ದಿನಾಂಕ: 03.10.2023

ಇ–ಪ್ರೊಕ್ಯೂರಮೆಂಟ್ ಮೂಲಕ ಟೆಂಡರ ಆಹ್ವಾನ

ವಿಷಯ;2023–24 ನೇ ಸಾಲಿಗೆ ಬೆಳಗಾವಿ ಜಿಲ್ಲೆಯ ಎಲ್ಲ ಪ್ರಾ.ಆ. ಕೇಂದ್ರ ಸ.ಅ.ಕೇಂದ್ರ/ ಸಾರ್ವಜನಿಕ ಆಸ್ಪತ್ರೆಗಳಿಗೆ ಗ್ರೂಪ್'ಡಿ'ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಅಡಿ ಪಡೆಯಲು ಟೆಂಡರ ಕರೆಯುವ ಕುರಿತು.
ಉಲ್ಲೇಖ: ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ, ಇವರ ಟಿಪ್ಪಣೆ ಅನುಮೋದನೆ ದಿ:13.07.2023

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, 2023–24 ನೇ ಸಾಲಿಗೆ ಬೆಳಗಾವಿ ಜಿಲ್ಲೆಯ ಎಲ್ಲ ಪ್ರಾ.ಆ.ಕೇಂದ್ರ / ಸ.ಅ.ಕೇಂದ್ರ/ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಖಾಲಿ ಇರುವ ಅವಶ್ಯಕತೆಗೆ ತಕ್ಕಂತೆ ಗ್ರೂಪ್ 'ಡಿ' ಸೇವೆಯನ್ನು ಹೊರಗುತ್ತಿಗೆ ಅಡಿ ಪಡೆಯುವ ಕುರಿತು ನೊಂದಾಯಿತ ಸಂಸ್ಥೆಗಳಿಂದ ದ್ವಿಲಕೋಟೆ ಪದ್ಧತಿಯಲ್ಲಿ ಇ–ಟೆಂಡರ ಆಹ್ವಾನಿಸಲಾಗಿದೆ. ಟೆಂಡರ ಫಾರ್ಮಗಳನ್ನು ಹಾಗೂ ನಿಬಂಧನೆಗಳನ್ನೊಳಗೊಂಡ ಟೆಂಡರ ಪುಸ್ತಕವನ್ನು ದಿನಾಂಕ:03.10.2023 ರಿಂದ ದಿ:01.11.2023 ರವರೆಗೆ ಸಾಯಂಕಾಲ 4.00 ಗಂಟೆ ಒಳಗಾಗಿ ಇ–ಪ್ರೊಕ್ಯೂರಮೆಂಟ್ ವೆಬಸೈಟ್ www.kppp.karnataka.gov.in ದಲ್ಲಿ ಇ–ಪೋರ್ಟಲ್ ನಿಗದಿಪಡಿಸಿದ ಶುಲ್ಕದೊಂದಿಗೆ ಪಡೆಯಬಹುದು. ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ದಿ:02.11.2023 ರ ಸಾಯಂಕಾಲ 4.00 ಗಂಟೆವರೆಗೆ ಇ–ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬಹುದು. ಸ್ವೀಕರಿಸಿದ ಟೆಂಡರಗಳನ್ನು ದಿ:03.11.2023 ರಂದು ಮದ್ಯಾಹ್ನ 4.00 ಗಂಟೆಗೆ ಟೆಂಡರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು (0831–2407241) 95359032733 ಜಿಲ್ಲಾ ಆರೋಗ್ಯ ಮತ್ತು ಕು.ಕ.ಕಚೇರಿ, 2ನೇ ರೇಲ್ವೆ ಗೇಟ್, ಟಿಳಕವಾಡಿ.ಬೆಳಗಾವಿ ಇಲ್ಲಿ ಪಡೆಯಬಹುದು.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು,
ಬೆಳಗಾವಿ

DIPR/BGM/RO-NO-470/KSMCA/2023-24

ಸುವರ್ಣ ಕರ್ನಾಟಕ
ಕರ್ನಾಟಕ ಸರಕಾರ
ಸತ್ಯಮೇವ ಜಯತೇ

ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಛೇರಿ, ಜಿಲ್ಲಾ ಆಸ್ಪತ್ರೆ, ಧಾರವಾಡ.

ಆರೋಗ್ಯವೇ ಭಾಗ್ಯ

ದೂರವಾಣಿ ಸಂಖ್ಯೆ: 0836–2741277, 0836–2748374
E-Mail I.D.: dsdharwad hfws@karnataka.gov.in, dsdharwad@gmail.com

ಕ್ರ:ಜಿಆಧಾ/ಡಿಎಚ್‌ಡಿ/ಟೆಂಡರ/ಕ್ಯಾಂಟೀನ/21/2023–24. ದಿನಾಂಕ: 03–10–2023.

ಟೆಂಡರ ಪ್ರಕಟಣೆ

ವಿಷಯ : ಧಾರವಾಡ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ 2023–24ನೇ ಸಾಲಿಗಾ ಗಿರಿಯಾಯಿತಿ ದರದಲ್ಲಿ ಕ್ಯಾಂಟೀನ ನಿರ್ವಹಣೆಗಾಗಿ Tender No DHFWS/2023-24/SE0345 ಇ–ಟೆಂಡರ ಆಹ್ವಾನಿಸುವ ಕುರಿತು.

ಧಾರವಾಡ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಸುಸಜ್ಜಿತವಾದ ಉಪಹಾರ ಗೃಹದಕಟ್ಟಡವನ್ನು ನಿರ್ಮಾಣ ಮಾಡಲಾಗಿದ್ದು ಸದರ ಉಪಹಾರ ಗೃಹದ ನಿರ್ವಹಣೆಗಾಗಿ (ರಿಯಾಯಿತಿ ದರದಲ್ಲಿ) ಅರ್ಹ ಮತ್ತು ಆಸಕ್ತ ಸಂಸ್ಥೆಯವರಿಂದ **Tender No DHFWS/2023-24/SE0345** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000ರ ಪ್ರಕಾರ ದ್ವೀ–ಬಿಡ್ (**Technical and financial**) ಪದ್ಧತಿಯಲ್ಲಿ ಟೆಂಡರ (ಇ–ಟೆಂಡರ) ಆಹ್ವಾನಿಸಲಾಗಿದೆ.

1)	ಇ–ಪೋರ್ಟಲ್‌ದಲ್ಲಿ ಅಪ್ ಲೋಡ್ ಮಾಡುವ ದಿನಾಂಕ	03.10.2023ರಿಂದ 18.10.2023 ವರೆಗೆ ಸಾಯಂಕಾಲ 04.00 ಗಂಟೆಯವರೆಗೆ.
2)	ತಾಂತ್ರಿಕ ಬಿಡನ್ನು ತೆರೆಯುವ ದಿನಾಂಕ	21.10.2023 ರಂದು ಬೆಳಿಗ್ಗೆ:11.00 ಗಂಟೆಗೆ.
3)	ಆರ್ಥಿಕ ಬಿಡನ್ನು ತೆರೆಯುವ ದಿನಾಂಕ	26.10.2023 ರಂದು ಬೆಳಿಗ್ಗೆ:11.00 ಗಂಟೆಗೆ.

ಟೆಂಡರಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ಇ–ಪ್ರಕ್ಯೂರಮೆಂಟ ವೆಬ್‌ಸೈಟ (www.kppp.karnataka.gov.in)ದಿಂದ ಪಡೆಯಬಹುದು ಅಥವಾ ಕಚೇರಿ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು
ಜಿಲ್ಲಾ ಆಸ್ಪತ್ರೆ, ಧಾರವಾಡ

ವಾ.ಸಾ.ಇ./ಧಾರವಾಡ/333/2023–24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ರಾಜ್ಯ ಪೋಲಿಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
#59, ರಿಚ್‌ಮಂಡ್ ರಸ್ತೆ, ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ, ಬೆಂಗಳೂರು – 560025.
ದೂರವಾಣಿ ಸಂಖ್ಯೆ: 080–25584102/25594893 ವೆಬ್‌ಸೈಟ್: www.ksphc.org
ಇ–ಮೇಲ್: eecontractksphc@gmail.com

ಸಂ: ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಸಿಎನ್‌ಟಿ/ಟಿಎನ್‌ಡಿ/03/2023–24/263 ದಿನಾಂಕ: 03.10.2023

ಟೆಂಡರ್‌ಗಾಗಿ ಆಹ್ವಾನ

ಕೆಎಸ್‌ಪಿಹೆಚ್ & ಐಡಿಸಿಎಲ್ ಕೆಟಿಟಿಪಿ 2000 ಕಾಯ್ದೆಯ ಪ್ರಕಾರ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಕೆಡಬ್ಲ್ಯೂ–4ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in (ದ್ವಿ ಟೆಂಡರ್ ದಸ್ತಾವೇಜು ಪದ್ಧತಿ) ಮೂಲಕ ಈ ಕೆಳಕಂಡ ಕಾಮಗಾರಿಗಳಿಗಾಗಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಿದೆ.

1. ಉತ್ತರಕನ್ನಡ ಜಿಲ್ಲೆಯ ಜೋಯಿಡಾದಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ. (ಎಪಿಟಿ ರೂ.227.10 ಲಕ್ಷಗಳು)
2. ಬೆಂಗಳೂರು ನಗರ ಜಿಲ್ಲೆಯ ಜಕ್ಕೂರು ನಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ. (ಎಪಿಟಿ ರೂ.230.00 ಲಕ್ಷಗಳು)
3. ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ದಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ. (ಎಪಿಟಿ ರೂ.230.00 ಲಕ್ಷಗಳು)
4. ಗದಗ ಜಿಲ್ಲೆಯ ಶಿರಹಟ್ಟಿ ಯಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ. (ಎಪಿಟಿ ರೂ.227.10 ಲಕ್ಷಗಳು)
5. ಉತ್ತರಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ. (ಎಪಿಟಿ ರೂ.227.10 ಲಕ್ಷಗಳು)
6. ಕೋಲಾರ ಜಿಲ್ಲೆ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ. (ಎಪಿಟಿ ರೂ.230.54 ಲಕ್ಷಗಳು)
7. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ. (ಎಪಿಟಿ ರೂ.230.55 ಲಕ್ಷಗಳು)

ಇಚ್ಛೆಯುಳ್ಳ ಮತ್ತು ಅರ್ಹತೆವುಳ್ಳ ಗುತ್ತಿಗೆದಾರರು ಇ–ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ವಿವರಗಳಾದ ಟೆಂಡರ್ ಶುಲ್ಕ, ಇಎಂಡಿ, ಟೆಂಡರ್ ದಾಖಲೆಗಳು, ಇತ್ಯಾದಿಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **10.10.2023** ರಿಂದ ಲಭ್ಯವಿರುತ್ತದೆ.

"ಕೆಎಸ್‌ಪಿಹೆಚ್ & ಐಡಿಸಿಎಲ್ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ."

ಸೂಚನೆ: ಯಾವುದೇ ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು–ಗುತ್ತಿಗೆ

ವಾಸಾಸಂಇ/ವಾಪ್ರ/1523/ಎಎಎ/2023–24

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
#03, 4ನೇ ಮಹಡಿ, ಎಂಬೆಸ್ಸಿ ಐಕಾನ್ ಕಟ್ಟಡ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560001
ದೂ: 080–22352525, ಫ್ಯಾಕ್ಸ್: 080–22352626

ನಂ. ಕೆ.ಟಿ.ಐ.ಎಲ್/ಯೋ–1/ಮೈ.ವಿ/50/2022–23 ದಿನಾಂಕ: 03.10.2023

ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ಪ್ರಕಾರ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ, ಇಂಜಿನಿಯರಿಂಗ್ ಘಟಕ, ಬೆಂಗಳೂರುರವರಿಂದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಅರ್ಹ ಗುತ್ತಿಗೆದಾರರಿಂದ ಇ–ಸಂಗ್ರಹಣಾ ವೇದಿಕೆ ಮೂಲಕ ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಈ ಕೆಳಕಂಡ ದಿನಾಂಕದೊಳಗೆ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಪ್ರಕಟಿಸಿದ್ದು, ಟೆಂಡರ್‌ಗೆ ಸಂಬಂಧಿಸಿದ ವೇಳಾಪಟ್ಟಿ ಮತ್ತು ಇತರೆ ಮಾಹಿತಿ ಇ–ಸಂಗ್ರಹಣೆ ವೇದಿಕೆಯಲ್ಲಿ ದಿನಾಂಕ: 04.10.2023ರಿಂದ ಲಭ್ಯವಿರುತ್ತದೆ.

ಸಂಬಂಧಿತ ಟೆಂಡರ್‌ನ ವಿವರಗಳು ಈ ಕೆಳಕಂಡಂತಿದೆ

1	ಕಾಮಗಾರಿಯ ಹೆಸರು	**ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಪ್ರಸಾದ್ ಯೋಜನೆಯಡಿಯಲ್ಲಿ ಮೈಸೂರಿನ ಶ್ರೀ ಚಾಮುಂಡೇಶ್ವರಿ ದೇವಾಲಯ ಯಾತ್ರಾಸ್ಥಳ ಅಭಿವೃದ್ಧಿಪಡಿಸುವ ಕಾಮಗಾರಿ.**
2	ಅಂದಾಜು ಮೊತ್ತ	ರೂ. 45.70 ಕೋಟಿಗಳು
3	ಬಿಡ್ ಪೂರ್ವ ಸಭೆಯ ದಿನಾಂಕ	10.10.2023, ಮಧ್ಯಾಹ್ನ 12.00 ಗಂಟೆವರೆಗೆ
4	ಬಿಡ್ ಪೂರ್ವ ಆಕ್ಷೇಪಣೆಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ	11.10.2023, ಸಂಜೆ 17.00 ಗಂಟೆವರೆಗೆ
5	ಬಿಡ್ ಸಲ್ಲಿಸಲು ಕೊನೆಯ ದಿನಾಂಕ	03.11.2023, ಸಂಜೆ 16.00 ಗಂಟೆವರೆಗೆ
6	ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ	04.11.2023, ಸಂಜೆ 17.00 ಗಂಟೆಗೆ

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurement Platform) https://kppp.karanataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು, ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು https://kppp.karnataka.gov.in ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಸದರಿ ಟೆಂಡರ್‌ನ ವಿವರಗಳು ದಿನಾಂಕ: **04.10.2023ರಿಂದ** ಇ–ಸಂಗ್ರಹಣಾ ವೇದಿಕೆಯಲ್ಲಿ ಲಭ್ಯವಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ನೊಂದಾಯಿಸುವ ಅಗತ್ಯವಿರುತ್ತದೆ.

ಟಿಪ್ಪಣಿ: (1) ಈ ಕೆಳಗೆ ಸಹಿಮಾಡಿದವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವಿಕೆ/ ಸಂಪೂರ್ಣ ರದ್ದುಗೊಳಿಸುವ/ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಟೆಂಡರ್ ಆಹ್ವಾನ ಪ್ರಾಧಿಕಾರಿ
ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ

DIPR/CP/YC/1527/2023-24

ಶೆಫರ್ಡ್ಸ್ ಇಂಡಿಯಾ– ಇಂಟರ್ ನ್ಯಾಷನಲ್ ರಾಷ್ಟ್ರೀಯ ಸಮಾವೇಶದಲ್ಲಿ ಸಿದ್ದರಾಮಯ್ಯ ಪ್ರತಿಪಾದನೆ

‘ತುಳಿತಕ್ಕೆ ಒಳಗಾದವರ ಸಮಾವೇಶ ತಪ್ಪಲ್ಲ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ತುಳಿತಕ್ಕೆ ಒಳಗಾದ ಸಮಾಜದವರ ಸಮಾವೇಶಗಳು ಸಂಘಟನಾ ಕೇಂದ್ರಿತವಾದದ್ದೇ ಹೊರತು ಜಾತಿವಾದಿ ಸಮಾವೇಶಗಳಲ್ಲ. ಎಲ್ಲಾ ಸೌಕರ್ಯ ಹೊಂದಿದವರೂ ಆಯೋಜಿಸುವಂತದ್ದು ಜಾತಿವಾದಿ ಸಮಾವೇಶಗಳು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಶೆಫರ್ಡ್ಸ್ ಇಂಡಿಯಾ– ಇಂಟರ್ ನ್ಯಾಷನಲ್ ಸಂಘಟನೆ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ 9ನೇ ರಾಷ್ಟ್ರೀಯ ಸಮಾವೇಶದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ‘ಅವಕಾಶ ವಂಚಿತರು ಸಂವಿಧಾನಬದ್ಧ ಹಕ್ಕು ಪಡೆಯಲು ಇಂಥ ಸಮಾವೇಶ ಮಾಡುವುದು ತಪ್ಪಲ್ಲ ಎಂದು ರಾಮ ಮನೋಹರ ಲೋಹಿಯಾ ಹೇಳಿದ್ದಾರೆ. ಅದನ್ನು ನಂಬಿ ನಾನು ಭಾಗವಹಿಸಿದ್ದೇನೆ’ ಎಂದರು.

‘ಸಮಾಜವಾದಿ ಎಂದು ಹೇಳಿಕೊಳ್ಳುವ ಸಿದ್ದರಾಮಯ್ಯ ಜಾತಿ ಸಮಾವೇಶದಲ್ಲಿ ಹೇಗೆ ಭಾಗವಹಿಸಿದರು ಎಂದು ಕೆಲವರು ಪ್ರಶ್ನಿಸುತ್ತಾರೆ. ನಾನು ಯಾವತ್ತೂ ಜಾತಿ ಮಾಡಿದವನಲ್ಲ, ನನ್ನ ಉಸಿರು ಇರುವವರೆಗೂ ಮಾಡುವುದಿಲ್ಲ. ನಾನು ಜಾತಿವಾದ ಮತ್ತು ಜಾತಿವಾದಿಗಳ ವಿರೋಧಿ’ ಎಂದರು.

‘ನನ್ನ ಯಾವುದೇ ಯೋಜನೆ, ಕಾರ್ಯಕ್ರಮ ಒಂದು ಜಾತಿಗೆ ಸೀಮಿತವಾಗಿಲ್ಲ ಎಂಬುದನ್ನು ವಿರೋಧಿಸುವವರು ತಿಳಿಯಬೇಕು. ಜಾತಿಗಳ ಮಧ್ಯೆ ವೈಷಮ್ಯ ಹುಟ್ಟಿಸಿ, ಧರ್ಮಗಳ ಮಧ್ಯೆ ಹುಳಿ ಹಿಂಡಿ ಅಧಿಕಾರ ನಡೆಸುವ ಜಾಯಮಾನ ನನ್ನದಲ್ಲ’ ಎಂದು ಹೇಳಿದರು.

‘ಜಾತಿ ಮಾಡುವ ಯಾವುದೇ ಮತ ನಾನು ನಂಬುವುದಿಲ್ಲ, ಬೆಂಬಲಿಸುವುದಿಲ್ಲ. ನಮ್ಮ ಕಾಗಿನೆಲೆ ಮಠ ನೋಡಿ. ಅದು ಎಲ್ಲ ಸಮಾಜದವರಿಗೂ ತೆರೆದುಕೊಂಡಿದೆ. ಅಲ್ಲಿ ಜಾತಿ ಎಂಬುದಿಲ್ಲ’ ಎಂದರು.

ಸಮಸಮಾಜದ ನಿರ್ಮಾಣ ಸಾಧ್ಯ: ‘ಅಶಕ್ತ ಸಮುದಾಯಗಳ ಜನ ಸಂಘಟಿತರಾಗದಿದ್ದರೆ, ಅಧಿಕಾರ ಹಿಡಿಯಲು ಆಗುವುದಿಲ್ಲ. ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಹಲವು ಸಮುದಾಯದವರು ಇನ್ನೂ ವಿಧಾನಸೌಧದ ಮೆಟ್ಟಿಲು ಕೂಡ ನೋಡಿಲ್ಲ. ಎಲ್ಲ ಸಮುದಾಯಗಳು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಬೆಳೆದರೆ ಮಾತ್ರ ಸಮಸಮಾಜದ ನಿರ್ಮಾಣ ಸಾಧ್ಯ’ ಎಂದರು.

ಕಾಗಿನೆಲೆ ಕನಕ ಗುರು ಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಸಿದ್ದರಾಮಾನಂದಪುರಿ ಸ್ವಾಮೀಜಿ ಹಾಗೂ ಅರ್ಜುನಾಭಾಯಿಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಸಮಾವೇಶ ಉದ್ಘಾಟಿಸಿದರು. ಸಂಘಟನೆಯ ಅಧ್ಯಕ್ಷ ಎಚ್. ವಿಶ್ವನಾಥ್ ಅಧ್ಯಕ್ಷತೆ ವಹಿಸಿದ್ದರು. ದೇಶದ ವಿವಿಧೆಡೆಯಿಂದ ಹಲವು ಜನಪ್ರತಿನಿಧಿಗಳು, ಸಮಾಜದ ಮುಖಂಡರು ಸೇರಿದ್ದರು. ಕಿತ್ತೂರು ಕರ್ನಾಟಕ ಭಾಗದ ವಿವಿಧೆಡೆಯಿಂದ ಜನ ಸಾಗರೋಪಾದಿಯಲ್ಲಿ ಹರಿದುಬಂದರು.

ಬೆಳಗಾವಿಯಲ್ಲಿ ಮಂಗಳವಾರ ನಡೆದ ಶೆಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್‌ನ 9ನೇ ರಾಷ್ಟ್ರೀಯ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೆಳ್ಳಿ ಗದೆ, ಬೆಳ್ಳಿ ಕಿರೀಟ ನೀಡಿ ಸನ್ಮಾನಿಸಲಾಯಿತು (ಎಡಚಿತ್ರ) ಸಮಾವೇಶದಲ್ಲಿ ಭಾಗವಹಿಸಿದ ಜನಸ್ತೋಮ –ಪ್ರಜಾವಾಣಿ ಚಿತ್ರಗಳು: ಏಕನಾಥ ಅಗಸಿಮನಿ

ಕುರುಬ, ಗೊಲ್ಲ, ಕೋಳಿ ಸಮಾಜಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕಿದೆ. ಕೇಂದ್ರ ಸರ್ಕಾರದ ಮೇಲೆ ನಿರಂತರ ಒತ್ತಡ ತರುತ್ತೇನೆ
ಸಿದ್ದರಾಮಯ್ಯ
ಮುಖ್ಯಮಂತ್ರಿ

ಲೋಕಸಭೆ ಚುನಾವಣೆಯಲ್ಲಿ ಬೆಳಗಾವಿ ಜಿಲ್ಲೆಯ ಒಂದು ಕ್ಷೇತ್ರದಲ್ಲಿ ಕುರುಬ ಸಮಾಜದವರಿಗೆ ಟಿಕೆಟ್ ನೀಡಲು ಪ್ರಯತ್ನ ಮಾಡಲಾಗುವುದು
ಸತೀಶ ಜಾರಕಿಹೊಳಿ
ಕಾರ್ಯಾಧ್ಯಕ್ಷ, ಕೆಪಿಸಿಸಿ

ಹಾಲುಮತ ಸಮಾಜದ ಸಂಘಟನೆ ನೋಡಿ ಕೆಲವರಿಗೆ ನಡುಕ ಹುಟ್ಟಿದೆ. ಹುಳಿ ಹಿಂಡಲು ಕೆಲವರು ಕಾಯುತ್ತಿದ್ದಾರೆ. ಎಚ್ಚರವಾಗಿರಬೇಕು
ನಿರಂಜನಾನಂದಪುರಿ ಸ್ವಾಮೀಜಿ
ಕಾಗಿನೆಲೆ ಕನಕ ಗುರು ಪೀಠ

ಸಮಾವೇಶದಲ್ಲಿ ಕೈಗೊಳ್ಳಲಾದ ನಿರ್ಣಯಗಳು

- ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು (ಜಾತಿವಾರು) ಬೇಗ ಪೂರ್ಣಗೊಳಿಸಿ ಸರ್ಕಾರಕ್ಕೆ ಸಲ್ಲಿಸಬೇಕು.
- ಕೇಂದ್ರ ಸರ್ಕಾರವು 1948ರ ಜನಗಣತಿ ಕಾಯ್ದೆಗೆ ತಿದ್ದುಪಡಿ ತಂದು, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಬೇಕು.
- ದೇಶದ 12 ಕೋಟಿಗೂ ಅಧಿಕ ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು.
- ಸಂಗೊಳ್ಳಿ ರಾಯಣ್ಣ ಅವರನ್ನು ಗಲ್ಲಿಗೇರಿಸಿದ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ನಂದಘಡವನ್ನು ರಾಷ್ಟ್ರೀಯ ಸ್ಮಾರಕ ಎಂದು ಘೋಷಿಸಬೇಕು.
- ಕೇಂದ್ರ ಸರ್ಕಾರ ಮಹಿಳೆಯರಿಗಾಗಿ ಶೇ 33ರಷ್ಟು ರಾಜಕೀಯ ಮೀಸಲಾತಿ ನೀಡಿದ್ದು ಸ್ವಾಗತಾರ್ಹ. ಇದರಲ್ಲಿ ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗಗಳ ಮಹಿಳೆಯರಿಗೂ ಕಡ್ಡಾಯ ಮೀಸಲಾತಿ ಸಿಗುವಂತೆ ಶಾಸನ ರಚಿಸಬೇಕು.
- ಅಲೆಮಾರಿ ಕುರಿಗಾಹಿ ಮಕ್ಕಳ ಆರೋಗ್ಯ, ಶಿಕ್ಷಣಕ್ಕೆ, ಅನ್ನಕ್ಕಾಗಿ ಸಂಚಾರ ಆಸ್ಪತ್ರೆ, ಸಂಚಾರಿ ಶಾಲೆ, ಸಂಚಾರಿ ಕ್ಯಾಂಟೀನ್ ವ್ಯವಸ್ಥೆ ಮಾಡಬೇಕು.
- ಕುರಿ ಮೇಯಿಸಲು ಕಂದಾಯ ಭೂಮಿ ಮೀಸಲಿಡಬೇಕು.
- ಪ್ರಕೃತಿ ವಿಕೋಪದಿಂದ, ರೋಗಗಳಿಂದ ಕುರಿಗಳು ಸತ್ತರೆ ಸೂಕ್ತ ಪರಿಹಾರ ನೀಡುವ ಯೋಜನೆ ಜಾರಿ ಮಾಡಬೇಕು.
- ಕುರಿ ಹಾಗೂ ಕುರಿಗಾಹಿಗಳ ಸಲುವಾಗಿ ₹1,000 ಕೋಟಿ ಆವರ್ತನಿಧಿ ಇಡಬೇಕು.
- ಕೇಂದ್ರದ ಒಬಿಸಿ ಪಟ್ಟಿಯನ್ನು ಮರು ವರ್ಗೀಕರಣ ಮಾಡಿ ಶಿಕ್ಷಣ ಹಾಗೂ ಉದ್ಯೋಗ ಕಲ್ಪಿಸುವಲ್ಲಿ ನಿರ್ಧಾರ ಕೈಗೊಳ್ಳಬೇಕು.
- ಪ್ರತ್ಯೇಕ ಡೊಳ್ಳು ಪ್ರಾಧಿಕಾರ ರಚಿಸಬೇಕು
- ಕುರಿ ಹಾಗೂ ಕುರಿ ಉತ್ಪನ್ನಗಳ ಮಾರಾಟಕ್ಕೆ ಕೆಎಂಎಫ್ ಮಾದರಿ ಜಾರಿಗೊಳಿಸಬೇಕು.

ಸುದ್ದಿ 2 ನಿಮಿಷ

5 ಗ್ಯಾರಂಟಿ ನಮ್ಮನ್ನು ಮಲಗಿಸಿವೆ: ಕಾಂಗ್ರೆಸ್ ಶಾಸಕ ಷಡಕ್ಷರಿ

ತಿಪಟೂರು (ತುಮಕೂರು): ‘ಐದು ಗ್ಯಾರಂಟಿಗಳು ನಮ್ಮನ್ನು ಮಲಗಿಸಿಬಿಟ್ಟಿವೆ’ ಎಂದು ತಿಪಟೂರಿನ ಕಾಂಗ್ರೆಸ್ ಶಾಸಕ ಕೆ.ಷಡಕ್ಷರಿ ಬಹಿರಂಗವಾಗಿ ಅಸಹಾಯಕತೆ ತೋಡಿಕೊಂಡಿದ್ದಾರೆ.

ನಗರದಲ್ಲಿ ಸೋಮವಾರ ನಡೆದ ಗಾಂಧಿ ಭವನ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿರುವ ಅವರು, ‘ತಿಪಟೂರು ಮತ್ತು ಮಧುಗಿರಿ ಜಿಲ್ಲೆ ಮಾಡಬೇಕು ಎಂಬ ಕೂಗು ಜೋರಾಗಿದೆ. ಆದರೆ, ಹೊಸ ಜಿಲ್ಲೆಗಳ ಬೇಡಿಕೆಗೆ ಸ್ಪಂದಿಸಲು ಸದ್ಯ ಸರ್ಕಾರದ ಬಳಿ ಹಣ ಇಲ್ಲ’ ಎಂದು ಹೇಳಿದ್ದಾರೆ.

‘ಐದು ಗ್ಯಾರಂಟಿಗಳ ಜಾರಿಯಿಂದ ಸರ್ಕಾರ ಬೊಕ್ಕಸದಲ್ಲಿ ಹಣವಿಲ್ಲ. ಈ ಗ್ಯಾರಂಟಿಗಳು ನಮ್ಮನ್ನು ಮಲಗಿಸಿಬಿಟ್ಟಿವೆ. ಹಣ ಇಲ್ಲದ ಕಾರಣ ಮುಂದಿನ ಬಜೆಟ್‌ವರೆಗೂ ಯಾವುದೇ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವಿಲ್ಲ’ ಎಂದು ಹೇಳಿದ್ದಾರೆ.

‘ತಿಪಟೂರು, ಮಧುಗಿರಿ ಹೊಸ ಜಿಲ್ಲೆ ರಚನೆ ವಿಷಯವನ್ನು ಸಚಿವರಾದ ಜಿ.ಪರಮೇಶ್ವರ, ಕೆ.ಎನ್. ರಾಜಣ್ಣ ಮತ್ತು ನಾನು ಸಮಾರಂಭವೊಂದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದೆವು. ಆಗ ಅವರು ಪರಿಶೀಲಿಸುವುದಾಗಿ ಎಂದಷ್ಟೇ ಹೇಳಿದರು. ಆಮೇಲೆ, ಏ ಸುಮ್ನಿರಯ್ಯಾ, ಹೊಸ ಜಿಲ್ಲೆಗಳಿಗೆ ಕುರ್ಚಿ, ಬೆಂಚು ಕೊಡಲೇ ಹಣ ಇಲ್ಲ ಎಂದು ಹೇಳಿದರು. ಅದ್ದರಿಂದ ಹೊಸ ಜಿಲ್ಲೆ ಸದ್ಯಕ್ಕಿಲ್ಲ’ ಎಂದು ಷಡಕ್ಷರಿ ಸಭೆಯಲ್ಲಿ ಹೇಳಿರುವ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಎಸ್‌ಟಿ ಇಲಾಖೆಗೆ ಪ್ರತ್ಯೇಕ ಸಚಿವಾಲಯ: ಬೇಡಿಕೆ

ಬೆಂಗಳೂರು: ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗೆ ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕು ಎಂದು ಪರಿಶಿಷ್ಟ ಪಂಗಡದ ಸಮಾಜದ ಮುಖಂಡರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಸಾಲಿನ ರಾಜ್ಯ ಮಟ್ಟದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಗೆ ಸಂಬಂಧಿಸಿದಂತೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ ಅವರು ಕರೆದಿದ್ದ ಸಭೆಯಲ್ಲಿ ಈ ಬೇಡಿಕೆ ಮಂಡಿಸಿದರು.

ಅಲ್ಲದೇ, ಪ್ರತಿ ಹೋಬಳಿ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಸುಸಜ್ಜಿತ ವಾಲ್ಮೀಕಿ ಭವನಗಳನ್ನು ನಿರ್ಮಿಸಬೇಕು. ರಾಜ್ಯದ ಯಾವುದಾದರೂ ಒಂದು ವಿಶ್ವವಿದ್ಯಾಲಯಕ್ಕೆ ವಾಲ್ಮೀಕಿ ಹೆಸರನ್ನಿಡಬೇಕು ಮತ್ತು ಬೆಂಗಳೂರು ನಮ್ಮ ಮೆಟ್ರೊ ಯೋಜನೆಯ ಒಂದು ನಿಲ್ದಾಣವು ಮಹರ್ಷಿ ವಾಲ್ಮೀಕಿ ನಿಲ್ದಾಣ ಎಂದು ಘೋಷಣೆ ಮಾಡಬೇಕು ಎಂದೂ ಸಭೆಯಲ್ಲಿ ಸಲಹೆ ನೀಡಿದರು.

28 ರಂದು ವಾಲ್ಮೀಕಿ ಜಯಂತಿ: ಇದೇ 28 ರಂದು ವಾಲ್ಮೀಕಿ ಜಯಂತಿಯನ್ನು ರಾಜ್ಯಮಟ್ಟದಲ್ಲಿ ಬೆಂಗಳೂರಿನಲ್ಲಿ ಅದ್ದೂರಿಯಾಗಿ ಆಚರಿಸಲಾಗುವುದು. ಅಲ್ಲದೇ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲೂ ಆಚರಣೆ ಮಾಡಲು ಈ ಹಿಂದೆ ನೀಡುತ್ತಿದ್ದ ಅನುದಾನವನ್ನು ಜಿಲ್ಲಾ ಮಟ್ಟಕ್ಕೆ ₹1 ಲಕ್ಷದಿಂದ ₹1.50 ಲಕ್ಷಕ್ಕೂ, ತಾಲ್ಲೂಕು ಮಟ್ಟದಲ್ಲಿ ₹25,000ದಿಂದ ₹35,000ಕ್ಕೆ ಹೆಚ್ಚಿಸಲಾಗುವುದು ಎಂದು ಸಚಿವ ಬಿ.ನಾಗೇಂದ್ರ ತಿಳಿಸಿದರು.

ದೇವದುರ್ಗ ಶಾಸಕಿ ಕರೆಮ್ಮ ನಾಯಕ ಮತ್ತು ಇಲಾಖಾ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಜಾತಿ ಗಣತಿ ವರದಿ ಬಿಡುಗಡೆಗೆ ಮೊಯಿಲಿ ಆಗ್ರಹ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಜಾತಿಗಣತಿ ವರದಿ ಬಿಡುಗಡೆ ಮಾಡಿದ್ದಾರೆ. ರಾಜ್ಯದಲ್ಲಿಯೂ ಸಿದ್ಧವಾಗಿರುವ ಜಾತಿಗಣತಿ ವರದಿಯನ್ನು ಸಿದ್ದರಾಮಯ್ಯ ಸರ್ಕಾರ ಬಿಡುಗಡೆ ಮಾಡಬೇಕು ಎಂದು ಕಾಂಗ್ರೆಸ್ ನಾಯಕ ಎಂ.ವೀರಪ್ಪ ಮೊಯಿಲಿ ಆಗ್ರಹಿಸಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತಿಗಣತಿ ವರದಿಯಲ್ಲಿ ಹೆಚ್ಚು ಕಡಿಮೆ ಇರಬಹುದು. ಇದನ್ನು ಸರಿಪಡಿಸಬಹುದು. ಯಾವ ಸಮಾಜಕ್ಕೆ ತೊಂದರೆ ಆಗಿದೆ, ಅದನ್ನು ಯಾವ ರೀತಿ ಸರಿ ಮಾಡಬಹುದು ಎನ್ನುವುದು ಗೊತ್ತಾಗುತ್ತದೆ. ಆದರೆ ವರದಿ ಬಿಡುಗಡೆಯೇ ಮಾಡದಿದ್ದರೆ ಹೇಗೆ ಎಂದು ಅವರು ಪ್ರಶ್ನಿಸಿದರು.

‘ಲಿಂಗಾಯತ ಅಧಿಕಾರಿಗಳಿಗೆ ಅನ್ಯಾಯ ಆಗಿಲ್ಲ’

ಶಾಮನೂರು ಶಿವಶಂಕರಪ್ಪ ಹೇಳಿಕೆ ಸುಳ್ಳು– ಕಾಂಗ್ರೆಸ್ ಶಾಸಕ ಬಸವರಾಜ ರಾಯರಡ್ಡಿ

ಪ್ರಜಾವಾಣಿ ವಾರ್ತೆ

ಬಸವರಾಜ ರಾಯರಡ್ಡಿ

ಬೆಂಗಳೂರು: ‘ಲಿಂಗಾಯತ ಅಧಿಕಾರಿಗಳಿಗೆ ಸಿದ್ದರಾಮಯ್ಯನವರ ಸರ್ಕಾರ ಅನ್ಯಾಯ ಮಾಡಿದೆ ಎಂಬುದನ್ನು ಒಪ್ಪುವುದಿಲ್ಲ’ ಎಂದು **ಕಾಂಗ್ರೆಸ್ ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.**

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಈಗಿನ ಸರ್ಕಾರದಲ್ಲಿ ಲಿಂಗಾಯತ ಅಧಿಕಾರಿಗಳ ಸ್ಥಿತಿ ನಾಯಿ ಪಾಡಾಗಿದೆ’ ಎಂಬ ಶಾಮನೂರು ಶಿವಶಂಕರಪ್ಪನವರ ಹೇಳಿಕೆ ಸುಳ್ಳು ಎಂದು ಸಾಬೀತುಪಡಿಸಲು ಜಿಲ್ಲಾಧಿಕಾರಿ ಸೇರಿದಂತೆ ಇತರ ಹುದ್ದೆಗಳಲ್ಲಿರುವ ಅಧಿಕಾರಿಗಳ ಜಾತಿವಾರು ಪಟ್ಟಿ ಬಿಡುಗಡೆ ಮಾಡಿದರು.

‘ಸಚಿವ ಸಂಪುಟ ರಚನೆ ಸಂದರ್ಭದಲ್ಲಿ ಜಾತಿ, ಪ್ರಾದೇಶಿಕತೆ ಆಧರಿಸಿ ಸಚಿವರನ್ನು ನೇಮಿಸಲಾಗಿದೆ. ಅದು ಅನಿವಾರ್ಯ ಕೂಡ. ಸಚಿವರಾಗಲು ಶಾಸಕರಾಗಿದ್ದರೆ ಸಾಕು. ಯಾವುದೇ ಅರ್ಹತೆ ಬೇಡ. ಆದರೆ, ಅಧಿಕಾರಿಗಳನ್ನು ಜಾತಿ ಆಧಾರದಲ್ಲಿ ನೇಮಿಸಲು ಮುಂದಾದರೆ ಅನರ್ಹರು ಆಯಕಟ್ಟಿನ ಜಾಗಕ್ಕೆ ಬಂದು ಕುಳಿತುಕೊಳ್ಳಬಹುದು. ಅದನ್ನು ಎಲ್ಲರೂ ತಿಳಿದುಕೊಳ್ಳಬೇಕು’ ಎಂದರು.

ರಾಜ್ಯದಲ್ಲಿ ಒಬ್ಬ ಲಿಂಗಾಯತ ಐಎಎಸ್ ಅಧಿಕಾರಿಯೂ ಜಿಲ್ಲಾಧಿಕಾರಿಯಾಗಿ ನೇಮಕವಾಗಿಲ್ಲ ಎಂದು ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ. ಆದರೆ, ರಾಜ್ಯದಲ್ಲಿ ಮೂವರು ಜಿಲ್ಲಾಧಿಕಾರಿಗಳು ಲಿಂಗಾಯತರಿದ್ದಾರೆ. ಏಳು ಮಂದಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ನಾಲ್ವರು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಇದ್ದಾರೆ. ವಿವಿಧ ವಿಶ್ವವಿದ್ಯಾಲಯಗಳಲ್ಲಿ 13 ಮಂದಿ ಕುಲಪತಿಗಳು ಲಿಂಗಾಯತರು. ಹೀಗಿರುವಾಗ ಉನ್ನತ ಹುದ್ದೆಯಲ್ಲಿ ಲಿಂಗಾಯತರಿಲ್ಲ ಎನ್ನುವುದು ಸರಿಯಲ್ಲ. ಮಾಹಿತಿ ಕೊರತೆಯಿಂದ ಶಾಮನೂರು ಶಿವಶಂಕರಪ್ಪ ಅವರು ಹೀಗೆ ಹೇಳಿರಬಹುದು’ ಎಂದು ಹೇಳಿದರು.

ಲಿಂಗಾಯತರಿಗೆ ಆದ್ಯತೆ: ರಾಜ್ಯದ 31 ಜಿಲ್ಲೆಗಳ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಶ್ರೇಣಿಯ ಹುದ್ದೆಯ 108 ಅಧಿಕಾರಿಗಳಿದ್ದಾರೆ. ಅವರ ಪೈಕಿ, ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಸೇರಿದವರು 28, ಒಬಿಸಿಯ 17, ಲಿಂಗಾಯತ 14 (ಈ ಪೈಕಿ ಮೂವರು ಜಿಲ್ಲಾಧಿಕಾರಿಗಳು), ಒಕ್ಕಲಿಗ 15, ಕುರುಬ ಸಮುದಾಯದ ಎಂಟು ಅಧಿಕಾರಿಗಳಿದ್ದಾರೆ. ಅಲ್ಲದೆ, ರಜಪೂತ, ಮರಾಠ, ಜೈನ, ಬ್ರಾಹ್ಮಣ ಸೇರಿದಂತೆ ಇತರೆ ಜಾತಿಗಳ 26 ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ’ ಎಂದು ರಾಯರಡ್ಡಿ ಮಾಹಿತಿ ನೀಡಿದರು.

ಶಾಮನೂರು ಜೊತೆ ಮಾತನಾಡುವೆ: ಸಿದ್ದರಾಮಯ್ಯ

ಬೆಳಗಾವಿ: ‘ನಮ್ಮ ಸರ್ಕಾರದಲ್ಲಿ ಲಿಂಗಾಯತರು ಸೇರಿ ಯಾರಿಗೂ ಅನ್ಯಾಯವಾಗಿಲ್ಲ. ಎಲ್ಲರಿಗೂ ನ್ಯಾಯ ಕೊಡುವ ಕೆಲಸ ಮಾಡುತ್ತಿದ್ದೇವೆ. ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುತ್ತಿದ್ದೇವೆ. ನಮ್ಮ ಪಕ್ಷದ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಜೊತೆ ಮಾತನಾಡುವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸುದ್ದಿಗಾರರಿಗೆ ತಿಳಿಸಿದರು.

ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳನ್ನು ಹಿಂಪಡೆಯುವ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪತ್ರ ಬರೆದಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಒಕ್ಕಲಿಗರ ಹೋರಾಟ ಸಮಿತಿ ನೀಡಿದ ಪತ್ರ ಆಧರಿಸಿ, ಅವರು ನನಗೆ ಪತ್ರ ಬರೆದಿದ್ದಾರೆ. ಇಂದು ಆ ಪತ್ರ ನೋಡಿದ್ದೇನೆ. ಈ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವ ಯಾವುದೇ ಪ್ರಸ್ತಾವ ನಮ್ಮ ಮುಂದಿಲ್ಲ’ ಎಂದರು.

ಬೆಳಗಾವಿ ಜಿಲ್ಲೆ ವಿಭಜನೆಗೆ ಸಂಬಂಧಿಸಿದಂತೆ ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಇದರ ಬಗ್ಗೆ ಶಾಸಕರೊಂದಿಗೆ ಚರ್ಚಿಸುವೆ’ ಎಂದರು.

ರಾಯರಡ್ಡಿ ಪಟ್ಟಿಯ ‘ಜಾತಿ’ ಲೆಕ್ಕಾಚಾರ

ಜಿಲ್ಲಾಧಿಕಾರಿಗಳು	
ಲಿಂಗಾಯತ	03
ಒಕ್ಕಲಿಗ	06
ಕುರುಬ	02
ಎಸ್‌ಸಿ/ ಎಸ್‌ಟಿ	07
ಒಬಿಸಿ	04
ಇತರೆ	09
ಒಟ್ಟು	31

ಜಿಲ್ಲಾ ಪಂಚಾಯಿತಿ ಸಿಇಒಗಳು	
ಲಿಂಗಾಯತ	4
ಒಕ್ಕಲಿಗ	3
ಕುರುಬ	1
ಎಸ್‌ಸಿ/ಎಸ್‌ಟಿ	10
ಒಬಿಸಿ	4
ಇತರೆ	9
ಒಟ್ಟು	31

ಪೊಲೀಸ್ ವರಿಷ್ಠಾಧಿಕಾರಿ ವೃಂದ	
ಲಿಂಗಾಯತ	07
ಒಕ್ಕಲಿಗ	06
ಕುರುಬ	5
ಎಸ್‌ಸಿ/ಎಸ್‌ಟಿ	11
ಒಬಿಸಿ	9
ಇತರೆ	8
ಒಟ್ಟು	46

ಅಜ್ಞಾತವಾಸಕ್ಕೆ ಕೊನೆ?

ಒಂದನೇ ಪುಟದಿಂದ...

ತಮ್ಮ ಅವಧಿ (ನ. 26) ಮುಗಿಯುವುದರೊಳಗೆ ವರದಿ ಸಲ್ಲಿಸಲು ಆಯೋಗದ ಹಾಲಿ ಅಧ್ಯಕ್ಷ ಕೆ. ಜಯಪ್ರಕಾಶ ಹೆಗ್ಡೆ ಮುಂದಾಗಿದ್ದಾರೆ. ಸರ್ಕಾರವು ಕಾಂತರಾಜ ವರದಿಯನ್ನು ಯಥಾಸ್ಥಿತಿಯಲ್ಲಿ ಸ್ವೀಕರಿಸಲಿದೆಯೇ? ಜಯಪ್ರಕಾಶ ಹೆಗ್ಡೆ ನೇತೃತ್ವದ ಆಯೋಗ ಪರಿಷ್ಕರಿಸಿದ ವರದಿಯನ್ನು ಸ್ವೀಕರಿಸಲಿದೆಯೇ ಎಂಬ ಜಿಜ್ಞಾಸೆ ಮೂಡಿದೆ.

ರಾಜ್ಯದಲ್ಲಿ ವಿವಿಧ ಸಮುದಾಯದವರ ಶೈಕ್ಷಣಿಕ, ಸಾಮಾಜಿಕ ಸ್ಥಿತಿಗತಿ, ಸರ್ಕಾರದ ಸೌಲಭ್ಯಗಳು ಎಷ್ಟರಮಟ್ಟಿಗೆ ತಲುಪಿವೆ, ಉದ್ಯೋಗದ ಸ್ಥಿತಿ ಏನು ಎಂಬ ಬಗ್ಗೆ ಅಧ್ಯಯನ ನಡೆಸಲು ಸಿದ್ದರಾಮಯ್ಯ ಈ ಹಿಂದೆ ಮುಖ್ಯಮಂತ್ರಿ ಆಗಿದ್ದಾಗ (2013–2018) ಸಮೀಕ್ಷೆ ನಡೆಸಲಾಗಿತ್ತು. ವರದಿ ತಯಾರಿಸಲು ₹158.47 ಕೋಟಿ ವೆಚ್ಚವಾಗಿದೆ. ವರದಿ ಸಿದ್ಧಗೊಳ್ಳುವ ವೇಳೆಗೆ ವಿಧಾನಸಭೆ ಚುನಾವಣೆ ಎದುರಾಗಿತ್ತು. ನಂತರ ಅಧಿಕಾರಕ್ಕೆ ಬಂದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಮತ್ತು ಬಿಜೆಪಿ ಸರ್ಕಾರ ವರದಿ ಸ್ವೀಕರಿಸಲು ಮುಂದಾಗಿರಲಿಲ್ಲ.

ಸಮೀಕ್ಷೆಯಲ್ಲಿ ಸಂಗ್ರಹಿಸಿದ್ದ ಜಾತಿಗಣತಿ ದತ್ತಾಂಶಗಳನ್ನು ಒಳಗೊಂಡ ವರದಿಗೆ ಹಿಂದಿನ ಆಯೋಗದ ಎಲ್ಲ ಸದಸ್ಯರು ಮತ್ತು ಆಯೋಗದ ಸದಸ್ಯ ಕಾರ್ಯದರ್ಶಿ ಸಹಿ ಹಾಕಿದ್ದಾರೆ. ಆದರೆ, ವರದಿಯ ಮತ್ತೊಂದು ಭಾಗವಾಗಿದ್ದ ಪ್ರವರ್ಗಗಳ ಮರು ವರ್ಗೀಕರಣದ ವರದಿಗೆ ಎಲ್ಲ ಸದಸ್ಯರು ಸಹಿ ಹಾಕಿದ್ದರೂ, ‘ಅಧಿಕೃತ ಮುದ್ರೆ’ (ಅಂದಿನ ಆಯೋಗದ ಸದಸ್ಯ ಕಾರ್ಯದರ್ಶಿ ಸಹಿ) ಬಿದ್ದಿಲ್ಲ ಎನ್ನುವುದು ನಂತರ ಬಹಿರಂಗವಾಗಿತ್ತು. ಹೀಗಾಗಿ, ಕಾಂತರಾಜ ವರದಿಯನ್ನು ಯಥಾಸ್ಥಿತಿಯಲ್ಲಿ ಹಾಲಿ ಆಯೋಗ ಸಲ್ಲಿಸಲು ಈ ತಾಂತ್ರಿಕ ಸಮಸ್ಯೆ ಇದೆ.

ಹೀಗಾಗಿ, ಹಿಂದಿನ ಆಯೋಗ ನಡೆಸಿದ್ದ ಸಮೀಕ್ಷೆಯ ದತ್ತಾಂಶಗಳನ್ನು ಬಳಸಿಕೊಂಡು ವರದಿ ಸಿದ್ಧಪಡಿಸುವಂತೆ ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗಕ್ಕೆ ಸರ್ಕಾರ ಇತ್ತೀಚೆಗೆ ನಿರ್ದೇಶನ ನೀಡಿತ್ತು. ಹೀಗಾಗಿ, ಐವರು ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಈಗಾಗಲೇ ಸಭೆಗಳನ್ನು ನಡೆಸಿದೆ. ಪ್ರವರ್ಗಗಳ ಮರು ವರ್ಗೀಕರಣ, ವರದಿಯಲ್ಲಿ ಇರಬೇಕಾದ ಶಿಫಾರಸುಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ಹಾಲಿ ಆಯೋಗ ಮತ್ತು ತಜ್ಞರು ಬುಧವಾರ (ಅ.4) ಮತ್ತೆ ಸಭೆ ನಡೆಸಲಿದ್ದಾರೆ.

ಈ ಮಧ್ಯೆ, ಕಾಂತರಾಜ ಮತ್ತು ಅವರ ಅವಧಿಯ ಆಯೋಗದ ಕೆಲವು ಸದಸ್ಯರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ತಮ್ಮ ಅವಧಿಯಲ್ಲಿ ಸಿದ್ಧಪಡಿಸಿದ್ದ ಸಮೀಕ್ಷಾ ವರದಿಯ ಪರಿಷ್ಕರಣೆಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಸರ್ಕಾರದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಜಾತಿ ಗಣತಿ ವರದಿ ಏನಾಯಿತು?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ₹180 ಕೋಟಿ ವೆಚ್ಚದಲ್ಲಿ ನಡೆದಿದ್ದ ಜಾತಿ ಗಣತಿ ವರದಿ ಏನಾಯಿತು’ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಪ್ರಶ್ನಿಸಿದರು.

‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ 2013ರಲ್ಲಿ ಶಾಶ್ವತ ಹಿಂದುಳಿದ ಆಯೋಗಕ್ಕೆ ರಾಜ್ಯದ ಜಾತಿಗಣತಿ ನಡೆಸಲು ಆದೇಶ ನೀಡಲಾಗಿತ್ತು. 2015ರಲ್ಲಿ ಜಾತಿ ಗಣತಿ ವರದಿ ಪೂರ್ಣಗೊಂಡಿತ್ತು. ಹಿಂದುಳಿದ ವರ್ಗಗಳ ಆಯೋಗ ಮನೆಮನೆಗೆ ತೆರಳಿ ಗಣತಿ ನಡೆಸಿತ್ತು. ಆಯೋಗವು ವರದಿಯನ್ನು ಇನ್ನೂ ಸರ್ಕಾರಕ್ಕೆ ಸಲ್ಲಿಸಿಲ್ಲ. ಅಂದು ಸಿದ್ದರಾಮಯ್ಯ ಅವರೇ ಆ ವರದಿಯನ್ನು ರಾಜಕೀಯ ಒತ್ತಡಗಳಿಂದ ಸ್ವೀಕರಿಸಲಿಲ್ಲ’ ಎಂದು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ದೂರಿದರು.

ಹಿಂದುಳಿದ ವರ್ಗಗಳವರಿಗೆ ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ಕಲ್ಪಿಸಲು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಮುಂದಾಗಿದ್ದಾರೆ ಎಂದಿರುವ ಚಂದ್ರು, ರಾಜ್ಯದಲ್ಲಿ ಜಾತಿ ಗಣತಿ ವರದಿ ಅನುಷ್ಠಾನ ಯಾವಾಗ ಎಂದು ಪ್ರಶ್ನಿಸಿದ್ದಾರೆ.

ಕೆಆರ್‌ಎಸ್ ಜಲಾಶಯದ ಹಿನ್ನೀರು ಪ್ರದೇಶದಲ್ಲಿ ನೀರು ಕಡಿಮೆಯಾಗಿದ್ದು ದನಗಳು ಮೇಯುತ್ತಿವೆ ಚಿತ್ರ; ವಿಶ್ವನಾಥ್ ಸುವರ್ಣ

ಕೆಆರ್‌ಎಸ್‌ಗೆ ಒಳಹರಿವು ಹೆಚ್ಚಳ

ಪ್ರಜಾವಾಣಿ ವಾರ್ತೆ

ಮಂಡ್ಯ: ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯಾಗುತ್ತಿರುವುದರಿಂದ ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಾಗಿದೆ. ಮಂಗಳವಾರ 11,800 ಕ್ಯೂಸೆಕ್ ಒಳಹರಿವು ದಾಖಲಾಗಿದ್ದು, ಜಲಾಶಯದ ನೀರಿನ ಮಟ್ಟ 99.54 ಅಡಿ ತಲುಪಿದೆ.

ನಾಲೆಗಳಿಗೆ ಹರಿಯುತ್ತಿದ್ದ ನೀರು ಸ್ಥಗಿತಗೊಳಿಸಿರುವುದರಿಂದಲೂ ಜಲಾಶಯದ ನೀರಿನ ಮಟ್ಟ ಹೆಚ್ಚಾಗಿದೆ. ಕಟ್ಟು ಪದ್ಧತಿಯಡಿ 10 ದಿನ ನಾಲೆಗಳಿಗೆ ನೀರು ಹರಿಸಿ ನಿಲ್ಲಿಸಲಾಗಿದೆ. 1,592 ಕ್ಯೂಸೆಕ್ ಹೊರಹರಿವಿದ್ದು ನೀರು ನದಿಗೆ ಹರಿದು ಹೋಗುತ್ತಿದೆ. ಅ.1ರಿಂದ ಈಚೆಗೆ ಜಲಾಶಯದಲ್ಲಿ 1.54 ಅಡಿ ನೀರು ಹೆಚ್ಚಾಗಿದೆ.

ಕಳೆದ ವರ್ಷ ಇದೇ ಸಮಯದಲ್ಲಿ ಜಲಾಶಯದ ನೀರಿನ ಮಟ್ಟ 124 ಅಡಿ ದಾಖಲಾಗಿತ್ತು. ಈಗ ನೀರಿನ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಕೆಆರ್‌ಎಸ್ ಹಿನ್ನೀರು ಪ್ರದೇಶ ಗೋಮಾಳದಂತೆ ಕಾಣುತ್ತಿದೆ. ಹಿನ್ನೀರಿಗೆ ಹೊಂದಿಕೊಂಡಿರುವ ಪ್ರದೇಶದ ಜನರು ಹಿನ್ನೀರು ಪ್ರದೇಶಕ್ಕೆ ದನ-ಕರು ಬಿಟ್ಟು ಮೇಯಿಸುತ್ತಿದ್ದಾರೆ.

ಅಂಗವಿಕಲರ ಸುಗಮ ಸಂಚಾರ ಮಾಹಿತಿ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೃಷ್ಟಿದೋಷ ಇರುವವರೂ ಸೇರಿದಂತೆ ಅಂಗವಿಕಲರ ಸುಗಮ ಸಂಚಾರಕ್ಕೆ ಕೈಗೊಳ್ಳಬಹುದಾದ ಮಾದರಿ ಸುರಕ್ಷತಾ ಕ್ರಮಗಳನ್ನು ಒಳಗೊಂಡ ಯೋಜನೆಯ ಜಾರಿಗೆ ಸಲಹೆ ನೀಡಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

‘ಅಂಗವಿಕಲರ ಸುಗಮ ಸಂಚಾರಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಬೆಂಗಳೂರಿನ ‘ಶ್ರೇಯಸ್ ಗ್ಲೋಬಲ್ ಟ್ರಸ್ಟ್ ಫಾರ್ ಸೋಷಿಯಲ್ ಕಾಸ್’ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

‘ಅಂಗವಿಕಲರಿಗೆ ಅಗತ್ಯ ಸೌಲಭ್ಯ ಕಲ್ಪಿಸುವಂತೆ ಸುಪ್ರೀಂ ಕೋರ್ಟ್ ಹಾಗೂ ಹಲವು ಹೈಕೋರ್ಟ್‌ಗಳು ಸರ್ಕಾರಗಳಿಗೆ ಈಗಾಗಲೇ ನಿರ್ದೇಶನ ನೀಡಿವೆ. ಈ ಅರ್ಜಿಯನ್ನು 2022ರ ಮೇ ತಿಂಗಳಲ್ಲಿಯೇ ಸಲ್ಲಿಸಲಾಗಿದ್ದು, ಆಕ್ಷೇಪಣೆ ಸಲ್ಲಿಸುವಂತೆ 2022ರ ಆಗಸ್ಟ್ 3ರಂದು ನೋಟಿಸ್ ಜಾರಿಗೊಳಿಸಲು ಇದೇ ನ್ಯಾಯಪೀಠ ಆದೇಶಿಸಿದೆ. ಅರ್ಜಿದಾರರ ಮನವಿ ಅತ್ಯಂತ ಗಂಭೀರವಾಗಿದ್ದರೂ ಸರ್ಕಾರ ಈತನಕ ಯಾವುದೇ ಆಕ್ಷೇಪಣೆ ಸಲ್ಲಿಸಿಲ್ಲ’ ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿ ವಿಚಾರಣೆ ಮುಂದೂಡಿತು. ಅರ್ಜಿದಾರರ ಪರ ಶ್ರೇಯಸ್ ವಾದ ಮಂಡಿಸಿದರು.

ಮನವಿ ಏನು?

‘ಓಲಾ, ಉಬರ್‌ಗಳಲ್ಲಿ ಸಂಚರಿಸುವಾಗ ಮಾರ್ಗದ ವಿವರವನ್ನು ಧ್ವನಿಯ ಮೂಲಕ ಕೇಳಿಸಿಕೊಳ್ಳಬಹುದಾಗಿದೆ. ಯಾವುದೇ ರೀತಿಯ ತೊಂದರೆ ಎದುರಾದರೆ ಸಂಬಂಧಿಕರನ್ನು ತಕ್ಷಣವೇ ಸಂಪರ್ಕಿಸಲು ವ್ಯವಸ್ಥೆ ಕಲ್ಪಿಸಲಾಗಿದೆ. ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ಜಾರಿ ಮಾಡಲಾಗಿದೆ. ಇಂತಹುದೇ ಸೌಲಭ್ಯವನ್ನು ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲೂ ಕಲ್ಪಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಪುಸ್ತಕ ಪಟ್ಟಿಗೆ ಸಿಗದ ಅನುಮೋದನೆ ● ಪ್ರಕಾಶಕರ ಸಂಕಷ್ಟ

ಖರೀದಿಯಾಗದ ಮೂರು ವರ್ಷಗಳ ಪುಸ್ತಕ

● ವರುಣ ಹೆಗಡೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಅಂತಿಮಗೊಂಡಿದ್ದ 2020ನೇ ಸಾಲಿನ ಪುಸ್ತಕಗಳ ಪಟ್ಟಿಗೆ ಈವರೆಗೂ ಸರ್ಕಾರದಿಂದ ಅನುಮೋದನೆ ದೊರೆತಿಲ್ಲ. ಇದರಿಂದಾಗಿ ಮೂರು ವರ್ಷಗಳ ಪುಸ್ತಕ ಖರೀದಿ ಪ್ರಕ್ರಿಯೆಗೆ ಹಿನ್ನಡೆಯಾಗಿದೆ.

ಈ ಯೋಜನೆಯಡಿ ಪುಸ್ತಕಗಳ ಆಯ್ಕೆಗೆ ಸಂಬಂಧಿಸಿದಂತೆ ಸರ್ಕಾರವು ಇತ್ತೀಚೆಗೆ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯನ್ನು ಪುನರ್ ರಚಿಸಿ, ಸಾಹಿತಿ ಕರೀಗೌಡ ಬೀಚನಹಳ್ಳಿ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದೆ. ಆದರೆ, ಸಾಹಿತಿ ದೊಡ್ಡರಂಗೇಗೌಡ ಅವರ ನೇತೃತ್ವದ ಹಿಂದಿನ ಪುಸ್ತಕ ಆಯ್ಕೆ ಸಮಿತಿ, ಎರಡು ವರ್ಷಗಳ ಹಿಂದೆ ಅಂತಿಮಗೊಳಿಸಿದ್ದ 2020ನೇ ಸಾಲಿನ ಪುಸ್ತಕಗಳ ಖರೀದಿ ಈವರೆಗೂ ನಡೆದಿಲ್ಲ. ಇದರಿಂದಾಗಿ 2021 ಹಾಗೂ 2022ರ ಪುಸ್ತಕಗಳ ಖರೀದಿಗೂ ಹಿನ್ನಡೆಯಾಗಿದ್ದು, ಇತ್ತೀಚಿನ ಪುಸ್ತಕಗಳು ರಾಜ್ಯದ ಗ್ರಂಥಾಲಯಗಳಲ್ಲಿ ಸಿಗದಂತಾಗಿವೆ.



ಅಂತಿಮಗೊಂಡ ಪುಸ್ತಕ ಪಟ್ಟಿಗೆ ಅನುಮೋದನೆ ನೀಡಿ, ಖರೀದಿ ಪ್ರಕ್ರಿಯೆ ನಡೆಸುವಂತೆ ಈ ಹಿಂದೆ ಪ್ರಕಾಶಕರು ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿಕೊಂಡಿದ್ದರು. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕವೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದರು. ಪುಸ್ತಕಗಳ ಖರೀದಿಗೆ ₹10 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಆದರೆ, ಆರ್ಥಿಕ ಇಲಾಖೆ ಅನುಮೋದನೆ ನೀಡದಿದ್ದುದರಿಂದ ಖರೀದಿ ಪ್ರಕ್ರಿಯೆ ನಡೆದಿಲ್ಲ. ಪ್ರಕಾಶಕರ ಸಂಘದ ನಿಯೋಗವು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರನ್ನೂ ಭೇಟಿ ಮಾಡಿ, ಪುಸ್ತಕ ಖರೀದಿಗೆ ಅಗತ್ಯ ಕ್ರಮಕೈಗೊಳ್ಳುವಂತೆ ಮನವಿ ಮಾಡಿಕೊಂಡಿದ್ದರು. ಆ ವೇಳೆ ಸಕಾರಾತ್ಮಕ ಸ್ಪಂದನೆ ದೊರೆತರೂ, ಖರೀದಿ ಪ್ರಕ್ರಿಯೆಗೆ ಚಾಲನೆ ಸಿಕ್ಕಿಲ್ಲ ಎಂದು ಪ್ರಕಾಶಕರು ದೂರಿದ್ದಾರೆ.

ಪುಸ್ತಕೋದ್ಯಮಕ್ಕೆ ಹಿನ್ನಡೆ: ಯೋಜನೆಯಡಿ ಈಗಾಗಲೇ 2021ರ ಪುಸ್ತಕಗಳ ಖರೀದಿ ಪ್ರಕ್ರಿಯೆಯೂ ನಡೆದು, 2022ರ ಪುಸ್ತಕಗಳ ಆಯ್ಕೆ ಹಾಗೂ ಖರೀದಿ ಈ ವರ್ಷ ನಡೆಯಬೇಕಾಗಿತ್ತು. ಆದರೆ, 2020ರ ಪುಸ್ತಕಗಳ ಖರೀದಿಯೇ ನಡೆಯದಿದ್ದರಿಂದ ಮುಂದಿನ ವರ್ಷಗಳ ಆಯ್ಕೆ ಪ್ರಕ್ರಿಯೆಯೂ ನಡೆದಿಲ್ಲ. ಹೀಗಾಗಿ ಇತ್ತೀಚೆಗೆ ಪ್ರಕಟವಾದ ಪುಸ್ತಕಗಳು ರಾಜ್ಯದ ಗ್ರಂಥಾಲಯಗಳನ್ನು ಸೇರಲು ಇನ್ನಷ್ಟು ದಿನಗಳು ಬೇಕಾಗಲಿವೆ.

‘ಪುಸ್ತಕ ಪ್ರಕಟಣೆ ವೆಚ್ಚ ಗಗನಕ್ಕೇರಿದೆ. ಪುಸ್ತಕಗಳ ಪುಟದ ದರವನ್ನು ಪರಿಷ್ಕರಿಸದ ಸರ್ಕಾರ, ಏಕಗವಾಕ್ಷಿ ಯೋಜನೆಯಡಿ ಪುಸ್ತಕಗಳ ಖರೀದಿ ಪ್ರಕ್ರಿಯೆಯನ್ನೂ ನಡೆಸಿಲ್ಲ. ಇದರಿಂದ ಹಲವು ಪ್ರಕಾಶಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಪುಸ್ತಕೋದ್ಯಮದಿಂದ ಹಿಂದೆ ಸರಿಯಬೇಕಾಗುತ್ತದೆ. ಇದನ್ನೇ ನಂಬಿರುವ ಹಲವು ಕುಟುಂಬಗಳು ಬೀದಿಗೆ ಬೀಳಲಿವೆ. ಆದ್ದರಿಂದ ಆಯ್ಕೆಯಾದ ಪುಸ್ತಕಗಳ ಪಟ್ಟಿಯನ್ನು ಕೂಡಲೇ ಬಿಡುಗಡೆಗೊಳಿಸಿ, ಖರೀದಿ ಪ್ರಕ್ರಿಯೆ ನಡೆಸಬೇಕು’ ಎಂದು ಪ್ರಕಾಶಕರು ಆಗ್ರಹಿಸಿದ್ದಾರೆ.

ಸಗಟು ಖರೀದಿ ಅವಲಂಬನೆ

ರಾಜ್ಯದಲ್ಲಿ ಸುಮಾರು 500 ಪ್ರಕಾಶನ ಸಂಸ್ಥೆಗಳಿವೆ. ಕೆಲವು ಲೇಖಕರು ಕೂಡ ಪ್ರಕಾಶನ ಕಾರ್ಯದಲ್ಲಿ ನಿರತರಾಗಿದ್ದಾರೆ. ಪ್ರತಿ ವರ್ಷ ಸುಮಾರು 8 ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಪ್ರಕಾಶಕರಲ್ಲಿ ಹೆಚ್ಚಿನವರು ಗ್ರಂಥಾಲಯ ಇಲಾಖೆಯ ಸಗಟು ಖರೀದಿಯನ್ನೇ ಅವಲಂಬಿಸಿದ್ದಾರೆ. ಏಕಗವಾಕ್ಷಿ ಯೋಜನೆಯಡಿ ಆಯ್ಕೆಯಾದ ಪ್ರತಿ ಶೀರ್ಷಿಕೆಯ 300 ಪ್ರತಿಗಳನ್ನು ಇಲಾಖೆಯು ಖರೀದಿಸಲಿದೆ. ಇದಕ್ಕಾಗಿ ಪ್ರತಿವರ್ಷ ₹15 ಕೋಟಿ ವೆಚ್ಚ ಮಾಡಲಾಗುತ್ತಿತ್ತು. ಆದರೆ, ಇತ್ತೀಚೆಗೆ ಖರೀದಿ ನಿಯಮಿತವಾಗಿ ನಡೆಯದಿರುವುದರಿಂದ ಸಂಕಷ್ಟಕ್ಕೆ ಸಿಲುಕಿದ್ದೇವೆ ಎನ್ನುತ್ತಾರೆ ಪ್ರಕಾಶಕರು.

ಹೆಚ್ಚಿನ ಪ್ರಕಾಶಕರು ಗ್ರಂಥಾಲಯ ಇಲಾಖೆಯ ಪುಸ್ತಕ ಖರೀದಿಯನ್ನೇ ಅವಲಂಬಿಸಿದ್ದಾರೆ. ಖರೀದಿ ವಿಳಂಬ ಮಾಡಿದಲ್ಲಿ ಪ್ರಕಾಶಕರು ಸಂಕಷ್ಟಕ್ಕೆ ಸಿಲುಕುತ್ತಾರೆ
ಪ್ರಕಾಶ್ ಕಂಬತ್ತಳ್ಳಿ
ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ

ಪುಸ್ತಕ ಪಟ್ಟಿ ಅಂತಿಮವಾದರೂ ಖರೀದಿ ನಡೆಯದಿರುವುದು ವಿಪರ್ಯಾಸ. ಪುಸ್ತಕೋದ್ಯಮಕ್ಕೆ ಹಿನ್ನಡೆಯಾಗಿದ್ದು, ಪ್ರಕಾಶಕರು ತತ್ತರಿಸಿಹೋಗಿದ್ದಾರೆ. ಓದುಗರು ಹೊಸ ಪುಸ್ತಕಗಳಿಂದ ವಂಚಿತರಾಗುತ್ತಿದ್ದಾರೆ
ಸೃಷ್ಟಿ ನಾಗೇಶ್, ಪ್ರಕಾಶಕ

ಕೋವಿಡ್ ಕಾರಣದಿಂದ ಪುಸ್ತಕ ಖರೀದಿ ಪ್ರಕ್ರಿಯೆಗೆ ಹಿನ್ನಡೆಯಾಗಿತ್ತು. 2020ರ ಪುಸ್ತಕಗಳ ಖರೀದಿ ಪ್ರಕ್ರಿಯೆಯನ್ನು ಶೀಘ್ರದಲ್ಲಿಯೇ ನಡೆಸಲಾಗುವುದು
ಸತೀಶ್ ಕುಮಾರ್ ಹೊಸಮನಿ
ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ

ಪತ್ರಕರ್ತ ಸಿ.ಆರ್. ಕೃಷ್ಣರಾವ್ ನಿಧನ



ಬೆಂಗಳೂರು: ಪತ್ರಕರ್ತ, ಕಮ್ಯುನಿಸ್ಟ್ ನಾಯಕ, ಸಿ.ಆರ್. ಕೃಷ್ಣರಾವ್ (93) ಅವರು ವಯೋ ಸಹಜ ಅನಾರೋಗ್ಯದಿಂದ ಮಂಗಳವಾರ ಮುಂಜಾನೆ ಕತ್ರಿಗುಪ್ಪೆಯ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ.

ಮೃತರಿಗೆ ಪತ್ನಿ, ಒಬ್ಬ ಮಗ, ಒಬ್ಬ ಮಗಳಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ನಡೆಯಿತು.

ಮಾಧ್ಯಮ ಕ್ಷೇತ್ರದಲ್ಲಿ ಐದು ದಶಕ ತಮ್ಮನ್ನು ತೊಡಗಿಸಿಕೊಂಡಿದ್ದ ಕೃಷ್ಣರಾವ್ ಅವರು, ಮೈಸೂರು ರಾಜ್ಯ ಪತ್ರಕರ್ತರ ಸಂಘವನ್ನು ಸಂಘಟಿಸಿ, ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘವನ್ನಾಗಿ ರೂಪಿಸಲು ಶ್ರಮಿಸಿದ ಮಹನೀಯರಲ್ಲೊಬ್ಬರು.

1940ರ ದಶಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಎಡಪಂಥೀಯ ಚಳವಳಿಯನ್ನು ಪ್ರವೇಶಿಸಿ ನಂತರ ‘ಜನಶಕ್ತಿ’ ಪತ್ರಿಕೆ ಸಂಪಾದಕತ್ವ ವಹಿಸಿದ್ದರು. 60ರ ದಶಕದಲ್ಲಿ ತಮ್ಮದೇ ಚಲನಚಿತ್ರ ಸಾಪ್ತಾಹಿಕ ‘ಮೇನಕಾ’ವನ್ನು ವಿ.ಎನ್.ಸುಬ್ಬರಾವ್ ಅವರ ಜೊತೆ ಸೇರಿ ಕೆಲ ವರ್ಷ ನಡೆಸಿದ್ದರು.

ನಿಜಾಮಾಬಾದ್: ಸಾರ್ವಜನಿಕ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಆರೋಪ

‘ಎನ್‌ಡಿಎ ಸೇರಲು ಬಯಸಿದ್ದ ಕೆಸಿಆರ್’

ಪ್ರಜಾವಾಣಿ ವಾರ್ತೆ

ನಿಜಾಮಾಬಾದ್, ತೆಲಂಗಾಣ: ‘ತೆಲಂಗಾಣ ಮುಖ್ಯಮಂತ್ರಿ ಬಿಆರ್‌ಎಸ್ ಅಧ್ಯಕ್ಷ ಕೆ. ಚಂದ್ರಶೇಖರ್ ರಾವ್ (ಕೆಸಿಆರ್) ಅವರು ಎನ್‌ಡಿಎ ಸೇರಲು ಬಯಸಿದ್ದರು. ಆದರೆ ನಾನು ಅವರ ಮನವಿಯನ್ನು ತಿರಸ್ಕರಿಸಿದ್ದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಇಲ್ಲಿ ಬಹಿರಂಗಪಡಿಸಿದರು.

ಪಕ್ಷದ ರ್‍ಯಾಲಿಯಲ್ಲಿ ಮಾತನಾಡಿದ ಅವರು, ‘2020ರಲ್ಲಿ ಹೈದರಾಬಾದ್ ಮಹಾನಗರಪಾಲಿಕೆ ಚುನಾವಣೆ ನಂತರ ಕೆಸಿಆರ್ ಎನ್‌ಡಿಎ ಸೇರಲು ಬಯಸಿದ್ದರು. ಇದರ ರಹಸ್ಯವನ್ನು ಈಗ ಹೇಳುತ್ತೇನೆ. ಬಿಜೆಪಿ 48 ಸ್ಥಾನಗಳನ್ನು ಗೆದ್ದಿತ್ತು. ಬಿಆರ್‌ಎಸ್ ಬಹುಮತ ಪಡೆಯಲು ಬೆಂಬಲ ಬೇಕಿತ್ತು’ ಎಂದರು.

‘ಪಾಲಿಕೆ ಚುನಾವಣೆಗೆ ಮೊದಲು, ರಾವ್ ಅವರು ನನ್ನನ್ನು ಎದುರುಗೊಳ್ಳಲು ವಿಮಾನನಿಲ್ದಾಣಕ್ಕೆ ಬರುತ್ತಿದ್ದರು. ಅಲ್ಲದೆ ಬಹಳ ಗೌರವ ತೋರುತ್ತಿದ್ದರು. ಆದರೆ ಪಾಲಿಕೆ ಚುನಾವಣೆ ಬಳಿಕ ಇದೆಲ್ಲಾ ದಿಢೀರ್ ನಿಂತು ಹೋಯಿತು. ಏಕೆಂದರೆ, ಚುನಾವಣೆ ಆದ ಮೇಲೆ ನನ್ನನ್ನು ಭೇಟಿಯಾಗಲು ಅವರು ದೆಹಲಿಗೆ ಬಂದಿದ್ದರು. ಸುಂದರ ಶಾಲು ನೀಡಿ ನನ್ನನ್ನು ಗೌರವಿಸಿದ್ದರು. ಬಹಳ ಪ್ರೀತಿ ತೋರಿಸಿದ್ದರು. ದೇಶವು ನಿಮ್ಮ ನಾಯಕತ್ವದಲ್ಲಿ ಪ್ರಗತಿ ಹೊಂದುತ್ತಿದೆ. ನಾವು ಕೂಡ ಎನ್‌ಡಿಎ ಭಾಗವಾಗಬೇಕೆಂದು ಬಯಸಿದ್ದೇವೆ. ನಮ್ಮನ್ನೂ ಸೇರಿಸಿಕೊಳ್ಳಿ’ ಎಂದು ಕೋರಿದ್ದರು. ಆಗ ನಾನು ‘ಮೋದಿ ನಿಮ್ಮ ಜತೆ ಸೇರಲು ಸಾಧ್ಯವಾಗದ ರೀತಿಯಲ್ಲಿ ನಿಮ್ಮ ಕೆಲಸ ಕಾರ್ಯಗಳಿವೆ ಎಂದು ಅವರಿಗೆ ಹೇಳಿದ್ದೆ’ ಎಂದು ವಿವರಿಸಿದರು.

‘ಮಹಾನಗರಪಾಲಿಕೆಯಲ್ಲಿ ಬಿಜೆಪಿ ಪ್ರತಿಪಕ್ಷವಾದರೂ ಪರವಾಗಿಲ್ಲ ಎಂದು ನಾನು ಎನ್‌ಡಿಎಗೆ ಕೆಸಿಆರ್ ಪ್ರವೇಶ ನಿರಾಕರಿಸಿದೆ. ರಾಜ್ಯದ ಅಭಿವೃದ್ಧಿಗಾಗಿ ನಿಗದಿಪಡಿಸಿದ ಹಣವನ್ನು ಬಿಆರ್‌ಎಸ್ ಲೂಟಿ ಮಾಡಿತು. ಲೂಟಿ ಮಾಡುವುದು ಅವರ ಮಂತ್ರ. ಭ್ರಷ್ಟರು ನನ್ನ ಜತೆ ಕುಳಿತುಕೊಳ್ಳಲಾರರು, ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಲಾರರು’ ಎಂದರು.

‘ತೆಲಂಗಾಣದ ನಾಯಕತ್ವವನ್ನು ಕೆಸಿಆರ್ ಅವರು ತಮ್ಮ ಮಗ, ಕೈಗಾರಿಕಾ ಸಚಿವ ಕೆ.ಟಿ. ರಾಮರಾವ್ ಅವರಿಗೆ ವಹಿಸಲು ಇಚ್ಛಿಸಿದ್ದರು. ಪ್ರಜಾಪ್ರಭುತ್ವದಲ್ಲಿ ನೀವು ಈ ರೀತಿ ಹೇಗೆ ಮಾಡುತ್ತೀರಿ. ನೀವೇನು ರಾಜ ಅಥವಾ ಮಹಾರಾಜ ಆಗಿದ್ದೀರಾ ಹೀಗೆ ಮಾಡಲು ಎಂದು ನಾನು ಕೇಳಿದ್ದೆ’ ಎಂದೂ ಮೋದಿ ತಿಳಿಸಿದರು.

‘ತೆಲಂಗಾಣದ ಜನರು ಕಾಂಗ್ರೆಸ್ ಬಗ್ಗೆ ಎಚ್ಚರ ವಹಿಸಬೇಕು. ಇಡೀ ದೇಶ ಈಗಾಗಲೇ ಆ ಪಕ್ಷವನ್ನು ತಿರಸ್ಕರಿಸಿದೆ. ಒಂದು ರಾಜ್ಯದಲ್ಲಿ ಒಮ್ಮೆ ಅವರು ಅಧಿಕಾರಕ್ಕೆ ಬಂದರೆ ನಂತರ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ. ಆದ್ದರಿಂದ ಅವರು ಮತ ಒಡೆಯಲು ಎಲ್ಲಾ ಪ್ರಯತ್ನ ಮಾಡುತ್ತಾರೆ’ ಎಂದು ಆರೋಪಿಸಿದರು. ‘ಗುಜರಾತಿನ ಪುತ್ರ ಸರ್ದಾರ್ ವಲ್ಲಭ್‌ಭಾಯಿ ಪಟೇಲ್ ಅವರು ನಿಜಾಮರಿಂದ ಹೈದರಾಬಾದ್ ಅನ್ನು ಮುಕ್ತಿಗೊಳಿಸಿದರು. ಇಂದು ಗುಜರಾತಿನ ಮತ್ತೊಬ್ಬ ಮಗ (ಮೋದಿ) ನಿಮ್ಮ ಅಭಿವೃದ್ಧಿ ಮತ್ತು ಕಲ್ಯಾಣಕ್ಕಾಗಿ ಬಂದಿದ್ದಾನೆ’ ಎಂದರು.

ರ್‍ಯಾಲಿಗೆ ಮೊದಲು ಅವರು ಮತ್ತೊಂದು ಕಾರ್ಯಕ್ರಮದಲ್ಲಿ ₹8000 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಕೆಲವು ಯೋಜನೆಗಳನ್ನು ಲೋಕಾರ್ಪಣೆ ಮಾಡಿದರು.

ನಿಜಾಮಾಬಾದ್‌ನಲ್ಲಿ ಮಂಗಳವಾರ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸುವ ಮೊದಲು ಮೋದಿ ಅವರು ಮೆರವಣಿಗೆಯಲ್ಲಿ ಪಾಲ್ಗೊಂಡು ಬೆಂಬಲಿಗರತ್ತ ಕೈ ಬೀಸಿದರು –ಪಿಟಿಐ ಚಿತ್ರ

> ತೆಲಂಗಾಣದಲ್ಲಿ ಭ್ರಷ್ಟಾಚಾರದಿಂದ ಗಳಿಸಿದ ಹಣದಿಂದ ಕೆಸಿಆರ್ ಅವರು ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ನೆರವು ನೀಡಿದರು
>
> **ನರೇಂದ್ರ ಮೋದಿ** ಪ್ರಧಾನಿ

ಹಿಂದೂಗಳ ವಿಭಜನೆ ಆರೋಪ

ಜಗದಲಪುರ, ಛತ್ತೀಸಗಢ (ಪಿಟಿಐ): ಹಿಂದೂಗಳನ್ನು ವಿಭಜಿಸಲು ಕಾಂಗ್ರೆಸ್ ಯತ್ನಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಇಲ್ಲಿ ಆರೋಪಿಸಿದರು.

ಜನಸಂಖ್ಯೆ ಆಧಾರದಲ್ಲಿ ಸಂಪನ್ಮೂಲ ಹಂಚಿಕೆ ಮಾಡುವಂತೆ ಒತ್ತಾಯಿಸುವ ಮೂಲಕ ಮುಸ್ಲಿಮರ ಹಕ್ಕುಗಳನ್ನು ಮೊಟಕುಗೊಳಿಸಲು ಆ ಪಕ್ಷ ಬಯಸುತ್ತಿದೆಯಾ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಹೇಳಿದರು.

ಬಸ್ತರ್ ಜಿಲ್ಲೆಯ ಜಗದಲಪುರದಲ್ಲಿ ಬಿಜೆಪಿಯ ‘ಪರಿವರ್ತನ್ ಮಹಾಸಂಕಲ್ಪ’ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ದೇಶದ ಸಂಪನ್ಮೂಲಗಳ ಮೇಲೆ ಮೊದಲ ಹಕ್ಕು ಇರುವುದು ಬಡವರಿಗೆ ಎಂದು ಪ್ರತಿಪಾದಿಸಿದರು. ಇತರ ದೇಶದೊಂದಿಗೆ ಕಾಂಗ್ರೆಸ್ ರಹಸ್ಯ ಒಪ್ಪಂದ ಮಾಡಿಕೊಂಡಿದ್ದು ಭಾರತದ ವಿರುದ್ಧ ಮಾತನಾಡುವುದರಲ್ಲಿ ಸಂತೋಷ ಕಾಣುತ್ತಿದೆ ಎಂದು ಆರೋಪಿಸಿದರು. ಛತ್ತೀಸಗಢದಲ್ಲಿ ₹ 26,000 ಮೊತ್ತದ ಅಭಿವೃದ್ಧಿ ಯೋಜನೆಗಳನ್ನು ಅವರು ಉದ್ಘಾಟಿಸಿದರು. ಛತ್ತೀಸಗಢ ವಿಧಾನಸಭೆಗೆ ವರ್ಷಾಂತ್ಯದಲ್ಲಿ ಚುನಾವಣೆ ನಡೆಯಲಿದೆ.

‘ಪ್ರಧಾನಿ ಸ್ಥಾನದ ಘನತೆ ಕುಗ್ಗಿಸಿದ ಮೋದಿ’

ಹೈದರಾಬಾದ್: ಸಾರಾಸಗಟಾಗಿ ಸುಳ್ಳುಗಳನ್ನು ಹೇಳುವ ಮೂಲಕ ಪ್ರಧಾನಿ ಮೋದಿ ಅವರು ತಮ್ಮ ಸ್ಥಾನದ ಘನತೆಯನ್ನು ಕನಿಷ್ಠ ಮಟ್ಟಕ್ಕೆ ಇಳಿಸಿಕೊಂಡಿದ್ದಾರೆ ಎಂದು ಐ.ಟಿ ಮತ್ತು ಕೈಗಾರಿಕಾ ಸಚಿವ ಕೆ.ಟಿ. ರಾಮ ರಾವ್ ಹೇಳಿದ್ದಾರೆ.

ಮೋದಿ ಅವರ ಆರೋಪಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಅವರು, ಪ್ರಧಾನಿ ಮಟ್ಟದ ನಾಯಕ ಇಂತಹ ಅಪ್ರಾಮಾಣಿಕತೆ ಪ್ರದರ್ಶಿಸಿರುವುದು ತಲೆತಗ್ಗಿಸುವ ವಿಷಯ ಮತ್ತು ಖಂಡನೀಯ ಎಂದಿದ್ದಾರೆ.

‘ಎನ್‌ಡಿಎ ಸೇರಲು, ನಾವು ಹುಚ್ಚು ನಾಯಿಯಿಂದ ಕಚ್ಚಿಸಿಕೊಂಡಿಲ್ಲ’ ಎಂದೂ ಅವರು ಹೇಳಿದ್ದಾರೆ.

‘ನನ್ನನ್ನು ಮುಖ್ಯಮಂತ್ರಿಯಾಗಿ ಮಾಡಲು ಕೆಸಿಆರ್ ಅವರು ತಮ್ಮ ಅನುಮತಿ ಕೋರಿದ್ದರು ಎಂದು ಮೋದಿ ಹೇಳಿದ್ದಾರೆ. ನಮ್ಮ ಪಕ್ಷ ಮತ್ತು ನಾಯಕತ್ವದ ಯಾವುದೇ ನಿರ್ಧಾರಕ್ಕೆ ನಿಮ್ಮ ಅನುಮತಿ ನಮಗೆ ಏಕೆ ಬೇಕು’ ಎಂದು ಕೇಳಿದ್ದಾರೆ.

‘ಅತಿ ದೊಡ್ಡ ಸುಳ್ಳು ಮತ್ತು ಸುಳ್ಳು ಭರವಸೆಗಳ ಕಾರ್ಖಾನೆ ಮೋದಿ ನೇತೃತ್ವದ ಬಿಜೆಪಿ. ಕತೆ ಹೇಳಲು ಮತ್ತು ಚಿತ್ರಕತೆ ಬರೆಯಲು ಮೋದಿ ಯತ್ನಿಸಬೇಕು. ಅವರಿಗೆ ಆಸ್ಕರ್ ದೊರಕುವ ಸಾಧ್ಯತೆ ಇದೆ’ ಎಂದು ಅವರು ವ್ಯಂಗ್ಯವಾಡಿದ್ದಾರೆ.

‘ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಬಿಆರ್‌ಎಸ್ ಹಣ ಒದಗಿಸಿದ್ದರೆ, ಆದಾಯ ತೆರಿಗೆ ಇಲಾಖೆ ಏನು ಮಾಡುತ್ತಿತ್ತು’?ಎಂದು ಪ್ರಶ್ನಿಸಿದ್ದಾರೆ.

‘ಮೋದಿ ಅವರು ಕುಟುಂಬ ರಾಜಕಾರಣದ ಬಗ್ಗೆ ಮಾತನಾಡಿದರೆ, ಬಿಸಿಸಿಐ ಕಾರ್ಯದರ್ಶಿಯಾಗಿರುವ ಜಯ್ ಶಾ ಅವರ ನೇಮಕದ ಬಗ್ಗೆ ಅವರನ್ನು ಕೇಳಲೇ ಬೇಕು. ಯಾವುದೇ ರಾಜ್ಯಕ್ಕೆ ಮೋದಿ ಭೇಟಿ ನೀಡಿದರೂ ಅಲ್ಲಿನ ಮುಖ್ಯಮಂತ್ರಿಯನ್ನು ಭ್ರಷ್ಟ ನಾಯಕ ಎಂದೇ ಹೇಳುತ್ತಾರೆ’ ಎಂದು ಕುಹಕವಾಡಿದ್ದಾರೆ.

‘ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್ ಮತ್ತು ಉಪಮುಖ್ಯಮಂತ್ರಿ ಸುಖ್‌ಬೀರ್‌ಸಿಂಗ್ ಬಾದಲ್ ಎನ್‌ಡಿಎ ಜತೆ ಕೈಜೋಡಿಸಬಹುದು. ಪಿಡಿಪಿಯ ಮೆಹಬೂಬಾ ಮುಫ್ತಿ ಮತ್ತು ಅವರ ಮಗಳು ಇಲ್ತಿಜಾ ಮುಫ್ತಿ ಕೂಡ ಎನ್‌ಡಿಎ ಸೇರಬಹುದು. ಆಂಧ್ರಪ್ರದೇಶದ ಮಾಜಿ ಸಿ.ಎಂ ಚಂದ್ರಬಾಬು ನಾಯ್ಡು ಮತ್ತು ನಾ ರಾ ಲೋಕೇಶ್, ಅದೇ ರೀತಿ ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಮತ್ತು ಆದಿತ್ಯ ಠಾಕ್ರೆ ಅವರೂ ಎನ್‌ಡಿಎ ಭಾಗವಾಗಬಹುದು. ಇದೆಲ್ಲಾ ಮೋದಿ ಅವರ ಗಮನಕ್ಕೆ ಬರುವುದಿಲ್ಲ. ಬಿಆರ್‌ಎಸ್ ಅನ್ನು ಮಾತ್ರ ಟೀಕಿಸುತ್ತಾರೆ’ ಎಂದರು.

‘ರಾಜತಾಂತ್ರಿಕರ ವಾಪಸ್ ಕರೆಸಿಕೊಳ್ಳಲು ಗಡುವು’

ನವದೆಹಲಿ (ಪಿಟಿಐ): ದೇಶದಲ್ಲಿರುವ ರಾಜತಾಂತ್ರಿಕರ ಪೈಕಿ 41 ಮಂದಿಯನ್ನು ಅಕ್ಟೋಬರ್ 10ರ ಒಳಗಾಗಿ ವಾಪಸ್ ಕರೆಸಿಕೊಳ್ಳುವಂತೆ ಕೆನಡಾಕ್ಕೆ ಭಾರತ ಸೂಚಿಸಿದೆ ಎಂದು ‘ಫೈನಾನ್ಶಿಯಲ್ ಟೈಮ್ಸ್’ ಮಂಗಳವಾರ ವರದಿ ಮಾಡಿದೆ.

ಈ ಕುರಿತು ಭಾರತ ಅಥವಾ ಕೆನಡಾ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ದೇಶದಲ್ಲಿರುವ ರಾಜತಾಂತ್ರಿಕರ ಸಂಖ್ಯೆಯನ್ನು ಕಡಿಮೆಗೊಳಿಸುವಂತೆ ಕೆನಡಾಕ್ಕೆ ಸೂಚನೆ ನೀಡಿದ 12 ದಿನಗಳ ನಂತರ, ಭಾರತ ಈ ಕ್ರಮ ಕೈಗೊಂಡಿದೆ. ದೇಶದಲ್ಲಿ ಕೆನಡಾದ 62 ರಾಜತಾಂತ್ರಿಕರಿದ್ದಾರೆ. ಈ ಪೈಕಿ 41 ಮಂದಿಯನ್ನು ಹಿಂದಕ್ಕೆ ಕರೆಸಿಕೊಳ್ಳುವಂತೆ ಭಾರತ ಸೆ.21ರಂದು ಸೂಚಿಸಿತ್ತು ಎಂದು ವರದಿಯಲ್ಲಿ ಹೇಳಲಾಗಿದೆ.

ಖಾಲಿಸ್ತಾನ ಪ್ರತ್ಯೇಕತಾವಾದಿ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡ ಇದೆ ಎಂಬುದಾಗಿ ಪ್ರಧಾನಿ ಜಸ್ಟಿನ್ ಟ್ರೂಡೊ ಆರೋಪಿಸಿದ ನಂತರ ಉಭಯ ದೇಶಗಳ ನಡುವಿನ ಸಂಬಂಧದಲ್ಲಿ ಒಡಕು ಮೂಡಿದ್ದು, ರಾಜತಾಂತ್ರಿಕ ಬಿಕ್ಕಟ್ಟು ಮುಂದುವರಿದಿದೆ.

ಕೆನಡಾದ ಈ ಆರೋಪಗಳನ್ನು ಭಾರತ ತಳ್ಳಿ ಹಾಕಿತ್ತು.

ಕೆನಡಾ ತನಿಖೆಗೆ ಸಹಕರಿಸಿ: ವಾಷಿಂಗ್ಟನ್ (ಪಿಟಿಐ): ಖಾಲಿಸ್ತಾನ ಪರ ಹೋರಾಟಗಾರ ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಕುರಿತ ಕೆನಡಾದ ತನಿಖೆಗೆ ಸಹಕರಿಸುವಂತೆ ಭಾರತವನ್ನು ಅಮೆರಿಕ ನಿರಂತರವಾಗಿ ಒತ್ತಾಯಿಸುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಕಳೆದ ವಾರ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರೊಂದಿಗೆ ಅಮೆರಿಕದ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಮಾತುಕತೆ ನಡೆಸಿದ ಸಂದರ್ಭದಲ್ಲಿ ನಿಜ್ಜರ್ ಹತ್ಯೆ ಕುರಿತು ಧ್ವನಿ ಎತ್ತಿದ್ದರು. ಹೀಗೆ ಕೆನಡಾ ತನಿಖೆಗೆ ಸಹಕರಿಸುವಂತೆ ಹಲವು ಬಾರಿ ಭಾರತವನ್ನು ಕೇಳಿಕೊಂಡಿದ್ದೇವೆ’ ಎಂದು ವಿದೇಶಾಂಗ ಇಲಾಖೆ ವಕ್ತಾರ ಮ್ಯಾಥೀವ್ ಮಿಲ್ಲರ್ ತಿಳಿಸಿದರು.

ತ್ರಿಪುರಾದ ಎರಡು ಸಂಘಟನೆ ಐದು ವರ್ಷ ನಿಷೇಧ

ನವದೆಹಲಿ: ತ್ರಿಪುರಾವನ್ನು ಭಾರತದಿಂದ ಪ್ರತ್ಯೇಕಗೊಳಿಸಿ ಸ್ವತಂತ್ರ ರಾಷ್ಟ್ರವಾಗಿಸಲು ಯತ್ನಿಸುತ್ತಿವೆ ಎಂಬ ಆರೋಪದಡಿ ರಾಷ್ಟ್ರೀಯ ತ್ರಿಪುರಾ ಮುಕ್ತಿ ರಂಗ (ಎನ್‌ಎಲ್‌ಎಫ್‌ಟಿ) ಮತ್ತು ಆಲ್ ತ್ರಿಪುರಾ ಟೈಗರ್ ಫೋರ್ಸ್ (ಎಟಿಟಿಎಫ್) ಸಂಘಟನೆಗಳನ್ನು ಕೇಂದ್ರ ಸರ್ಕಾರ ಐದು ವರ್ಷ ನಿಷೇಧಿಸಿದೆ.

‘ಈ ಸಂಘಟನೆಗಳು ಹಿಂಸಾಕೃತ್ಯಗಳಲ್ಲಿ ತೊಡಗಿದ್ದವು. ಗುರಿ ಸಾಧನೆಗೆ ಜನರಲ್ಲಿ ಭಯೋತ್ಪಾದನೆ ಮತ್ತು ಹಿಂಸಾ ಮನೋಭಾವ ಬೆಳೆಸಲು ಒತ್ತು ನೀಡಿದ್ದವು’ ಎಂದು ಕೇಂದ್ರ ಗೃಹ ಸಚಿವಾಲಯ ಮಂಗಳವಾರ ಅಧಿಸೂಚನೆ ಹೊರಡಿಸಿದೆ.

ಈ ಎರಡೂ ಸಂಘಟನೆಗಳು ಈಶಾನ್ಯ ರಾಜ್ಯಗಳ ಕಾನೂನು ಬಾಹಿರ ಸಂಘಟನೆಗಳ ಜೊತೆಗೆ ಸಂಪರ್ಕವನ್ನು ಹೊಂದಿದ್ದು, ತನ್ನ ಗುರಿ ಸಾಧನೆಗೆ ಅವುಗಳ ಬೆಂಬಲ ಪಡೆಯಲು ಒತ್ತು ನೀಡಿದ್ದವು ಎಂದು ತಿಳಿಸಿದೆ.

ಕಾನೂನುಬಾಹಿರ ಚಟುವಟಿಕೆಗಳ (ನಿಯಂತ್ರಣ) ಕಾಯ್ದೆ 1967 ಅನ್ವಯ ಈ ಎರಡು ಸಂಘಟನೆಗಳ ಎಲ್ಲ ಶಾಖೆ, ಮುಂಚೂಣಿ ಶಾಖೆಗಳ ಕಾರ್ಯಚಟುಟಿಕೆಗಳನ್ನು ನಿಷೇಧಿಸಲಾಗಿದೆ ಎಂದು ಗೃಹ ಸಚಿವಾಲಯವು ತಿಳಿಸಿದೆ.

ನ್ಯೂಸ್‌ಕ್ಲಿಕ್ ಮೇಲೆ ದಾಳಿ, ಸಂಪಾದಕ ಬಂಧನ

ಒಂದನೇ ಪುಟದಿಂದ...

ಠಾಕೂರ್ ಸಮರ್ಥನೆ: ದೇಶದ ತನಿಖಾ ಸಂಸ್ಥೆಗಳು ಕಾನೂನಿಗೆ ಅನುಗುಣವಾಗಿ ನಡೆದುಕೊಳ್ಳುವುದಕ್ಕೆ ಸ್ವತಂತ್ರವಾಗಿವೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಭುವನೇಶ್ವರದಲ್ಲಿ ಹೇಳಿದ್ದಾರೆ. ‘ಯಾರಾದರೂ ತಪ್ಪು ಮಾಡಿದ್ದರೆ ತನಿಖಾ ಸಂಸ್ಥೆಗಳು ಆ ಬಗ್ಗೆ ನೋಡಿಕೊಳ್ಳುತ್ತವೆ. ಅಕ್ರಮವಾಗಿ ಹಣ ಪಡೆದುಕೊಂಡಿದ್ದರೆ, ಆಕ್ಷೇಪಾರ್ಹವಾದ ಕೆಲಸ ಮಾಡಿದ್ದರೆ ಅದರ ಬಗ್ಗೆ ತನಿಖಾ ಸಂಸ್ಥೆಗಳು ತನಿಖೆ ನಡೆಸಬಾರದು ಎಂದು ಎಲ್ಲಿಯೂ ಬರೆದಿಲ್ಲ’ ಎಂದು ಠಾಕೂರ್ ಹೇಳಿದ್ದಾರೆ.

ಪೊಲೀಸರು ನಡೆಸಿರುವ ಶೋಧ ಕಾರ್ಯವನ್ನು ವಿವಿಧ ರಾಜಕೀಯ ಪಕ್ಷಗಳು ಹಾಗೂ ಪತ್ರಕರ್ತರ ಸಂಘಟನೆಗಳು ಟೀಕಿಸಿವೆ. ದೆಹಲಿ ಪೊಲೀಸ್ ವಿಶೇಷ ಘಟಕದ ಕಚೇರಿಯಿಂದ ಮಂಗಳವಾರ ಸಂಜೆ 4.15ಕ್ಕೆ ಹೊರಬಂದ ಊರ್ಮಿಳೇಶ್ ಮತ್ತು ಚಕ್ರವರ್ತಿ ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಅವರನ್ನು ಸರಿಸುಮಾರು ಆರು ತಾಸುಗಳ ಕಾಲ ವಿಚಾರಣೆಗೆ ಗುರಿಪಡಿಸಲಾಗಿತ್ತು.

ನ್ಯೂಸ್‌ಕ್ಲಿಕ್‌ಗೆ ಸಂಬಂಧಿಸಿದಂತೆ ತೀರಾ ಸಾಮಾನ್ಯವಾದ ಪ್ರಶ್ನೆಗಳನ್ನು ಕೇಳಲಾಯಿತು ಎಂದು ರಘುನಂದನ್ ಹೇಳಿದರು.

ಜಾರಿ ನಿರ್ದೇಶನಾಲಯವು, ನ್ಯೂಸ್‌ಕ್ಲಿಕ್‌ನ ಹಣದ ಮೂಲದ ಬಗ್ಗೆ ತನಿಖೆ ನಡೆಸಲು ಈ ಮೊದಲು ನ್ಯೂಸ್‌ಕ್ಲಿಕ್ ಸುದ್ದಿತಾಣಕ್ಕೆ ಸೇರಿದ ಸ್ಥಳಗಳ ಮೇಲೆ ದಾಳಿ ನಡೆಸಿತ್ತು. ಇ.ಡಿ. ನೀಡಿದ ವಿವರಗಳನ್ನು ಆಧರಿಸಿ ಈಗ ದೆಹಲಿ ಪೊಲೀಸ್ ವಿಶೇಷ ಘಟಕವು ಶೋಧ ಕಾರ್ಯ ಮುಂದುವರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಶೇಷ ಘಟಕವು ಈಗ ಯುಎಪಿಎ ಅಡಿಯಲ್ಲಿ ಹೊಸ ಪ್ರಕರಣವೊಂದನ್ನು ದಾಖಲು ಮಾಡಿಕೊಂಡಿದೆ ಎಂದು ಅವರು ಹೇಳಿದ್ದಾರೆ.

> ಇದು ಪ್ರಜಾತಂತ್ರದ ತಾಯಿ ಮಾಡಬೇಕಾದ ಕೆಲಸವಲ್ಲ. ಇದು ಅಭದ್ರ ಹಾಗೂ ಸರ್ವಾಧಿಕಾರಿ ಪ್ರಭುತ್ವದ ಕೆಲಸ. ಇಷ್ಟೊಂದು ಬಲಿಷ್ಠವಾಗಿರುವ, ಇಷ್ಟೊಂದು ಸರ್ವಾಧಿಕಾರಿಯಾಗಿರುವ ಸರ್ಕಾರವು ಒಂದು ಸುದ್ದಿತಾಣದಿಂದಾಗಿ ಭಯಪಡುವುದೇಕೆ? ಅದರಲ್ಲೂ, ಈ ಸುದ್ದಿತಾಣವು ತನ್ನ ವ್ಯಾಪ್ತಿ ಹಾಗೂ ಓದುಗರ ಸಂಖ್ಯೆಯ ದೃಷ್ಟಿಯಿಂದ ಮುಂಚೂಣಿ ಸ್ಥಾನವನ್ನೇನೂ ಪಡೆದಿಲ್ಲ... ಇಂದು ಸರ್ಕಾರವು ತನಗೆ ಅಪಮಾನ ಮಾಡಿಕೊಂಡಿದೆ ಹಾಗೂ ನಮ್ಮ ಪ್ರಜಾಪ್ರಭುತ್ವಕ್ಕೆ ಅಪಮಾನ ಮಾಡಿದೆ.
>
> **ಶಶಿ ತರೂರ್,** ಕಾಂಗ್ರೆಸ್ ಮುಖಂಡ

> ಮಾಧ್ಯಮಗಳ ಬಗ್ಗೆ ಕಾಂಗ್ರೆಸ್ ಬೋಧನೆ ಮಾಡುವುದು ಭೂತದ ಬಾಯಲ್ಲಿ ಭಗವದ್ಗೀತೆ ಬಂದಂತೆ.
>
> **ಶೆಹಜಾದ್ ಪೂನಾವಾಲಾ,** ಬಿಜೆಪಿ ರಾಷ್ಟ್ರೀಯ ವಕ್ತಾರ

ಪ್ರಕರಣವನ್ನು ಆಗಸ್ಟ್‌ನಲ್ಲಿ ದಾಖಲಿಸಿಕೊಳ್ಳಲಾಗಿದೆ. ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 153ಎ (ಎರಡು ಗುಂಪುಗಳ ನಡುವೆ ದ್ವೇಷ ಸೃಷ್ಟಿಸುವುದು), ಸೆಕ್ಷನ್ 120ಬಿ (ಕ್ರಿಮಿನಲ್ ಪಿತೂರಿ) ಅಡಿಯಲ್ಲಿಯೂ ಪ್ರಕರಣ ದಾಖಲಿಸಲಾಗಿದೆ.

‘ದೆಹಲಿ ಪೊಲೀಸರು ನನ್ನ ಮನೆಗೆ ಬಂದಿದ್ದಾರೆ. ನನ್ನ ಫೋನ್ ಮತ್ತು ಲ್ಯಾಪ್‌ಟಾಪ್ ತೆಗೆದುಕೊಂಡಿದ್ದಾರೆ’ ಎಂದು ಶರ್ಮ ಅವರು ತಮ್ಮನ್ನು ಪೊಲೀಸರು ವಶಕ್ಕೆ ಪಡೆಯುವ ಮೊದಲು ‘ಎಕ್ಸ್’ ವೇದಿಕೆಯಲ್ಲಿ ಬರೆದಿದ್ದಾರೆ.

‘ಬೆಳಿಗ್ಗೆ 6 ಗಂಟೆಯ ಸುಮಾರಿಗೆ ದೆಹಲಿ ಪೊಲೀಸ್ ವಿಶೇಷ ಘಟಕದ ಪೊಲೀಸರು ಸೊಹೇಲ್ ಹಶ್ಮಿ ಅವರ ಮನೆಯ ಮೇಲೆ ದಾಳಿ ಮಾಡಿದ್ದಾರೆ. ಆರು ಜನ ಅವರ ಮನೆಗೆ ಮತ್ತು ಮಲಗುವ ಕೋಣೆಗೆ ನುಗ್ಗಿದ್ದರು’ ಎಂದು ಶಬನಮ್ ಹಶ್ಮಿ (ಸೊಹೇಲ್ ಅವರ ಸಹೋದರಿ) ಎಕ್ಸ್‌ನಲ್ಲಿ ಬರೆದಿದ್ದಾರೆ.

ಚೀನಾ ಪರವಾಗಿ ಪ್ರಚಾರಾಂದೋಲನ ನಡೆಸಲು ಅಮೆರಿಕದ ಕೋಟ್ಯಧೀಶ ನೆವಿಲ್ಲೆ ರಾಯ್ ಸಿಂಘಮ್ ಅವರಿಂದ ಹಣ ಪಡೆದುಕೊಂಡಿದೆ ಎಂಬ ಆರೋಪವು ನ್ಯೂಸ್‌ಕ್ಲಿಕ್ ಮೇಲಿದೆ. ಅಮೆರಿಕದ ದಿ ನ್ಯೂಯಾರ್ಕ್ ಟೈಮ್ಸ್‌ನ ತನಿಖೆಯನ್ನು ಉಲ್ಲೇಖಿಸಿ ಠಾಕೂರ್ ಅವರು, ‘ನ್ಯೂಸ್‌ಕ್ಲಿಕ್‌ಗೆ ಬಂದಿರುವ ಹಣದ ಮೂಲವು, ಭಾರತ ವಿರೋಧಿ ಅಜೆಂಡಾವೊಂದನ್ನು ಬಹಿರಂಗಪಡಿಸಿದೆ’ ಎಂದು ಈಚೆಗೆ ಹೇಳಿದ್ದರು.

ನ್ಯೂಸ್‌ಕ್ಲಿಕ್ ಮೇಲಿನ ದಾಳಿಗೆ ‘ಇಂಡಿಯಾ’ ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಅನ್ಯಾಯದ ಬಗ್ಗೆ ಅಧಿಕಾರಸ್ಥರ ಮುಂದೆ ಹೇಳುತ್ತಿರುವ’ ಮಾಧ್ಯಮ ಸಂಸ್ಥೆಗಳು ಹಾಗೂ ಪತ್ರಕರ್ತರನ್ನು ಮಾತ್ರ ಗುರಿಯಾಗಿಸಿಕೊಂಡು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ‘ದಬ್ಬಾಳಿಕೆ’ಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ‘ಇಂಡಿಯಾ’ ಗುಂಪಿನ ಪಕ್ಷಗಳು ಟೀಕಿಸಿವೆ. ಆದರೆ, ದ್ವೇಷ ಮತ್ತು ವಿಭಜನೆಗೆ ಕುಮ್ಮಕ್ಕು ನೀಡುವ ಮಾಧ್ಯಮ ಪ್ರತಿನಿಧಿಗಳ ವಿರುದ್ಧ ಕ್ರಮ ಜರುಗಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರವು ಲಕ್ವಾ ಹೊಡೆದವರಂತೆ ವರ್ತಿಸುತ್ತಿದೆ ಎಂದು ‘ಇಂಡಿಯಾ’ ಟೀಕಿಸಿದೆ.

ಇಂತಹ ಪತ್ರಕರ್ತರ ವಿರುದ್ಧದ ದಾಳಿಗಳು ‘ಬಿಜೆಪಿಯು ಸೋಲುತ್ತಿರುವುದರ ಸೂಚಕ’ ಎಂದು ಹೇಳಿದೆ. ಪಕ್ಷವು ತನ್ನ ಸೋಲುಗಳನ್ನು ಮರೆಮಾಚುವ ಯತ್ನವಾಗಿ ಇಂತಹ ದಾಳಿಗಳನ್ನು ನಡೆಸುತ್ತಿದೆ ಎಂದು ಅದು ಆಕ್ರೋಶ ವ್ಯಕ್ತಪಡಿಸಿದೆ.

ಮಂಗಳವಾರ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ‘ಇಂಡಿಯಾ’ ಗುಂಪಿನ ಪಕ್ಷಗಳು, ಸರ್ಕಾರವು ತನ್ನ ಸೋಲುಗಳಿಂದ ಬೇರೆಡೆ ಗಮನ ತಿರುಗಿಸಲು ಮಾಧ್ಯಮಗಳ ಮೇಲೆ ದಾಳಿ ನಡೆಸುವ ಬದಲು, ಜನರಿಗೆ ಸಂಬಂಧಪಟ್ಟ ಗಂಭೀರ ವಿಷಯಗಳ ಬಗ್ಗೆ ಗಮನ ನೀಡುವುದು ರಾಷ್ಟ್ರದ ಹಿತಾಸಕ್ತಿಯ ದೃಷ್ಟಿಯಿಂದ ಒಳ್ಳೆಯದು ಎಂದು ಹೇಳಿವೆ.

ತಾವು ಮಾಧ್ಯಮಗಳ ಜೊತೆ ಗಟ್ಟಿಯಾಗಿ ನಿಲ್ಲುವುದಾಗಿ ಈ ಪಕ್ಷಗಳು ಹೇಳಿವೆ. ಕಳೆದ ಒಂಬತ್ತು ವರ್ಷಗಳಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಬಿಬಿಸಿ, ನ್ಯೂಸ್ ಲಾಂಡ್ರಿ, ದೈನಿಕ್ ಭಾಸ್ಕರ್, ಭಾರತ್ ಸಮಾಚಾರ್, ದಿ ಕಾಶ್ಮೀರ್ ವಾಲಾ, ದಿ ವೈರ್ ಮತ್ತು ನ್ಯೂಸ್‌ಕ್ಲಿಕ್ ಮಾಧ್ಯಮ ಸಂಸ್ಥೆಗಳ ವಿರುದ್ಧ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು, ಮಾಧ್ಯಮ ಸಂಸ್ಥೆಗಳಿಗೆ ಉದ್ದೇಶಪೂರ್ವಕವಾಗಿ ಕಿರುಕುಳ ಕೊಡುವ ಹಾಗೂ ಅವುಗಳನ್ನು ಹತ್ತಿಕ್ಕುವ ಕೆಲಸ ಮಾಡಿದೆ ಎಂದು ದೂರಿವೆ.

‘ಬಿಜೆಪಿ ನೇತೃತ್ವದ ಸರ್ಕಾರವು ತನ್ನೊಂದಿಗೆ ಸ್ನೇಹದಿಂದ ಇರುವ ಬಂಡವಾಳಶಾಹಿಗಳಿಗೆ ಮಾಧ್ಯಮ ಸಂಸ್ಥೆಗಳನ್ನು ಸ್ವಾಧೀನಪಡಿಸಿಕೊಳ್ಳಲು ನೆರವು ನೀಡಿ, ಪಕ್ಷಪಾತಿ ಹಾಗೂ ಸೈದ್ಧಾಂತಿಕ ನಿಲುವುಗಳನ್ನು ಪ್ರಸಾರ ಮಾಡಲು ಮಾಧ್ಯಮಗಳನ್ನು ತನ್ನ ಮುಖವಾಣಿಯನ್ನಾಗಿಸಲು ಯತ್ನಿಸಿದೆ. ಅನ್ಯಾಯದ ಬಗ್ಗೆ ತಿಳಿಸುವ ಪತ್ರಕರ್ತರ ವಿರುದ್ಧ ಸೇಡು ತೀರಿಸಿಕೊಳ್ಳುವ ಕೆಲಸವನ್ನು ಸರ್ಕಾರ ಹಾಗೂ ಅದರೊಂದಿಗೆ ಸೈದ್ಧಾಂತಿಕವಾಗಿ ಒಂದಾಗಿರುವ ಸಂಘಟನೆಗಳು ಮಾಡಿವೆ’ ಎಂದು ‘ಇಂಡಿಯಾ’ ಟೀಕಿಸಿದೆ.

‘ಇಂಡಿಯಾ’ ಗುಂಪಿನ ಪಕ್ಷವಾಗಿರುವ ಸಿಪಿಎಂ ಪ್ರತ್ಯೇಕ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ್ದು ‘ಮಾಧ್ಯಮ ಸಂಸ್ಥೆಗಳು ಹಾಗೂ ಪತ್ರಕರ್ತರ ಮೇಲೆ ಈ ಪ್ರಮಾಣದ ಸರ್ವಾಧಿಕಾರಿ ದಾಳಿಯನ್ನು ಒಪ್ಪಲು ಸಾಧ್ಯವೇ ಇಲ್ಲ’ ಎಂದು ಹೇಳಿದೆ. ‘ಇದು ಹೊಸದೇನೂ ಅಲ್ಲ. ಬಿಜೆಪಿಯ ಆಡಳಿತಗಾರರು ಪ್ರಾಮಾಣಿಕ ಪತ್ರಕರ್ತರ ಮೇಲೆ ಯಾವತ್ತಿನಿಂದಲೂ ದಾಳಿ ನಡೆಸುತ್ತ ಬಂದಿದ್ದಾರೆ. ಆದರೆ ಸರ್ಕಾರದ ಪ್ರಚಾರ ಕಾರ್ಯಕ್ರಮಗಳ ಭಾಗವಾಗಿ ತಮ್ಮ ಜೊತೆ ಸ್ನೇಹದಿಂದ ಇರುವ ವಾಹಿನಿಗಳಿಗೆ ಎಷ್ಟು ಕೋಟಿ ಹಣವನ್ನು ಪ್ರತಿ ತಿಂಗಳೂ ನೀಡಲಾಗುತ್ತಿದೆ’ ಎಂದು ಸಮಾಜವಾದಿ ಪಕ್ಷದ ಮುಖಂಡ ಅಖಿಲೇಶ್ ಯಾದವ್ ಪ್ರಶ್ನಿಸಿದ್ದಾರೆ.

‘ದೆಹಲಿ ಪೊಲೀಸರು ಅಮಿತ್ ಶಾ ಅವರ ಅಧೀನದಲ್ಲಿ ಕೆಲಸ ಮಾಡುತ್ತಾರೆ. ಅವರ ಒಪ್ಪಿಗೆಯಿಲ್ಲದೆ ಏನೂ ನಡೆಯುವುದಿಲ್ಲ. ಬಿಜೆಪಿಯ ಭಜನಾ ಮಂಡಳಿ ಸೇರಲು ಒಪ್ಪದವರ ವಿರುದ್ಧ ಹೀಗೆ ಮಾಡಲಾಗುತ್ತದೆ. ಈ ಘಟನೆ ಇತಿಹಾಸದಲ್ಲಿ ದಾಖಲಾಗುತ್ತದೆ, ಇದಕ್ಕೆ ಸರ್ಕಾರ ಬೆಲೆ ತೆರಬೇಕಾಗುತ್ತದೆ’ ಎಂದು ಆರ್‌ಜೆಡಿ ಸಂಸದ ಮನೋಜ್ ಕೆ. ಝಾ ಹೇಳಿದ್ದಾರೆ.

‘ಈ ಪತ್ರಕರ್ತರು ಮಣಿಪುರ ಬಿಕ್ಕಟ್ಟು, ಅದಾನಿ ಸಮೂಹದ ಕುರಿತು, ಸಮಾಜದ ಕೋಮುವಾದೀಕರಣದ ಬಗ್ಗೆ ಸರ್ಕಾರವನ್ನು ಪ್ರಶ್ನಿಸಿದರು. ಸರ್ಕಾರವನ್ನು ಉತ್ತರದಾಯಿ ಆಗಿಸಿದ್ದಕ್ಕಾಗಿ ಇವರನ್ನು ಬೆದರಿಸಲಾಗುತ್ತಿದೆ, ಶಿಕ್ಷಿಸಲಾಗುತ್ತಿದೆ. ಕಳೆದ ಒಂಬತ್ತು ವರ್ಷಗಳಲ್ಲಿನ ವೈಫಲ್ಯಗಳನ್ನು ಮರೆಮಾಚಲು ಮಾಧ್ಯಮಗಳ ಬಾಯಿ ಮುಚ್ಚಿಸಲಾಗುತ್ತಿದೆ’ ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಹೇಳಿದ್ದಾರೆ.

‘ಉದ್ಯೋಗಿಗಳನ್ನು ಹೆದರಿಸುವ ಕೃತ್ಯ’

ಕಾರ್ಮಿಕರ ಹಾಗೂ ರೈತರ ಸಮಸ್ಯೆಗಳನ್ನು ನ್ಯೂಸ್‌ಕ್ಲಿಕ್ ಸುದ್ದಿತಾಣವು ವರದಿ ಮಾಡಿದ ನಂತರದಲ್ಲಿ ಸರ್ಕಾರವು ಈ ಸುದ್ದಿತಾಣವನ್ನು ಗುರಿಯಾಗಿಸಿಕೊಂಡಂತೆ ಕಾಣುತ್ತಿದೆ. ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಕೇಂದ್ರವು ನಡೆಸಿದ ಇನ್ನೊಂದು ಯತ್ನ ಇದು ಎಂಬುದು ನಮ್ಮ ನಂಬಿಕೆ. ಮಾಧ್ಯಮ ಸಂಸ್ಥೆಯೊಂದರ ಮೇಲೆ ದಾಳಿ ನಡೆಸುವುದು ಹಾಗೂ ಅದರ ಎಲ್ಲ ಉದ್ಯೋಗಿಗಳನ್ನು ಬೆದರಿಸುವುದು ಹಿಂದೆಂದೂ ಕೇಳಿರದ ಕೃತ್ಯ.

ಜನರ ಜೀವನೋಪಾಯಕ್ಕೆ ಸಂಬಂಧಿಸಿದ ವಿಚಾರಗಳಿಂದ ಸಾರ್ವಜನಿಕರ ಗಮನವನ್ನು ಬೇರೆಡೆ ಸೆಳೆಯಲು ಈ ದಾಳಿ ನಡೆಸಲಾಗಿದೆ. ಇದನ್ನು ನಾವು ಕಠಿಣ ಪದಗಳಲ್ಲಿ ಖಂಡಿಸುತ್ತೇವೆ. ಈ ವಿಚಾರವಾಗಿ ಈ ಪತ್ರಕರ್ತರೊಂದಿಗೆ ನಾವಿದ್ದೇವೆ. ಕೇಂದ್ರವು ಮಾಧ್ಯಮ ಸ್ವಾತಂತ್ರ್ಯದ ಮೇಲೆ ದಾಳಿ ನಡೆಸುವುದನ್ನು ತಕ್ಷಣ ನಿಲ್ಲಿಸಬೇಕು ಎಂದು ಆಗ್ರಹಿಸುತ್ತೇವೆ.

ನ್ಯಾಷನಲ್ ಅಲಯನ್ಸ್ ಆಫ್ ಜರ್ನಲಿಸ್ಟ್ಸ್, ದೆಹಲಿ ಪತ್ರಕರ್ತರ ಒಕ್ಕೂಟ, ಕೇರಳ ವೃತ್ತಿನಿರತ ಪತ್ರಕರ್ತರ ಸಂಘದ ದೆಹಲಿ ಘಟಕ

‘ಮಾಧ್ಯಮಗಳ ಬಾಯಿ ಮುಚ್ಚಿಸುವ ಯತ್ನ’

ದಾಳಿಯು ಮಾಧ್ಯಮಗಳ ಬಾಯಿ ಮುಚ್ಚಿಸುವ ಇನ್ನೊಂದು ಯತ್ನ ಎಂಬ ಕಳವಳ ನಮ್ಮದು. ಅಪರಾಧ ಆಗಿದ್ದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂಬುದನ್ನು ನಾವು ಒಪ್ಪುತ್ತೇವೆ. ಆದರೆ ಹಾಗೆ ಮಾಡುವಾಗ ಕಾನೂನು ಪ್ರಕ್ರಿಯೆಗಳನ್ನು ಪಾಲಿಸಬೇಕು. ನಿರ್ದಿಷ್ಟ ಅಪರಾಧಗಳ ಕುರಿತ ತನಿಖೆಯು, ಕಠಿಣ ಕಾನೂನಿನ ಅಡಿಯಲ್ಲಿ ಎಲ್ಲೆಡೆ ಭೀತಿ ಮೂಡಿಸುವ ಕೆಲಸ ಮಾಡಬಾರದು. ತನಿಖೆಯು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಇರುವ ಅವಕಾಶವನ್ನು, ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಹಾಗೂ ಟೀಕೆಗಳನ್ನು ಮಾಡುವ ಅವಕಾಶವನ್ನು ಕಬಳಿಸಬಾರದು.

– ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ

> **ಸರ್ಕಾರವು ಮನಸ್ಸಿಗೆ ತೋಚಿದಂತೆ, ಬೆದರಿಸುವ ರೀತಿಯಲ್ಲಿ ವರ್ತಿಸುವ ಮಾದರಿಗೆ ಇದು ಇನ್ನೊಂದು ನಿದರ್ಶನ. ನಾವು ಬೆಳವಣಿಗೆಗಳನ್ನು ಗಮನಿಸುತ್ತಿದ್ದೇವೆ.**
>
> **ಡಿಜಿಪಬ್ ನ್ಯೂಸ್ ಇಂಡಿಯಾ ಫೌಂಡೇಷನ್**

ನವದೆಹಲಿ, ನೇಪಾಳದಲ್ಲಿ ಭೂಕಂಪ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಮಂಗಳವಾರ ಮಧ್ಯಾಹ್ನ ಎರಡು ಬಾರಿ ಭೂಕಂಪದ ಅನುಭವವಾಗಿದ್ದು, ಜನರಲ್ಲಿ ಆತಂಕ ಮೂಡಿಸಿತು. ಇದರಿಂದ ಯಾವುದೇ ಜೀವಹಾನಿ ಅಥವಾ ಆಸ್ತಿ ನಷ್ಟ ಸಂಭವಿಸಿಲ್ಲ.

ನೇಪಾಳದಲ್ಲಿ ಸತತ ನಾಲ್ಕು ಬಾರಿ ಭೂಕಂಪವಾಗಿದ್ದು, ಇದರ ಬೆನ್ನಲ್ಲೇ ದೆಹಲಿ ಹಾಗೂ ಆಸುಪಾಸಿನ ನಗರಗಳಲ್ಲೂ ಭೂಮಿ ಕಂಪಿಸಿದೆ. ಭೀತರಾದ ಜನರು ರಕ್ಷಣೆಗಾಗಿ ಮನೆ, ಕಚೇರಿಗಳಿಂದ ರಸ್ತೆ, ಬಯಲು ಪ್ರದೇಶಗಳತ್ತ ಧಾವಿಸಿದರು.

‘ರಿಕ್ಟರ್ ಮಾಪಕದಲ್ಲಿ 4.6ರಷ್ಟು ತೀವ್ರತೆ ಇದ್ದ ಮೊದಲ ಭೂಕಂಪ ನೇಪಾಳದಲ್ಲಿ ಮಧ್ಯಾಹ್ನ 2.25ಕ್ಕೆ ಸಂಭವಿಸಿತು. ಮಧ್ಯಾಹ್ನ 2.51ರ ವೇಳೆಗೆ ಎರಡನೇ ಬಾರಿಗೆ ಭೂಕಂಪವಾಗಿದ್ದು, ಇದರ ತೀವ್ರತೆ 6.2ರಷ್ಟಿತ್ತು’ ಎಂದು ರಾಷ್ಟ್ರೀಯ ಸೂಕ್ಷ್ಮ ಭೂಕಂಪನಶಾಸ್ತ್ರ ಕೇಂದ್ರದ (ಎನ್‌ಸಿಎಸ್) ಅಧಿಕಾರಿಗಳು ತಿಳಿಸಿದ್ದಾರೆ.

ನಂತರ ಮಧ್ಯಾಹ್ನ 3.06 ಮತ್ತು 3.19ಕ್ಕೆ ಮತ್ತೆ ಭೂಕಂಪನವಾಗಿದ್ದು, ಇದರ ತೀವ್ರತೆ ಕ್ರಮವಾಗಿ 3.6, 3.1ರಷ್ಟಿತ್ತು. ಭೂಕಂಪದ ವೇಳೆ ಮನೆ, ಕಚೇರಿಗಳಲ್ಲಿ ಫ್ಯಾನ್, ಇತರೆ ವಸ್ತುಗಳು ಅಲುಗಾಡಿದ್ದ ದೃಶ್ಯಗಳನ್ನು ಸುದ್ದಿವಾಹಿನಿಗಳು ಬಿತ್ತರಿಸಿದವು.

ನವದೆಹಲಿಯಲ್ಲಿ ಮಂಗಳವಾರ ಮಧ್ಯಾಹ್ನ ಭೂಕಂಪ ಸಂಭವಿಸಿದ್ದರಿಂದ ಆತಂಕಗೊಂಡ ಜನರು ಕಚೇರಿಗಳಿಂದ ಹೊರಗೆ ಬಂದರು –ಪಿಟಿಐ ಚಿತ್ರ

ಅಸ್ಸಾಂ: ಸ್ಥಳೀಯ ಮುಸ್ಲಿಮರ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಅಸ್ಸಾಂನ ಸ್ಥಳೀಯ ಮುಸ್ಲಿಂ ಸಮುದಾಯದ ಐದು ಪಂಗಡಗಳ ಸಾಮಾಜಿಕ– ಆರ್ಥಿಕ ಸಮೀಕ್ಷೆ ನಡೆಸಲು ರಾಜ್ಯದ ಬಿಜೆಪಿ ನೇತೃತ್ವದ ಸರ್ಕಾರವು ಅಧಿಕಾರಿಗಳಿಗೆ ಮಂಗಳವಾರ ನಿರ್ದೇಶನ ನೀಡಿದೆ.

ಬಿಹಾರದ ಜಾತಿ ಗಣತಿಯ ದತ್ತಾಂಶವನ್ನು ನಿತೀಶ್ ಕುಮಾರ್ ಸರ್ಕಾರ ಬಹಿರಂಗಗೊಳಿಸಿದ ಬೆನ್ನಲ್ಲೇ, ಬಹುಕಾಲದ ಈ ಬೇಡಿಕೆಯನ್ನು ಈಡೇರಿಸಲು ಅಸ್ಸಾಂ ಸರ್ಕಾರ ಮುಂದಾಗಿದೆ.

ಅಸ್ಸಾಂನ ಸ್ಥಳೀಯ ಮುಸ್ಲಿಂ ಸಮುದಾಯದ ಪಂಗಡಗಳು ಎಂದು ಗೋರಿಯಾ, ಮೋರಿಯಾ, ದೇಸಿ, ಸಯೆದ್ ಮತ್ತು ಜುಲಾಹ ಪಂಗಡಗಳನ್ನು ಗುರುತಿಸಲಾಗಿದೆ. ಈ ಸಮುದಾಯವು ಸುಮಾರು 40 ಲಕ್ಷ ಜನಸಂಖ್ಯೆ ಹೊಂದಿದೆ.

ಸಮೀಕ್ಷೆ ಆರಂಭಿಸಲು ಮುಂದಡಿ ಇಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರು ಮಂಗಳವಾರ ನಡೆದ ಸಭೆಯಲ್ಲಿ ನಿರ್ದೇಶನ ನೀಡಿದರು. ಸಮೀಕ್ಷೆಯ ದತ್ತಾಂಶವನ್ನು ಆಧರಿಸಿ ಈ ಪಂಗಡಗಳ ಸಾಮಾಜಿಕ–ರಾಜಕೀಯ ಮತ್ತು ಶೈಕ್ಷಣಿಕ ಉನ್ನತಿಗೆ ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಕಚೇರಿಯ ಪ್ರಕಟಣೆ ತಿಳಿಸಿದೆ.

ದ್ವೇಷ ಭಾಷಣ: 107 ಜನಪ್ರತಿನಿಧಿಗಳ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ 107 ಸಂಸದರು/ ಶಾಸಕರ ವಿರುದ್ಧ ದ್ವೇಷ ಭಾಷಣದ ಪ್ರಕರಣಗಳು ದಾಖಲಾಗಿವೆ ಎಂದು ಕಾನೂನು ಆಯೋಗ ಗುರುತಿಸಿರುವುದಾಗಿ ಸರ್ಕಾರೇತರ ಸಂಸ್ಥೆ ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್‌ನ (ಎಡಿಆರ್) ವರದಿಯಿಂದ ತಿಳಿದುಬಂದಿದೆ.

ದೇಶದ 4,768 ಸಂಸದರು ಮತ್ತು ಶಾಸಕರನ್ನು ಎಡಿಆರ್ ವಿಶ್ಲೇಷಣೆಗೊಳಪಡಿಸಿತ್ತು. ಒಟ್ಟು ಪ್ರಕರಣಗಳಲ್ಲಿ ಶೇ 40ರಷ್ಟು ಪ್ರಕರಣಗಳು ಬಿಜೆಪಿ ಶಾಸಕರು ಮತ್ತು ಸಂಸದರ ವಿರುದ್ಧ ದಾಖಲಾಗಿವೆ ಎಂದು ಸಂಸ್ಥೆ ತಿಳಿಸಿದೆ.

ಕಾನೂನು ಆಯೋಗದ ಪ್ರಕಾರ, ಭಾರತೀಯ ದಂಡ ಸಂಹಿತೆಯ 124(ಎ), 153(ಎ), 153(ಬಿ), 295(ಎ), 298, 505(1) ಮತ್ತು 505(2) ಸೆಕ್ಷನ್‌ಗಳು ಮತ್ತು ಇತರ ಶಾಸನಗಳ ಸಂಬಂಧಪಟ್ಟ ಸೆಕ್ಷನ್‌ಗಳನ್ನು ದ್ವೇಷ ಭಾಷಣದ ಅಡಿ ಗುರುತಿಸಲಾಗುತ್ತದೆ. ಅಭ್ಯರ್ಥಿಗಳು ಘೋಷಿಸಿಕೊಂಡಿರುವ ಅಫಿಡವಿಟ್ಟುಗಳ ಆಧಾರದಲ್ಲಿ ಈ ವಿಶ್ಲೇಷಣೆ ನಡೆಸಲಾಗಿದೆ.

ಎಡಿಆರ್ ಬಿಡುಗಡೆ ಮಾಡಿರುವ ಪಟ್ಟಿಯ ಪ್ರಕಾರ ಬಿಜೆಪಿಯ 42 ಶಾಸಕರು/ ಸಂಸದರು, ಕಾಂಗ್ರೆಸ್‌ನ 15, ಎಎಪಿಯ ಏಳು, ಡಿಎಂಕೆ, ಸಮಾಜವಾದಿ ಪಕ್ಷ ಮತ್ತು ವೈಎಸ್‌ಆರ್ ಕಾಂಗ್ರೆಸ್‌ನಿಂದ ತಲಾ ಐವರು, ಆರ್‌ಜೆಡಿಯ ನಾಲ್ವರು ಜನಪ್ರತಿನಿಧಿಗಳ ವಿರುದ್ಧ ಪ್ರಕರಣಗಳು ದಾಖಲಾಗಿವೆ.

ಬಿಜೆಪಿ ಸಂಸದ ರಮೇಶ್ ಬಿಧೂಢಿ ಅವರು ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ಅವರ ವಿರುದ್ಧ ಲೋಕಸಭೆಯಲ್ಲಿ ಆಕ್ಷೇಪಾರ್ಹ ಹೇಳಿಕೆ ನೀಡಿದ್ದರು. ಬಿಧೂಢಿ ನಡೆಯನ್ನು ವಿರೋಧ ಪಕ್ಷಗಳು ಖಂಡಿಸಿದ್ದವು. ಇದಾದ ಕೆಲ ದಿನಗಳಲ್ಲೇ ಈ ವರದಿ ಹೊರಬಿದ್ದಿದೆ.

ಸಂಸದರ ಪಟ್ಟಿ: ರಾಜ್ಯದ ಏಳು ಸಂಸದರ ವಿರುದ್ಧ ದ್ವೇಷ ಭಾಷಣ ಪ್ರಕರಣಗಳು ದಾಖಲಾಗುವ ಮೂಲಕ ಉತ್ತರ ಪ್ರದೇಶವು ಸಂಸದರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ತಮಿಳುನಾಡು (4 ಸಂಸದರು), ಬಿಹಾರ, ಕರ್ನಾಟಕ ಮತ್ತು ತೆಲಂಗಾಣ (ತಲಾ 3), ಅಸ್ಸಾಂ, ಗುಜರಾತ್, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳ (ತಲಾ 2) ಜಾರ್ಖಂಡ್, ಮಧ್ಯಪ್ರದೇಶ, ಕೇರಳ, ಒಡಿಶಾ ಮತ್ತು ಪಂಜಾಬ್ (ತಲಾ 1) ರಾಜ್ಯಗಳಿವೆ.

ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಚೌಧರಿ

₹3 ಲಕ್ಷ ಕೋಟಿ ವೆಚ್ಚದ ಶಸ್ತ್ರಾಸ್ತ್ರ ಖರೀದಿ

ನವದೆಹಲಿ (ಪಿಟಿಐ): ‘ಮುಂದಿನ ಏಳೆಂಟು ವರ್ಷಗಳಲ್ಲಿ ₹2.5 ಲಕ್ಷದಿಂದ ₹3 ಲಕ್ಷ ಕೋಟಿ ಮೌಲ್ಯದ ಯುದ್ಧ ಸಲಕರಣೆಗಳು, ಶಸ್ತ್ರಾಸ್ತ್ರಗಳನ್ನು ಭಾರತೀಯ ವಾಯುಪಡೆ ಖರೀದಿಸಲು ಉದ್ದೇಶಿಸಿದೆ. ಜತೆಗೆ ಹೆಚ್ಚುವರಿಯಾಗಿ ತೇಜಸ್ ಮಾರ್ಕ್ 1–ಎ ಸರಣಿಯ 97 ಲಘು ಯುದ್ಧ ವಿಮಾನಗಳನ್ನೂ ಖರೀದಿಸಲು ಯೋಜಿಸಿದೆ’ ಎಂದು ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಹೇಳಿದ್ದಾರೆ.

ಅಕ್ಟೋಬರ್ 8ರಂದು ನಡೆಯಲಿರುವ ವಾಯುಪಡೆ ಸಂಸ್ಥಾಪನಾ ದಿನದ ಕುರಿತು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಕ್ಷಣಾ ಸಚಿವಾಲಯವು 83 ಯುದ್ಧ ವಿಮಾನಗಳ ಖರೀದಿಗೆ 2021ರ ಫೆಬ್ರುವರಿಯಲ್ಲಿಯೇ ₹48,000 ಕೋಟಿ ಮೊತ್ತದ ಒಪ್ಪಂದ ಮಾಡಿಕೊಂಡಿದೆ. ಈಗ ಇನ್ನಷ್ಟು ಯುದ್ಧ ವಿಮಾನಗಳ ಖರೀದಿಗೆ ರೂಪಿಸಿದ ಯೋಜನೆಯ ಕುರಿತು ವಾಯುಪಡೆ ಮುಖ್ಯಸ್ಥರು ಮಾಹಿತಿ ಹಂಚಿಕೊಂಡಿದ್ದಾರೆ.

ಪೂರ್ವ ಲಡಾಖ್ ಸೇರಿದಂತೆ ಗಡಿಭಾಗದ ವಾಸ್ತವಿಕ ನಿಯಂತ್ರಣ ರೇಖೆಯಲ್ಲಿನ (ಎಲ್‌ಎಸಿ) ಪರಿಸ್ಥಿತಿ ಮೇಲೆ ನಿರಂತರವಾಗಿ ನಿಗಾ ವಹಿಸಲಾಗಿದೆ. ಗಡಿ ಮುಂಚೂಣಿ ಸ್ಥಳಗಳಲ್ಲಿ ಬಿಕ್ಕಟ್ಟು ವಾತಾವರಣ ಪೂರ್ಣವಾಗಿ ಶಮನವಾಗುವವರೆಗೆ ವಾಯುಪಡೆಯು ನಿರಂತರವಾಗಿ ಕಾರ್ಯಾಚರಿಸಲಿದೆ. ವಾಯುಪಡೆಯ ಯೋಜನೆಗಳು ಈಗ ಹೆಚ್ಚು ಚುರುಕಿನಿಂದ ಕೂಡಿವೆ ಎಂದೂ ಅವರು ತಿಳಿಸಿದ್ದಾರೆ.

ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟವರ ಸಂಖ್ಯೆ 31ಕ್ಕೆ ಏರಿಕೆ

ನಾಂದೇಡ್: ಸಮಗ್ರ ತನಿಖೆಗೆ ಖರ್ಗೆ ಆಗ್ರಹ

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ/ ಛತ್ರಪತಿ ಸಂಭಾಜಿನಗರ(ಪಿಟಿಐ): ನಾಂದೇಡ್‌ನ ಡಾ.ಶಂಕರರಾವ್ ಚವಾಣ್ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಮತ್ತೆ ಏಳು ಜನ ರೋಗಿಗಳು ಮೃತಪಟ್ಟಿದ್ದು, ಇದರೊಂದಿಗೆ ಮೃತರ ಸಂಖ್ಯೆ 31ಕ್ಕೆ ಏರಿದಂತಾಗಿದೆ.

‘ಈ ಏಳು ಸಾವುಗಳು ಅ. 1 ಹಾಗೂ 2ರ ನಡುವೆ ಸಂಭವಿಸಿವೆ’ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಇನ್ನೊಂದೆಡೆ, ನಾಂದೇಡ್ ಆಸ್ಪತ್ರೆಯಲ್ಲಿ ಸಂಭವಿಸಿರುವ ಸಾವುಗಳ ವಿಚಾರವಾಗಿ ಮಹಾರಾಷ್ಟ್ರ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್, ಘಟನೆ ಕುರಿತು ಸಮಗ್ರ ತನಿಖೆ ನಡೆಸುವಂತೆ ಆಗ್ರಹಿಸಿದೆ.

‘ಮಹಾರಾಷ್ಟ್ರದ ನಾಂದೇಡ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ಸಂಭವಿಸಿರುವ ಸಾವುಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಏಕೆ ಮೌನವಹಿಸಿದ್ದಾರೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದ್ದಾರೆ.

ಸಂಭಾಜಿನಗರ ಸರ್ಕಾರಿ ಆಸ್ಪತ್ರೆಯಲ್ಲಿ 18 ಸಾವು

ಛತ್ರಪತಿ ಸಂಭಾಜಿನಗರ(ಪಿಟಿಐ): ನಗರದ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ (ಜಿಎಂಸಿಎಚ್) ಮಂಗಳವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಕನಿಷ್ಠ 18 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಈ ಪೈಕಿ, ನಾಲ್ವರು ಆಸ್ಪತ್ರೆಗೆ ಕರೆತರುವ ಮೊದಲೇ ಸಾವನ್ನಪ್ಪಿದ್ದರು’ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ತಿಳಿಸಿದ್ದಾರೆ. ‘ಆಸ್ಪತ್ರೆಯಲ್ಲಿ ಜೀವರಕ್ಷಕ ಔಷಧಗಳ ಕೊರತೆ ಇಲ್ಲ. 18 ಮಂದಿ ಸಾವಿಗೆ ಸಂಬಂಧಿಸಿದಂತೆ, ಕೊನೆ ಗಳಿಗೆಯಲ್ಲಿ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದ ರೋಗಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದೂ ಅವರು ಹೇಳಿದ್ದಾರೆ.

❦ ಸುಭಾಷಿತ ❦

ತಪ್ಪು ಹುಡುಕುತ್ತಾ ಹೋಗಬೇಡಿ, ಪರಿಹಾರ ಹುಡುಕಿ.
–ಹೆನ್ರಿ ಫೋರ್ಡ್

ಒಬಿಸಿ ಪ್ರಾಬಲ್ಯ: ದೇಶದಲ್ಲಿ ಹೊಸ ರಾಜಕೀಯ ಸಮೀಕರಣ ಸಾಧ್ಯ

ಬಿಹಾರ ಸರ್ಕಾರವು ಜಾತಿಗಣತಿಯ ವರದಿಯನ್ನು ಬಿಡುಗಡೆ ಮಾಡಿದೆ. ಇದರಿಂದಾಗಿ, ಜಾತಿಯು ಸಾಮಾಜಿಕ ನ್ಯಾಯದ ಹೊಸ ಆಯಾಮದ ರೂಪದಲ್ಲಿ ಮುನ್ನೆಲೆಗೆ ಬರಲಿದೆ. ಕೆಲವು ಪ್ರಮುಖ ರಾಜ್ಯಗಳ ವಿಧಾನಸಭೆ ಮತ್ತು ಲೋಕಸಭೆಗೆ ಚುನಾವಣೆ ಸನಿಹವಾಗಿರುವ ಈ ಸಂದರ್ಭದಲ್ಲಿ ಭಾರತದ ರಾಜಕಾರಣದಲ್ಲಿ ಜಾತಿಯನ್ನು ಈ ಸಮೀಕ್ಷಾ ವರದಿಯು ಕೇಂದ್ರ ಸ್ಥಾನಕ್ಕೆ ತಂದು ನಿಲ್ಲಿಸುವ ಸಾಧ್ಯತೆ ಇದೆ. ಜಾತಿಗಣತಿಯ ವರದಿಯು ಚುನಾವಣೆಯ ಆಚೆಗೂ ಪರಿಣಾಮ ಬೀರಬಹುದಾಗಿದ್ದು, ಇದು ಮಂಡಲ್ 2.0 ಹಂತ ಎಂಬ ವಿಶ್ಲೇಷಣೆಯೂ ಇದೆ. ಸರ್ಕಾರ, ಸಾರ್ವಜನಿಕ ಸೇವೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸಮರ್ಪಕ ಪ್ರಾತಿನಿಧ್ಯ ಒದಗಿಸುವುದು ಮಂಡಲ್ ರಾಜಕಾರಣದ ಕೇಂದ್ರವಾಗಿತ್ತು. ಪ್ರಧಾನಿಯಾಗಿದ್ದ ವಿ.ಪಿ.ಸಿಂಗ್ ಅವರು 1990ರಲ್ಲಿ ಮಂಡಲ್ ಆಯೋಗದ ವರದಿಯನ್ನು ಜಾರಿಗೊಳಿಸಿದ ಬಳಿಕ ಇದು ದೇಶದ ರಾಜಕಾರಣದ ಗತಿಯನ್ನೇ ಬದಲಿಸಿತು. ಇತರ ಹಿಂದುಳಿದ ವರ್ಗಗಳ ಕುರಿತು ನಿಖರವಾದ ಮಾಹಿತಿಯ ಆಧಾರದಲ್ಲಿ ಮಂಡಲ್ ವರದಿಯನ್ನು ಸಿದ್ಧಪಡಿಸಲಾಗಿರಲಿಲ್ಲ. ಬದಲಿಗೆ, 1931ರ ಜನಗಣತಿಯ ದತ್ತಾಂಶಗಳ ಆಧಾರದಲ್ಲಿ ಈ ವರದಿ ಸಿದ್ಧವಾಗಿತ್ತು. ಇತರ ಹಿಂದುಳಿದ ವರ್ಗಗಳು ಮತ್ತು ಅತ್ಯಂತ ಹಿಂದುಳಿದ ವರ್ಗಗಳು (ಇಬಿಸಿ) ಒಟ್ಟು ಜನಸಂಖ್ಯೆಯ ಶೇಕಡ 63ರಷ್ಟಿವೆ ಎಂಬುದನ್ನು ಬಿಹಾರದಲ್ಲಿ ನಡೆಸಲಾದ ಜಾತಿಗಣತಿಯು ಹೇಳಿದೆ. ಇದರಲ್ಲಿ ಒಬಿಸಿ ಪಾಲು ಶೇ 27.13ರಷ್ಟಿದ್ದರೆ, ಇಬಿಸಿ ಪಾಲು ಶೇ 36ರಷ್ಟಿದೆ.

ಜಾತಿಗಣತಿಯ ವರದಿಯು ಚುನಾವಣೆಯ ಆಚೆಗೂ ಪರಿಣಾಮ ಬೀರಬಹುದಾದ ಸಾಧ್ಯತೆ ಇದೆ

ಮಂಡಲ್ ರಾಜಕಾರಣವು ಉತ್ತರ ಭಾರತದ ಅದರಲ್ಲೂ ವಿಶೇಷವಾಗಿ ಉತ್ತರಪ್ರದೇಶ ಮತ್ತು ಬಿಹಾರದ ರಾಜಕಾರಣದ ಮೇಲೆ ಹೆಚ್ಚಿನ ಪರಿಣಾಮ ಬೀರಿತು. ಅಲ್ಲಿ ಯಾದವರಂತಹ ಹಿಂದುಳಿದ ವರ್ಗಗಳನ್ನು ಪ್ರತಿನಿಧಿಸುವ ಪಕ್ಷಗಳು ಪ್ರಾಬಲ್ಯ ಪಡೆದುಕೊಂಡವು. ಮುಂದಿನ ದಿನಗಳಲ್ಲಿ, ಬಿಜೆಪಿ ಮುಂದಿಟ್ಟ ಹಿಂದುತ್ವವಾದದ ಸಂಕಥನವು ಒಬಿಸಿ ರಾಜಕಾರಣವನ್ನು ಹಿಮ್ಮೆಟ್ಟಿಸಿತು; ಇಬಿಸಿ ಸಮುದಾಯಗಳನ್ನು ಜೊತೆಗೆ ಸೇರಿಸಿಕೊಂಡ ಬಿಜೆಪಿ, ಭಾರತದ ರಾಜಕಾರಣದಲ್ಲಿ ಹೊಸ ಸಮೀಕರಣವನ್ನು ಸೃಷ್ಟಿಸಿ ಪ್ರಾಬಲ್ಯ ಮೆರೆಯಿತು. ಬಿಹಾರದ ಜಾತಿಗಣತಿಯ ವರದಿಯು ಮುಂದಿಟ್ಟ ಇಬಿಸಿ ಸಂಖ್ಯಾಬಲವನ್ನು ಗಮನಿಸಿದರೆ, ಈಗ ಬಿಜೆಪಿ ಸೃಷ್ಟಿಸಿರುವ ರಾಜಕೀಯ ಸಮೀಕರಣವನ್ನು ಮುರಿದು ಹೊಸ ಸಮೀಕರಣವನ್ನು ಕಟ್ಟಬಹುದು ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತದೆ. ರಾಷ್ಟ್ರ ಮಟ್ಟದಲ್ಲಿ ಜಾತಿಗಣತಿ ನಡೆಸಬೇಕು ಎಂದು ಮಂಡಲ್ ಆಯೋಗದ ವರದಿಯ ಪರವಾಗಿದ್ದ ಪಕ್ಷಗಳು ಮತ್ತು ಕಾಂಗ್ರೆಸ್ ಆಗ್ರಹಿಸಲು ತೊಡಗಿವೆ. ಇಂತಹ ಸಮೀಕ್ಷೆಗಳ ಮೂಲಕ ವಿವಿಧ ಜಾತಿಗಳ ಸ್ಥಿತಿಗತಿ ಹೇಗಿದೆ ಎಂಬುದರ ಸರಿಯಾದ ಚಿತ್ರಣವನ್ನು ಪಡೆದುಕೊಳ್ಳಬಹುದು. ರಾಷ್ಟ್ರ ಮಟ್ಟದಲ್ಲಿ ಜಾತಿಗಣತಿ ನಡೆದು ಅದರ ಫಲಿತಾಂಶವು ಬಹಿರಂಗವಾದರೆ, ಈಗ ಇರುವ ಮೀಸಲಾತಿ ನೀತಿ ಬದಲಾಗಬೇಕು ಎಂಬ ಕೂಗು ಬಲವಾಗಬಹುದು.

ಒಬಿಸಿ ರಾಜಕಾರಣವನ್ನು ಮುಂಚೂಣಿಗೆ ತರುವುದಕ್ಕೆ ಹಲವು ಪ್ರಯತ್ನಗಳು ಈಗಾಗಲೇ ನಡೆದಿವೆ. ಮಹಿಳಾ ಮೀಸಲಾತಿ ಮಸೂದೆಯು ಸಂಸತ್ತಿನಲ್ಲಿ ಮಂಡನೆಯಾಗಿ ಚರ್ಚೆಗೆ ಒಳಗಾದ ಸಂದರ್ಭದಲ್ಲಿ ಒಳಮೀಸಲಾತಿ ಬೇಕು ಎಂಬ ಬೇಡಿಕೆ ದೊಡ್ಡದಾಗಿ ಕೇಳಿಬಂದಿತ್ತು. ನ್ಯಾಯಮೂರ್ತಿ ಜಿ. ರೋಹಿಣಿ ಆಯೋಗವು ಹಿಂದುಳಿದ ವರ್ಗಗಳಲ್ಲಿ ಉಪವರ್ಗೀಕರಣಕ್ಕೆ ಸಂಬಂಧಿಸಿದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಇತ್ತೀಚೆಗೆ ಸಲ್ಲಿಸಿದೆ. ಕೇಂದ್ರದಲ್ಲಿ ಈಗ ಅಧಿಕಾರದಲ್ಲಿರುವ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ರಾಷ್ಟ್ರವ್ಯಾಪಿ ಜಾತಿಗಣತಿಯನ್ನು ವಿರೋಧಿಸುತ್ತಿದೆ. ಇಂತಹ ಸಮೀಕ್ಷೆಯು ಬಿಜೆಪಿಗೆ ಅನನುಕೂಲಕರ ಸ್ಥಿತಿ ಸೃಷ್ಟಿಸಬಹುದು ಎಂಬ ಭೀತಿಯೇ ಇದಕ್ಕೆ ಕಾರಣ. ಜಾತಿಗಣತಿಯು ಆಡಳಿತಾತ್ಮಕವಾಗಿ ಕ್ಲಿಷ್ಟಕರ ಮತ್ತು ತ್ರಾಸದಾಯಕ ಎಂದು ಕೇಂದ್ರವು ಸುಪ್ರೀಂ ಕೋರ್ಟ್‌ಗೆ ಹೇಳಿದೆ. 2011ರಲ್ಲಿ ಮಾಡಲಾದ ಸಾಮಾಜಿಕ, ಆರ್ಥಿಕ ಗಣತಿಯ ವರದಿಯನ್ನು ಬಹಿರಂಗಪಡಿಸಲು ಕೇಂದ್ರವು ನಿರಾಕರಿಸಿದೆ. ದೇಶವನ್ನು ಜಾತಿಯ ಹೆಸರಿನಲ್ಲಿ ವಿಭಜಿಸಲು ವಿರೋಧ ಪಕ್ಷಗಳು ಪ್ರಯತ್ನ ಮಾಡುತ್ತಿವೆ ಎಂದು ಮೋದಿ ಅವರು ಬಿಹಾರದ ಜಾತಿಗಣತಿ ವರದಿ ಬಿಡುಗಡೆಗೆ ಸಂಬಂಧಿಸಿ ಪ್ರತಿಕ್ರಿಯೆ ನೀಡಿದ್ದಾರೆ. ಜಾತಿಗಣತಿಯು ರಾಜಕೀಯವಾಗಿ ಯಾವ ರೂಪ ಪಡೆದುಕೊಳ್ಳಬಹುದು ಎಂಬುದನ್ನು ಈಗಲೇ ಹೇಳಲು ಆಗದು. ಆದರೆ, ಬಿಜೆಪಿವಿರೋಧಿ ಪಕ್ಷಗಳು, ಅದರಲ್ಲೂ ವಿಶೇಷವಾಗಿ 'ಇಂಡಿಯಾ' ಮೈತ್ರಿಕೂಟದಲ್ಲಿರುವ ಪಕ್ಷಗಳು ಈ ವಿಚಾರವನ್ನು ಇನ್ನಷ್ಟು ಮುಂದಕ್ಕೆ ಒಯ್ಯುವುದರಲ್ಲಿ ಅನುಮಾನ ಇಲ್ಲ.

ದಿನದ ಟ್ವೀಟ್

ಇದೆಂಥ ಸ್ಥಿತಿ?

'ಆಹಾರವು ಈ ಪ್ರಪಂಚದಲ್ಲಿ ಜನಿಸುವ ಪ್ರತಿಯೊಬ್ಬರ ಹಕ್ಕು' ಎಂದು ನಾರ್ಮನ್ ಬೋರ್ಲಾಗ್ ಹೇಳಿದ್ದರು. ಆದರೆ ಎಲ್ಲೋ ಒಂದು ಕಡೆ, ಅದರಲ್ಲೂ 2023ರಲ್ಲಿ, ಹಸಿವು ನೀಗಿಸಲಾಗದ ಕಾರಣಕ್ಕೆ ಪೋಷಕರು ಮೂವರು ಹೆಣ್ಣುಮಕ್ಕಳಿಗೆ ಆಹಾರದ ಬಟ್ಟಲಿನಲ್ಲಿ ವಿಷವುಣಿಸುತ್ತಾರೆ ಎಂಬುದನ್ನು ಬಹುಶಃ ಆತ ಆಗ ಊಹಿಸಿಯೂ ಇರಲಿಲ್ಲ ಅನಿಸುತ್ತದೆ.

(ಜಲಂಧರ್ ಸಮೀಪದ ಹಳ್ಳಿಯೊಂದರಲ್ಲಿ, ಬಡತನದ ಕಾರಣದಿಂದ ಪೋಷಕರು ಮಕ್ಕಳನ್ನು ಕೊಂದ ಆರೋಪಕ್ಕೆ ಒಳಗಾಗಿ ಬಂಧನಕ್ಕೆ ಒಳಗಾಗಿರುವ ಪ್ರಕರಣಕ್ಕೆ ಪ್ರತಿಕ್ರಿಯೆ)

ದೇವಿಂದರ್ ಶರ್ಮಾ, ಲೇಖಕ

ಕಿಡಿನುಡಿ

ನಾಂದೇಡ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ನಡೆದಿರುವ ದುರಂತ ಕಂಡು ದಿಗಿಲು ಉಂಟಾಗಿದೆ ಮತ್ತು ಆಕ್ರೋಶಕ್ಕೆ ಒಳಗಾಗಿದ್ದೇನೆ. 12 ನವಜಾತ ಶಿಶುಗಳು ಸೇರಿದಂತೆ ಹಲವರು ಬಲಿಯಾಗಿರುವುದು ಮಹಾರಾಷ್ಟ್ರದ ಆರೋಗ್ಯ ಕ್ಷೇತ್ರದಲ್ಲಿನ ವಿಕೃತ್ಯ ಹಾಗೂ ಸರ್ಕಾರದ ಕೆಟ್ಟ ನಿರ್ಲಕ್ಷ್ಯಕ್ಕೆ ಕನ್ನಡಿ ಹಿಡಿಯುತ್ತದೆ. ಮಹಾರಾಷ್ಟ್ರವು ಹೊಣೆಗಾರಿಕೆ ಒಕ್ಕೊರಲಿನಿಂದ ಆಗ್ರಹಿಸುತ್ತದೆ.

ಮಿಲಿಂದ್ ದೇವ್ರಾ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಭಾನುವಾರ, 4-10-1998

• ಭಾರತ-ಪಾಕ್ ರಾಜತಾಂತ್ರಿಕರ ಉಚ್ಚಾಟನೆ

ಇಸ್ಲಾಮಾಬಾದ್, ಅ. 3 (ಪಿಟಿಐ)- ಭಾರತ ಮತ್ತು ಪಾಕಿಸ್ತಾನ ಈ ವಾರದ ಆರಂಭದಲ್ಲಿ ಪರಸ್ಪರ ಎಂಬಂತೆ ತಮ್ಮ ದೇಶಗಳಿಂದ ಒಬ್ಬೊಬ್ಬ ರಾಜತಾಂತ್ರಿಕರನ್ನು ಉಚ್ಚಾಟಿಸಿವೆ ಎಂದು ರಾಜತಾಂತ್ರಿಕ ಮೂಲಗಳನ್ನು ಉಲ್ಲೇಖಿಸಿ ಎಎಫ್‌ಪಿ ಸುದ್ದಿಸಂಸ್ಥೆ ತಿಳಿಸಿದೆ.

ಭಾರತವು ಪಾಕಿಸ್ತಾನದ ರಾಯಭಾರಿ ಕಚೇರಿಯ ಅಧಿಕಾರಿಯೊಬ್ಬರನ್ನು ಬೇಹುಗಾರಿಕೆ ಆಪಾದನೆಯ ಮೇಲೆ ಮಂಗಳವಾರ ಉಚ್ಚಾಟಿಸಿತು.

ಅದಕ್ಕೆ ಪ್ರತಿಯಾಗಿ ಪಾಕಿಸ್ತಾನವು ಭಾರತೀಯ ರಾಯಭಾರಿ ಕಚೇರಿಯ ಉನ್ನತ ಅಧಿಕಾರಿ ಎ.ಬಿ.ಶುಕ್ಲಾ ಅವರನ್ನು ಬುಧವಾರ ಉಚ್ಚಾಟಿಸಿದೆ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ.

• ಮಳೆ ಹಾನಿ: ಪರಿಹಾರಕ್ಕೆ ಮೊರೆ

ಬೆಂಗಳೂರು, ಅ. 3– ಈ ವರ್ಷ ಮುಂಗಾರು ಪ್ರಾರಂಭವಾದಂದಿನಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಆಗಿರುವ ಹಾನಿ, ನಷ್ಟ, ಆಸ್ತಿಪಾಸ್ತಿಗೆ ಆಗಿರುವ ನಷ್ಟದ ಬಗ್ಗೆ ವಿವರವಾದ ವರದಿಯನ್ನು 15 ದಿನಗಳಲ್ಲಿ ರಾಜ್ಯ ಸರ್ಕಾರವು ಕೇಂದ್ರಕ್ಕೆ ಸಲ್ಲಿಸಿ ಪರಿಹಾರ ಕೇಳಲಿದೆ.

50 ವರ್ಷಗಳ ಹಿಂದೆ

ಗುರುವಾರ, 4-10-1973

• ರಾಜ್ಯದ ಎಂಟು ಕಡೆ ಗುಂಡು: 5 ಸಾವು, 13 ಜನಕ್ಕೆ ಪೆಟ್ಟು

ಬೆಂಗಳೂರು, ಅ. 3– ಕಳೆದ ಎಪ್ಪತ್ತು ದಿನಗಳಲ್ಲಿ ರಾಜ್ಯದ ನಾನಾ ಕಡೆಗಳಲ್ಲಿ ಉದ್ರಿಕ್ತ ಜನರ ಗುಂಪನ್ನು ಚದುರಿಸಲು ಪೊಲೀಸರು 8 ಕಡೆಗಳಲ್ಲಿ ಗೋಲಿಬಾರ್ ಮಾಡಿದ್ದರಿಂದ 5 ಮಂದಿ ಸತ್ತು, 13 ಮಂದಿ ಗಾಯಗೊಂಡಿದ್ದಾರೆ. ನಾಲ್ಕು ಕಡೆಗಳಲ್ಲಿ ಪೊಲೀಸರು ಬೆದರುಗುಂಡನ್ನು ಹಾರಿಸಿ ಗುಂಪನ್ನು ಚದುರಿಸಿದರು. ಇವಲ್ಲದೆ ಹಲವು ಬಾರಿ ಅಶ್ರುವಾಯು ಹಾಗೂ ಲಾಠಿ ಪ್ರಯೋಗ ಮಾಡಬೇಕಾಯಿತು.

ಹಾಸನದ ಪೊಲೀಸ್ ಠಾಣೆಯಲ್ಲಿ ಯುವತಿಯೊಬ್ಬಳ ಮರಣ, ಬೆಲೆ ಏರಿಕೆ ಮತ್ತು ಆಹಾರ ಅಭಾವದ ಪ್ರಯುಕ್ತ ನಾನಾ ಕಡೆ ಏರ್ಪಡಿಸಲಾಗಿದ್ದ ಮೆರವಣಿಗೆಗಳು ಹಾಗೂ ಪ್ರದರ್ಶನಗಳು ಕಲ್ಲು ತೂರಾಟದಲ್ಲಿ, ಅಂಗಡಿಗಳ ಮತ್ತು ರೈಲ್ವೆ ವ್ಯಾಗನ್‌ಗಳ ಲೂಟಿಯಲ್ಲಿ ಪರ್ಯವಸಾನಗೊಂಡವು.

• ಪ್ರಾಚೀನ ಕನ್ನಡ ಸಾಹಿತ್ಯ ಗ್ರಂಥಗಳ ಗದ್ಯಾನುವಾದ ಪ್ರಕಟಣೆ: ಪರಿಷತ್ ಯೋಜನೆ

ಬೆಂಗಳೂರು, ಅ. 3– ಅಮೂಲ್ಯವಾದ ಕನ್ನಡ ಪ್ರಾಚೀನ ಕಾವ್ಯ ಸಂಪತ್ತು ಜನಸಾಮಾನ್ಯರಿಗೆ ಅರ್ಥವಾಗುವಂತೆ, ಹಳಗನ್ನಡ ಮತ್ತು ನಡುಗನ್ನಡ ಗ್ರಂಥಗಳನ್ನು ಹೊಸಗನ್ನಡ ಗದ್ಯ ರೂಪದಲ್ಲಿ ಪ್ರಕಟಿಸಲು ಕನ್ನಡ ಸಾಹಿತ್ಯ ಪರಿಷತ್ತು ಬೃಹತ್ ಯೋಜನೆ ಹಾಕಿಕೊಂಡಿದೆ.

ಪಂಡಿತರು ಮತ್ತು ಶ್ರೀಸಾಮಾನ್ಯರಿಗೆ ಅನುಕೂಲವಾಗುವಂತೆ ಮೂಲಸಹಿತವಾಗಿ ಪ್ರಕಟಣೆ ಮಾಡಲಾಗುವುದೆಂದು ಪರಿಷತ್ತಿನ ಅಧ್ಯಕ್ಷ ಜಿ.ನಾರಾಯಣ ಅವರು ಇಂದು ವರದಿಗಾರರಿಗೆ ತಿಳಿಸಿ, ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಸುಲಭ ಬೆಲೆಯಲ್ಲಿ ಮಾರಾಟ ಮಾಡುವುದಕ್ಕಾಗಿ ಸರ್ಕಾರ ನೆರವು ನೀಡಬೇಕೆಂದೂ ಅಪೇಕ್ಷಿಸಿದರು.

ಕಲಿಕೆ ವಿಸ್ತಾರಗೊಳ್ಳಲು ಸಮರ್ಪಕ ಭಾಷಾ ಕೌಶಲ ಅತ್ಯಗತ್ಯ

ಭಾಷಾ ಕೌಶಲ: ಬೇಕು ಯೋಜನೆ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಓದು, ಬರಹ, ಲೆಕ್ಕ ಮಹಾತ್ಮ ಗಾಂಧಿಯವರ ಮೂಲ ಶಿಕ್ಷಣದ ಮೂಲ ಕೌಶಲಗಳು. ನಂತರ ಗಾಂಧಿಯವರು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡುತ್ತಾರೆ. ಆದರೆ ಅವರು ಹೇಳುವ ಶಿಕ್ಷಣದ ಮೂಲ ಕೌಶಲದ ವಿಷಯವು ವರ್ತಮಾನದ ಶೈಕ್ಷಣಿಕ ಸಂದರ್ಭದಲ್ಲಿ ಬಹಳ ಮಹತ್ವ ಪಡೆದಿದೆ.

ಬಹಳಷ್ಟು ಅಧ್ಯಯನ ವರದಿಗಳು ಮಕ್ಕಳ ಓದುವ ಮತ್ತು ಬರೆಯುವ ಕೌಶಲಗಳ ಹಿಂದುಳಿಯುವಿಕೆಯ ಬಗ್ಗೆ ಹೇಳುತ್ತಿವೆ. ಅದಕ್ಕಿಂತಲೂ ಹೆಚ್ಚು ಸತ್ಯದ ವರದಿ ಸಿಗಬೇಕಾದರೆ ಪ್ರಾಥಮಿಕ ಶಾಲೆಯಿಂದ ಕಾಲೇಜುವರೆಗಿನ ಬೋಧಕರನ್ನು ಆಪ್ತವಾಗಿ, ಅನೌಪಚಾರಿಕವಾಗಿ ಮಾತನಾಡಿಸಬೇಕು. 'ಮಕ್ಕಳಿಗೆ ಓದಲು ಬರುವುದಿಲ್ಲ' ಎನ್ನುವುದೇ ಅವರ ಮುಖ್ಯ ಸಮಸ್ಯೆಯಾಗಿರುತ್ತದೆ. ಇದರರ್ಥ ಎಲ್ಲ ಮಕ್ಕಳಿಗೂ ಓದಲು ಬರುವುದಿಲ್ಲ ಎಂದಲ್ಲ. ಒಂದು ತರಗತಿಯಲ್ಲಿ ಒಬ್ಬ ವಿದ್ಯಾರ್ಥಿಗೆ ಓದಲು ಗೊತ್ತಿಲ್ಲದಿದ್ದರೂ, ಬೋಧನೆಯನ್ನು ಮುಂದುವರಿಸಲು ಆಗುವುದಿಲ್ಲ. ಆದರೆ ಪಠ್ಯವಸ್ತುವನ್ನು ಪೂರ್ಣಗೊಳಿಸಲೇಬೇಕು.

ಅಲ್ಲದೆ, ಸುಮಾರು 25 ವರ್ಷಗಳ ಹಿಂದಿನ ಸ್ಥಿತಿಗೆ ಹೋಲಿಸಿದರೆ ಪಠ್ಯಪುಸ್ತಕಗಳ ಗಾತ್ರ ಮತ್ತು ವಿಚಾರಗಳ ಭಾರ ಸುಮಾರು ಒಂದೂವರೆಯಿಂದ ಎರಡೂವರೆ ಪಟ್ಟು ಜಾಸ್ತಿಯಾಗಿದೆ. ಇತರ ಕಾರ್ಯಚಟುವಟಿಕೆಗಳ ಹೆಚ್ಚಳದಿಂದಾಗಿ ಬೋಧನಾ ಅವಧಿ ಸುಮಾರು ಶೇಕಡ 50ರಷ್ಟು ಕಡಿಮೆಯಾಗಿದೆ. ಆಗ ಬೋಧಕರು ಓದಲು ಬಾರದ ವಿದ್ಯಾರ್ಥಿಯನ್ನು ನಿರ್ಲಕ್ಷಿಸಿಯೇ ಮುಂದುವರಿಯಬೇಕಾಗುತ್ತದೆ. ಹಾಗೆ ಮುಂದುವರಿದಾಗ ಓದಲು ಬಾರದವರನ್ನು ಉತ್ತೀರ್ಣಗೊಳ್ಳುವ ಹಾಗೆ ಮಾಡುವುದು ಹೇಗೆ ಎನ್ನುವ ಸವಾಲನ್ನು ಎದುರಿಸಬೇಕಾಗುತ್ತದೆ. ಭಾಷಾ ಕೌಶಲದ ಕಲಿಕೆ ವಿದ್ಯಾರ್ಥಿಗಳಿಗೆ ಕಿರಿಯ ಪ್ರಾಥಮಿಕ ಹಂತದಲ್ಲೇ ಸಮರ್ಪಕವಾಗಿ ಆಗದಿದ್ದರೆ ಮುಂದೆ ಶಿಕ್ಷಣದ ಎಲ್ಲ ಹಂತಗಳಲ್ಲೂ ಆ ವಿದ್ಯಾರ್ಥಿಗಳು, ಅವರ ಸಹಪಾಠಿಗಳು ಮತ್ತು ಬೋಧಕರು ಸಂಕಷ್ಟವನ್ನು ಎದುರಿಸಲೇಬೇಕಾಗುತ್ತದೆ.

ಈ ರೀತಿಯ ಸನ್ನಿವೇಶದ ಹಿಂದೆ ಹಲವಾರು ಕಾರಣಗಳಿರುತ್ತವೆ. ಮೊದಲನೆಯದಾಗಿ, ಸಿಇಟಿ ಅನುಷ್ಠಾನಗೊಂಡ ನಂತರದ ದಿನಗಳಲ್ಲಿ ಇಂಗ್ಲಿಷ್ ಮಾಧ್ಯಮದ ಬಗೆಗಿನ ಪೋಷಕರ ಒಲವನ್ನು ಇದುವರೆಗೆ ಬದಲಿಸಲು ಸಾಧ್ಯವಾಗಿಲ್ಲ. ಮಾಧ್ಯಮ ಇಂಗ್ಲಿಷ್ ಆಗಿದ್ದಾಗ, ಕನ್ನಡ ಹೇಗೂ ಪರಿಸರದ ಭಾಷೆಯಾಗಿ ಬರುತ್ತದೆ, ಇಂಗ್ಲಿಷ್ ಚೆನ್ನಾಗಿ ಕಲಿತರೆ ಸಾಕು ಎಂಬ ಭಾವನೆ ಸಮಾಜದಲ್ಲಿದೆ. ವಾಸ್ತವದಲ್ಲಿ ಇದು ಎರಡು ರೀತಿಯ ಸಮಸ್ಯೆಗಳನ್ನು ನಿರ್ಮಿಸುತ್ತದೆ. ಮಗುವಿನ ಸಾಮಾಜಿಕ ಪರಿಸರವು ಇಂಗ್ಲಿಷ್‌ನದ್ದಾಗಿರದೇ ಇರುವುದರಿಂದ ಕನ್ನಡ ಭಾಷೆಯ ಕೌಶಲಗಳನ್ನು ಸಾಧಿಸದೆ ಮತ್ತೊಂದು ಭಾಷೆಯ ಕೌಶಲವನ್ನು ಸಾಧಿಸಲು ಆಗುವುದಿಲ್ಲ. ಆದರೆ ಇಂಗ್ಲಿಷ್ ಮಾಧ್ಯಮವಾಗಿದ್ದಾಗ ಸ್ವಾಭಾವಿಕವಾಗಿ ಕನ್ನಡ ಕಲಿಕೆಗೆ ಆದ್ಯತೆ ಇರುವುದಿಲ್ಲ. ಆಗ ವಿದ್ಯಾರ್ಥಿ ಕನ್ನಡವನ್ನು ವ್ಯವಸ್ಥಿತವಾಗಿ ಕಲಿಯದೆಯೇ ಇಂಗ್ಲಿಷ್ ಅನ್ನು ಕಲಿಯುತ್ತಾನೆ. ಆಗ ಅಲ್ಲಿ ಕಲಿಕಾ ಸಮಸ್ಯೆಯ ಎರಡು ಗುಂಪುಗಳು ನಿರ್ಮಾಣಗೊಳ್ಳುತ್ತವೆ.

ಮೊದಲನೆಯದು, ಕನ್ನಡ ಮತ್ತು ಇಂಗ್ಲಿಷ್ ಎರಡನ್ನೂ ಸಮರ್ಪಕವಾಗಿ ಓದಿ, ಬರೆಯಲು ಸಾಧ್ಯವಾಗದವರ ಒಂದು ಗುಂಪು. ಎರಡನೆಯದಾಗಿ, ಇಂಗ್ಲಿಷ್‌ನಲ್ಲಿ ಓದಬಲ್ಲ ಮತ್ತು ಬರೆಯಬಲ್ಲ ಒಂದು ಗುಂಪು. ಈ ಎರಡನೆಯ ಗುಂಪಿನಲ್ಲಿ ಭಾಷಾ ಕೌಶಲದ ಸಮಸ್ಯೆಯೇನೂ ಇಲ್ಲ ಎಂದು ಮೇಲ್ನೋಟಕ್ಕೆ ಅನಿಸುತ್ತದೆ. ಆದರೆ ಓದಲು, ಬರೆಯಲು ಬಂದರೂ ಯಾವುದೇ ವಸ್ತು, ವಿಚಾರ, ಪರಿಕಲ್ಪನೆಯನ್ನು ಸಮಗ್ರವಾಗಿ ಗ್ರಹಿಸಿ ತಾವೇ ನಿರೂಪಣೆ ಮಾಡುವ ಶಕ್ತಿ ಅವರಿಗೆ ಬಂದಿರುವುದಿಲ್ಲ. ಏಕೆಂದರೆ ಓದು, ಬರಹದ ಕೌಶಲ ಅವರಿಗಿದ್ದರೂ ಸಮಗ್ರವಾಗಿ ಭಾಷಾ ಕೌಶಲ ಸಾಧನೆಯಾಗಿರುವುದಿಲ್ಲ.

ಎರಡನೆಯದಾಗಿ, ಆವಿಷ್ಕಾರಗೊಳಿಸಲಾದ ಕಲಿಕಾ ಪದ್ಧತಿಗಳನ್ನು ಕಲಿಕಾ ಸನ್ನಿವೇಶಕ್ಕೆ ಒತ್ತಾಯದಿಂದ ತರುವುದೂ ಭಾಷಾ ಕೌಶಲದ ಹಿನ್ನಡೆಗೆ ಕಾರಣವಾಗಿದೆ. ಉದಾಹರಣೆಗೆ, ನಲಿ-ಕಲಿ ಪದ್ಧತಿ ಜಾರಿಗೆ ಬಂದಿತು. ಕಲಿಕಾ ಪದ್ಧತಿಯಾಗಿ ಅದು ಚೆನ್ನಾಗಿದೆ. ಆದರೆ ಕಲಿಕೋಪಕರಣಗಳು ಸೂಕ್ತ ಕಾಲಕ್ಕೆ ತಲುಪದೇ ಇದ್ದರೆ ಅಷ್ಟೂ ಕಲಿಕೆಯು ಹಿಂದುಳಿಯುತ್ತದೆ. ನಮ್ಮ ಸಾಮಾಜಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಕಾಲವಿಳಂಬ ಇಲ್ಲದಂತೆ ಯಾವುದೇ ಅಗತ್ಯವನ್ನು ಪೂರೈಸುವ ಸ್ಥಿತಿ ಇನ್ನೂ ಬಂದಿಲ್ಲ. ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಹಂತದಲ್ಲೂ ಭಾಷಾ ಕೌಶಲದ ಹಿಂದುಳಿಯುವಿಕೆಯನ್ನು ಶೈಕ್ಷಣಿಕ ಆಡಳಿತ ಗುರುತಿಸಿದೆ ಮತ್ತು ಅಂತಹ ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಭಾಷಾ ಕೌಶಲ ಕಲಿಸಲು ಸೂಚನೆಯನ್ನೂ ನೀಡುತ್ತದೆ.

ಇಷ್ಟನ್ನೇ ಮಾಡಿದರೆ ನಿಜವಾಗಿ ಸ್ವಲ್ಪ ಸಹಾಯವಾದೀತು. ಆದರೆ ಅಲ್ಲಿಗೂ ಕಲಿಕಾ ಪದ್ಧತಿಗಳು, ಹಂತಗಳು ಎಂದೆಲ್ಲ ತಂದು, ಭಾಷೆಯನ್ನು ಈ ಪದ್ಧತಿಗಳ ಮುಖಾಂತರವೇ ಕಲಿಸಬೇಕು ಎಂದು ಸೂಚಿಸಿದಾಗ ಬೋಧಕರಿಗೆ ಅದೇ ಪದ್ಧತಿಗಳನ್ನು ಅಳವಡಿಸಿದ ದಾಖಲೆಗಳನ್ನು ಸಿದ್ಧಪಡಿಸುವುದು ಮೊದಲ ಅಗತ್ಯವಾಗುತ್ತದೆ ವಿನಾ ಭಾಷಾ ಕೌಶಲ ಕಲಿಸುವುದಲ್ಲ. ನಿಜವಾಗಿ ಕಲಿಕಾ ಪದ್ಧತಿಗಳು ಗೊತ್ತಿರಬೇಕಾದದ್ದು ಬೋಧಕರಿಗೆ. ಡಿ.ಇಡಿ, ಬಿ.ಇಡಿಯಲ್ಲಿ ಅವರು ಅದನ್ನು ಅಭ್ಯಾಸ ಮಾಡಿರುತ್ತಾರೆ. ಶಿಕ್ಷಕರಿಗೆ ಕೊಡಲಾಗುವ ತರಬೇತಿಯಲ್ಲೂ ಅದನ್ನು ಹೇಳಲಾಗಿರುತ್ತದೆ. ಆದರೆ ಕಲಿಕಾ ಸನ್ನಿವೇಶದಲ್ಲಿ ಯಾವ ಮಗುವಿಗೆ ಯಾವ ಪದ್ಧತಿ ಸೂಕ್ತ ಎಂದು ನಿರ್ಧರಿಸಿ ಶಿಕ್ಷಕರೇ ಅಳವಡಿಸಿಕೊಳ್ಳಬೇಕು. ಕಲಿಸಬೇಕು ಎಂದರೆ ಸಾಕು; ಹೀಗೆಯೇ ಕಲಿಸಬೇಕು ಎಂದಾಗ ಸಮಸ್ಯೆಯಾಗುತ್ತದೆ. ಬೋಧಕರ ಕಾರ್ಯಗಳಿಗೆ ಅತಿಯಾದ ಮಧ್ಯಪ್ರವೇಶವೂ ಕಲಿಕಾ ಹಿನ್ನಡೆಗೆ ಕಾರಣ.



ಇಪ್ಪತ್ತೈದು ವರ್ಷಗಳ ಹಿಂದಿನ ಸ್ಥಿತಿಗೆ ಹೋಲಿಸಿದರೆ ಒಟ್ಟೂ ಸಮಾಜದಲ್ಲಿ ಕ್ರಿಯಾಶೀಲತೆ ಜಾಸ್ತಿಯಾಗಿದೆ. ಅದರಿಂದಾಗಿ ಬೋಧಕರ ಆಡಳಿತಾತ್ಮಕ ಹೊಣೆಗಾರಿಕೆಯೂ ಹೆಚ್ಚಾಗಿದೆ. ಶಿಕ್ಷಣದಲ್ಲಿ ಕ್ರೀಡೆ, ಕಲೆ, ಸಂಸ್ಕೃತಿ ಮತ್ತಿತರ ಪೂರಕ ಚಟುವಟಿಕೆಗಳು ಜಾಸ್ತಿಯಾಗಿವೆ. ಇವೆಲ್ಲವೂ ಆಗಬೇಕಾದ್ದೇ. ಆದರೆ ಹೀಗೆ ಆಗುವಾಗ ಪಠ್ಯಪುಸ್ತಕದ ಗಾತ್ರ ಮತ್ತು ವೈಚಾರಿಕ ಭಾರ ಕುಗ್ಗಬೇಕಾಗಿತ್ತು, ಬದಲು ಹಿಗ್ಗಿದೆ. ಬೋಧಕರ ಕಾರ್ಯಚಟುವಟಿಕೆ ಹೆಚ್ಚಾಗಿರುವಾಗ ಶಾಲೆಗಳಲ್ಲಿ ಆಡಳಿತ ಮತ್ತು ಅಕಡೆಮಿಕ್ ವಿಭಾಗಗಳು ಪ್ರತ್ಯೇಕ ಆಗಬೇಕು, ಅದು ಆಗಿಲ್ಲ. ಸಿಬ್ಬಂದಿಯ ಒದಗಣೆ ಜಾಸ್ತಿಯಾಗಬೇಕು, ಅದೂ ಆಗಿಲ್ಲ.

ಬೋಧಕರನ್ನು, ಆಡಳಿತಗಾರರನ್ನು, ಖಾಸಗಿ ಆಡಳಿತ ಮಂಡಳಿಗಳನ್ನು, ರಾಜಕಾರಣಿಗಳನ್ನು ಟೀಕಿಸುವುದರಿಂದ ಉಪಯೋಗ ಆಗುವುದಿಲ್ಲ. ಎಲ್ಲರಿಗೂ ಅವರವರ ಕೆಲಸ ಮಾಡಬೇಕೆಂಬ ಅರಿವಿರುತ್ತದೆ. ಆದರೆ ಮಾಡಲು ಸಾಧ್ಯವಾಗದ ಸನ್ನಿವೇಶ ಇರುತ್ತದೆ. ಆ ಸನ್ನಿವೇಶವನ್ನು ವಾಸ್ತವಿಕ ನೆಲೆಯಲ್ಲಿ ಮೊದಲು ಅರಿತುಕೊಳ್ಳಬೇಕು. ನಂತರ ಅದಕ್ಕೆ ತಕ್ಕುದಾದ ವ್ಯವಸ್ಥೆಯನ್ನು ಕಂಡುಕೊಳ್ಳಬೇಕು.

ಆದರೆ ಭಾಷಾ ಕೌಶಲ ಸಮರ್ಪಕವಾಗದ ವಿನಾ ಕಲಿಕೆಯು ವಿಸ್ತಾರಗೊಳ್ಳುವುದಿಲ್ಲ. ಭಾಷಾ ಸಾಮರ್ಥ್ಯ ಇಲ್ಲದಿದ್ದರೆ ಮೇಲು ಮೇಲಿನ ತರಗತಿಗಳಿಗೆ ಹೋಗುತ್ತಿದ್ದ ಹಾಗೆಲ್ಲ ಕಲಿಕಾ ದಕ್ಷತೆಯು ಕುಸಿಯುತ್ತಾ ಹೋಗುತ್ತದೆ. ಆದ್ದರಿಂದ ಸಾರ್ವತ್ರಿಕ ಭಾಷಾ ಕೌಶಲದ ಸಾಧನೆಗೆ ಆದ್ಯತೆಯನ್ನು ನೀಡಬೇಕು.

ಮನೆಯಲ್ಲೇ ಇಂಗ್ಲಿಷ್‌ನಲ್ಲಿ ವ್ಯವಹರಿಸುವ ಕುಟುಂಬಗಳನ್ನು ಹೊರತುಪಡಿಸಿ ಹೇಳುವುದಾದರೆ, ಮಾತೃಭಾಷೆಯನ್ನು ಸಮರ್ಪಕವಾಗಿ ಕಲಿಯದೆ ಇಂಗ್ಲಿಷನ್ನು ಕಲಿಯಲು ಸಾಧ್ಯ ಎಂದು ಭಾವಿಸುವುದು ತಪ್ಪಾಗುತ್ತದೆ. ಮಾತೃಭಾಷಾ ಕೌಶಲಗಳನ್ನು ಸಮರ್ಪಕಗೊಳಿಸಿದ ನಂತರವಷ್ಟೇ ಇಂಗ್ಲಿಷ್‌ನ ಸಾಮರ್ಥ್ಯವನ್ನೂ ಗಳಿಸಿಕೊಳ್ಳಲು ಸಾಧ್ಯ ಮತ್ತು ಮಾತೃ ಭಾಷಾ ಸಾಮರ್ಥ್ಯ ಇದ್ದಾಗ ಇಂಗ್ಲಿಷ್ ಅನ್ನು ಕಲಿಯುವುದು ಸುಲಭವಾಗುತ್ತದೆ. ಆದ್ದರಿಂದ ಮೊದಲು ಭಾಷಾ ಸಾಮರ್ಥ್ಯದ ಕೊರತೆ ಇರುವ ಮಕ್ಕಳನ್ನು ಗುರುತಿಸಬೇಕು. ಈ ಗುರುತಿಸುವಿಕೆಗೆ ಹೊರಡುವ ಮೊದಲು ಸತ್ಯ ಮಾಹಿತಿಯನ್ನು ಕೊಟ್ಟದ್ದಕ್ಕಾಗಿ ಬೋಧಕರನ್ನು ಶಿಕ್ಷೆಗೆ ಗುರಿ ಮಾಡಲಾಗುವುದಿಲ್ಲ ಎಂಬ ಭರವಸೆ ನೀಡಬೇಕು. ಈ ಭರವಸೆಯನ್ನು ನೀಡದೇ ಇದ್ದರೆ ಸತ್ಯ ಮಾಹಿತಿ ಎಂದೂ ಸಿಗುವುದಿಲ್ಲ. ಹೀಗೆ ಗುರುತಿಸಲ್ಪಟ್ಟ ಮಕ್ಕಳಿಗೆ ಅವರು ಯಾವ ಹಂತದಲ್ಲಿದ್ದಾರೊ ಆ ಹಂತದ ಇತರ ಪಠ್ಯಗಳ ಕಲಿಕೆಯಿಂದ ಒಂದು ವರ್ಷ ವಿನಾಯಿತಿಯನ್ನು ನೀಡಬೇಕು. ಭಾಷೆಯನ್ನು ಮಾತ್ರ ಕಲಿತು ಅದರ ಆಧಾರದಲ್ಲೇ ಪರೀಕ್ಷೆ ನಡೆಸಿ ಉತ್ತೀರ್ಣಗೊಳಿಸಲು ಸೂಕ್ತ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಬೇಕು.

ಚುರುಮುರಿ

ನಮ್ಮೂರಿಗೊಂದು...

• ಮಣ್ಣೆ ರಾಜು

'ನಮ್ಮೂರಿಗೂ ಮದ್ಯದಂಗಡಿ ಬೇಕು...' ಚಟ್ನಿಹಳ್ಳಿ ಗ್ರಾಮಸ್ಥರ ಸಭೆಯಲ್ಲಿ ಒಂದು ಗುಂಪು ಒತ್ತಾಯ ಮಾಡಿತು.

'ನಮ್ಮೂರ ಜನ ಪಕ್ಕದೂರಿನ ಮದ್ಯದಂಗಡಿಗೆ ಹೋಗುವಂತಾಗಿದೆ. ಒಂದು ಎಣ್ಣೆ ಅಂಗಡಿ ಮಾಡಿಕೊಳ್ಳೋ ಯೋಗ್ಯತೆ ನಿಮ್ಮೂರಿನವರಿಗಿಲ್ಲ ಅಂತ ಆ ಊರಿನವರು ನಮ್ಮನ್ನು ಹಂಗಿಸುತ್ತಾರೆ' ಸೀನ ಸಿಟ್ಟಿಗೆದ್ದ.

'ನಮ್ಮೂರಲ್ಲೂ ಮದ್ಯದಂಗಡಿ ತೆರೆದು ನಾವು ಸ್ವಾವಲಂಬಿ ಆಗಬೇಕು' ಅಂದ ವೆಂಕಿ.

'ಎಣ್ಣೆ ಅಂಗಡಿ ಸಹವಾಸ ಮಾಡಿದ್ರೆ ಸಂಸಾರ ಉಳಿತಾವೇನ್ರೋ? ಮಕ್ಕಳುಮರಿ ಕುಡಿತ ಕಲಿತುಬಿಟ್ರೆ ಗತಿ ಏನ್ರೋ?' ತಿಮ್ಮಜ್ಜ ಕಳವಳಗೊಂಡ. 'ಹಾಗೇನಾಗಲ್ಲ ಬಿಡಜ್ಜಾ, ಅಬಕಾರಿ ಇಲಾಖೆ ಸಹಯೋಗದಲ್ಲಿ ಕುಡಿತದ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಕಾರ್ಯಕ್ರಮ ಮಾಡಿಸ್ತೀವಿ' ಅಂದ ಪುಟ್ಟಾಮಿ.

'ಊರಿಗೆ ಹೈಸ್ಕೂಲ್ ಬೇಕು, ಆಸ್ಪತ್ರೆ ಬೇಕು, ಕುಡಿಯುವ ನೀರು ಬೇಕು ಅಂತ ಸರ್ಕಾರವನ್ನು ಕೇಳೋದು ಬಿಟ್ಟು ಎಣ್ಣೆ ಅಂಗಡಿ ಬೇಕು ಅನ್ನೋದು ಸರಿಯೇನ್ರಲಾ?' ತಿಮ್ಮಜ್ಜ ಗದರಿದ.

'ರಸ್ತೆ, ಚರಂಡಿ, ರೇಷನ್ ಡಿಪೋದಂತೆ ಎಣ್ಣೆ ಅಂಗಡಿಯೂ ಸರ್ಕಾರದ ಸೌಲಭ್ಯ. ಅದೂ ಮೂಲ ಸೌಕರ್ಯವೇ' ಸೂರಿ ಹೇಳಿದ.

'ನಮ್ಮೂರಿಗೆ ಒಂದು ಬ್ಯೂಟಿಪಾರ್ಲರ್ ಬೇಕು' ಸರೋಜ ಒತ್ತಾಯಿಸಿದಳು.

'ಯವ್ವಾ! ವ್ಯವಸಾಯ ನಂಬಿಕೊಂಡು ಬಿಸಿಲು, ಮಳೆ ಎನ್ನದೆ ದಿನಬೆಳಗಾದ್ರೆ ಹೊಲ, ಗದ್ದೆಯಲ್ಲಿ ದುಡಿಯುವ ನಾವು, ಕೆಲ್ಸಕಾರ್ಯ ಬಿಟ್ಟು ಸೌಂದರ್ಯ, ಕೇಶ ವಿನ್ಯಾಸ, ತ್ವಚೆ, ಗೌರವ ವರ್ಣ ಅಂತ ಅಂದ, ಅಲಂಕಾರ ಮಾಡಿಕೊಂಡಿದ್ರೆ ಸಂಸಾರ ಮಾಡಲಾಗುತ್ತೇನೆ? ಮದ್ಯವ್ಯಸನದಂತೆ ಸೌಂದರ್ಯವ್ಯಸನವೂ ಅಪಾಯಕಾರಿ' ನಂಜಮ್ಮ ರೇಗಿದಳು.

'ಗಂಡಸರು ಕುಡಿದು ತೂರಾಡಿದರೆ, ಹೆಂಗಸರು ಅಲಂಕಾರ ಮಾಡಿಕೊಂಡು ತಾರಾಡಿದರೆ ಊರು ಉದ್ಧಾರವಾಗುತ್ತಾ? ನಮ್ಮೂರಿಗೆ ಎಣ್ಣೆ ಅಂಗಡಿನೂ ಬೇಡ, ಬ್ಯೂಟಿಪಾರ್ಲರ್ರೂ ಬೇಡ' ಎಂದು ಹೇಳಿ ತಿಮ್ಮಜ್ಜ ಸಭೆಯಿಂದ ಹೊರಟ.

ಸಂಗತ

ನದಿ ನೀರು, ಕಡಲಿಗೂ ಪಾಲಿದೆ!

ನದಿಗಳ ದಿಕ್ಕನ್ನು ಬದಲಿಸುವುದೆಂದರೆ ಪ್ರಕೃತಿಯ ಸ್ವಾಭಾವಿಕ ತಾಳವನ್ನು ತಪ್ಪಿಸಿದಂತೆ, ಜೇನುಗೂಡಿಗೆ ಕಲ್ಲು ಬೀಸಿದಂತೆ

• ಬಿ.ಎಸ್.ಭಗವಾನ್

'ಓಡುವ ನದಿ ಸಾಗರವ ಸೇರಲೆಬೇಕು...' 'ಬಂಗಾರದ ಹೂವು' ಸಿನಿಮಾದ ಈ ಹಾಡು ಜನಪ್ರಿಯ. ಪ್ರೇಮಿಗಳು ಎಂದಿದ್ದರೂ ಒಂದು ಎನ್ನುವುದನ್ನು ಬಿಂಬಿಸುವ ಅದರ ವಿಶ್ವಾಸವನ್ನು ಮೆಚ್ಚೋಣ. ಆದರೆ ಜಗತ್ತಿನಲ್ಲಿ ಸಾಗರ ಸೇರದ ನದಿಗಳ ಸಂಖ್ಯೆ ಕಡಿಮೆಯೇನಿಲ್ಲ!

ರಾಜಸ್ಥಾನದ ಅಜ್ಮೀರ್ ಜಿಲ್ಲೆಯ ನಾಗಾ ಬೆಟ್ಟಪ್ರದೇಶ ಮೂಲದ ಲುನಿ ನದಿಯು ಸಾಗರವನ್ನು ಸೇರುವುದಿಲ್ಲ. ನೂರು ಅಣೆಕಟ್ಟುಗಳನ್ನು ಕಟ್ಟಿಸಿಕೊಂಡ ನೈರುತ್ಯ ಅಮೆರಿಕ ಮೂಲದ ಕೊಲರಾಡೊ ನದಿಗೆ 1998ರಿಂದ ಸಮುದ್ರ ಕಾಣುವ ಮನಸ್ಸೇ ಇಲ್ಲ. ಹಾಗಾಗಿ, ನದಿಯನ್ನು ಹಿಂಬಾಲಿಸಿದರೆ ಅಂತಿಮವಾಗಿ ಸಾಗರವನ್ನು ತಲುಪಿಯೇ ತೀರುತ್ತೇವೆಂಬ ನುಡಿ ಹುಸಿ.

ಹರಿವ ಹಾದಿಯಲ್ಲಿ ಇತರ ಜಲಮೂಲಗಳಲ್ಲಿ ವಿಲೀನಗೊಳ್ಳುವ ಅಥವಾ ಬತ್ತಿ ತಮ್ಮ ಅಸ್ಮಿತೆಯನ್ನು ಕಳೆದುಕೊಳ್ಳುವ ನದಿಗಳೆಷ್ಟೊ? ನದಿಗಳು ಪ್ರವಹಿಸಿ ಸೊರಗಿ ಸರೋವರಗಳಾಗುವುದೂ ಉಂಟು. ಸುಮಾರು 69,000 ಚದರ ಕಿ.ಮೀ. ವಿಸ್ತಾರದ ವಿಕ್ಟೋರಿಯಾ ಸರೋವರ 4 ಲಕ್ಷ ವರ್ಷಗಳಷ್ಟು ಹಳೆಯದು. 3 ಕೋಟಿ ಮಂದಿಗೆ ಬದುಕು ಕೊಟ್ಟಿರುವ ಅದು ತನ್ನ ಇತಿಹಾಸದಲ್ಲಿ ಜೀರ್ಣಿಸಿಕೊಂಡ ನದಿಗಳ ಲೆಕ್ಕವಿಟ್ಟವರಾರು?

ಪರ್ವತಪ್ರದೇಶಗಳಲ್ಲಿ ಉಗಮಿಸುವ ನದಿಗಳು ತಮ್ಮ ಯಾನದಲ್ಲಿ ಬಗೆ ಬಗೆ ಸವಾಲುಗಳನ್ನು ಎದುರಿಸಬೇಕಿದೆ. ವಿಶ್ವದಾದ್ಯಂತ ಮನುಷ್ಯ ತನ್ನ ಬಳಕೆಗೆ ಒಟ್ಟು 58,000 ಭಾರಿ ಅಣೆಕಟ್ಟುಗಳನ್ನು ನಿರ್ಮಿಸಿದ್ದಾನೆ. ನದಿಯ ಇಬ್ಭಾಗದಿಂದ ಪರಿಸರದ ಮೇಲಾಗುವ ಮಾರಕ ಪರಿಣಾಮವನ್ನು ಆತ ಯೋಚಿಸಿದಂತಿಲ್ಲ. ಸಾಗರದ ಮಟ್ಟ ಏರಿಕೆಯಷ್ಟೇ ಭೂಕುಸಿತವೂ ಆತಂಕಕಾರಿ.

ಜಲಾಶಯ ನಿರ್ಮಾಣ ಮತ್ತು ಅದರ ನಿರ್ವಹಣೆಗೆ ತಗಲುವ ವೆಚ್ಚ ಅಪಾರ. ಅದಕ್ಕಾಗಿ ಮೂಲತಃ ಯುಕ್ತ ನದಿ ಕಣಿವೆ ಬಳಿಯ ನೆಲಹರವಿನ ಆಯ್ಕೆಯೇ ಸವಾಲು. ಅದೇ ಹಣವನ್ನು ಸಾಗರದ ನೀರಿನ ನಿರ್ಲವಣೀಕರಣ ಸ್ಥಾವರಗಳನ್ನು ನೆಲೆಗೊಳಿಸಲು ಬಳಸುವ ಬಗ್ಗೆ ಆಮೂಲಾಗ್ರ ಚಿಂತನೆ ನಡೆಯಬೇಕಿದೆ. ಇದರ ಜೊತೆಗೇ ಶುದ್ಧ ನೀರಿನ ಹನಿ ಹನಿಯೂ ಅಮೃತವೆನ್ನುವಂತೆ ಎಚ್ಚರಿಕೆಯ ಉಪಯೋಗ ಮತ್ತು ನೀರಿನ ಮರುಬಳಕೆ ನಡೆದೇ ತೀರಬೇಕು. ನದಿಗಳ ದಿಕ್ಕನ್ನು ಬದಲಿಸುವುದೆಂದರೆ ಪ್ರಕೃತಿಯ ಸ್ವಾಭಾವಿಕ ತಾಳವನ್ನು ತಪ್ಪಿಸಿದಂತೆ, ಜೇನುಗೂಡಿಗೆ ಕಲ್ಲು ಬೀಸಿದಂತೆ.

ನಿಸರ್ಗದ ನಿಘಂಟಿನಲ್ಲಿ 'ವ್ಯರ್ಥ' ಎನ್ನುವುದೇ ಇಲ್ಲ. ಸಮುದ್ರ ಸೇರುವ ನದಿಯ ಶುದ್ಧ ಜಲ ತನ್ನೊಂದಿಗೆ ಭೂಪ್ರದೇಶದ ಹಲವಾರು ಪೋಷಕಾಂಶಗಳನ್ನು ಒಯ್ಯುತ್ತದೆ. ಅವು ಸಾಗರಿಕ ಜೀವನಕ್ಕೆ ಆಹಾರ. ತಾಜಾ ನೀರು ಸಾಗರ ಸೇರುವುದಕ್ಕೆ ಅಡ್ಡಿಪಡಿಸಿದರೆ ಸಾಗರದ ಜೀವರಾಶಿ ಹಸಿವಿನಿಂದ ಕಂಗೆಡುವ ಪರಿಸ್ಥಿತಿ. ಎಂದಮೇಲೆ ಸಮುದ್ರಕ್ಕೆ ಇತಿಮಿತಿಯಲ್ಲಿ ನದಿಯ ನೀರನ್ನು ಹರಿಯಗೊಡುವುದೇ ವಿವೇಕ. ಅದುವೆ ಜನಕ್ಕೆ, ಸಸ್ಯ, ಪ್ರಾಣಿ ಪ್ರಭೇದಗಳ ಉಳಿವಿಗೆ, ಪರಿಸರ ವ್ಯವಸ್ಥೆಗೆ ಶ್ರೇಯಸ್ಕರ.

ನದಿಯು ಸಮುದ್ರಕ್ಕೆ ಸ್ವಾಭಾವಿಕವಾಗಿ ಧಾವಿಸಿ 'ಫ್ಲಶ್' ತರಹ ಅಲ್ಲಿನ ಕಲ್ಮಶಗಳನ್ನು ಚದುರಿಸುತ್ತದೆ. ಹೆಚ್ಚುವರಿ ಪೋಷಕಾಂಶಗಳೂ ಸಮುದ್ರದ ಆರೋಗ್ಯ ಹದಗೆಡಿಸುವ ಮಾಲಿನ್ಯಕಾರಕಗಳೇ. ಶುದ್ಧ ನೀರು ಹಗುರ, ಲವಣಯುಕ್ತ ನೀರಿನ ಮೇಲೆ ತೆಳುಪದರವಾಗಿ ತೇಲುತ್ತದೆ, ಕ್ರಮೇಣ ಸಾಗರದೊಂದಿಗೆ ವಿಲೀನಗೊಳ್ಳುವುದು. ಆ ಆಸುಪಾಸಿನ ಲವಣದ ಅಂಶ ಕ್ಷಯಿಸುತ್ತದೆ, ಸಾಂದ್ರತೆಯೂ ಕಡಿಮೆಯಾಗುತ್ತದೆ. ಸೀಮಿತ ಲವಣಯುಕ್ತ ನೀರಿನಲ್ಲಷ್ಟೇ ಬದುಕಬಲ್ಲ ಹಲವು ಸಾಗರ ಜೀವಪ್ರಭೇದಗಳಿಗೆ ಅನುಕೂಲಕರ ಸನ್ನಿವೇಶ ಪ್ರಾಪ್ತವಾಗುವುದು. ಜೀವವೈವಿಧ್ಯಕ್ಕೆ ಸಾಗರದ ಕೊಡುಗೆ ನಿರ್ಣಾಯಕ.

ನದಿಯು ಸಮುದ್ರಕ್ಕೆ ಮರಳಿದರೇನೆ ಅದು ಕೆಸರು, ಹೂಳಿನಿಂದ ಸ್ವಲ್ಪವಾದರೂ ಮುಕ್ತವಾಗುವುದು. ಮನುಷ್ಯನಿಗೆ ಬೇಕಾದ ಅರ್ಧದಷ್ಟು ಆಹಾರವನ್ನು ಸಾಗರ ಪೂರೈಸುವುದು. ಒಂದು ವೇಳೆ ಸಮುದ್ರ ಸೇರುವ ಎಲ್ಲ ನದಿಗಳನ್ನೂ ನಿರ್ಬಂಧಿಸಿದರೆ ಹಸಿವು, ಬರ, ರೋಗರುಜಿನ ತಾಂಡವವಾಡುತ್ತವೆ. ಜೀವ ಪ್ರಭೇದಗಳ ತವರು, ಮೂಲ ಸಂಪನ್ಮೂಲಗಳ ಭಂಡಾರವಾದ ಸಾಗರವು ಭೂಗ್ರಹದ ವಾತಾವರಣವನ್ನು ನಿಯಂತ್ರಿಸುತ್ತದೆ. ವಿಶ್ವದ ಆರ್ಥವ್ಯವಸ್ಥೆ, ವ್ಯಾಪಾರ, ಪ್ರವಾಸೋದ್ಯಮಕ್ಕೆ ಸಮುದ್ರವೇ ಅಡಿಗಲ್ಲು. ಕಡಲತೀರ ಪ್ರದೇಶಗಳಿಗೆ ಹೊಂದಿಕೊಂಡ ಸೌಂದರ್ಯ, ಪ್ರಾಕೃತಿಕ ರಮ್ಯತೆ ಹಾಗೂ ಸಾಂಸ್ಕೃತಿಕ ಮೌಲ್ಯಗಳು ಕಳೆದುಹೋಗುತ್ತವೆ.

ನದಿಮುಖದಲ್ಲಿ (ನದಿಯು ಸಾಗರ ಸೇರುವ ಸ್ಥಳ) ನೀರಿರದಿದ್ದರೆ ಸಾಗರ ಬರಿದಾಗುವುದು. ಆಮ್ಲಜನಕದ ಪ್ರಧಾನ ಆಕರವಾದ ಸಾಗರವೇ ಇಲ್ಲವಾದರೆ ಬದುಕೆಲ್ಲಿ? ಪೂರ್ವ-ಪಶ್ಚಿಮದ ಸಮನ್ವಯ ಸಾಹಿತಿಯೆಂದು ಪ್ರಸಿದ್ಧರಾಗಿದ್ದ ಲೆಬನಾನ್ ಮೂಲದ ಖಲೀಲ್ ಗಿಬ್ರಾನ್ ಅವರ ಕವನದ ಸಾಲಿದು: 'ನದಿ ಸಮುದ್ರಕ್ಕೆ ಬರಲಿ, ಅದು ಹಿಂದಕ್ಕೆ ಹೋಗಲಾಗದು'. ನದಿಯು ಸಮುದ್ರ ಸೇರುವುದು ನಿಸರ್ಗ ನಿಯೋಜಿಸಿರುವ 'ಜಲಚಕ್ರ' ಎಂಬ ವಿದ್ಯಮಾನ. ಸಾಗರದ ನೀರು ಆವಿಯಾಗಿ ಮೋಡವಾಗುವುದು, ಮೋಡದಿಂದ ಮಳೆ- ಬಾಷ್ಪೀಕರಣ ಮತ್ತು ಸಾಂದ್ರೀಕರಣದ ಈ ಯಜ್ಞ ಸಾಗಲೇಬೇಕು.

ಜಾಗತಿಕವಾಗಿ ಸುಮಾರು 6,000 ನದಿಗಳು ಸಮುದ್ರ ಸೇರುತ್ತಿವೆ. ನದಿಯ ನೀರನ್ನು ಬೇಕಾದಷ್ಟು ಬಳಸಿ, ಉಳಿದದ್ದನ್ನು ಸಮುದ್ರಕ್ಕೆ ಹರಿಯಗೊಡುವುದೇ ಸಾರ್ಥಕ. ಗೊಬ್ಬರ ಹಾಕಿದ ಹೊಲ ಕೆಡದು ಎನ್ನುವಂತೆ ಸಿಹಿನೀರು ಸುರಿದ ಸಾಗರ ಕಿಂಚಿತ್ತಾದರೂ ಶ್ರೀಮಂತವಾಗುತ್ತದೆ.

ವಾಚಕರ ವಾಣಿ

ಶೌಚಾಲಯ: ತುರ್ತು ಗ್ಯಾರಂಟಿ ಯೋಜನೆ

'ಭಾರತ ಬಯಲುಶೌಚಮುಕ್ತ ಎಂಬುದು ಎಷ್ಟು ಸತ್ಯ?'- ಎಂಬ ಲೇಖನ (ಆಳ-ಅಗಲ, ಪ್ರ.ವಾ., ಅ. 2) ಓದುಗರನ್ನು ಸ್ವವಿಮರ್ಶೆಗೆ ಹಚ್ಚುತ್ತದೆ. ನಾನು ಶಾಲಾ ವಿದ್ಯಾರ್ಥಿಯಾಗಿದ್ದಾಗ ಗ್ರಾಮ ಪಂಚಾಯಿತಿ ಚುನಾವಣೆ ನಡೆಯಿತು. ಆ ಸಂದರ್ಭದಲ್ಲಿ ನಾನು ಮತ್ತು ನನ್ನ ಸಹಪಾಠಿಗಳೆಲ್ಲರೂ ಶಾಲೆ ಬಿಟ್ಟ ಕೂಡಲೇ, ಚುನಾವಣೆಗೆ ಸ್ಪರ್ಧಿಸಿದ್ದ ಕುಟುಂಬಗಳ ಬಳಿ ಓಡುತ್ತಿದ್ದೆವು. ಕಾರಣ, ಆಗ ಅವರೆಲ್ಲರೂ ತಮ್ಮ ಮನೆಗಳಲ್ಲಿ ಶೌಚಾಲಯ ಕಟ್ಟಿಸುತ್ತಿದ್ದರು. ಅಲ್ಲಿಯವರೆಗೂ ಅವುಗಳನ್ನು ನಾವು ಪಟ್ಟಣಗಳಲ್ಲಿ ಇಲ್ಲವೇ ಕಲ್ಯಾಣ ಮಂಟಪಗಳಲ್ಲಿ ಮಾತ್ರ ನೋಡಿದ್ದೆವು. ಅವುಗಳ ಕಟ್ಟುವಿಕೆ ಬಗ್ಗೆ ನಮಗಿದ್ದ ಕುತೂಹಲ ಅಷ್ಟಿಷ್ಟಲ್ಲ. ಆ ಬಾರಿ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸುವ ಕುಟುಂಬಗಳು ಕಡ್ಡಾಯವಾಗಿ ಶೌಚಾಲಯ ಹೊಂದಿರಬೇಕು ಎಂಬ ನಿಯಮ ಬಂದದ್ದರಿಂದ ನಮ್ಮೂರಿನಲ್ಲಿ ಶೌಚಾಲಯಗಳ ಶಂಕುಸ್ಥಾಪನೆಯಾಯಿತು ಎನ್ನಬಹುದು. ಆದರೆ ನಂತರ ಇದೊಂದು ಕ್ರಾಂತಿಯ ರೀತಿಯಲ್ಲಿ ಬದಲಾದರೂ ಸಂಪೂರ್ಣ ಕ್ರಾಂತಿಯಾಗಲಿಲ್ಲ. ಅದರ ತಾಜಾ ಉದಾಹರಣೆಯೇ ಲೇಖನದಲ್ಲಿ ಪ್ರಸ್ತಾಪವಾಗಿರುವ, ಶೌಚಾಲಯಗಳ ಕೊರತೆ ಎದುರಿಸುತ್ತಿರುವ ಚಿತ್ರದುರ್ಗ ನಗರಸಭೆ ವ್ಯಾಪ್ತಿಯ ಕವಾಡಿಗರಹಟ್ಟಿಯ ಪರಿಸ್ಥಿತಿ.

ಇಂದು ಶಿಕ್ಷಕನಾಗಿರುವ ನಾನು, ಕರ್ತವ್ಯ ನಿರ್ವಹಿಸುವ ಶಾಲೆಯಲ್ಲಿ ಶೌಚಾಲಯರಹಿತ ಕುಟುಂಬಗಳಿಂದ ಬರುವ ಮಕ್ಕಳನ್ನು ಪ್ರತಿ ತರಗತಿಯಲ್ಲಿಯೂ ಕಾಣುತ್ತೇನೆ. ಕಾರ್ಯನಿಮಿತ್ತ ಅನ್ಯ ಶಾಲೆಗೆ ತೆರಳಿದ ಸಂದರ್ಭದಲ್ಲಿ ಅಲ್ಲಿನ ವಿದ್ಯಾರ್ಥಿಗಳೂ ಅಂತಹುದೇ ಕುಟುಂಬಗಳಿಂದ ಬಂದಿರುವುದನ್ನು ಕೇಳಿ ತಿಳಿದಿದ್ದೇನೆ. ಇದರಿಂದ, ನಮ್ಮನ್ನು ಆಳುವವರು ಫಲಿತಾಂಶ ಇಲ್ಲವೇ ಪ್ರಗತಿಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಪ್ರಕಟಿಸುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಇನ್ನು ಶೌಚಾಲಯ ಹೊಂದಿರುವ ವಿದ್ಯಾರ್ಥಿಗಳು ಅವುಗಳನ್ನು ನಿರಂತರವಾಗಿ ಬಳಕೆ ಮಾಡುತ್ತಿದ್ದಾರೆಯೇ ಎಂದು ಕೇಳಿದರೆ, ಕೆಲವರು ಹೌದು ಎನ್ನುತ್ತಾರೆ, ಇನ್ನು ಕೆಲವರು ನೀರಿನ ಕೊರತೆ ಎಂತಲೂ, ಇಲ್ಲವೇ ಅವು ಮನೆಯ ಆಡು ಕಟ್ಟಲು ಬಳಕೆಯಾಗುತ್ತಿವೆ ಎಂದೋ ಉತ್ತರಿಸುತ್ತಾರೆ. ಭಾರತದಂತಹ ಅಪಾರ ಜನಬಾಹುಳ್ಯವುಳ್ಳ ದೇಶಕ್ಕೆ ಎಷ್ಟು ಶೌಚಾಲಯಗಳನ್ನು ನಿರ್ಮಿಸಿಕೊಂಡರೂ ಸಾಲದು. ರಾಜಕೀಯ ಪಕ್ಷಗಳು ಇತ್ತೀಚೆಗೆ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹಲವು ಉಚಿತ ಯೋಜನೆಗಳನ್ನು ರೂಪಿಸಿ, ಜಾರಿಗೆ ತರುತ್ತಿವೆ. ಇವುಗಳ ನಡುವೆ ಶೌಚಾಲಯ ಎಂಬ ಮತ್ತೊಂದು ತುರ್ತು ಗ್ಯಾರಂಟಿ ಯೋಜನೆಯೊಂದು ಜಾರಿಗೆ ಬರಲಿ ಎಂದು ಆಶಿಸೋಣ.

ರಘು ಗಂಕಾರನಹಳ್ಳಿ, ಮಧುಗಿರಿ

ಪ್ರತ್ಯೇಕ ರೈಲಿಗೆ ಪವಾಡ ನಡೆಯಬೇಕೆ?

ಬೆಂಗಳೂರು– ಕಲಬುರಗಿ ರೈಲು ತುಂಬಿ ತುಳುಕುವುದರಿಂದ ಜನ ಎದುರಿಸುತ್ತಿರುವ ಸಂಕಷ್ಟವನ್ನು ವಿವರಿಸುವ ಲೇಖನ (ಪ್ರ.ವಾ., ಅ. 3) ಕಣ್ಣು ತೆರೆಸುವಂತಿದೆ. ಆದರೆ, ಕಣ್ಣಿದ್ದೂ ಜಾಣ ಕುರುಡರಂತೆ ಇರುವವರ ಕಣ್ಣು ತೆರೆಸುವುದು ಅಸಾಧ್ಯ. ಅಂಕಿ ಅಂಶಗಳು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊಗಳು ಎಲ್ಲವೂ ಕಲಬುರಗಿಯಿಂದಲೇ ಬೆಂಗಳೂರಿಗೆ ಓಡಾಟ ಆರಂಭಿಸಬೇಕಾದ ಪ್ರತ್ಯೇಕ ರೈಲಿನ ಅಗತ್ಯವನ್ನು ನ್ಯಾಯೋಚಿತವಾಗಿ ಪ್ರತಿಪಾದಿಸುತ್ತವೆ. ಎಲ್ಲಿ ಖಾಸಗಿ ಬಸ್‌ಗಳ ಲಾಬಿಗೆ ರೈಲ್ವೆ ಇಲಾಖೆ ಶರಣಾಗಿದೆಯೋ ಎಂಬ ಗೊಣಗಾಟ ಕೆಲವರದು.

ಇನ್ನೆರಡು ವಾರಗಳಲ್ಲಿ ದಸರಾ, ದೀಪಾವಳಿ ಹಬ್ಬದ ದಿನಗಳು. ಆಗಲೂ ನಿರ್ದಯಿ ರೈಲ್ವೆ ಇಲಾಖೆ ವಿಶೇಷ ರೈಲನ್ನು ಓಡಿಸುವುದಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗೊಳಗಾದ ಮೇಲೆಯೇ ಕ್ರಮ ವಹಿಸುತ್ತದೆ. ರಾಜ್ಯದ ಸಂಸದರು ತುಟಿ ಬಿಚ್ಚುತ್ತಿಲ್ಲ. ಕಲಬುರಗಿ ಸಂಸದರ ಪ್ರಯತ್ನ ಅರ್ಜಿ ಕೊಟ್ಟು ಫೋಟೊ ಸೆಷನ್‌ಗೆ ಮಾತ್ರ ಸೀಮಿತಗೊಂಡಿದೆ. ತುತ್ತಿನ ಚೀಲ ತುಂಬಿಸಿಕೊಳ್ಳಲು ಬೆಂಗಳೂರಿಗೆ ತೆರಳುವ ಅಥವಾ ಅಲ್ಲಿಂದ ಬರುವವರ ಕಷ್ಟ ಯಾರಿಗೂ ಬೇಡವಾಗಿದೆ. ಮೂಲತಃ, ನಾಗರಿಕ ಸೇವಾ ಅಧಿಕಾರಿಯಾಗಿದ್ದ ನಮ್ಮ ರೈಲ್ವೆ ಸಚಿವರು ಇಷ್ಟೊಂದು ಸಂವೇದನಾರಹಿತವಾಗಿ ಇರುತ್ತಾರೆಂಬುದನ್ನು ನಾವು ನಿರೀಕ್ಷಿಸಿರಲಿಲ್ಲ. ಪ್ರತ್ಯೇಕ ರೈಲಿಗೆ ಪವಾಡ ಅಥವಾ ಚಳವಳಿಯೇ ಅಗಬೇಕೇನೊ?

ವೆಂಕಟೇಶ್ ಮುದಗಲ್, ಕಲಬುರಗಿ

ಅತಿರಂಜಿತ ವಿಶ್ಲೇಷಣೆ: ಬೇಕು ಕಡಿವಾಣ

ಮುಂದಿನ ಲೋಕಸಭಾ ಚುನಾವಣೆ ನಡೆದು, ಫಲಿತಾಂಶ ಪ್ರಕಟವಾಗಲು ಕನಿಷ್ಠ ಇನ್ನೂ 8ರಿಂದ 10 ತಿಂಗಳು ಬೇಕಾಗಬಹುದು. ಆದರೆ ಕೆಲವು ಟಿ.ವಿ. ಚಾನೆಲ್‌ಗಳು ಲೋಕಸಭಾ ಚುನಾವಣೆಯ ಭವಿಷ್ಯದ ಫಲಿತಾಂಶವನ್ನು ಈಗಾಗಲೇ ಹೇಳಲು ಪ್ರಾರಂಭಿಸಿವೆ. ಇದು ಮತದಾರರಿಗೆ ಒಂದು ರೀತಿಯ ಮನರಂಜನೆ ನೀಡುತ್ತಿದೆ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಅದರ ಮಿತ್ರಕೂಟ ಭರ್ಜರಿ ಜಯ ಗಳಿಸುತ್ತದೆ, 'ಇಂಡಿಯಾ' ಮೈತ್ರಿಕೂಟ ಬರೀ 175 ಸ್ಥಾನಗಳಿಗೆ ತೃಪ್ತಿಪಟ್ಟುಕೊಳ್ಳುತ್ತದೆ ಎಂದು ಟಿ.ವಿ. ಚಾನೆಲ್ಲೊಂದು ಇತ್ತೀಚೆಗೆ ಪ್ರಸಾರ ಮಾಡಿತು. ಯಾವ ಆಧಾರ ಅಥವಾ ಮಾನದಂಡದ ಮೇಲೆ ಮಾಧ್ಯಮಗಳು ಈ ರೀತಿ ವಿಶ್ಲೇಷಣೆ ಮಾಡುತ್ತವೆ? ಮತದಾರರ ಮೇಲೆ ಇದು ಪರಿಣಾಮ ಬೀರುವುದಿಲ್ಲವೇ? ಮತದಾರರನ್ನು ಗೊಂದಲಕ್ಕೆ ಈಡುಮಾಡುವುದಿಲ್ಲವೇ? ಇದಕ್ಕೆ ಚುನಾವಣಾ ಆಯೋಗ ಕಡಿವಾಣ ಹಾಕಲು ಸಾಧ್ಯವಿಲ್ಲವೇ?

ಹಿಂದಿನ ವಿಧಾನಸಭಾ ಚುನಾವಣೆಯ ಫಲಿತಾಂಶಕ್ಕೆ ಒಂದು ವರ್ಷ ಮುಂಚಿನಿಂದಲೂ, ರಾಜ್ಯದಲ್ಲಿ ಈ ಬಾರಿ ಅತಂತ್ರ ವಿಧಾನಸಭೆ ರಚನೆಯಾಗುತ್ತದೆ, ಇದರ ಕಿಂಗ್‌ಮೇಕರ್ ಯಾರಾಗುತ್ತಾರೆ ಎಂದೆಲ್ಲಾ ಹೇಳಿ, ಕಡೆಗೆ ಕಾಂಗ್ರೆಸ್ ಪಕ್ಷ ಅಭೂತಪೂರ್ವ ಯಶಸ್ಸು ಗಳಿಸಿ ಸರ್ಕಾರ ರಚನೆ ಮಾಡುವಂತಾಯಿತು. ಇತ್ತೀಚಿನ ದಿನಗಳಲ್ಲಿ ಚುನಾವಣಾ ಫಲಿತಾಂಶಗಳನ್ನು ಗಮನಿಸಿದರೆ, ಕೆಲವು ಟಿ.ವಿ. ಚಾನೆಲ್‌ಗಳು ತಮ್ಮ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಬ್ಯಾಂಕ್ ಹುದ್ದೆ: ಇಳಿಯಲಿ ಅರ್ಜಿ ಶುಲ್ಕ

ಚಿತ್ರದುರ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ 65 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಒಟ್ಟು ಆರು ದರ್ಜೆಯ ಎಲ್ಲ ಹುದ್ದೆಗಳಿಗೂ ದುಬಾರಿ ಶುಲ್ಕ ವಿಧಿಸಿರುವುದು ಸರಿಯಲ್ಲ. ಸಾಮಾನ್ಯ ವರ್ಗ, ಹಿಂದುಳಿದ ವರ್ಗದವರಿಗೆ ₹ 1,500 ಇದ್ದು, ಪರಿಶಿಷ್ಟ ಜಾತಿ, ಪಂಗಡದ ಅಭ್ಯರ್ಥಿಗಳಿಗೆ ₹ 750 ನಿಗದಿಪಡಿಸಲಾಗಿದೆ. ಕೆಪಿಎಸ್‌ಸಿ ಪರೀಕ್ಷೆಗಳಿಗೆ ಹೋಲಿಸಿದರೆ ಈ ಶುಲ್ಕ ತುಸು ದುಬಾರಿ ಎನಿಸುತ್ತದೆ. ಕಳೆದ ತಿಂಗಳು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿಯೂ ಅರ್ಜಿ ಆಹ್ವಾನಿಸಲಾಗಿತ್ತು. ಶುಲ್ಕ ₹ 500, ₹ 1,000 ಇತ್ತು. ಕೊನೆಯ ಪಕ್ಷ ಹುದ್ದೆಯ ದರ್ಜೆಯನ್ನು ಆಧರಿಸಿಯಾದರೂ ಶುಲ್ಕ ನಿಗದಿಪಡಿಸಲಿ. ಸಹಾಯಕ ಪ್ರಧಾನ ವ್ಯವಸ್ಥಾಪಕರ ಹುದ್ದೆಗೂ ಒಂದೇ ಶುಲ್ಕ, ಅಟೆಂಡರ್, ಚಾಲಕ ಹುದ್ದೆಗಳಿಗೂ ಒಂದೇ ಶುಲ್ಕ ಎಂದರೆ ಹೇಗೆ?

ಮುರುಗೇಶ ಡಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಾಬರಮತಿ ದಡದಲ್ಲಿ ಕ್ರಿಕೆಟ್ ಘಮಲು...

ಅಹಮದಾಬಾದ್: ಸಾಬರಮತಿ ನದಿಯ ತಂಗಾಳಿಯಲ್ಲಿಯೂ ಈಗ ಕ್ರಿಕೆಟ್ ಘಮಲು ಬೀಸಿ ಬರುತ್ತಿದೆ.

ನದಿ ತಟದಿಂದ ಸ್ವಲ್ಪ ದೂರದಲ್ಲಿರುವ ಮೊಟೇರಾದ ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣ ಈಗ ಕಂಗೊಳಿಸುತ್ತಿದೆ. ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಉದ್ಘಾಟನಾ ಪಂದ್ಯಕ್ಕೆ ವೇದಿಕೆಯಾಗಲಿರುವ ಈ ಕ್ರೀಡಾಂಗಣದತ್ತ ವಿಶ್ವದ ಬಹಳಷ್ಟು ದೇಶಗಳ ಕ್ರಿಕೆಟ್ ಅಭಿಮಾನಿಗಳು ಲಗ್ಗೆ ಇಡುತ್ತಿದ್ದಾರೆ.

ಗುರುವಾರ ಇಲ್ಲಿ ನಡೆಯಲಿರುವ ಟೂರ್ನಿಯ ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಇಂಗ್ಲೆಂಡ್ ಮತ್ತು ರನ್ನರ್ ಅಪ್ ನ್ಯೂಜಿಲೆಂಡ್ ಮುಖಾಮುಖಿಯಾಗಲಿವೆ. ಆದರೆ ಅ.14ರಂದು ಇಲ್ಲಿಯೇ ನಡೆಯಲಿರುವ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯವೇ ಆಕರ್ಷಣೆಯ ಕೇಂದ್ರ-ಬಿಂದುವಾಗಿದೆ. ಅದಕ್ಕಾಗಿ ತಿಂಗಳಾನುಗಟ್ಟಲೇ ಮುನ್ನವೇ ಅಭಿಮಾನಿಗಳು ಪಂದ್ಯದ ಟಿಕೆಟ್, ಪ್ರಯಾಣಕ್ಕಾಗಿ ವಿಮಾನ ಟಿಕೆಟ್ ಮತ್ತು ವಸತಿಗಾಗಿ ಹೋಟೆಲ್‌ಗಳ ಬುಕಿಂಗ್‌ಗೆ ಮೊರೆಹೋಗಿದ್ದರು.

ಈ ಪಂದ್ಯ ನಡೆಯುವ ಹೊತ್ತಿನಲ್ಲಿಯೇ ನವರಾತ್ರಿಯೂ ಆರಂಭವಾಗುವುದರಿಂದ ಹೋಟೆಲ್, ವಿಮಾನಯಾನದ ಟಿಕೆಟ್‌ಗಳ ಬೆಲೆ ಗಗನಕ್ಕೇರಿವೆ. ಆದರೂ ಕ್ರಿಕೆಟ್‌ಪ್ರೇಮಿಗಳ ಉತ್ಸಾಹ ಕುಂದಿಲ್ಲ.

2020ರಲ್ಲಿ ಬೃಹತ್ ಕ್ರೀಡಾಂಗಣವಾಗಿ ಮರುನಿರ್ಮಾಣವಾದ ನಂತರ ಇಲ್ಲಿ ಮೊದಲ ಬಾರಿಗೆ ವಿಶ್ವಕಪ್ ಪಂದ್ಯಗಳು ನಡೆಯಲಿವೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿ ಜಯ್ ಶಾ ಅವರ ತವರೂರು ಕೂಡ ಆಗಿರುವುದರಿಂದಲೂ ಹೆಚ್ಚು ಗಮನ ಸೆಳೆದಿದೆ.

ಭಾರತವು ವಿಶ್ವಕಪ್ ಟೂರ್ನಿಗೆ ನಾಲ್ಕನೇ ಬಾರಿ ಆತಿಥ್ಯ ವಹಿಸುತ್ತಿದೆ. ಇದೇ ಮೊದಲ ಬಾರಿಗೆ ಬಿಸಿಸಿಐ ಮಾತ್ರ ಆಯೋಜನೆಯ ಹೊಣೆ ಹೊತ್ತಿದೆ.

ಸಚಿನ್ ಜಾಗತಿಕ ರಾಯಭಾರಿ

- ದಿಗ್ಗಜ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಅವರನ್ನು ಈ ಬಾರಿ ವಿಶ್ವಕಪ್ ಟೂರ್ನಿಯ 'ಜಾಗತಿಕ ರಾಯಭಾರಿ'ಯಾಗಿ ನೇಮಕ ಮಾಡಲಾಗಿದೆ.
- ಸಚಿನ್ ಆರು ವಿಶ್ವಕಪ್ ಟೂರ್ನಿಗಳಲ್ಲಿ ಆಡಿರುವ ದಾಖಲೆ ಇದೆ. ಅವರ ಹೆಸರಲ್ಲಿ ಹಲವಾರು ದಾಖಲೆಗಳೂ ಇವೆ.
- ಗುರುವಾರ ನಡೆಯುವ ಮೊದಲ ಪಂದ್ಯಕ್ಕೂ ಮುನ್ನ ಸಚಿನ್ ಐಸಿಸಿ ಟ್ರೋಫಿಯನ್ನು ಮೈದಾನಕ್ಕೆ ತರಲಿದ್ದಾರೆ.
- '1987ರ ವಿಶ್ವಕಪ್ ಟೂರ್ನಿ ಭಾರತದಲ್ಲಿ ನಡೆದಾಗ ಬಾಲ್ ಬಾಯ್ ಆಗಿದ್ದೆ. ನಂತರ ದೇಶದ ಪರವಾಗಿ ಆರು ವಿಶ್ವಕಪ್ ಆಡಿದ್ದು ಹೆಮ್ಮೆಯ ವಿಷಯ. 2011ರಲ್ಲಿ ವಿಶ್ವಕಪ್ ಜಯಿಸಿದ್ದು ಕೂಡ ವಿಶಿಷ್ಟವಾಗಿದೆ' ಎಂದು ಸಚಿನ್ ಹೇಳಿದ್ದಾರೆ.

1987ರಲ್ಲಿ ಭಾರತದಲ್ಲಿ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ಸಹಭಾಗಿತ್ವ ವಹಿಸಿತ್ತು. 1996ರಲ್ಲಿ ಪಾಕಿಸ್ತಾನ, ಶ್ರೀಲಂಕಾ ತಂಡಗಳ ಸಹಭಾಗಿತ್ವ ಇತ್ತು. 2011ರಲ್ಲಿ ಬಾಂಗ್ಲಾದೇಶ ಮತ್ತು ಶ್ರೀಲಂಕಾ ದೇಶಗಳೂ ಕೈಜೋಡಿಸಿದ್ದವು.

ಏಕತಾ ನಗರಕ್ಕೆ ಟ್ರೋಫಿ; ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಬೃಹತ್ ಪುತ್ಥಳಿ ಇರುವ ಏಕತಾ ನಗರಕ್ಕೆ ಐಸಿಸಿ ವಿಶ್ವಕಪ್ ಟ್ರೋಫಿ ತಲುಪಿತು.

ಮಂಗಳವಾರ ಏಕತಾ ನಗರದಲ್ಲಿ ಟ್ರೋಫಿ ಪ್ರದರ್ಶನಕ್ಕೆ ಅವಕಾಶ ನೀಡಲಾಯಿತು.

'ಐಸಿಸಿ ಟ್ರೋಫಿಯು 18 ದೇಶಗಳ ಪ್ರಮುಖ ನಗರಗಳ ಪರ್ಯಟನೆಯ ನಂತರ ಗುಜರಾತ್ ರಾಜ್ಯಕ್ಕೆ ಮರಳಿದೆ ಏಕತಾ ನಗರದಲ್ಲಿಯೂ ಪ್ರದರ್ಶನಗೊಂಡಿತು' ಎಂದು ಮೂಲಗಳು ತಿಳಿಸಿವೆ.

ಭಾರತ

ರೋಹಿತ್ ಶರ್ಮಾ
ವಯಸ್ಸು 36 (ಬ್ಯಾಟರ್)

251	ಪಂದ್ಯಗಳು
10,112	ರನ್
264	ಗರಿಷ್ಠ
48.85	ಸರಾಸರಿ
30	ಶತಕ
52	ಅರ್ಧಶತಕ

ವಿಶ್ವಕಪ್: 10 ತಂಡಗಳ ಸಾರಥಿಗಳಿವರು....

ವಿಶ್ವಕಪ್ ಟೂರ್ನಿಯಲ್ಲಿ ಪಾಲ್ಗೊಂಡಿರುವ ತಂಡಗಳ ಯಶಸ್ಸಿನಲ್ಲಿ ನಾಯಕರ ಪಾತ್ರವೂ ಮುಖ್ಯವಾದುದು. ತಂಡದ ಏಳು–ಬೀಳಿನ ಹೊಣೆ ನಾಯಕನದ್ದಾಗಿರುತ್ತದೆ. ಬೌಲಿಂಗ್ ಮತ್ತು ಫೀಲ್ಡಿಂಗ್ ಸಂಯೋಜನೆ ಸೇರಿದಂತೆ ಪಂದ್ಯ ವೇಳೆ ನಾಯಕ ಕೈಗೊಳ್ಳುವ ನಿರ್ಧಾರಗಳು ಫಲಿತಾಂಶದ ಮೇಲೆ ಪರಿಣಾಮ ಉಂಟುಮಾಡುತ್ತದೆ. ಈ ಟೂರ್ನಿಯಲ್ಲಿ ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿರುವ ಹತ್ತು ತಂಡಗಳನ್ನು ಮುನ್ನಡೆಸುವ ನಾಯಕರ ಮೇಲೆ ಎಲ್ಲರ ಚಿತ್ತ ನೆಟ್ಟಿದೆ. ಏಕದಿನ ಕ್ರಿಕೆಟ್‌ನಲ್ಲಿ ಅವರ ಇದುವರೆಗಿನ ಸಾಧನೆಯ ಚುಟುಕುನೋಟ ಇಲ್ಲಿದೆ.

ದಕ್ಷಿಣ ಆಫ್ರಿಕಾ

ತೆಂಬಾ ಬವುಮಾ
ವಯಸ್ಸು 33 (ಬ್ಯಾಟರ್)

ಪಂದ್ಯಗಳು	30
ರನ್	1,367
ಗರಿಷ್ಠ	144
ಸರಾಸರಿ	54.68
ಶತಕ	5
ಅರ್ಧಶತಕ	4

ಆಸ್ಟ್ರೇಲಿಯಾ

ಪ್ಯಾಟ್ ಕಮಿನ್ಸ್
ವಯಸ್ಸು 30 (ಬೌಲರ್)

ಪಂದ್ಯಗಳು	77
ವಿಕೆಟ್	126
ಶ್ರೇಷ್ಠ ಬೌಲಿಂಗ್	70 ಕ್ಕೆ 5

ಶ್ರೀಲಂಕಾ

ದಸುನ್ ಶನಕ
ವಯಸ್ಸು 32 (ಆಲ್‌ರೌಂಡರ್)

ಪಂದ್ಯಗಳು	67
ರನ್	1,204
ಗರಿಷ್ಠ	108
ಸರಾಸರಿ	22.29
ಶತಕ	2
ಅರ್ಧಶತಕ	3
ಶ್ರೇಷ್ಠ ಬೌಲಿಂಗ್	43 ಕ್ಕೆ 5

ಪಾಕಿಸ್ತಾನ

ಬಾಬರ್ ಅಜಂ
ವಯಸ್ಸು 28 (ಬ್ಯಾಟರ್)

ಪಂದ್ಯಗಳು	108
ರನ್	5,409
ಗರಿಷ್ಠ	158
ಸರಾಸರಿ	58.16
ಶತಕ	19
ಅರ್ಧಶತಕ	28

ನೆದರ್ಲೆಂಡ್ಸ್

ಸ್ಕಾಟ್ ಎಡ್ವರ್ಡ್ಸ್
ವಯಸ್ಸು 27 (ವಿಕೆಟ್‌ಕೀಪರ್–ಬ್ಯಾಟರ್)

ಪಂದ್ಯಗಳು	38
ರನ್	1,212
ಗರಿಷ್ಠ	86
ಸರಾಸರಿ	40.40
ಅರ್ಧಶತಕ	13
ಕ್ಯಾಚ್‌ಗಳು	36

ನ್ಯೂಜಿಲೆಂಡ್

ಕೇನ್ ವಿಲಿಯಮ್ಸನ್
ವಯಸ್ಸು 33 (ಬ್ಯಾಟರ್)

ಪಂದ್ಯಗಳು	161
ರನ್	6,554
ಗರಿಷ್ಠ	148
ಸರಾಸರಿ	47.83
ಶತಕ	13
ಅರ್ಧಶತಕ	42

ಇಂಗ್ಲೆಂಡ್

ಜೋಸ್ ಬಟ್ಲರ್
ವಯಸ್ಸು 33 (ವಿಕೆಟ್‌ಕೀಪರ್–ಬ್ಯಾಟರ್)

ಪಂದ್ಯಗಳು	169
ರನ್	4,823
ಗರಿಷ್ಠ	162
ಸರಾಸರಿ	41.57
ಶತಕ	11
ಅರ್ಧಶತಕ	25
ಕ್ಯಾಚ್‌ಗಳು	21

ಅಫ್ಘಾನಿಸ್ತಾನ

ಹಶ್ಮತ್‌ಉಲ್ಲಾ ಶಾಹಿದಿ
ವಯಸ್ಸು 28 (ಬ್ಯಾಟರ್)

ಪಂದ್ಯಗಳು	64
ರನ್	1,175
ಗರಿಷ್ಠ	97
ಸರಾಸರಿ	32.27
ಅರ್ಧಶತಕ	16

ಕಪಿಲ್ ದೇವ್ ಮತ್ತು ಸಚಿನ್ ತೆಂಡೂಲ್ಕರ್

ಬಾಂಗ್ಲಾದೇಶ

ಶಕೀಬ್ ಅಲ್ ಹಸನ್
ವಯಸ್ಸು 36(ಆಲ್‌ರೌಂಡರ್)

ಪಂದ್ಯಗಳು	240
ರನ್	7,384
ಗರಿಷ್ಠ	134
ಸರಾಸರಿ	37.67
ಶತಕ	9
ಅರ್ಧಶತಕ	55
ವಿಕೆಟ್	308
ಶ್ರೇಷ್ಠ ಬೌಲಿಂಗ್	29 ಕ್ಕೆ 5

ಅ.8ರಿಂದ ಬಿಗ್‌ಬಾಸ್ ಪ್ರಾರಂಭ

ಕಿರುತೆರೆಯ ಜನಪ್ರಿಯ ರಿಯಾಲಿಟಿ ಶೋ ಬಿಗ್‌ಬಾಸ್ 10ನೇ ಆವೃತ್ತಿ ಅ.8ರಿಂದ ಪ್ರಾರಂಭವಾಗುತ್ತಿದೆ. ಕಿಚ್ಚ ಸುದೀಪ್ ನಿರೂಪಣೆಯ ಈ ಶೋ ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರತಿ ರಾತ್ರಿ 9.30ರಿಂದ ಪ್ರಸಾರಗೊಳ್ಳಲಿದೆ. ಹಿಂದಿನ ಸೀಸನ್‌ಗಳಂತೆ ವಾರಾಂತ್ಯದ ಸಂಚಿಕೆಗಳಲ್ಲಿ ಸುದೀಪ್ ಕಾಣಿಸಿಕೊಳ್ಳಲಿದ್ದಾರೆ.

'ಬೇರೆ ಬೇರೆ ಕ್ಷೇತ್ರಗಳಲ್ಲಿನ 16–18 ಸ್ಪರ್ಧಿಗಳು ಈ ವರ್ಷ ಮನೆಯೊಳಗೆ ಹೋಗುತ್ತಾರೆ. ಈ ಬಾರಿ ಅನೇಕ ಹೊಸತುಗಳು ಇರಲಿದ್ದು, ಶೋ ಪ್ರಾರಂಭಗೊಂಡಾಗ ತಿಳಿಯುತ್ತದೆ' ಎಂದು ಕಲರ್ಸ್ ಕನ್ನಡ ವಾಹಿನಿ ಹೆಡ್ ಪ್ರಶಾಂತ್ ನಾಯಕ್ ಹೇಳಿದರು.

'ಸ್ಪರ್ಧಿಗಳ ಆಯ್ಕೆಗೆ ಅದರದ್ದೇ ಆದ ಮಾನದಂಡಗಳಿವೆ. ಮನೆ ಎಂದಾಗ ಎಲ್ಲ ರೀತಿಯ ಪಾತ್ರಗಳು ಬೇಕಾಗುತ್ತವೆ. ಅದರಂತೆ ಸ್ಪರ್ಧಿಗಳ ಆಯ್ಕೆ ನಡೆಯುತ್ತದೆ. ಇಲ್ಲಿನ ಭಾವನೆಗಳನ್ನು ಸ್ಕ್ರಿಪ್ಟ್ ಮಾಡಿ ಹೊರತೆಗೆಸಲು ಸಾಧ್ಯವಿಲ್ಲ. ಈ ವರ್ಷ ಜಿಯೋ ಸಿನಿಮಾದಲ್ಲಿ 24 ಗಂಟೆಗಳ ಕಾಲವೂ ಬಿಗ್‌ಬಾಸ್ ಲೈವ್ ಅನ್ನು ಉಚಿತವಾಗಿ ವೀಕ್ಷಿಸಬಹುದು' ಎಂದು ಪ್ರಶಾಂತ್ ತಿಳಿಸಿದರು.

ಸೀಸನ್ 6ಕ್ಕೆ ಸಾಕೆನಿಸಿತ್ತು:

'6ನೇ ಸೀಸನ್ ಮುಗಿದ ಬಳಿಕ ಬಿಗ್‌ಬಾಸ್ ಸಾಕೆನ್ನಿಸಿತ್ತು. ಆದರೆ ವಾಹಿನಿಯವರು ಮತ್ತೆ ಒಪ್ಪಿಸಿ ಕರೆದುಕೊಂಡು ಬಂದರು. ಅಲ್ಲಿಂದ 10ನೇ ಸೀನ್‌ಗೆ ಬಂದು ನಿಂತಿದೆ. ಇದು ಜನ ಮಾತಾಡುವಂತೆ ಸ್ಕ್ರಿಪ್ಟೆಡ್ ಶೋ ಅಲ್ಲ. ನಾನು ವಾರಾಂತ್ಯದಲ್ಲಿ ನೀಡುವ ತೀರ್ಪುಗಳು ಅಲ್ಲಿಯೇ ತೆಗೆದುಕೊಳ್ಳುವ ತೀರ್ಮಾನಗಳು. ಅದನ್ನು ಸ್ಕ್ರಿಪ್ಟ್ ಮಾಡಲು ಸಾಧ್ಯವಿಲ್ಲ' ಎಂದರು ನಟ ಸುದೀಪ್.

'ಶೋನ ಸಾಕಷ್ಟು ನಿಯಮಗಳನ್ನು ಇಲ್ಲಿಗೆ ತಕ್ಕಂತೆ ಬದಲಿಸಿಕೊಂಡಿದ್ದೇವೆ. ನನಗೆ ಈ ಯಾಕಪ್ಪ ಈ ಸ್ಪರ್ಧಿಯನ್ನು ಒಳಗೆ ಕಳುಹಿಸಿದರು ಅನ್ನಿಸಿದ್ದಿದೆ. ಆದರೆ ಎರಡನೇ ವಾರಕ್ಕೆ ಅವರ ಮೇಲಿನ ಅಭಿಪ್ರಾಯ ಬದಲಾಗುತ್ತದೆ. ಜನರಿಗೆ ಇಷ್ಟವಾಗಿ ಮತ ಹಾಕುತ್ತಾರೆ. ಇದು ಈ ಶೋನ ವೈಶಿಷ್ಟ್ಯ. ನಾನು ವಾರಾಂತ್ಯದಲ್ಲಿ ಕಾಣಿಸಿಕೊಳ್ಳುವ ಮೊದಲು ಒಬ್ಬನೆ ಕುಳಿತು ಎಲ್ಲ ಸಂಚಿಕೆಗಳನ್ನು ವೀಕ್ಷಿಸಿರುತ್ತೇನೆ. ಹೀಗಾಗಿ ನಡೆದ ವಿವಾದ, ಜಗಳಗಳಿಗೆ ನನ್ನದೇ ಆದ ದೃಷ್ಟಿಕೋನದಲ್ಲಿ ತೀರ್ಪು ನೀಡುತ್ತೇನೆ' ಎಂದು ಸುದೀಪ್ ತಿಳಿಸಿದರು.

ಹೊಸ ಮನೆ:

'ಇಷ್ಟು ವರ್ಷ ಬಿಗ್‌ಬಾಸ್ ಇನೋವೇಟೀವ್ ಫಿಲ್ಮ್ ಸಿಟಿಯಲ್ಲಿ ನಡೆಯುತ್ತಿತ್ತು. ಆದರೆ ಈ ವರ್ಷ ದೊಡ್ಡ ಆಲದಮರದ ಬಳಿಯಲ್ಲಿನ ಹೊಸ ಮನೆಯಲ್ಲಿ ನಡೆಯಲಿದ್ದು, ಭಾರತದಲ್ಲಿ ಇರುವ ಅತಿದೊಡ್ಡ 'ಬಿಗ್ ಬಾಸ್' ಮನೆ ಎನ್ನುವ ಖ್ಯಾತಿ ಇದಕ್ಕೆ ಲಭಿಸಿದೆ. ನಾಲ್ಕು ತಿಂಗಳ ಕಾಲ ಹಗಲು-ರಾತ್ರಿ ಶ್ರಮ ಹಾಕಿ ಈ ಮನೆ ನಿರ್ಮಾಣ ಮಾಡಲಾಗಿದೆ. ಜೊತೆಗೆ ನಮ್ಮ ವಾಹಿನಿಯ ನಾನ್‌ಫಿಕ್ಷನ್ ವಿಭಾಗದ ಮುಖ್ಯಸ್ಥ ಪ್ರಕಾಶ್ ಈ ಸಲ ಶೋ ನಿರ್ದೇಶನ ಮಾಡಲಿದ್ದಾರೆ' ಎಂದರು ಪ್ರಶಾಂತ್.

ಸಂಭಾವ್ಯ ಹೆಸರುಗಳು:

ಪ್ರತಿ ಸಲ ಬಿಗ್‌ಬಾಸ್ ಪ್ರಾರಂಭಕ್ಕೆ ಮೊದಲು ಒಂದಷ್ಟು ಸ್ಪರ್ಧಿಗಳ ಹೆಸರುಗಳು ಜನರ ಬಾಯಲ್ಲಿ ಓಡಾಡುತ್ತವೆ. ಈ ಸಲವೂ 'ಕಾಂತಾರ' ನಟ ಪ್ರಕಾಶ್ ತುಮ್ಮಿನಾಡು, ಕಿರುತೆರೆ ನಟಿಯರಾದ ನಮ್ರತಾಗೌಡ, ಮೇಘಾ ಶೆಟ್ಟಿ, ಯೂಟ್ಯೂಬರ್ ಡಾ.ಬ್ರೊ, ಕ್ರಿಕೆಟಿಗ ವಿನಯ್ ಕುಮಾರ್ ಸೇರಿದಂತೆ ಕೆಲ ಹೆಸರುಗಳು ಕೇಳಿಬರುತ್ತಿವೆ.

'ಸ್ಪರ್ಧಿ ವೇದಿಕೆಗೆ ಬರುವವರೆಗೂ ನನಗೂ ಸ್ಪರ್ಧಿ ಯಾರೆಂದು ಗೊತ್ತಿರುವುದಿಲ್ಲ. ಎಲಿಮಿನೇಷನ್ ವೇಳೆಯೂ ಹಾಗೇ. ಆಕಸ್ಮಾತ್ ಬಾಯಿತಪ್ಪಿ ಅವರ ಹೆಸರು ಹೇಳಿಬಿಟ್ಟರೆ ಪ್ರಮಾದವಾಗುತ್ತದೆಯೆಂದು ಅವರ ಹೆಸರನ್ನು ಗೌಪ್ಯವಾಗಿಡಲಾಗುತ್ತದೆ. ಹೀಗಾಗಿ ನೀವು ಕೇಳುವ ಯಾವ ಹೆಸರುಗಳೂ ಪೂರ್ತಿ ಸತ್ಯವಲ್ಲ ಅಥವಾ ಸುಳ್ಳೂ ಅಲ್ಲ. ಕರೆದವರೆಲ್ಲ ಬಿಗ್‌ಬಾಸ್ ಮನೆಗೆ ಬರುತ್ತಾರೆ ಎಂದುಕೊಳ್ಳಲು ಸಾಧ್ಯವಿಲ್ಲ' ಎನ್ನುತ್ತಾರೆ ಸುದೀಪ್.

ಕಿಚ್ಚ ಸುದೀಪ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

❌ 'ಸಂವಿಧಾನವನ್ನು ಅಂಗೀಕರಿಸುವ ಮುನ್ನ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು ಸಹಿ ಮಾಡಬೇಕಿತ್ತು. ಆದರೆ ಅದಕ್ಕೆ ಅವಕಾಶ ನೀಡದ ನೆಹರೂ, ತಾವೇ ಮೊದಲು ನುಗ್ಗಿ ಸಹಿ ಮಾಡಿದರು. ರಾಷ್ಟ್ರಪತಿಗೆ ಸಹಿ ಹಾಕಲು ಜಾಗವಿಲ್ಲದೆ, ಪುಟದ ಅಂಚಿನಲ್ಲಿ ಸಹಿಮಾಡಿದರು. ತನ್ನ ಜವಾಬ್ದಾರಿ ಮತ್ತು ಕರ್ತವ್ಯ ಎಷ್ಟು ಎಂಬುದು ಗೊತ್ತಿಲ್ಲದ ವ್ಯಕ್ತಿ ನೆಹರೂ' ಎಂದು ಬಿಜೆಪಿಯ ಸಂಸದೆ ಪ್ರಜ್ಞಾ ಸಿಂಗ್ ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಪ್ರಜ್ಞಾ ಸಿಂಗ್ ಹೇಳಿರುವುದು ಸುಳ್ಳು.

✅ ಸಂವಿಧಾನಕ್ಕೆ ಸಹಿ ಮಾಡುವ ಪ್ರಕ್ರಿಯೆ ನಡೆದದ್ದು 1950ರ ಜನವರಿ 24ರಂದು. ಸಂವಿಧಾನಕ್ಕೆ ಮೊದಲು ಸಹಿ ಮಾಡುವಂತೆ ರಾಜೇಂದ್ರ ಪ್ರಸಾದ್ ಅವರೇ ನೆಹರೂ ಅವರನ್ನು ಕರೆದಿದ್ದರು. ಕಲಾಪದ ದಾಖಲಾತಿಯಲ್ಲಿ ಇದನ್ನು ಉಲ್ಲೇಖಿಸಲಾಗಿದೆ. 'ಪ್ರಜಾವಾಣಿ'ಯು ಈ ದಾಖಲೆಗಳನ್ನು ಪರಿಶೀಲಿಸಿತು. 'ಸಂವಿಧಾನದ ಕೈಬರವಣಿಗೆಯ ಇಂಗ್ಲಿಷ್ ಪ್ರತಿ, ಮುದ್ರಿತ ಇಂಗ್ಲಿಷ್ ಪ್ರತಿ ಮತ್ತು ಕೈಬರವಣಿಗೆಯ ಹಿಂದಿ ಪ್ರತಿಗಳಿಗೆ ಎಲ್ಲಾ ಸದಸ್ಯರೂ ಸಹಿಹಾಕಬೇಕಿದೆ. ಎಲ್ಲರನ್ನೂ ಸರದಿಯ ಮೇಲೆ ಕರೆಯಬೇಕು. ಆದರೆ ಪ್ರಧಾನಿ ನೆಹರೂ ಬೇರೆ ಕೆಲಸಕ್ಕೆ ತೆರಳಬೇಕಿದೆ. ಹೀಗಾಗಿ ಅವರೇ ಮೊದಲು ಸಹಿ ಮಾಡಲಿ' ಎಂದು ರಾಷ್ಟ್ರಪತಿ ಹೇಳಿದ್ದರು. ಅಂತೆಯೇ ನೆಹರೂ ಮೊದಲು ಸಹಿ ಮಾಡಿದ್ದರು. ಪ್ರಜ್ಞಾ ಸಿಂಗ್ ಹೇಳಿರುವಂತೆ ರಾಷ್ಟ್ರಪತಿಯು ಪುಟದ ಅಂಚಿನಲ್ಲಿ ಸಹಿ ಮಾಡಿಲ್ಲ, ಬದಲಿಗೆ ನೆಹರೂ ಅವರ ಸಹಿಯ ಮೇಲ್ಭಾಗದಲ್ಲಿ ಸಹಿ ಮಾಡಿದ್ದಾರೆ. ಈ ಎಲ್ಲಾ ಮಾಹಿತಿಯನ್ನು ತಿರುಚಿ, ಹಾದಿತಪ್ಪಿಸುವ ರೀತಿಯಲ್ಲಿ ಪ್ರಜ್ಞಾ ಸಿಂಗ್ ಮಾತನಾಡಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಅಕ್ಟೋಬರ್ 4, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಷಷ್ಠಿ ಗಂ. 29-42 ನಕ್ಷತ್ರ: ರೋಹಿಣಿ ಗಂ. 18-29 ಯೋಗ: ಸಿದ್ಧಿ (ಆಸ್ರಿಕ್) ಗಂ. 06-43 ನಂತರ ವ್ಯತೀಪತ ಗಂ. 29-45 ಕರಣ: ಗರ ಗಂ. 17-32, ಕನ್ಯಾ ಮಾಸದ 17 ನೇ ದಿನ, ಮಳೆನಕ್ಷತ್ರ: ಹಸ್ತ 3. ರಾಹುಕಾಲ : ಮಧ್ಯಾಹ್ನ 12-00 – 01-30 ಸೂರ್ಯೋದಯ : 06-23 ಸೂರ್ಯಾಸ್ತ : 06-15 ಮುಸ್ಲಿಂ ದಿನಾಂಕ : 18 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 3, 9

ಮೇಷ: ವ್ಯವಹಾರಗಳಲ್ಲಿ ಜಯವಿದ್ದು ದೊಡ್ಡ ಕಂಪನಿಯೊಂದಿಗೆ ಪಾಲುದಾರಿಕೆಯ ಅವಕಾಶ ಸಿಗಲಿದೆ. ನಿಮ್ಮ ಸರಳ ಸ್ವಭಾವ ಇತರರು ದುರುಪಯೋಗಪಡಿಸಿಕೊಳ್ಳದಂತೆ ಜಾಗ್ರತೆ ವಹಿಸಿ. ಆಭರಣಗಳ ಖರೀದಿ ನಡೆಯಲಿದೆ.

ವೃಷಭ: ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಈ ದಿನ ಹೆಚ್ಚು ಆನಂದ ಸಿಗಬಹುದು. ಸರ್ಕಾರಿ ಪತ್ರಗಳಿಗೆ ಸಂಬಂಧಿಸಿದಂತೆ ಪ್ರಾರಂಭಿಸಿದ್ದ ಕಾರ್ಯಗಳು ಈ ದಿನ ಪೂರ್ಣಗೊಳ್ಳುತ್ತವೆ.

ಮಿಥುನ: ಮಾತೃವರ್ಗದವರ ಸಹಾಯದಿಂದ ಅವಿವಾಹಿತರಿಗೆ ಕಂಕಣ ಭಾಗ್ಯ ದೊರೆಯುವುದು. ಸಂಸಾರದ ವಿಚಾರದಲ್ಲಿ, ಉದ್ಯೋಗದಲ್ಲಿ ದೃಢಚಿತ್ತದಿಂದ ಮುಂದುವರಿಯಿರಿ. ಮಕ್ಕಳ ಮನರಂಜನೆಗೆ ಖರ್ಚು ಸಂಭವಿಸುವುದು.

ಕರ್ಕಾಟಕ: ಮರ ಕೆತ್ತನೆಯ ಕೆಲಸಗಾರರಿಗೆ, ಕಟ್ಟಡ ಕಾರ್ಮಿಕರಿಗೆ ಹೆಚ್ಚಿನ ಅನುಕೂಲ ಇರಲಿದೆ. ಸಾಲ ತೀರಿಸಲು ಹೊಸದೊಂದು ಮಾರ್ಗ ಕಾಣಲಿದೆ. ಇಂದು ಒಬ್ಬ ತಪಶ್ಶಕ್ತಿ ಹೊಂದಿರುವವರ ಅನುಗ್ರಹಕ್ಕೆ ಪಾತ್ರರಾಗುವಿರಿ.

ಸಿಂಹ: ತಾಯಿಯವರ ದೇಹಾರೋಗ್ಯ ತಪಾಸಣೆ ನಡೆಸಲು ವೈದ್ಯರ ಬಳಿ ಹೋಗುವಿರಿ. ವೃತ್ತಿ ಬದುಕಿನಲ್ಲಿ ಅಭಿಪ್ರಾಯಗಳಿಗೆ ಹೆಚ್ಚಿನ ವಿರೋಧ ಬರಲಿದೆ. ಮಾನಹಾನಿಯ ಸಾಧ್ಯತೆಗಳೂ ಇರಬಹುದು.

ಕನ್ಯಾ: ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿಕೊಂಡು ಕನಸುಗಳನ್ನು ಸಾಕಾರಗೊಳಿಸುವುದಕ್ಕಾಗಿ ಅವಿಶ್ರಾಂತವಾಗಿ ದುಡಿಯುವಿರಿ. ಕೌಟುಂಬಿಕ ವಿಚಾರಗಳತ್ತ ಸಂಪೂರ್ಣ ಗಮನ ನೀಡಿ.

ತುಲಾ: ನೀವು ಕೈಗೊಳ್ಳಲಿರುವ ನಿರ್ಧಾರಗಳು ಮನೆಯವರಿಗೆ ಅಗತ್ಯವಾಗಿ ತಿಳಿದಿರಲಿ. ಬಹಳಷ್ಟು ಅನುಕೂಲಕರ ಫಲಗಳನ್ನು ನಿಮಗೆ ಈ ದಿನದಲ್ಲಿನ ಶುಭ ಸಂದರ್ಭವು ತರಲಿದೆ.

ವೃಶ್ಚಿಕ: ಪ್ರಮುಖ ನಿರ್ಧಾರಗಳನ್ನು ಆತುರವಾಗಿ ತೆಗೆದುಕೊಳ್ಳುವ ಸನ್ನಿವೇಶಕ್ಕೆ ಸಿಕ್ಕಿಕೊಂಡಂಥ ಸಮಯ ಬರಬಹುದು. ಭವಿಷ್ಯದ ಯೋಜನೆಯಲ್ಲಿ ಪಾಲುದಾರಿಕೆಯು ಹಂತ ಹಂತವಾಗಿ ಲಾಭ ತರಲಿದೆ. ಯಶಸ್ಸು ಕಾಣುವಿರಿ.

ಧನು: ಶೈಕ್ಷಣಿಕ ರಂಗದಲ್ಲಿ ಚಟುವಟಿಕೆಗಳಿಂದ ಉತ್ತಮ ಹೆಸರನ್ನು ಸಂಪಾದಿಸಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಫಲ ಸಿಗದಿದ್ದಲ್ಲಿ ದುಡುಕು ನಿರ್ಧಾರ ತೆಗೆದುಕೊಳ್ಳಬೇಡಿ. ಸಂತೋಷ ಕೂಟದಲ್ಲಿ ಭಾಗವಹಿಸುವಿರಿ.

ಮಕರ: ಪ್ರಭಾವಿ ವ್ಯಕ್ತಿಯೊಬ್ಬರಿಂದ ಕಾರ್ಯವನ್ನು ಸಾಧಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಕಷ್ಟಗಳನ್ನು ಎದುರಿಸುವ ಉತ್ತಮ ಎದೆಗಾರಿಕೆಯನ್ನು ಹೊಂದಿರುವಿರಿ. ಸಾಮಾಜಿಕವಾಗಿ ಜನೋಪಕಾರದಿಂದ ಶ್ಲಾಘನೆ ಲಭಿಸಲಿದೆ.

ಕುಂಭ: ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಹೆಚ್ಚಿನ ಕೆಲಸವಿದ್ದು ಕೆಲಸಗಾರರಲ್ಲಿ ಹುರುಪು ಮೂಡಿಸುವಲ್ಲಿ ಯಶಸ್ವಿಯಾಗುವಿರಿ. ನೆಂಟರ ಸಹಾಯದಿಂದ ಮಗಳ ಮದುವೆ ಗೊತ್ತಾಗಿ ಮುಂದಿನ ತಯಾರಿ ಮಾಡಿಕೊಳ್ಳುವಿರಿ.

ಮೀನ: ನಿಮ್ಮದಲ್ಲದ ವಸ್ತುವಿನ ಬಗ್ಗೆ ಯಾವುದೇ ರೀತಿಯ ವ್ಯಾಮೋಹ ಇಟ್ಟುಕೊಳ್ಳಬೇಡಿ. ಕೆಲವೊಂದು ಅನಿರೀಕ್ಷಿತ ಘಟನೆಗಳಿಂದ ವ್ಯವಹಾರವು ಉತ್ತಮಗೊಳ್ಳುವುದು. ಕೃಷಿಕರಿಗೆ ಧಾನ್ಯ ಮಾರಾಟಕ್ಕೆ ಒಳ್ಳೆಯ ದಿನ.

ಕ್ಷಮಿಸುವ ಔದಾರ್ಯ

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಶೇಕ್ಸ್‌ಪಿಯರ್‌ನ 'ದ ಟೆಂಪೆಸ್ಟ್' ನಾಟಕದಲ್ಲಿ ಬರುವ ಈತನ ಹೆಸರು ಪ್ರಾಸ್ಪರೋ. ಮಿಲಾನ್ ದೇಶದ ರಾಜ. ಇವನಿಗೆ ಪುಟಾಣಿ ಮಗಳಿದ್ದಳು. ಓದು ಮತ್ತು ಏಕಾಂತ ಇಷ್ಟಪಡುತ್ತಿದ್ದ ದೊರೆ ತನ್ನ ರಾಜ್ಯದ ಆಡಳಿತ ನೋಡಿಕೋ ಎಂದು ಪ್ರಿಯ ತಮ್ಮ ಆಂಟೋನಿಯೋಗೆ ಸೂಚಿಸಿದ.

ಅಣ್ಣನಿಂದ ಅಧಿಕಾರ ಪಡೆದ ಆಂಟೋನಿಯೋ ಅಣ್ಣನನ್ನು ಕೊಲ್ಲುವ ಸಂಚು ರೂಪಿಸಿದ. ಒಂದು ಹಡಗಿನಲ್ಲಿ ಅಣ್ಣನನ್ನೂ ಅವಳ ಮಗಳನ್ನು ಬಂಧಿಸಿ ದೂರ ಎಳೆದೊಯ್ದ. ಘನಸಾಗರದ ನಡುವೆ ಹಡಗು ನಿಲ್ಲಿಸಿ ಒಂದು ಪುಟ್ಟ ದೋಣಿಯಲ್ಲಿ ಇವರನ್ನು ತಳ್ಳಿ ಬಂದ. ಹಸಿವು, ನೀರಡಿಕೆಯಿಂದ ಬಳಲಿ ಉಪ್ಪು ನೀರ ನಡುವೆ ನರಳಿ ಅವರು ಸಾಯಲಿ ಎಂಬ ಸಂಚು ಅವನದಾಗಿತ್ತು.

ಪ್ರಾಸ್ಪರೋ ಅಸಹಾಯಕನಾಗಿ ತಡಕಾಡಿದಾಗ ದೋಣಿ ತಳದಲ್ಲಿ ಏನೋ ಕಾಣಿಸಿತು. ನೀರು, ಆಹಾರ, ಬಟ್ಟೆ ಹಾಗೂ ದೊರೆ ಪ್ರಾಸ್ಪರೋ ಪ್ರೀತಿಸುವ ಮಾಂತ್ರಿಕ ವಿದ್ಯೆಯ ಪುಸ್ತಕಗಳು ಅಲ್ಲಿದ್ದವು. ಪ್ರಾಸ್ಪರೋನ ಪ್ರೀತಿಯ ಗೆಳೆಯ ಗನ್ಸಾಲೋ ಎಂಬಾತ ಅದನ್ನು ರಹಸ್ಯವಾಗಿ ಮೊದಲೇ ಇಡಿಸಿ ಬಿಟ್ಟಿದ್ದ. ಜಗತ್ತಿನಲ್ಲಿ ರಕ್ತ ಸಂಬಂಧಿಗಳೇ ಆಸ್ತಿ ಆಸೆಗೆ ಶತ್ರುಗಳಾದಾಗ ನಮ್ಮ ನೆರವಿಗೆ ಅಮೂಲ್ಯ ಸ್ನೇಹಿತರು ಮಾತ್ರ ಉಳಿದಿರುತ್ತಾರೆ ಎಂಬುದನ್ನು ಆತ ಸಾಬೀತು ಮಾಡಿದ್ದ.

ಹೆಣಗಾಡಿ ಒಂದು ದ್ವೀಪ ತಲುಪಿದ ತಂದೆ, ಮಗಳು ಜೀವ ಉಳಿಸಿಕೊಂಡರು. ಅಲ್ಲಿ ನೆಲೆಸಿ ಮಾಂತ್ರಿಕ ವಿದ್ಯೆ ಕಲಿತ ಪ್ರಾಸ್ಪರೋ ಆ ದ್ವೀಪದಲ್ಲಿ ಈ ಮೊದಲು ನೆಲೆಸಿದ್ದ ಮಾಟಗಾತಿಯ ಬಗ್ಗೆ ತಿಳಿದ. ಆಕೆ ಸಾಯುವ ಮೊದಲು ತನ್ನ ಮಾತು ಕೇಳದ ದ್ವೀಪದ ಜೀವ ಚೇತನಗಳನ್ನು ಒಂದು ದೊಡ್ಡ ಮರದಲ್ಲಿ ಸೆರೆ ಇಟ್ಟಿದ್ದಳು. ತನ್ನ ವಿದ್ಯೆ ಬಳಸಿ ಪ್ರಾಸ್ಪರೋ ಅವರಿಗೆಲ್ಲಾ ಮರಳಿ ಜೀವಿಸುವ ಅವಕಾಶ ಒದಗಿಸಿದ. ಯಾರಿಗೂ ಕಾಣದ ಅಗೋಚರ ಚೇತನಗಳಾಗಿದ್ದ ಅವು ಇವನ ಸಹಾಯಕ್ಕೆ ನಿಂತವು.

ತನ್ನ ತಮ್ಮನನ್ನು ಸಾಯಿಸುವ ಒಂದು ಅವಕಾಶ ಪ್ರಾಸ್ಪರೋಗೆ ಸಿಕ್ಕಿತು. ಅವರು ಪಯಣ ಮಾಡುತ್ತಿದ್ದ ಹಡಗನ್ನು ಕಂಡ ಪ್ರಾಸ್ಪರೋ ತನ್ನ ಮಾಂತ್ರಿಕ ಶಕ್ತಿಯಿಂದ ಚಂಡಮಾರುತ ಸೃಷ್ಟಿಸಿದ. ಅವರ ಹಡಗು ಮುಳುಗಿತು. ನೀರು ಪಾಲಾದ ಅವರೆಲ್ಲಾ ಅನೇಕ ಕಷ್ಟಗಳನ್ನು ಅನುಭವಿಸಿದರು. ಅವರೆಲ್ಲಾ ಪ್ರಜ್ಞೆ ತಪ್ಪಿ ಇನ್ನೇನು ಸಾಯಬೇಕು ಎಂಬ ಹೊತ್ತಿನಲ್ಲಿ ಕರುಣೆಗೊಂಡ ಪ್ರಾಸ್ಪರೋ ತನ್ನ ಮಾಯಾವಿ ಶಕ್ತಿಯಿಂದ ಅವರನ್ನು ಉಳಿಸಿದ. ಅವರ ಮುಂದೆ ಹಬ್ಬದೂಟವನ್ನಿರಿಸಿ ತಿನ್ನಲು ಓಡಿ ಬಂದಾಗ ಊಟವೇ ಸಿಗದಂತೆ ಮಾಯ ಮಾಡಿದ.

ಅವರಿಗೆ ಹಸಿವು ಹಾಗೂ ಜೀವ ಭಯದ ವೇದನೆ ಅರ್ಥ ಮಾಡಿಸುವುದು ಪ್ರಾಸ್ಪರೋನ ಉದ್ದೇಶವಾಗಿತ್ತು. ದುಃಖ ಮತ್ತು ಭಯದಿಂದ ಕಂಗೆಟ್ಟು ನಡುಗುತ್ತಿದ್ದ ಅವರೆದುರು ಈಗ ಪ್ರಾಸ್ಪರೋ ಕಾಣಿಸಿಕೊಂಡ. ತಾವು ಮಾಡಿದ್ದು ತಪ್ಪಾಯಿತು ಕ್ಷಮಿಸು ಎಂದು ಆಂಟೋನಿಯೋ ಅತ್ತಾಗ, ಪ್ರಾಸ್ಪರೋ ಅವರನ್ನು ಕ್ಷಮಿಸಿದ.

ದ್ರೋಹ ಬಗೆದವರನ್ನು ಕ್ಷಮಿಸುವುದು ಇಷ್ಟು ಸುಲಭದ ಕೆಲಸವಲ್ಲ. ಇಲ್ಲಿ ಪ್ರಾಸ್ಪರೋ ತನ್ನ ಬಾಳಲ್ಲಿ ದುಷ್ಟರಾಗಿ ನಡೆದುಕೊಂಡವರನ್ನು ಮೊದಲು ಶಿಕ್ಷಿಸಿ ನಂತರ ಕ್ಷಮಿಸಿ ಕೊನೆಗೆ ಪ್ರೀತಿಯ ಅರ್ಥ ಮಾಡಿಸುತ್ತಾನೆ. ಹಿತಶತ್ರುಗಳ ಅಷ್ಟೂ ತಪ್ಪುಗಳನ್ನೂ ಒಮ್ಮೆಗೇ ಕ್ಷಮಿಸಿ ಪ್ರಾಸ್ಪರೋ ರಾಜನಿಗಿಂತ ನಾವು ದೊಡ್ಡವರಾಗಲು ಸಾಧ್ಯವಿಲ್ಲವೇ?

ಪದಬಂಧ 5460 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಾದ ನಡೆಯುತ್ತಿದ್ದಾಗಲೇ ಈ ಭಾಷಾಂತರ! (4)
3.ರಾಯರಿಗೆ ಅಬಾರಿಯಾಗಿರುವ ರಾಜಪ್ರತಿನಿಧಿ! (4)
5.ಮಣಿ ಧರಿಸಿರುವ ಚಲುವೆ (3)
6.ಯಮನ ಹತ್ತಿರ ಕಳೆದ ಕಾಲ (3)
8.ನಗರದಲ್ಲಿ ಕೇಳಿಸಿದ ಚರ್ಮ ವಾದ್ಯ (3)
9.ವರ ನೀಡಿದ ವಿಸ್ತಾರ ಹೇಳಿಕೆ (3)
10.ಪೂಜಾ ವೇಳೆಯಲ್ಲಿ ನೀರು ತುಂಬಿದ ಚೊಂಬು (3)
12.ಜಟೆ ಇದ್ದದಕ್ಕೇ ಇಷ್ಟು ಸಂಕೀರ್ಣ! (3)
14.ನೆಮ್ಮದಿ ಈ ರೀತಿ ಬಂದಿದೆ (4)
15.ಪರದೆಯ ಹಿಂದಿರುವ ಗುಟ್ಟು! (4)

ಮೇಲಿಂದ ಕೆಳಕ್ಕೆ

1.ಬಟ್ಟೆಗಳನ್ನು ಮಡಿಮಾಡುವವನು (3)
2.ದರಬಾರಿನಲ್ಲಿ ವಿಧಿಸಿದ ಬೆಲೆ (2)
3.ರಾಜನ ಹೆಂಡತಿ (2)
4.ದುರಸ್ತಿಯನ್ನು ಹೀಗೆನ್ನಿ (3)
7.ಮೃತ್ಯುದೇವತೆಯ ಆಳು (5)
8.ನಯವಾದ ಮಾತಿನಲ್ಲೇ ಮೋಸ ಮಾಡಿದವ (5)
9.ಸರಸದ ವಿರುದ್ಧ ಪದ (3)
11.ಅಕ್ಕರೆಯಿಂದ ತಿನ್ನಿಸಿದ ಸಿಹಿ (3)
12.ಜವಾನನ ಸುತ್ತ ನೆರೆದಿರುವ ಮಂದಿ (2)
13.ಮರಕ್ಕೆ ಹಬ್ಬಿದ ಬಳ್ಳಿ (2)



5459ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಡಿಪಾಯ 3.ಆಯವ್ಯಯ
5.ಮಡದಿ 6.ಮರುಳ
7.ಗಹನ 9.ತಲ್ಲೀನ
11.ವಿರಾಮ 12.ಮಸೂರ
14.ಯಮಸುತ
15.ವಿನಾಯಕ

ಮೇಲಿಂದ ಕೆಳಕ್ಕೆ:
1.ಅನುರಾಗ 2.ಯಮ
3.ಆದಿ 4.ಯಮಳ
6.ಮಡಿವಂತ 8.ನವಸುಮ
10.ನಳಪಾಕ 11.ವಿದಾಯ
12.ಮತ 13.ರವಿ

ಸುಡೊಕು 5846

		4				7		
		5		7	1		4	
1	3			4				6
		1				9		7
			3	9	7			4
7		9				8		
5				6		4		
4					3		2	1
	6	2		8	4			5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5845 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

ಭಾರತದ ಜಿಡಿಪಿ ಶೇ 6.3: ವಿಶ್ವಬ್ಯಾಂಕ್

ನವದೆಹಲಿ/ವಾಷಿಂಗ್ಟನ್ (ಪಿಟಿಐ): ಭಾರತದ ಆರ್ಥಿಕತೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 6.3ರಷ್ಟು ಬೆಳವಣಿಗೆ ಕಾಣಲಿದೆ ಎಂದು ವಿಶ್ವಬ್ಯಾಂಕ್ ಹೇಳಿದೆ.

ಹೂಡಿಕೆ ಮತ್ತು ದೇಶಿ ಬೇಡಿಕೆಯಿಂದಾಗಿ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಲಿದೆ ಎಂದು ಮಂಗಳವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ತಿಳಿಸಿದೆ. ಏಪ್ರಿಲ್‌ನಲ್ಲಿ ಬಿಡುಗಡೆ ಮಾಡಿದ್ದ ವರದಿಯಲ್ಲಿಯೂ ಶೇ 6.3ರಷ್ಟು ಬೆಳವಣಿಗೆ ಕಾಣುವ ಅಂದಾಜನ್ನು ಅದು ಮಾಡಿತ್ತು.

ಆಹಾರ ವಸ್ತುಗಳ ದರವು ಸಹಜ ಸ್ಥಿತಿಗೆ ಮರಳಿದಂತೆ ಮತ್ತು ಸರ್ಕಾರದ ಕ್ರಮಗಳಿಂದಾಗಿ ಅಗತ್ಯ ವಸ್ತುಗಳ ಪೂರೈಕೆ ಸುಧಾರಿಸುತ್ತಿದ್ದಂತೆಯೇ ಹಣದುಬ್ಬರವು ಕ್ರಮೇಣ ಇಳಿಕೆ ಕಾಣಲಿದೆ ಎಂದು ವಿಶ್ವಬ್ಯಾಂಕ್ ಹೇಳಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,638
ಇಂದಿನ ಅಂತ್ಯ	19,528
▼	110
ದಿನದ ಗರಿಷ್ಠ	19,479

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹537

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1715 (1740)
ಸೋಯಾ (ರಿಫೈನ್ಡ್)	₹875 (870)
ಸೂರ್ಯಕಾಂತಿ (ರಿಫೈನ್ಡ್)	₹875 (865)
ಪಾಮೋಲಿನ್	₹822 (816)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹240-508
ದ್ವಿತಳಿ (ಬಿ.ವಿ)	₹342-612

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8000-9000
ತಿಪಟೂರು	₹6800-8400
ತುರುವೇಕೆರೆ	₹8100-8500

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀಮತಿ ನಿರ್ಮಲ ಶ್ರೀಕಂಠನ್
(ದಿವಂಗತ ಡಾ. ಎಸ್. ಶ್ರೀಕಂಠನ್‌ರವರ ಪತ್ನಿ)
ನಿಧನ: 4ನೇ ಅಕ್ಟೋಬರ್ 1996
ನಮ್ಮನಗಲಿದ ನಮ್ಮ ಪ್ರೀತಿಯ ತಾಯಿಯವರ ಸವಿನೆನಪಿನಲ್ಲಿರುವ
ಪುತ್ರ: ರಬೀಂದ್ರ ಶ್ರೀಕಂಠನ್ ಮತು ಕುಟುಂಬ
ಪುತ್ರಿ: ಗೀತಾ ಶ್ರೀಕಂಠನ್
ಇಮೇಲ್: r_srikantan@yahoo.com

3ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಹೆಚ್. ಎಂ. ಚಂದ್ರಶೇಖರಯ್ಯ
Retd. Post Master, Bangalore
ಜನನ: 10-05-1945, ನಿಧನ : 04-10-2020
ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶನ, ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ.
ಇಂತಿ ದು:ಖತಪ್ತರು: ಧರ್ಮಪತ್ನಿ ಶ್ರೀಮತಿ ಕಾಂತಮ್ಮ, ಪದ್ಮನಾಭ, ಲತಾ ಪದ್ಮನಾಭ, ಗಂಗಾಧರ, ಕವಿತ ಗಂಗಾಧರ, ನಿತಿನ್, ಸುಮಲತ ನಿತಿನ್, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಮುಂಬೈ ಧಾರಣೆ

ಶೇಂಗಾ

03-10-2023

ಜಾವಾ 70/80(ಹೊಸ)	12400-12500
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	10700-10800
ದಪ್ಪ ಗುಜರಾತ್(ಹೊಸ)	11500-11600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1725 (1750)
ಒಂದು ವಾರದ ಡೆಲಿವರಿ	1720 (1745)
ಸೋಯಾ ಕಚ್ಚಾ	840 (835)
ಪಾಮ್ ವಾರದ ಡೆಲಿವರಿ	820(814)
ಸೂರ್ಯಕಾಂತಿ ಎಣ್ಣೆ ಕಚ್ಚಾ	800 (800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,400 (56,900)
ಬೆಳ್ಳಿ ಕೆ.ಜಿ 67,100 (68,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎಲ್‌ಐಸಿಗೆ ಐ.ಟಿ. ನೋಟಿಸ್

ನವದೆಹಲಿ (ಪಿಟಿಐ): ಆದಾಯ ತೆರಿಗೆ ಇಲಾಖೆಯು ₹84 ಕೋಟಿ ದಂಡ ಪಾವತಿಸುವಂತೆ ನೋಟಿಸ್ ನೀಡಿದೆ ಎಂದು ಎಲ್‌ಐಸಿ ತಿಳಿಸಿದೆ. ಇದರ ವಿರುದ್ಧ ಮೇಲ್ಮನವಿ ಸಲ್ಲಿಸುವುದಾಗಿ ಅದು ಹೇಳಿದೆ.

ಆದಾಯ ತೆರಿಗೆ ಕಾಯ್ದೆ 1061ರ ಸೆಕ್ಷನ್ 271(1) (ಸಿ) ಮತ್ತು 270ಎ ಉಲ್ಲಂಘಿಸಿರುವುದಕ್ಕೆ ಈ ದಂಡ ವಿಧಿಸಲಾಗಿದೆ. 2012-13ನೇ ಅಂದಾಜು ವರ್ಷಕ್ಕೆ ₹12.61 ಕೋಟಿ, 2018-19ಕ್ಕೆ ₹33.82 ಕೋಟಿ ಮತ್ತು 2019-20ನೇ ಅಂದಾಜು ವರ್ಷಕ್ಕೆ ₹37.58 ಕೋಟಿ ದಂಡ ವಿಧಿಸಲಾಗಿದೆ ಎಂದು ಎಲ್‌ಐಸಿ ತಿಳಿಸಿದೆ.

ನಿರೀಕ್ಷಿತ ಮಟ್ಟದಲ್ಲಿ ಏರಿಕೆ ಕಾಣದ ಹೊಸ ವಹಿವಾಟುಗಳ ಬೇಡಿಕೆ: ಎಸ್ ಆ್ಯಂಡ್ ಪಿ

ತಯಾರಿಕಾ ಚಟುವಟಿಕೆ 5 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಸೆಪ್ಟೆಂಬರ್‌ನಲ್ಲಿ 5 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆಯು ಮಂಗಳವಾರ ಹೇಳಿದೆ.

ತಯಾರಿಕಾ ವಲಯದ ಬೆಳವಣಿಗೆಯನ್ನು ಸೂಚಿಸುವ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಆಗಸ್ಟ್‌ನಲ್ಲಿ 58.06ರಷ್ಟು ಇದ್ದಿದ್ದು ಸೆಪ್ಟೆಂಬರ್‌ನಲ್ಲಿ 57.5ಕ್ಕೆ ಇಳಿಕೆ ಆಗಿದೆ. 5 ತಿಂಗಳ ಕನಿಷ್ಠ ಮಟ್ಟ ಇದಾಗಿದೆ.

ಹೊಸ ವಹಿವಾಟುಗಳಿಗೆ ಬೇಡಿಕೆಯು ನಿಧಾನಗತಿಯಲ್ಲಿ ಹೆಚ್ಚಳ ಆಗಿರುವುದು ತಯಾರಿಕಾ ಚಟುವಟಿಕೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ ಎಂದು ಅದು ತಿಳಿಸಿದೆ. ಹೀಗಿದ್ದರೂ, ವಲಯದ ಚಟುವಟಿಕೆಯು ಸತತ 27ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಮಟ್ಟದಲ್ಲಿಯೇ ಇದೆ. ಸೂಚ್ಯಂಕವು 50ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಸಕಾರಾತ್ಮಕ ಬೆಳವಣಿಗೆ ಎಂದೂ, 50ಕ್ಕಿಂತಲೂ ಕಡಿಮೆ ಇದ್ದರೆ ನಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

'ಬೇಡಿಕೆ ಮತ್ತು ತಯಾರಿಕೆ ಬೆಳವಣಿಗೆ ಹಾದಿಯಲ್ಲಿಯೇ ಇವೆ. ಭಾರತದ ಕಂಪನಿಗಳಿಗೆ ಏಷ್ಯಾ, ಯುರೋಪ್, ಉತ್ತರ ಅಮೆರಿಕ ಮತ್ತು ಮಧ್ಯಪ್ರಾಚ್ಯದಿಂದ ಹೊಸ ವಹಿವಾಟುಗಳು ಸಿಗುತ್ತಿವೆ' ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ತಿಳಿಸಿದ್ದಾರೆ.

'ಮುಂಬರುವ 12 ತಿಂಗಳುಗಳಲ್ಲಿ ತಯಾರಿಕೆಯು ಹೆಚ್ಚಾಗುವ ವಿಶ್ವಾಸವನ್ನು ಕಂಪನಿಗಳು ಹೊಂದಿವೆ. ಮುನ್ನೋಟ ಉತ್ತಮವಾಗಿರುವ ನಿರೀಕ್ಷೆಯು ಉದ್ಯೋಗ ಸೃಷ್ಟಿಗೆ ಮತ್ತು ದಾಸ್ತಾನು ಹೆಚ್ಚಿಸಿಕೊಳ್ಳಲು ಕಾರಣವಾಗಲಿದೆ' ಎಂದು ಲಿಮಾ ಹೇಳಿದ್ದಾರೆ.

ಪೂರೈಕೆ ವ್ಯವಸ್ಥೆಯು ಬಹುತೇಕ ಸ್ಥಿರವಾಗಿದೆ. ಹೀಗಾಗಿ ತಯಾರಿಕಾ ವೆಚ್ಚವು ಮೂರು ವರ್ಷಗಳಲ್ಲಿ ಅವಧಿಯಲ್ಲಿ ವಾರವೊಂದರ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗುವಂತೆ ಮಾಡಿದೆ ಎಂದು ಸಂಸ್ಥೆಯು ಹೇಳಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬುಧವಾರದಿಂದ ಶುಕ್ರವಾರದವರೆಗೆ ದ್ವೈಮಾಸಿಕ ಹಣಕಾಸು ನೀತಿ ಸಭೆ ನಡೆಸಲಿದೆ. ತಜ್ಞರ ಪ್ರಕಾರ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈ ಬಾರಿಯ ದ್ವೈಮಾಸಿಕ ಹಣಕಾಸು ನೀತಿ ಸಭೆಯಲ್ಲಿ ಬಡ್ಡಿದರವನ್ನು ಶೇ 6.5ರಲ್ಲಿಯೇ ಉಳಿಸಿಕೊಳ್ಳಲಿದೆ.

ತಯಾರಿಕಾ ವಲಯದ ಬೆಳವಣಿಗೆ ಸೂಚ್ಯಂಕ

ಮೇ	58.7
ಜೂನ್	57.8
ಜುಲೈ	57.7
ಆಗಸ್ಟ್	58.6
ಸೆಪ್ಟೆಂಬರ್	57.5

ಸೇವೆಗಳ ರಫ್ತು ಹೆಚ್ಚಳ

ಮುಂಬೈ (ರಾಯಿಟರ್ಸ್): ಭಾರತದ ಸೇವೆಗಳ ರಫ್ತು ವಹಿವಾಟು ಆಗಸ್ಟ್‌ನಲ್ಲಿ ಶೇ 8.4ರಷ್ಟು ಹೆಚ್ಚಾಗಿದ್ದು, ₹2.38 ಲಕ್ಷ ಕೋಟಿಗೆ ತಲುಪಿದೆ. ಇದೇ ವೇಳೆ ಸೇವೆಗಳ ಆಮದು ವಹಿವಾಟು ಶೇ 0.8ರಷ್ಟು ಅಲ್ಪ ಇಳಿಕೆ ಕಂಡು ₹1.25 ಲಕ್ಷ ಕೋಟಿಯಷ್ಟು ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಾಹಿತಿ ನೀಡಿದೆ.

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹144
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹127

ವಿನಿಮಯ ದರ

$ ಡಾಲರ್	83.20
£ ಪೌಂಡ್	100.52
€ ಯುರೊ	87.13

'₹800 ಕೋಟಿ ಹೂಡಿಕೆ: ಕ್ರಿಪ್ಟನ್ ಆಸಕ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ ಕ್ರಿಪ್ಟನ್ ಸಲ್ಯೂಷನ್ಸ್ ಕಂಪನಿಯು ಬೆಂಗಳೂರಿನ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ₹800 ಕೋಟಿ ಹೂಡಿಕೆಯಲ್ಲಿ ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್ (ಪಿಸಿಬಿ) ಉತ್ಪಾದನಾ ಘಟಕ ಆರಂಭಿಸಲು ಆಸಕ್ತಿ ವ್ಯಕ್ತಪಡಿಸಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಅಮೆರಿಕ ಪ್ರವಾಸದಲ್ಲಿರುವ ಅವರು ಪತ್ರಿಕಾ ಪ್ರಕಟಣೆ ನೀಡಿದ್ದು, 'ಕಂಪನಿಯ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸುರೇಶ್ ಪಟೇಲ್, ಇತರ ಉನ್ನತ ಅಧಿಕಾರಿಗಳ ಜತೆ ಸೋಮವಾರ ಚರ್ಚೆ ನಡೆಸಲಾಗಿದೆ. ಬೆಂಗಳೂರಿನ ಜತೆಯಲ್ಲೇ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲೂ ಹೂಡಿಕೆಗೆ ಇರುವ ಅವಕಾಶಗಳನ್ನು ಪರಿಶೀಲಿಸಲು ಕಂಪನಿ ಒಪ್ಪಿಕೊಂಡಿದೆ' ಎಂದಿದ್ದಾರೆ.

ಅಮೆರಿಕ ಪ್ರವಾಸದಲ್ಲಿರುವ ಕರ್ನಾಟಕದ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್ ಕಂಪನಿಯ ಉತ್ಪಾದನಾ ಘಟಕಕ್ಕೆ ಸೋಮವಾರ ಭೇಟಿ ನೀಡಿ, ಅಲ್ಲಿನ ಸೌಲಭ್ಯಗಳನ್ನು ವೀಕ್ಷಿಸಿದರು.

ಸೆಮಿಕಂಡಕ್ಟರ್ ಕ್ಷೇತ್ರದ ಬೃಹತ್ ಕಂಪನಿ ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್ ಜತೆಗೂ ಮಾತುಕತೆ ನಡೆಸಲಾಗಿದೆ. ಬೆಂಗಳೂರಿನಲ್ಲಿರುವ ತನ್ನ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ವಿಸ್ತರಿಸಲು ಆ ಕಂಪನಿ ಆಸಕ್ತಿ ತೋರಿದೆ ಎಂದು ಮಾಹಿತಿ ನೀಡಿದ್ದಾರೆ.

ಟೆಕ್ಸಾಸ್‌ನಲ್ಲಿ ಕೇಂದ್ರ ಕಚೇರಿ ಹೊಂದಿರುವ ಇ.ಆರ್.ಪಿ. ಲಾಜಿಕ್ ಕಂಪನಿಯೊಂದಿಗೂ ಚರ್ಚಿಸಲಾಗಿದೆ. 'ಸ್ಯಾಪ್' ಕೌಶಲದಲ್ಲಿ ಪರಿಣತಿ ಹೊಂದಿರುವ ಈ ಕಂಪನಿ, ಬೆಂಗಳೂರಿನ ಉನ್ನತ ಶಿಕ್ಷಣ ಸಂಸ್ಥೆಗಳ ಜತೆಗೂಡಿ ಕೆಲಸ ಮಾಡಲು ಇಚ್ಛೆ ವ್ಯಕ್ತಪಡಿಸಿದೆ ಎಂದು ತಿಳಿಸಿದ್ದಾರೆ.

ಎಂಜಿನಿಯರಿಂಗ್ ಸರಕುಗಳ ರಫ್ತು ಶೇ 4.55ರಷ್ಟು ಇಳಿಕೆ

ಕೋಲ್ಕತ್ತ (ಪಿಟಿಐ): ಜಾಗತಿಕ ಆರ್ಥಿಕತೆಯು ಮಂದಗತಿಯ ಬೆಳವಣಿಗೆ ಕಾಣುತ್ತಿರುವುದರಿಂದ ಭಾರತದ ಎಂಜಿನಿಯರಿಂಗ್ ಸರಕುಗಳ ರಫ್ತು ವಹಿವಾಟಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದು ಎಂಜಿನಿಯರಿಂಗ್ ರಫ್ತು ಉತ್ತೇಜನ ಮಂಡಳಿ (ಇಇಪಿಸಿ) ಮಂಗಳವಾರ ತಿಳಿಸಿದೆ.

2023ರ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ಎಂಜಿನಿಯರಿಂಗ್ ರಫ್ತು ಶೇ 4.55ರಷ್ಟು ಇಳಿಕೆ ಕಂಡು ₹3.70 ಲಕ್ಷ ಕೋಟಿಗೆ ತಲುಪಿದೆ. 2022ರ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ₹3.87 ಲಕ್ಷ ಕೋಟಿ ಮೌಲ್ಯದ ವಹಿವಾಟು ನಡೆದಿತ್ತು.

ಮಂಡಳಿಯ ವಕ್ತಾರರ ಪ್ರಕಾರ, ರಷ್ಯಾ ದೇಶಕ್ಕೆ ರಫ್ತು ವಹಿವಾಟು 2022ರ ಏಪ್ರಿಲ್–ಆಗಸ್ಟ್ ಅವಧಿಗೆ ಹೋಲಿಸಿದರೆ 2023ರ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ಶೇ 178ರಷ್ಟು ಏರಿಕೆ ಕಂಡಿದೆ. ಮೌಲ್ಯದ ಲೆಕ್ಕದಲ್ಲಿ ₹16.93 ಲಕ್ಷ ಕೋಟಿಯಿಂದ ₹47.14 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಜಾಗತಿಕ ಮಂದಗತಿಯ ಆರ್ಥಿಕ ಬೆಳವಣಿಗೆಯು ಅಮೆರಿಕ ಮತ್ತು ಐರೋಪ್ಯ ದೇಶಗಳ ಮೇಲೆ ಪರಿಣಾಮ ಬೀರಿದೆ. ಭಾರತವು ಈ ಪ್ರದೇಶಗಳೊಂದಿಗೆ ಹೆಚ್ಚಿನ ಪ್ರಮಾಣದಲ್ಲಿ ರಫ್ತು ವಹಿವಾಟು ನಡೆಸುತ್ತಿದೆ ಎಂದು ಮಂಡಳಿ ತಿಳಿಸಿದೆ.

ರಷ್ಯಾ-ಉಕ್ರೇನ್ ಸಮರ, ಚೀನಾದ ಆರ್ಥಿಕ ಬೆಳವಣಿಗೆ ಇಳಿಕೆ ಆಗಿರುವುದು ಸಹ ಭಾರತದ ಎಂಜಿನಿಯರಿಂಗ್ ರಫ್ತು ಮೇಲೆ ಪರಿಣಾಮ ಬೀರುತ್ತಿದೆ ಎಂದು ಅದು ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1200-1300
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	590
ಬಂಟ್ವಾಳ	
ಕೋಕ	15000-25000
ಹೊಸತು	28000-45000
ಹಳತು	46000-48000
ಭದ್ರಾವತಿ	
ರಾಶಿ	38199-46500
ಚಿತ್ರದುರ್ಗ	
ಅಪಿ	45839-46269
ಬೆಟ್ಟೆ	35449-35889
ಕೆಂಪುಗೋಟು	29419-29810
ರಾಶಿ	45329-45779
ಹೊನ್ನಾವರ	
ಹೊಸಚಾಲಿ	37500-41000
ಕಾರ್ಕಳ	
ಹೊಸತು	25000-36500
ಹಳತು	30000-48500
ಪುತ್ತೂರು	
ಹೊಸತು	34000-45000
ಶಿವಮೊಗ್ಗ	
ಬೆಟ್ಟೆ	46069-52789
ಗೊರಬಲು	17009-36509
ರಾಶಿ	35069-47069
ಸರಕು	48003-82596
ಸಿದ್ದಾಪುರ	
ಬಿಳಿಗೋಟು	30209-35909
ಚಾಲಿ	37389-40539
ಕೋಕ	30019-34811
ಕೆಂಪುಗೋಟು	28089-32819
ರಾಶಿ	41099-47588
ತಟ್ಟಿಬೆಟ್ಟೆ	37009-41599
ಶಿರಸಿ	
ಬೆಟ್ಟೆ	37099-45009
ಬಿಳಿಗೋಟು	24299-36726
ಚಾಲಿ	36699-41500
ಕೆಂಪುಗೋಟು	27069-35399
ರಾಶಿ	44808-48566
ಯಲ್ಲಾಪುರ	
ಅಪಿ	58869-58869
ಬಿಳಿಗೋಟು	27699-36499
ಚಾಲಿ	36699-41169
ಕೋಕ	18899-32699
ಕೆಂಪುಗೋಟು	32450-35405
ರಾಶಿ	45866-55169
ತಟ್ಟಿಬೆಟ್ಟೆ	36882-44303

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	11550	-	149.10 ಸೆಂಟ್ಸ್
ಎಸಿ	-	5600	-	
ಆರ್‌ಪಿ	-	9800	-	ಲಂಡನ್
ಆರ್‌ಸಿ	-	234 on OT	-	2461 ಡಾಲರ್ಸ್

ಭಾವಪೂರ್ಣ ಶ್ರದ್ಧಾಂಜಲಿ



ಎನ್.ವಿಜಯ ರಾಘವ ರೆಡ್ಡಿ
(S/O ಬಿ.ನಾರಾಯಣ ರೆಡ್ಡಿ) ಬಿ.ಎನ್.ಬಿ
DOB: 15/10/1954 DOD 03/10/2023
ನಮ್ಮೆಲ್ಲರ ಮಾರ್ಗದರ್ಶಿಗಳು ಹೃದಯವಂತ. ಈ ಮಹಾ ಚೇತನಕ್ಕೆ ಭಗವಂತನು
ಚಿರಶಾಂತಿಯನ್ನು ಕರುಣಿಸಲಿ ಎಂದು ಕೋರುವ ದುಃಖತಪ್ತರು: ಬಿ.ಎನ್.ಬಿ ಕುಟುಂಬದವರು
ಅಂತಿಮ ವಿಧಿವಿದಾನಗಳನ್ನು ಬಿ.ಎನ್.ಬಿ ಗಾರ್ಡನ್ ನಲ್ಲಿ 4th OCT 2023 ಮದ್ಯಾಹ್ನ 1:30 PM ಗಂಟೆಗೆ ನೆರವೇರಲಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶಾಂತಾ, ಹುಬ್ಬಳ್ಳಿ

- **ಪ್ರಶ್ನೆ: ನನಗೆ 76 ವರ್ಷ ಆಗಿದ್ದು, ವಿಧವೆ. ಮಗನೊಂದಿಗೆ ವಾಸಿಸುತ್ತಿದ್ದೇನೆ. ನಾನು ಗೃಹಿಣಿಯಾಗಿ ಒಂದು ಲಕ್ಷ ರೂಪಾಯಿ ಉಳಿತಾಯ ಮಾಡಿದ್ದೇನೆ. ಬೇರೆ ಯಾವುದೇ ಆದಾಯವಿಲ್ಲ. ಡಿ-ಮ್ಯಾಟ್ ಖಾತೆಯನ್ನು ತೆರೆದಿದ್ದು, ನನ್ನ ಉಳಿತಾಯವನ್ನು ಟ್ರೇಡಿಂಗ್ ಖಾತೆಗೆ ವರ್ಗಾಯಿಸಿದ್ದೇನೆ. ಸ್ಟಾಕ್ ವಹಿವಾಟಿನಲ್ಲಿ ಆಸಕ್ತಿ ಹೊಂದಿದ್ದೇನೆ ಮತ್ತು ಅನ್ವಯವಾಗುವ ಆದಾಯ ತೆರಿಗೆಯನ್ನು ತಿಳಿಯಲು ಬಯಸುತ್ತೇನೆ. ಒಂದು ವೇಳೆ ಯಾವುದೇ ಆದಾಯ ತೆರಿಗೆ ಅನ್ವಯವಾಗುವುದಾದರೆ, ನಾನು ಗಳಿಸುವ ಲಾಭ ಅಥವಾ ನಾನು ಮಾಡುವ ಹೂಡಿಕೆಗೆ ಇದು ಅನ್ವಯಿಸುತ್ತದೆಯೇ ಎಂದು ತಿಳಿಸಿ. ಆದಾಯ ತೆರಿಗೆಯನ್ನು ಲೆಕ್ಕ ಮಾಡಲು ಇದನ್ನು ಹೇಗೆ ಟ್ರ್ಯಾಕ್ ಮಾಡಬಹುದು.**

ಉತ್ತರ: ನೀವು ಹಿರಿಯ ನಾಗರಿಕರಾಗಿದ್ದು, ನಿಮ್ಮ ಇಳಿ ವಯಸ್ಸಿನಲ್ಲಿ ಷೇರು ಮಾರುಕಟ್ಟೆಯಂತಹ ಏರಿಳಿತ ಕಾಣುವ ಹಾಗೂ ಅನಿಶ್ಚಿತತೆ ಇರುವ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ನಿರ್ಣಯಿಸಿರುವುದು ವಿಶೇಷ. ನಿಮಗೆ ಈ ಹಿಂದೆ ಹೂಡಿಕೆ ಮಾಡಿರುವ ಅನುಭವವಿದ್ದರೆ ಹಾಗೂ ಅಂತಹ ಕಂಪನಿಗಳ ಬಗ್ಗೆ ಸಾಕಷ್ಟು ಮಾಹಿತಿ ಇದ್ದರೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದು ಸುಲಭ. ಇಲ್ಲದಿದ್ದರೆ, ಆ ಬಗ್ಗೆ ಒಂದಷ್ಟು ನಿಗಾ ವಹಿಸಿ ಉತ್ತಮ ಕಂಪನಿಗಳಲ್ಲಷ್ಟೇ ಹೂಡಿಕೆ ಮಾಡಿ. ಪ್ರಸ್ತುತ ಸನ್ನಿವೇಶದಲ್ಲಿ, ಮುಂದೆ ಉತ್ತಮ ವಹಿವಾಟು ಮಾಡುವ ಹಾಗೂ ಆಡಳಿತ ಚೆನ್ನಾಗಿ ಮಾಡಬಹುದಾದ ಕಂಪನಿಗಳಲ್ಲಷ್ಟೇ ವ್ಯವಹರಿಸಿ. ನಿಮ್ಮ ಉಳಿತಾಯದ ಹಣದ ಬಗ್ಗೆ ನಿಗಾ ಇರಲಿ.

ಇನ್ನು ಆದಾಯ ತೆರಿಗೆಯ ಬಗ್ಗೆ ಹೇಳುವುದಾದರೆ, ನಿಮ್ಮ ಹೂಡಿಕೆ ಅವಧಿ ಒಂದು ವರ್ಷಕ್ಕಿಂತ ಹೆಚ್ಚಿನದಾಗಿದ್ದರೆ (ದೀರ್ಘಾವಧಿ ಹೂಡಿಕೆ) ಹಾಗೂ ಆ ವರ್ಗದ ಲಾಭ ಒಂದು ಲಕ್ಷದೊಳಗಿದ್ದರೆ ತೆರಿಗೆ ಇರುವುದಿಲ್ಲ. ಇದಕ್ಕೂ ಹೆಚ್ಚಿನ ಲಾಭಕ್ಕೆ ಶೇಕಡಾ 10 ತೆರಿಗೆ ಇದೆ. ಇನ್ನು ಒಂದು ವರ್ಷಕ್ಕೂ ಕಡಿಮೆ ಅವಧಿಯ ಹೂಡಿಕೆಗೆ (ಅಲ್ಪಾವಧಿ) ಶೇಕಡಾ 15 ರ ದರದಲ್ಲಿ ತೆರಿಗೆ ಇದೆ. ಸಾಮಾನ್ಯವಾಗಿ, ಡಿ-ಮ್ಯಾಟ್ ತೆರೆದ ಷೇರು ಬ್ರೋಕಿಂಗ್ ಕಂಪನಿಯವರು ಲಾಭ ನಷ್ಟವನ್ನು ಆನ್‌ಲೈನ್ ಮೂಲಕ ದಿನವಹಿ ನೋಡುವ ಅವಕಾಶ ಮಾಡಿಕೊಡುತ್ತವೆ. ಇಂದಿನ ಕಾಲದಲ್ಲಿ ಮೊಬೈಲ್ ಆ್ಯಪ್‌ಗಳು ಸಕ್ರಿಯ ಮಾಹಿತಿ ನೀಡುತ್ತವೆ. ಹೂಡಿಕೆಯಲ್ಲಾದ ನಷ್ಟವನ್ನು ಮುಂದಿನ 8 ವರ್ಷಗಳ ಅವಧಿಯಲ್ಲಿ ಬರುವ ಲಾಭದೊಡನೆ ವಜಾ ಮಾಡಿ ಉಳಿದ ಲಾಭದ ಮೇಲೆ ತೆರಿಗೆ ಕಟ್ಟುವುದಕ್ಕೆ ಅವಕಾಶವಿದೆ. ನೀವು ಹಿರಿಯ ನಾಗರಿಕರಾಗಿರುವುದರಿಂದ ಇತರ ತೆರಿಗೆಗೊಳಪಡುವ ಆದಾಯ ಯಾವುದೂ ಇಲ್ಲದೆ ಇದ್ದರೆ, ಷೇರು ಹೂಡಿಕೆಯಿಂದ ಬರುವ ಲಾಭಕ್ಕೆ ನೀವು ಆಯ್ಕೆ ಮಾಡುವ ತೆರಿಗೆ ಪದ್ಧತಿಗೆ ಅನುಸರಿಸಿ ಮೂಲ ಆದಾಯ ವಿನಾಯಿತಿ ಮೊತ್ತಕ್ಕೆ ತೆರಿಗೆ ಇರುವುದಿಲ್ಲ.

ಪ್ರವೀಣ್, ಊರು ತಿಳಿಸಿಲ್ಲ

- **ಪ್ರಶ್ನೆ: ನಾನು ವೃತ್ತಿಯಲ್ಲಿ ಸರ್ಕಾರಿ ಶಾಲೆಯಲ್ಲಿ ಶಿಕ್ಷಕನಾಗಿದ್ದು ವಯಸ್ಸು 40 ವರ್ಷ. ಇನ್ನೂ 20 ವರ್ಷಗಳ ಸರ್ವಿಸ್ ಬಾಕಿ ಇದೆ. ನನಗೆ ಇಬ್ಬರು ಹೆಣ್ಣು ಮಕ್ಕಳು. ಸದ್ಯ ಸಂಬಳ ₹40,000 ಇದೆ. ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಉಳಿತಾಯ ಹಾಗೂ ಹೂಡಿಕೆ ಮಾಡುವ ಬಗ್ಗೆ ತಿಳಿಸಿಕೊಡಿ. ನಾನು ಎನ್‌ಪಿಎಸ್ ಸ್ಕೀಮ್ ಅಡಿಯಲ್ಲಿ ಇದ್ದೇನೆ.**

ಉತ್ತರ: ನೀವು ನೀಡಿದ ಮಾಹಿತಿಯಂತೆ ನಿಮಗೆ ಇನ್ನೂ ಸುದೀರ್ಘವಾದ ವೃತ್ತಿ ಬದುಕಿದೆ ಹಾಗೂ ಸಂಸಾರದ ಜವಾಬ್ದಾರಿಯೂ ಇದೆ. ಸಾಮಾನ್ಯವಾಗಿ ಹೆಣ್ಣು ಮಕ್ಕಳ ಪೋಷಕರು, ಅವರ ಉನ್ನತ ಶಿಕ್ಷಣ ಮತ್ತು ಮದುವೆಯ ವೆಚ್ಚಗಳನ್ನು ಪೂರೈಸಲು ಸಹಾಯ ಮಾಡುವ ಉದ್ದೇಶಕ್ಕಾಗಿ ತಮ್ಮ ಮಗುವಿನ ಹೆಸರಿನಲ್ಲಿ ಹೂಡಿಕೆ ಮಾಡಲು ಸಹಜವಾಗಿ ನೋಡುತ್ತಾರೆ. ಇದನ್ನು ಸಾಧಿಸಲು ಪೋಷಕರಿಗೆ ಸಹಾಯ ಮಾಡುವ ಅನೇಕ ಹೂಡಿಕೆ ಮಾರ್ಗಗಳಿದ್ದರೂ, ಸುಕನ್ಯಾ ಸಮೃದ್ಧಿ ಯೋಜನಾ ಖಾತೆ ಹೆಚ್ಚಿನ-ಬಡ್ಡಿ ದರ ಮತ್ತು ಅದು ನೀಡುವ ತೆರಿಗೆ ಪ್ರಯೋಜನಗಳ ಕಾರಣದಿಂದಾಗಿ ಅತ್ಯಂತ ಜನಪ್ರಿಯವಾದ ಯೋಜನೆಯಾಗಿದೆ. ಹತ್ತು ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳ ಹೆಸರಲ್ಲಿ ಈ ಖಾತೆಯನ್ನು ತೆರೆಯಬಹುದು.

ಆದಾಯ ತೆರಿಗೆ ಕಾಯಿದೆ, 1961 ರ ಸೆಕ್ಷನ್ 80 ಸಿ ಅಡಿಯಲ್ಲಿ, ವ್ಯಕ್ತಿಗಳು ಈ ಖಾತೆಯಲ್ಲಿ ಹೂಡಿಕೆ ಮಾಡಿದರೆ ವರ್ಷಕ್ಕೆ ಗರಿಷ್ಠ ₹ 1.5 ಲಕ್ಷದವರೆಗೆ ತೆರಿಗೆ ವಿನಾಯಿತಿಯನ್ನು ಪಡೆಯಬಹುದು. ಇದಲ್ಲದೆ, ಹೂಡಿಕೆಯಿಂದ ಬರುವ ವಾರ್ಷಿಕ ಬಡ್ಡಿ ಆದಾಯವೂ ತೆರಿಗೆ-ವಿನಾಯತಿಯನ್ನು ಹೊಂದಿದೆ. ಅವಧಿ ಮುಗಿದ ನಂತರ ಬರುವ ಮೆಚ್ಯುರಿಟಿ ಮೊತ್ತಕ್ಕೂ ತೆರಿಗೆ ಪ್ರಯೋಜನಗಳನ್ನು ವಿಸ್ತರಿಸಲಾಗಿದೆ. ಸುಕನ್ಯಾ ಸಮೃದ್ಧಿ ಯೋಜನೆಯು ದೀರ್ಘಾವಧಿಯ ಹೂಡಿಕೆ ಯೋಜನೆಯಾಗಿದ್ದು ಅದು ನಿಶ್ಚಿತ ಬಡ್ಡಿ (ಪ್ರಸ್ತುತ ಶೇ 8) ಆದಾಯ ಒದಗಿಸುತ್ತದೆ . ಖಾತೆಯನ್ನು ಸಕ್ರಿಯವಾಗಿರಿಸಲು ಹೂಡಿಕೆದಾರರು ಪ್ರತಿ ವರ್ಷ ಕನಿಷ್ಠ ₹250 ಹೂಡಿಕೆಯಾಗಿ ಪಾವತಿಸಬೇಕು. ಹೆಣ್ಣು ಮಕ್ಕಳು 18 ವರ್ಷ ತುಂಬುವವರೆಗೆ ಪಾಲಕರು ಖಾತೆ ನಿರ್ವಹಿಸಬಹುದು. ತದನಂತರ ಅವರೇ ಖಾತೆ ನಿರ್ವಹಿಸಬೇಕಾಗಿರುತ್ತದೆ. ಖಾತೆಯಲ್ಲಿನ ಹಣವನ್ನು ಹತ್ತನೆಯ ತರಗತಿಯ ನಂತರ ಮುಂದಿನ ಶಿಕ್ಷಣಕ್ಕಾಗಿ ಉಪಯೋಗಿಸಬಹುದು. ಅಥವಾ ಅವರ ವಯಸ್ಸು 18 ಪೂರೈಸಿದ ನಂತರ ವಿವಾಹಕ್ಕೂ ಹಣ ಬಳಸಿಕೊಳ್ಳಬಹುದು. ತಮ್ಮ 21 ವರ್ಷದ ತನಕ ಖಾತೆ ಮುಂದುವರಿಸಬಹುದು. ನಂತರ ಸಂಪೂರ್ಣ ಹಣ ಹಿಂಪಡೆಯಬೇಕಾಗುತ್ತದೆ. ಯಾವುದೆ ಆಪತ್ಕಾಲದ ಸಂದರ್ಭಗಳಲ್ಲೂ ಖಾತೆಯಿಂದ ಭಾಗಶಃ ಮೊತ್ತ ಹಿಂಪಡೆಯಲು ಅಥವಾ ಖಾತೆ ಮುಚ್ಚಲು ಅವಕಾಶವಿದೆ. ತಮ್ಮ ಅನುಕೂಲಕ್ಕೆ ತಕ್ಕಂತೆ ಇದಕ್ಕಾಗಿ ಸ್ಥಳೀಯ ಅಂಚೆ ಕಚೇರಿ ಅಥವಾ ಬ್ಯಾಂಕ್ ಸಂಪರ್ಕಿಸಿ.

ಒಂದು ವೇಳೆ ಮಕ್ಕಳ ವಯೋಮಿತಿಯ ಕಾರಣದಿಂದ ಹೂಡಿಕೆ ಸಾಧ್ಯವಿಲ್ಲದಿದ್ದರೆ, ಇತರ ಹೂಡಿಕೆಗಳಾದ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲೂ ಮಾಸಿಕ ಕಂತುಗಳ ಹೂಡಿಕೆ ಮಾಡಬಹುದು. ಮೂರು ವರ್ಷದಿಂದ ಐದು ವರ್ಷದ ಅವಧಿಯ ದೀರ್ಘಾವಧಿ ಹೂಡಿಕೆಯಿಂದ ಸಾಮಾನ್ಯ ಬಡ್ಡಿಗಿಂತ ಹೆಚ್ಚಿನ ಲಾಭ ಪಡೆಯಬಹುದು. ಇದಕ್ಕಾಗಿ ಮಲ್ಟಿ ಅಸ್ಸೆಟ್ ಫಂಡ್, ಹೈಬ್ರಿಡ್ ಫಂಡ್, ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್ ಇತ್ಯಾದಿಗಳನ್ನು ಆಯ್ಕೆ ಮಾಡಬಹುದು. ಇಂತಹ ಮೊತ್ತವನ್ನು ಮುಂದೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ಯಾವುದೇ ಸಂದರ್ಭದಲ್ಲಿ ಹಿಂಪಡೆಯುವ ಅವಕಾಶ ಹೊಂದಿರುತ್ತದೆ. ಆದರೆ ಈ ಹೂಡಿಕೆಗೆ ತೆರಿಗೆ ವಿನಾಯಿತಿ ಇಲ್ಲ. ❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್: businessdesk@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Hotel
ಬೆಂಗಳೂರು ಮೆಜೆಸ್ಟಿಕ್ ನಲ್ಲಿರುವ ಹೊಸ ಹೋಟೆಲ್ ಒಂದಕ್ಕೆ, ಅಡುಗೆಯವರು (ದಕ್ಷಿಣಭಾರತ ಶೈಲಿ),ದೋಸೆ ಮಾಡುವವರು ಬೇಕಾಗಿದ್ದಾರೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ 9620840999, 9900141311, 9591810811

Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted
ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500 - 67,000/- SSLC, PUC,Degree ಸಂಪರ್ಕಿಸಿ 9945791526, 8861041526

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟವಸತಿಯಿದೆ. 13,000 - 17,000. 8951315839, 7022770052

General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ,ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಶಿಕ್ಷಣಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560

ಭವಿಷ್ಯ

Astrology
★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2 ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ. 9880811806

ವ್ಯಾಪಾರ

Business to Business

Others
ಮಹಿಳೆಯರಿಗೆ ರೇಷ್ಮೆ ಸೀರೆ, ಸಿಲ್ಕ್ ಸೀರೆ, ಕಾಟನ್ ಸೀರೆ, ಚೂಡಿದಾರಗಳು, ಕಂತಿನ ಮುಖಾಂತರ ಮಾರಾಟ ಮಾಡಲಾಗುತ್ತದೆ ಸಂಪರ್ಕಿಸಿ: 8892501007/ 9606701007

ಪ್ರವಾಸ

Travel
25.10.2023, 26.11.2023, ದೆಹಲಿ, ಹರಿದ್ವಾರ್, ಅಯೋಧ್ಯಾ, ಕಾಶಿ, ಗಯಾ, ಪ್ರಯಾಗ್‌ರಾಜ್25.11.2023 ರಾಜಸ್ಥಾನ್ ಪ್ರವಾಸ 3.12.2023 ಗುಜರಾತ್, ಮಧ್ಯಪ್ರದೇಶ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ರೈಲು/ A/C ಬಸ್ಸಿನಲ್ಲಿ 08.10.2023 ಅಮೃತ್‌ಸರ್ ವೈಷ್ಣೋದೇವಿ ಕಾಶ್ಮೀರ,ಗುಲ್ಮಾರ್ಗ್. 26.10.2023 ಚಾರ್‌ಧಾಮ್. 05.11.2023 ನೇಪಾಳ,ಮುಕ್ತಿನಾಥ,ಪೋಖ್ರಾ. 17.11.2023 ಸೋಮನಾಥ್,ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ ಮಹಾಕಾಳೇಶ್ವರ., 20.11.2023 ಕಾಶಿ,ಅಲಹಾಬಾದ್ ಬುದ್ಧಗಯಾ,ಬೈದ್ಯನಾಥ್ ದಕ್ಷಿಣ/ಮಧ್ಯ ಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವೆಲ್‌ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 8431888138 7204173686

ಶಿವನಂದಿ ಟ್ರಾವೆಲ್ಸ್, ಹನುಮಂತನಗರ, ಬೆಂಗಳೂರು.ಕಾಶಿಯಾತ್ರೆ ವಿಮಾನದಲ್ಲಿ 10ದಿನ 30.10.2023ದೆಹಲಿ,ಆಗ್ರಾ ಮಥುರಾ,ನೈಮಿಷಾರಣ್ಯ ಅಯೋಧ್ಯ,ಕಾಶಿ,ಗಯಾ ವಾರಾಣಸಿ,ಪ್ರಯಾಗ್ ರಾಜ್. 9036056352, 9481027363.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಏಷ್ಯನ್ ಕ್ರೀಡಾಕೂಟದ ಟಿ20 ಕ್ರಿಕೆಟ್: ಕ್ವಾರ್ಟರ್ ಫೈನಲ್‌ನಲ್ಲಿ ನೇಪಾಳ ವಿರುದ್ಧ ಜಯ

ಯಶಸ್ವಿ ಅಬ್ಬರ: ಸೆಮಿಫೈನಲ್‌ಗೆ ಭಾರತ

ಹಾಂಗ್‌ಝೌ (ಪಿಟಿಐ): ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರ ಅಬ್ಬರದ ಶತಕದ ಬಲದಿಂದ ಭಾರತ ತಂಡವು ಏಷ್ಯನ್ ಕ್ರೀಡಾಕೂಟದ ಟಿ20 ಕ್ರಿಕೆಟ್‌ನಲ್ಲಿ ನೇಪಾಳ ಎದುರು ಜಯಿಸಿತು. ಇದರೊಂದಿಗೆ ಸೆಮಿಫೈನಲ್ ಪ್ರವೇಶಿಸಿತು.

ಮಂಗಳವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತ ತಂಡವು 23 ರನ್‌ಗಳಿಂದ ನೇಪಾಳ ಎದುರು ಜಯಿಸಿತು.

ಟಾಸ್ ಗೆದ್ದ ಭಾರತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಯಶಸ್ವಿ (100; 49ಎ, 4X8, 6X7) ಅವರ ಶತಕದ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 202 ರನ್ ಗಳಿಸಿತು. ಮುಂಬೈನ ಯಶಸ್ವಿ ಅಬ್ಬರದ ಬ್ಯಾಟಿಂಗ್ ಮಾಡಿದರು.

ಇದಕ್ಕುತ್ತರವಾಗಿ ನೇಪಾಳ ತಂಡವೂ ಉತ್ತಮ ಹೋರಾಟ ತೋರಿತು. 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 179 ರನ್ ಗಳಿಸಿತು.

ನೇಪಾಳ ತಂಡದ ದೀಪೇಂದ್ರಸಿಂಗ್ (32; 15ಎ ಹಾಗೂ 31ಕ್ಕೆ2) ಆಲ್‌ರೌಂಡ್ ಆಟವಾಡಿ ಗಮನ ಸೆಳೆದರು. ಅವರು ಅನುಭವಿ ಅರ್ಷದೀಪ್ ಸಿಂಗ್, ಆವೇಶ್ ಖಾನ್ ಮತ್ತು ರವಿ ಬಿಷ್ಣೋಯ್ ಅವರ ಎಸೆತಗಳಿಗೂ ದಿಟ್ಟ ಉತ್ತರ ನೀಡಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 202 (ಯಶಸ್ವಿ ಜೈಸ್ವಾಲ್ 100, ಋತುರಾಜ್ ಗಾಯಕವಾಡ 25, ಶಿವಂ ದುಬೆ 25, ರಿಂಕು ಸಿಂಗ್ 37, ದೀಪೇಂದ್ರ ಸಿಂಗ್ ಐರಿ 31ಕ್ಕೆ2, ಸೋಮಪಾಲ್ ಕಮಿ 38ಕ್ಕೆ1, ಸಂದೀಪ್ ಲಾಮಿಚಾನೆ 28ಕ್ಕೆ1) ನೇಪಾಳ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 179 (ಕುಶಾಲ ಭುರ್ತೆಲ್ 28, ಕುಶಾಲ್ ಮಲ್ಲಾ 29, ದೀಪೇಂದ್ರಸಿಂಗ್ ಐರಿ 32, ಸಂದೀಪ್ ಜೋರಾ 29, ಅರ್ಷದೀಪ್ ಸಿಂಗ್ 43ಕ್ಕೆ2, ಆವೇಶ್ ಖಾನ್ 32ಕ್ಕೆ3, ರವಿ ಬಿಷ್ಣೋಯ್ 24ಕ್ಕೆ3)
ಫಲಿತಾಂಶ: ಭಾರತ ತಂಡಕ್ಕೆ 23 ರನ್‌ಗಳ ಜಯ.

ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಸ್ಕ್ವಾಷ್: ಭಾರತಕ್ಕೆ 3 ಪದಕ ಖಚಿತ

ಸಿಂಗಲ್ಸ್ ಸೆಮಿಫೈನಲ್ ಪ್ರವೇಶಿಸಿದ ಸೌರವ್ ಘೋಷಾಲ್

ಹಾಂಗ್‌ಝೌ (ಪಿಟಿಐ): ಅನುಭವಿ ಸ್ಕ್ವಾಷ್ ಆಟಗಾರ ಸೌರವ್ ಘೋಷಾಲ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಅಧಿಕಾರಯುತ ಜಯಗಳಿಸಿ ಸೆಮಿಫೈನಲ್‌ಗೆ ದಾಪುಗಾಲಿಟ್ಟರೆ, ಮಿಕ್ಸೆಡ್ ಡಬಲ್ಸ್‌ನಲ್ಲೂ ಭಾರತದ ಜೋಡಿ ಅದೇ ರೀತಿಯ ವಿಜಯ ದಾಖಲಿಸಿತು. ಏಷ್ಯನ್ ಗೇಮ್ಸ್ ಸ್ಕ್ವಾಷ್‌ನಲ್ಲಿ ಭಾರತಕ್ಕೆ ಮೂರು ಪದಕ ಗ್ಯಾರಂಟಿಯಾಗಿದೆ.

ಮಂಗಳವಾರ ನಡೆದ ಪಂದ್ಯದಲ್ಲಿ ಘೋಷಾಲ್ 11-5, 12-10, 11-3 ರಿಂದ ಜಪಾನ್‌ನ ರಿಯುನೊಸುಕೆ ತ್ಸುಕು ಅವರನ್ನು ಸೋಲಿಸಿದರು. ಮಿಕ್ಸೆಡ್ ಡಬಲ್ಸ್‌ನಲ್ಲಿ ಅನಾಹತ್ ಸಿಂಗ್ ಮತ್ತು ಅಭಯ್ ಸಿಂಗ್ ಅವರಿಗೆ 11-4, 8-11, 11-1 ರಿಂದ ಯಾಂಗ್ ಯಿನ್‌ಸೂ-ಡೊಂಗ್ಜುನ್ ಲೀ ಜೋಡಿಯನ್ನು ಸೋಲಿಸಲು ತೆಗೆದುಕೊಂಡಿದ್ದು 32 ನಿಮಿಷಗಳನ್ನಷ್ಟೇ. ಅನಾಹತ್-ಅಭಯ್ ಜೋಡಿಯೂ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು.

ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ದೀಪಿಕಾ ಪಳ್ಳಿಕಲ್- ಹರಿಂದರ್ ಪಾಲ್ ಸಿಂಗ್ ಸಿಧು 7-11, 11-5, 11-4 ರಿಂದ ಜೆಮಿಕಾ ಅರಿಬಾಡೊ-ಆ್ಯಂಡ್ರು ಗಾರ್ಸಿಯಾ (ಫಿಲಿಪೀನ್ಸ್) ಜೋಡಿಯನ್ನು ಸೋಲಿಸಿತು.

ಆದರೆ ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ತನ್ವಿ ಖನ್ನಾ 5-11, 6-11, 12-14 ರಿಂದ ಜಪಾನ್‌ನ ಸತೋಮಿ ವತಾನಬೆ ಅವರಿಗೆ ಮಣಿದರು.

ಸೌರವ್ ಘೋಷಾಲ್

ಕ್ರಿಕೆಟ್: ಆಸ್ಟ್ರೇಲಿಯಾಕ್ಕೆ ಜಯ

ಹೈದರಾಬಾದ್ (ಪಿಟಿಐ): ಆಸ್ಟ್ರೇಲಿಯಾ ತಂಡ, ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಒಂದು ದಿನ ಉಳಿದಿರುವಂತೆ ಮಂಗಳವಾರ ನಡೆದ ಅಭ್ಯಾಸ ಪಂದ್ಯದಲ್ಲಿ 14 ರನ್‌ಗಳಿಂದ ಪಾಕಿಸ್ತಾನ ತಂಡವನ್ನು ಸೋಲಿಸಿತು. ಪಾಕ್ ಆರಂಭ ಆಟಗಾರರ ಫಾರ್ಮ್ ಮತ್ತು ಬೌಲಿಂಗ್ ವಿಭಾಗ ಪರಿಣಾಮಕಾರಿ ಆಗಿಲ್ಲದಿರುವುದು ಚಿಂತೆಗೆ ಕಾರಣವಾಗಿದೆ.

ವಾರ್ನರ್ (33 ಎಸೆತಗಳಲ್ಲಿ 48) ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ (71 ಎಸೆತಗಳಲ್ಲಿ 77) ಅವರ ಉಪಯುಕ್ತ ಬ್ಯಾಟಿಂಗ್ ನೆರವಿನಿಂದ ಆಸ್ಟ್ರೇಲಿಯಾ 7 ವಿಕೆಟ್‌ಗೆ 351 ರನ್‌ಗಳ ದೊಡ್ಡ ಮೊತ್ತ ಗಳಿಸಿತು. ಬಾಬರ್ ಆಜಂ (90, ಗಾಯಾಳಾಗಿ ನಿವೃತ್ತಿ) ಮತ್ತು ಮಧ್ಯಮ ಕ್ರಮಾಂಕದ ಆಟಗಾರ ಇಫ್ತಿಕಾರ್ ಅಹ್ಮದ್ (85 ಎಸೆತಗಳಲ್ಲಿ 83) ಪಾಕ್ ಪರ ಉತ್ತಮ ಕಾಣಿಕೆ ನೀಡಿದರು. ಆದರೆ ಫಕ್ರ್ ಜಮಾನ್ (22) ಮತ್ತು ಇಮಾಂ ಉಲ್ ಹಕ್ (16) ಅವರ ಕಳಪೆ ಫಾರ್ಮ್ ತಂಡಕ್ಕೆ ಚಿಂತೆ ಮೂಡಿಸಿದೆ. ಪಾಕ್ ತಂಡ 12 ಎಸೆತಗಳಿರುವಂತೆ 337 ರನ್‌ಗಳಿಗೆ ಆಲೌಟ್ ಆಯಿತು.

ಬೌಲಿಂಗ್‌ನಲ್ಲಿ ಶದಾಬ್ ಮತ್ತು ಹ್ಯಾರಿಸ್ ರವೂಫ್ 9 ಓವರುಗಳಲ್ಲಿ 97 ರನ್ ಬಿಟ್ಟುಕೊಟ್ಟಿರುವುದೂ ಆ ತಂಡಕ್ಕೆ ಕಳವಳ ಮೂಡಿಸಿದೆ.

ಬಿಎಫ್‌ಸಿಗೆ ಈಸ್ಟ್ ಬೆಂಗಾಲ್ ಸವಾಲು

ಬೆಂಗಳೂರು: ಬೆಂಗಳೂರು ಎಫ್‌ಸಿ ತಂಡದವರು ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆಯಲಿರುವ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಪಂದ್ಯದಲ್ಲಿ ಈಸ್ಟ್ ಬೆಂಗಾಲ್ ಎಫ್‌ಸಿ ತಂಡವನ್ನು ಎದುರಿಸಲಿದ್ದಾರೆ.

ಆಡಿರುವ ಎರಡೂ ಪಂದ್ಯಗಳನ್ನು ಸೋತಿರುವ ಬಿಎಫ್‌ಸಿ ಮೊದಲ ಗೆಲುವಿನ ನಿರೀಕ್ಷೆಯಲ್ಲಿದೆ. ಸುನಿಲ್ ಚೆಟ್ರಿ ಅವರು ಮರಳಿರುವುದರಿಂದ ತಂಡದ ಬಲ ಹೆಚ್ಚಿದೆ.

ಪಂದ್ಯ ಆರಂಭ: ರಾತ್ರಿ 8

ಪ್ರತಿಭೆಯಿದ್ದರೂ ಸಿಗದ ಅವಕಾಶ

ರಾಷ್ಟ್ರೀಯ ಸೀನಿಯರ್ ಅಥ್ಲೆಟಿಕ್ಸ್: ಹ್ಯಾಮರ್ ಥ್ರೋ ಸ್ಪರ್ಧಿಗಳಿಗಿಲ್ಲ ಅವಕಾಶ

• ಪ್ರಮೋದ

ಕೊಪ್ಪಳ: ಕಳೆದ ತಿಂಗಳು ಬೆಂಗಳೂರಿನಲ್ಲಿ ನಡೆದ ರಾಜ್ಯ ಓಪನ್ ಸೀನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದರೂ ಕೊಪ್ಪಳದ ಅಥ್ಲೀಟ್ ಸಚಿನ್ ಅವರಿಗೆ ರಾಷ್ಟ್ರೀಯ ಮಟ್ಟದ ಟೂರ್ನಿಯಲ್ಲಿ ಪಾಲ್ಗೊಳ್ಳಲು ಅವಕಾಶವಿಲ್ಲ. ತಮ್ಮಲ್ಲಿ ಪ್ರತಿಭೆಯಿದ್ದರೂ ಸಾಬೀತು ಮಾಡಲು ರಾಷ್ಟ್ರೀಯ ಮಟ್ಟದಲ್ಲಿ ವೇದಿಕೆ ಸಿಗದೇ ಅವರು ಪರದಾಡುವಂತಾಗಿದೆ.

ರಾಜ್ಯ ಓಪನ್ ಅಥ್ಲೆಟಿಕ್ಸ್‌ನ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ಸಚಿನ್ 56.24 ಮೀಟರ್ ಎಸೆದು ಅಗ್ರಸ್ಥಾನ ಸಂಪಾದಿಸಿದ್ದರು. ಈ ವಿಭಾಗದಲ್ಲಿ 52 ಮೀ. ಕನಿಷ್ಠ ಅರ್ಹತಾ ಗುರಿ ನಿಗದಿ ಮಾಡಲಾಗಿತ್ತು. ಈ ಗುರಿ ಮೀರಿ ಸಾಧನೆ ಮಾಡಿದರೂ ಸಚಿನ್‌ಗೆ ರಾಜ್ಯ ತಂಡವನ್ನು ಪ್ರತಿನಿಧಿಸುವ ಅವಕಾಶ ಕೊಟ್ಟಿಲ್ಲ. ರಾಜ್ಯ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ತೋರಿದ ಕೆಲ ಅಥ್ಲೀಟ್‌ಗಳನ್ನು ಇದೇ ತಿಂಗಳು 11ರಿಂದ 14ರ ವರೆಗೆ ಜೆಮ್‌ಷೆಡ್‌ಪುರದಲ್ಲಿ ನಡೆಯಲಿರುವ 62ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಆಯ್ಕೆ ಮಾಡಲಾಗಿದೆ.

ಈ ಚಾಂಪಿಯನ್‌ಷಿಪ್ ಬಗ್ಗೆ ಸೆ.1 ರಂದು ಭಾರತ ಅಥ್ಲೆಟಿಕ್ ಫೆಡರೇಷನ್ ಹೊರಡಿಸಿರುವ ಸುತ್ತೋಲೆಯಲ್ಲಿ ಕ್ರೀಡೆಯ ಪ್ರತಿ ವಿಭಾಗದಿಂದ ಗರಿಷ್ಠ ಮೂವರು ಕ್ರೀಡಾಪಟುಗಳನ್ನು ರಾಷ್ಟ್ರೀಯ ಟೂರ್ನಿಗೆ ಕಳುಹಿಸಬಹುದು ಎಂದು ಹೇಳಿದೆ. ಆದರೂ ರಾಜ್ಯ ಅಥ್ಲೆಟಿಕ್ ಸಂಸ್ಥೆ ಹ್ಯಾಮರ್ ಥ್ರೋ ಹಾಗೂ ಡೆಕಾಥ್ಲಾನ್ ತಂಡಗಳನ್ನು ಕಳುಹಿಸಿಲ್ಲ.

ಕ್ರೀಡೆಯ ಕನಿಷ್ಠ ಮೂಲ ಸೌಲಭ್ಯಗಳೂ ಇಲ್ಲದ ಕೊಪ್ಪಳದಂಥ ಊರಿನಲ್ಲಿ ದಾನಿಗಳ ನೆರವಿನಿಂದ ಆರ್ಥಿಕ ನೆರವು ಪಡೆದು ಸಚಿನ್ ಹಗಲಿರುಳು ಅಭ್ಯಾಸ ಮಾಡುತ್ತಿದ್ದಾರೆ. ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ಮೇಲಿಂದ ಮೇಲೆ ಪದಕಗಳನ್ನು ಗೆಲ್ಲುತ್ತಿದ್ದಾರೆ. 2021ರಲ್ಲಿ ದಕ್ಷಿಣ ವಲಯದ ರಾಷ್ಟ್ರೀಯ ಜೂನಿಯರ್ ಟೂರ್ನಿಯಲ್ಲಿ ಚಿನ್ನದ ಪದಕವನ್ನೂ ಜಯಿಸಿದ್ದರು.

ಇತ್ತೀಚೆಗೆ ಮಂಗಳೂರಿನಲ್ಲಿ ನಡೆದ ರಾಜ್ಯ ಜೂನಿಯರ್, ಯೂತ್ ಅಥ್ಲೆಟಿಕ್ಸ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ತಮ್ಮದಾಗಿಸಿಕೊಂಡಿದ್ದರು. 23 ವರ್ಷದ ಒಳಗಿನವರ ವಿಭಾಗದಲ್ಲಿ ಅವರು 55.33 ಮೀಟರ್ ಎಸೆದು 2022ರಲ್ಲಿ ಆಳ್ವಾಸ್ ಸಂಸ್ಥೆಯ ವಿದ್ಯಾರ್ಥಿ ರಾಹುಲ್ ಬಿ.ರಾಮ್ (52.55 ಮೀ.) ನಿರ್ಮಿಸಿದ್ದ ದಾಖಲೆ ಅಳಿಸಿ ಹಾಕಿದ್ದರು.

ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್‌ನ ಡೆಕಾಥ್ಲಾನ್‌ನಲ್ಲಿ ಕನಿಷ್ಠ ಅರ್ಹತಾ ಅಂಕ 5,000 ಪಾಯಿಂಟ್ಸ್ ಇತ್ತು. ಯಾದಗಿರಿಯ ಲೋಕೇಶ್ ರಾಠೋಡ್ ಇದೇ ಸ್ಪರ್ಧೆಯಲ್ಲಿ 6,162 ಅಂಕಗಳನ್ನು ಪಡೆದು ಅಗ್ರಸ್ಥಾನ ಸಂಪಾದಿಸಿದರೂ ರಾಷ್ಟ್ರೀಯ ಟೂರ್ನಿಗೆ ಈ ವಿಭಾಗದಿಂದ ಯಾವ ಕ್ರೀಡಾಪಟುಗಳನ್ನೂ ಆಯ್ಕೆ ಮಾಡಿಲ್ಲ. ಲೋಕೇಶ್ ಕಳೆದ ವರ್ಷ ಬೆಂಗಳೂರಿನಲ್ಲಿಯೇ ನಡೆದಿದ್ದ ರಾಷ್ಟ್ರೀಯ ಸೀನಿಯರ್ ಓಪನ್ ಟೂರ್ನಿಯಲ್ಲಿ ಎಂಟನೇ ಸ್ಥಾನ ಗಳಿಸಿದ್ದರು.

‘ಕೊಪ್ಪಳದಂಥ ಸಣ್ಣ ಊರುಗಳಲ್ಲಿ ಅಭ್ಯಾಸ ಮಾಡುವ ಕ್ರೀಡಾಪಟುಗಳಿಗೆ ರಾಷ್ಟ್ರೀಯ ಟೂರ್ನಿಯಲ್ಲಿ ಆಡುವುದೇ ದೊಡ್ಡ ಭಾಗ್ಯ. ರಾಜ್ಯ ಸೀನಿಯರ್ ಓಪನ್ ಅಥ್ಲೆಟಿಕ್ಸ್‌ನಲ್ಲಿ ಮೊದಲ ಸ್ಥಾನ ಗಳಿಸಿದರೂ ರಾಜ್ಯ ಅಥ್ಲೆಟಿಕ್ಸ್ ಸಂಸ್ಥೆ ಹ್ಯಾಮರ್ ಥ್ರೋ ತಂಡವನ್ನೇ ಕಳುಹಿಸಿಲ್ಲ. ರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಪಾಲ್ಗೊಳ್ಳಲು ಅವಕಾಶವೇ ಸಿಗದಿದ್ದರೆ ನಮ್ಮ ಸಾಮರ್ಥ್ಯ ತೋರಿಸುವುದಾದರೂ ಹೇಗೆ’ ಎಂದು ಸಚಿನ್ ಪ್ರಶ್ನಿಸಿದರು.

ರಾಜ್ಯ ಅಥ್ಲೆಟಿಕ್ ಸಂಸ್ಥೆ ನನಗೆ ನಯಾ ಪೈಸೆ ಕೊಡುವುದು ಬೇಡ. ಎಲ್ಲ ಖರ್ಚು ನಾನೇ ನಿರ್ವಹಣೆ ಮಾಡುತ್ತೇನೆ. ರಾಷ್ಟ್ರೀಯ ಟೂರ್ನಿಯಲ್ಲಿ ಪ್ರತಿನಿಧಿಸಲು ಅವಕಾಶ ಕೊಟ್ಟರೆ ಸಾಕು.
ಸಚಿನ್, ಕೊಪ್ಪಳದ ಅಥ್ಲೀಟ್

ರಾಷ್ಟ್ರೀಯ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ತೋರಿದರೆ ನೌಕರಿ ಅವಕಾಶಗಳು ಸಿಗುತ್ತವೆ. ಇದರಿಂದ ಬದುಕು ಬದಲಾಗುತ್ತದೆ. ಅಥ್ಲೆಟಿಕ್ ಸಂಸ್ಥೆ ಅವಕಾಶ ಕೊಡಬೇಕು
ಲೋಕೇಶ್ ರಾಠೋಡ್, ಅಥ್ಲೀಟ್

‘ಆಯ್ಕೆ ಸಮಿತಿ ತೀರ್ಮಾನದಂತೆ ತಂಡ’

ಕಳೆದ ವರ್ಷದ ರಾಷ್ಟ್ರೀಯ ಸೀನಿಯರ್ ಓಪನ್ ಅಥ್ಲೆಟಿಕ್ಸ್‌ನಲ್ಲಿ ಮೊದಲ ಏಳು ಸ್ಥಾನಗಳ ಒಳಗಿನ ಕ್ರೀಡಾಪಟು ಮಾಡಿದ ಸಾಧನೆಯಷ್ಟನ್ನು ರಾಜ್ಯದ ಕ್ರೀಡಾಪಟು ಈ ಬಾರಿ ರಾಜ್ಯ ಓಪನ್ ಸೀನಿಯರ್ ಟೂರ್ನಿಯಲ್ಲಿ ಮಾಡಿದ್ದರೆ ಅವರನ್ನು ತಂಡಕ್ಕೆ ಪರಿಗಣಿಸಲಾಗಿದೆ. ಅದಕ್ಕಿಂತಲೂ ಕಡಿಮೆ ಸಾಧನೆ ಮಾಡಿ ರಾಜ್ಯ ಟೂರ್ನಿಯಲ್ಲಿ ಅಗ್ರಸ್ಥಾನ ಪಡೆದರೂ ಆಯ್ಕೆ ಮಾಡಿಲ್ಲ. ಆಯ್ಕೆ ಸಮಿತಿ ಸೂಚಿಸಿದ ಹೆಸರುಗಳನ್ನು ರಾಷ್ಟ್ರೀಯ ಟೂರ್ನಿಗೆ ಕಳುಹಿಸಲಾಗುತ್ತಿದೆ ಎಂದು ರಾಜ್ಯ ಅಥ್ಲೆಟಿಕ್ ಸಂಸ್ಥೆ ಗೌರವ ಕಾರ್ಯದರ್ಶಿ ಎ. ರಾಜವೇಲು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಫುಟ್‌ಬಾಲ್: ಮ್ಯಾಚ್ ಫಿಕ್ಸಿಂಗ್ ದೂರು

ಬೆಂಗಳೂರು: ನಗರದಲ್ಲಿ ಆಯೋಜಿಸಿರುವ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಮ್ಯಾಚ್ ಫಿಕ್ಸಿಂಗ್ ಆರೋಪ ಕೇಳಿಬಂದಿದ್ದು, ಈ ಸಂಬಂಧ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಉಪಾಧ್ಯಕ್ಷರೂ ಆಗಿರುವ ಶಾಸಕ ಎನ್.ಎ. ಹ್ಯಾರಿಸ್ ಅವರು ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರಿಗೆ ಮಂಗಳವಾರ ದೂರು ಸಲ್ಲಿಸಿದ್ದಾರೆ.

ಕಮಿಷನರ್ ಅವರಿಗೆ ದೂರಿನ ಪ್ರತಿ ನೀಡಿರುವ ಹ್ಯಾರಿಸ್, ‘ಫುಟ್‌ಬಾಲ್ ಪಂದ್ಯಗಳಲ್ಲಿ ಮ್ಯಾಚ್ ಫಿಕ್ಸಿಂಗ್ ನಡೆಯುತ್ತಿದ್ದು, ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ. ದೂರು ಪರಿಶೀಲನೆ ನಡೆಸಿರುವ ಕಮಿಷನರ್, ಸಂಬಂಧಪಟ್ಟವರ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುವಂತೆ ಸಿಸಿಬಿ ಪೊಲೀಸರಿಗೆ ಸೂಚಿಸಿದ್ದಾರೆ.

ಈ ಬಗ್ಗೆ ‘ಪ್ರಜಾವಾಣಿ’ ಜೊತೆ ಮಾತನಾಡಿದ ಕಮಿಷನರ್ ದಯಾನಂದ್, ‘ಫುಟ್‌ಬಾಲ್ ಪಂದ್ಯಗಳಲ್ಲಿ ಮ್ಯಾಚ್ ಫಿಕ್ಸಿಂಗ್ ಆಗಿರುವ ಬಗ್ಗೆ ಮಾಹಿತಿ ಇರುವುದಾಗಿ ಎನ್.ಎ. ಹ್ಯಾರಿಸ್ ದೂರು ನೀಡಿದ್ದಾರೆ. ವಿಚಾರಣೆ ಆರಂಭಿಸಲಾಗಿದೆ’ ಎಂದರು.

ದೂರಿನ ಬಗ್ಗೆ ಪ್ರತಿಕ್ರಿಯಿಸಿದ ಹ್ಯಾರಿಸ್, ‘ಫುಟ್‌ಬಾಲ್ ಲೀಗ್‌ನ ಕೆಲ ಪಂದ್ಯಗಳಲ್ಲಿ ಉಭಯ ಕ್ಲಬ್ ತಂಡಗಳ ಕೆಲ ಆಟಗಾರರು ಮ್ಯಾಚ್ ಫಿಕ್ಸಿಂಗ್ ಮಾಡಿಕೊಳ್ಳುತ್ತಿರುವ ಮಾಹಿತಿ ಇದೆ. ಹೀಗಾಗಿ, ಪೊಲೀಸ್ ಕಮಿಷನರ್ ಅವರಿಗೆ ದೂರು ಸಲ್ಲಿಸಲಾಗಿದೆ’ ಎಂದರು.

ಒಂದೇ ದಿನ 21 ವಿಕೆಟ್ ಪತನ • ಮಿಂಚಿದ ಸ್ಪಿನ್ನರ್ ಸೌರಭ್

ಸೌರಾಷ್ಟ್ರ ತಂಡಕ್ಕೆ ಭಾರಿ ಸೋಲು

ರಾಜಕೋಟ್ (ಪಿಟಿಐ): ಚೆಂಡಿಗೆ ಸಾಕಷ್ಟು ತಿರುವು ನೀಡುತ್ತಿದ್ದ ಪಿಚ್‌ನಲ್ಲಿ ಸ್ಪಿನ್ನರ್ ಸೌರಭ್ ಕುಮಾರ್ ಅವರನ್ನು ಆಡಲು ಸೌರಾಷ್ಟ್ರ ಆಟಗಾರರು ಪರದಾಡಿದರು. ಅವರು ಪಂದ್ಯದಲ್ಲಿ 10 ವಿಕೆಟ್ ಕೂಡ ಪೂರೈಸಿದರು. ಭಾರತ ಇತರೆ ತಂಡ ಮಂಗಳವಾರ ರಣಜಿ ಟ್ರೋಫಿ ಚಾಂಪಿಯನ್ ಸೌರಾಷ್ಟ್ರ ತಂಡವನ್ನು ಮೂರೇ ದಿನಗಳ ಒಳಗೆ 175 ರನ್‌ಗಳಿಂದ ಸೋಲಿಸಿ ಇರಾನಿ ಕಪ್ ಗೆದ್ದುಕೊಂಡಿತು.

ಮಂಗಳವಾರ 21 ವಿಕೆಟ್‌ಗಳು ಉರುಳಿದವು. ಇಂಥ ಪಿಚ್‌ನಲ್ಲಿ ಗೆಲುವಿಗೆ 255 ರನ್‌ಗಳ ‘ದೊಡ್ಡ ಗುರಿ’ ಎದುರಿಸಿದ ಸೌರಾಷ್ಟ್ರ 34.3 ಓವರುಗಳಲ್ಲಿ ಕೇವಲ 79 ರನ್‌ಗಳಿಗೆ ಉರುಳಿತು.

ಭಾರತ ‘ಎ’ ತಂಡದ ಸ್ಪಿನ್ನರ್ ಆಗಿರುವ ಸೌರಭ್ 108 ರನ್ನಿಗೆ 10 ವಿಕೆಟ್ (65ಕ್ಕೆ4 ಮತ್ತು 43ಕ್ಕೆ 6) ಪಡೆದು ಮಿಂಚಿದರು. ಅವರ ಸಾಧನೆಯೆದುರು 147 ರನ್ನಿಗೆ 12 ವಿಕೆಟ್ ಪಡೆದ ಪಾರ್ಥ ಭುತ್ ಅವರ ಅಮೋಘ ಪ್ರದರ್ಶನ (94ಕ್ಕೆ5 ಮತ್ತು 53ಕ್ಕೆ7) ಮಸುಕಾಗಿಹೋಯಿತು. ಪಂದ್ಯದಲ್ಲಿ 40 ವಿಕೆಟ್‌ಗಳ ಪೈಕಿ 33 ವಿಕೆಟ್‌ಗಳು ಸ್ಪಿನ್ನರ್‌ಗಳ ಪಾಲಾದವು.

ಸೋಮವಾರ 9 ವಿಕೆಟ್‌ಗೆ 212 ರನ್ ಗಳಿಸಿದ್ದ ಸೌರಾಷ್ಟ್ರ ಆ ಮೊತ್ತಕ್ಕೆ ಎರಡು ರನ್ ಸೇರಿಸಿತು. 94 ರನ್‌ಗಳ ಮಹತ್ವದ ಮುನ್ನಡೆ ಪಡೆದ ಇತರೆ ತಂಡ ಎರಡನೇ ಇನಿಂಗ್ಸ್‌ನಲ್ಲಿ 160 ರನ್‌ಗಳಿಗೆ ಕುಸಿಯಿತು. ಆರಂಭ ಆಟಗಾರರಾದ ಸಾಯಿ ಸುದರ್ಶನ್ (43) ಮತ್ತು ಮಯಂಕ್ ಅಗರವಾಲ್ (49) ಅವರ 85 ರನ್ ಜೊತೆಯಾಟದಿಂದ ಉತ್ತಮ ಅಡಿಪಾಯ ಪಡೆದ ಒಂದು ಹಂತದಲ್ಲಿ 1 ವಿಕೆಟ್‌ಗೆ 117 ರನ್ ಗಳಿಸಿತ್ತು. ನಂತರ ಭುತ್ ಸ್ಪಿನ್ ದಾಳಿಗೆ ಸಿಲುಕಿತು. ಏಳು ಮಂದಿ ಎರಡಂಕಿಯನ್ನೂ ಗಳಿಸಲಿಲ್ಲ.

ಸಂಕ್ಷಿಪ್ತ ಸ್ಕೋರುಗಳು: 1ನೇ ಇನಿಂಗ್ಸ್: ಭಾರತ ಇತರೆ ತಂಡ: 308, ಸೌರಾಷ್ಟ್ರ: 83.2 ಓವರುಗಳಲ್ಲಿ 214; ಎರಡನೇ ಇನಿಂಗ್ಸ್: ಭಾರತ ಇತರೆ ತಂಡ: 52 ಓವರುಗಳಲ್ಲಿ 160 (ಮಯಂಕ್ ಅಗರವಾಲ್ 49, ಎನ್. ಸಾಯಿ ಸುದರ್ಶನ್ 43; ಪಾರ್ಥ ಭುತ್ 53ಕ್ಕೆ7); ಸೌರಾಷ್ಟ್ರ: 34.3 ಓವರುಗಳಲ್ಲಿ 34.3 ಓವರುಗಳಲ್ಲಿ 79 (ಧರ್ಮೇಂದ್ರ ಸಿನ್ಹ ಜಡೇಜ 21; ಸೌರಭ್ ಕುಮಾರ್ 43ಕ್ಕೆ6, ಶಮ್ಸ್ ಮುಲಾನಿ 22ಕ್ಕೆ 3)

ಸೌರಭ್ ಕುಮಾರ್

ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಲು ಸುಪ್ರೀಂ ಕೋರ್ಟ್ ನಿರಾಕರಣೆ

‘ರಾಮ ಸೇತು’ ಸ್ಮಾರಕ: ಅರ್ಜಿ ತಿರಸ್ಕಾರ

ನವದೆಹಲಿ (ಪಿಟಿಐ): ‘ರಾಮ ಸೇತು’ವನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಲು ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

ಸ್ಮಾರಕ ಘೋಷಣೆಯ ಜೊತೆಗೆ ಆ ಸ್ಥಳದ ಸಂರಕ್ಷಣೆಗೆ ಗೋಡೆ ನಿರ್ಮಿಸಬೇಕೆಂದು ಕೋರಿ ಹಿಂದೂ ವೈಯಕ್ತಿಕ ಕಾನೂನು ಮಂಡಳಿಯ ಅಧ್ಯಕ್ಷ ಅಶೋಕ್ ಪಾಂಡೆ ಅರ್ಜಿ ಸಲ್ಲಿಸಿದ್ದರು.

ಇದರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಸುಧಾಂಶು ಧುಲಿಯಾ ಅವರಿದ್ದ ವಿಭಾಗೀಯ ನ್ಯಾಯಪೀಠವು, ‘ಇದು ಸರ್ಕಾರಕ್ಕೆ ಸಂಬಂಧಿಸಿದ ವಿಷಯವಾಗಿದೆ. ಹಾಗಾಗಿ, ನ್ಯಾಯಾಲಯವು ಇದರಲ್ಲಿ ಮಧ್ಯಪ್ರವೇಶಿಸುವುದಿಲ್ಲ’ ಎಂದು ಸ್ಪಷ್ಟಪಡಿಸಿತು.

‘ರಾಮ ಸೇತು’ವನ್ನು ರಾಷ್ಟ್ರೀಯ ಪಾರಂಪರಿಕ ಸ್ಮಾರಕವೆಂದು ಘೋಷಿಸುವಂತೆ ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ಬಾಕಿ ಇರುವ ಬಗ್ಗೆ ಪಾಂಡೆ, ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, ‘ವಿಚಾರಣೆಯು ಬಾಕಿ ಇದ್ದರೂ ಅದರಿಂದ ನಿಮಗೆ ಏನಾಗಬೇಕಿದೆ’ ಎಂದು ಪ್ರಶ್ನಿಸಿತು.

‘ಆ ಸ್ಥಳದ ಸುರಕ್ಷತೆಗಾಗಿ ಗೋಡೆ ನಿರ್ಮಿಸಬೇಕಿದೆ’ ಎಂದು ವಾದಿಸಿದರು.

‘ರಾಮ ಸೇತುವಿನ ಎರಡೂ ಕಡೆಯಲ್ಲಿ ಗೋಡೆ ನಿರ್ಮಾಣ ಸಾಧ್ಯವೇ? ನ್ಯಾಯಾಲಯದಿಂದ ಈ ಕೆಲಸ ಆಗುತ್ತದೆಯೇ, ಅದು ಸರ್ಕಾರದ ಕೆಲಸ’ ಎಂದ ನ್ಯಾಯಪೀಠವು, ಸುಬ್ರಮಣಿಯನ್ ಸ್ವಾಮಿಯ ಅರ್ಜಿಯೊಟ್ಟಿಗೆ ಈ ಅರ್ಜಿಯನ್ನೂ ಪರಿಗಣಿಸಲು ನಿರಾಕರಿಸಿತು.

ದಾಖಲೆ ಪತ್ರ ಸಲ್ಲಿಕೆಗೆ ಸೂಚನೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಶ್ರೀಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ವಿವಾದಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ ದಾಖಲೆ ಪತ್ರಗಳನ್ನು ಅಕ್ಟೋಬರ್ 30ರೊಳಗೆ ಖುದ್ದಾಗಿ ಸಲ್ಲಿಸುವಂತೆ ಅಲಹಾಬಾದ್ ಹೈಕೋರ್ಟ್‌ನ ರಿಜಿಸ್ಟ್ರಾರ್‌ಗೆ ಸುಪ್ರೀಂ ಕೋರ್ಟ್, ಸೂಚಿಸಿದೆ.

ನ್ಯಾಯಮೂರ್ತಿಗಳಾದ ಕಿಶನ್ ಕೌಲ್ ಹಾಗೂ ಸುಧಾಂಶು ಧುಲಿಯಾ ಅವರಿದ್ದ ವಿಭಾಗೀಯ ನ್ಯಾಯಪೀಠವು, ಜುಲೈ 21ರಂದು ಈ ಪ್ರಕರಣದ ವಿಚಾರಣೆ ನಡೆಸಿತ್ತು.

ಮಂಗಳವಾರ ನಡೆದ ವಿಚಾರಣೆ ವೇಳೆ ದಾಖಲೆಗಳನ್ನು ಸಲ್ಲಿಸಲು ವಿಳಂಬ ಮಾಡಿರುವುದನ್ನು ಗಮನಿಸಿದ ನ್ಯಾಯಮೂರ್ತಿಗಳು, ‘ನ್ಯಾಯಪೀಠ ನೀಡಿರುವ ಆದೇಶವನ್ನು ಆಡಳಿತ ವಿಭಾಗದಿಂದ ಮುಖ್ಯ ನ್ಯಾಯಮೂರ್ತಿ ಅವರ ಮುಂದೆ ಹಾಜರುಪಡಿಸಬೇಕಿದೆ. ಹಾಗಾಗಿ, ದಾಖಲೆಗಳನ್ನು ಸಲ್ಲಿಸುವಂತೆ ಹಿಂದಿನ ಆದೇಶ ಸಹಿತ ಮತ್ತೊಮ್ಮೆ ರಿಜಿಸ್ಟ್ರಾರ್ ಅವರ ಗಮನಕ್ಕೆ ತರಬೇಕು’ ಎಂದು ಸೂಚಿಸಿದರು.

ಈ ವಿವಾದ ಕುರಿತ ವಿಚಾರಣೆಯನ್ನು ಹೈಕೋರ್ಟ್ ಮೇ 26ರಂದು ಮಥುರಾ ನ್ಯಾಯಾಲಯಕ್ಕೆ ವರ್ಗಾಯಿಸಿದೆ. ಇದನ್ನು ಶಾಹಿ ಮಸೀದಿ ಈದ್ಗಾ ಆಡಳಿತ ಸಮಿತಿಯ ಟ್ರಸ್ಟ್, ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದೆ.

ಜಾತಿಗಣತಿ: ಅ. 6ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಸರ್ಕಾರ ನಡೆಸಿದ ಜಾತಿಗಣತಿ ಪ್ರಕ್ರಿಯೆಯನ್ನು ಎತ್ತಿಹಿಡಿದಿದ್ದ ಪಟ್ನಾ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಅಕ್ಟೋಬರ್ 6ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಸ್.ವಿ.ಎನ್. ಭಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠವು, ಈ ಕುರಿತ ಅರ್ಜಿಗಳನ್ನು ವಿಚಾರಣಾ ಪಟ್ಟಿಗೆ ಸೇರಿಸಲಾಗಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ತಿಳಿಸಿತು.

ಈ ನಡುವೆಯೇ ನಿತೀಶ್ ಸರ್ಕಾರವು ಸೋಮವಾರ ಬಹುನಿರೀಕ್ಷಿತ ಜಾತಿಗಣತಿಯನ್ನು ಬಿಡುಗಡೆ ಮಾಡಿದೆ.

‘ಏಕ್ ಸೋಚ್ ಏಕ್ ಪರ್ಯಾಸ್’ ಎಂಬ ಸ್ವಯಂಸೇವಾ ಸಂಸ್ಥೆ ಸೇರಿದಂತೆ ಹಲವರು ಜಾತಿಗಣತಿ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಆಗಸ್ಟ್ 1ರಂದು ಈ ಅರ್ಜಿಗಳ ವಿಚಾರಣೆ ನಡೆಸಿದ್ದ ನ್ಯಾಯಾಲಯವು ಪ್ರಕ್ರಿಯೆಗೆ ತಡೆ ನೀಡಲು ನಿರಾಕರಿಸಿತ್ತು. ಅಲ್ಲದೇ ಸರ್ಕಾರ ಕೈಗೊಂಡಿರುವ ನಿರ್ಧಾರವು ನ್ಯಾಯಸಮ್ಮತವಾಗಿದೆ ಎಂದು ಪ್ರತಿಪಾದಿಸಿತ್ತು.

ಬಳಿಕ ಆಗಸ್ಟ್ 7ರಂದು ನಡೆದ ವಿಚಾರಣೆಯಲ್ಲಿ ಹೈಕೋರ್ಟ್ ಆದೇಶಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ಕೂಡ ನಿರಾಕರಿಸಿತ್ತು. ಈ ಪ್ರಕ್ರಿಯೆ ನಡೆಸುವ ಅಧಿಕಾರ ಕೇಂದ್ರ ಸರ್ಕಾರಕ್ಕಷ್ಟೇ ಇದೆ ಎಂಬುದು ಅರ್ಜಿದಾರರೊಬ್ಬರ ವಾದವಾಗಿದೆ.

ಭೌತವಿಜ್ಞಾನ: ಮೂವರು ವಿಜ್ಞಾನಿಗಳಿಗೆ ನೊಬೆಲ್

ಸ್ಟಾಕ್‌ಹೋಮ್ (ಎಪಿ): ಎಲೆಕ್ಟ್ರಾನ್‌ಗಳ ಚಲನೆ ಮತ್ತು ವರ್ತನೆ ಕುರಿತು ಹೊಸ ಒಳನೋಟ ಒದಗಿಸುವ ಸಂಶೋಧನೆಗಾಗಿ ಮೂವರು ವಿಜ್ಞಾನಿಗಳನ್ನು ಈ ಬಾರಿಯ ಭೌತವಿಜ್ಞಾನ ಕ್ಷೇತ್ರದ ನೊಬೆಲ್ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ರಾಯಲ್ ಸ್ವೀಡಿಶ್ ಅಕಾಡೆಮಿ ಮಂಗಳವಾರ ಘೋಷಿಸಿದೆ.

ಅಮೆರಿಕದ ಓಹಿಯೊ ಸ್ಟೇಟ್ ಯುನಿವರ್ಸಿಟಿಯ ಪಿಯರಿ ಅಗೊಸ್ಟಿನಿ, ಜರ್ಮನಿಯ ಮ್ಯುನಿಕ್‌ನ ಮ್ಯಾಕ್ಸ್ ಪ್ಲಾಂಕ್ ಇನ್‌ಸ್ಟಿಟ್ಯೂಟ್ ಆಫ್ ಕ್ವಾಂಟಮ್ ಆಪ್ಟಿಕ್ಸ್ ಅಂಡ್ ಲುಡ್ವಿಗ್ ಮ್ಯಾಕ್ಸ್ ಮಿಲಿಯನ್ ಯುನಿವರ್ಸಿಟಿಯ ಫೆರೆಂಕ್ ಕ್ರೌಜ್ ಹಾಗೂ ಸ್ವೀಡನ್ ಲುಂಡ್ ಯುನಿವರ್ಸಿಟಿಯ ಆ್ಯನ್ ಲಿ ಹುಯಿಲಿಯರ್ ಈ ಪ್ರತಿಷ್ಠಿತ ಪುರಸ್ಕಾರಕ್ಕೆ ಭಾಜನರಾದ ವಿಜ್ಞಾನಿಗಳಾಗಿದ್ದಾರೆ.

‘ಅಣುಗಳಲ್ಲಿ ಎಲೆಕ್ಟ್ರಾನ್‌ಗಳು ಹೇಗೆ ವರ್ತಿಸುತ್ತವೆ. ಕ್ಷಣಾರ್ಧದಲ್ಲಿ ಎಲೆಕ್ಟ್ರಾನ್‌ಗಳು ಚಲಿಸುವ ಬಗೆ ಹಾಗೂ ಈ ಪ್ರಕ್ರಿಯೆಯಲ್ಲಿ ಆಗುವ ಶಕ್ತಿಯ ಬದಲಾವಣೆಯನ್ನು ಗುರುತಿಸಲು ಈ ವಿಜ್ಞಾನಿಗಳು ನಡೆಸಿದ ಸಂಶೋಧನೆ ನಮಗೆ ಹೊಸ ಅಳತೆಗೋಲನ್ನು ಒದಗಿಸಿದೆ’ ಎಂದು ಅಕಾಡೆಮಿ ಹೇಳಿದೆ.

‘ಸೂಕ್ಷ್ಮಾತಿಸೂಕ್ಷ್ಮ ಕಣಗಳ ಅಧ್ಯಯನ ಒಳಗೊಂಡ ವಿಜ್ಞಾನದ ಈ ಶಾಖೆಯು ಬ್ರಹ್ಮಾಂಡವನ್ನು ಅರ್ಥ ಮಾಡಿಕೊಳ್ಳಲು ನೆರವಾಗಲಿದೆ. ಜೊತೆಗೆ, ಎಲೆಕ್ಟ್ರಾನಿಕ್ಸ್ ಕುರಿತು ಹೊಸ ಒಳನೋಟ ನೀಡುವ ಜೊತೆಗೆ ರೋಗ ಪತ್ತೆ ಕ್ಷೇತ್ರದಲ್ಲಿ ಈ ಸಂಶೋಧನೆ ಪ್ರಮುಖ ಪಾತ್ರ ವಹಿಸುವ ಭರವಸೆ ಇದೆ’ ಎಂದು ಅಕಾಡೆಮಿ ತಿಳಿಸಿದೆ.

ಐದನೇ ಮಹಿಳೆ: ಆ್ಯನ್ ಅವರು ನೊಬೆಲ್ ಪುರಸ್ಕಾರಕ್ಕೆ ಭಾಜನರಾಗಿರುವ ಐದನೇ ಮಹಿಳೆ ಎನಿಸಿದ್ದಾರೆ.

ಪುರಸ್ಕಾರಕ್ಕೆ ಆಯ್ಕೆಯಾಗಿರುವುದು ಘೋಷಣೆಯಾದ ನಂತರ ಪ್ರತಿಕ್ರಿಯಿಸಿದ ಅವರು, ‘ನನಗೆ ನಂಬಲು ಆಗುತ್ತಿಲ್ಲ. ಈ ಪ್ರತಿಷ್ಠಿತ ಪುರಸ್ಕಾರವನ್ನು ಪಡೆಯುತ್ತಿರುವುದಕ್ಕೆ ನನಗೆ ಅತೀವ ಸಂತೋಷವಾಗಿದೆ. ಈ ಪುರಸ್ಕಾರಕ್ಕೆ ಭಾಜನರಾದ ಮಹಿಳೆಯರ ಸಂಖ್ಯೆಯೂ ಕಡಿಮೆ. ಹೀಗಾಗಿ, ಪುರಸ್ಕಾರಕ್ಕೆ ಭಾಜನಳಾಗಿದ್ದು ವಿಶೇಷವೇ ಸರಿ’ ಎಂದು ಹೇಳಿದ್ದಾರೆ.

ಆ್ಯನ್ ಲಿ ಹುಯಿಲಿಯರ್

ಫೆರೆಂಕ್ ಕ್ರೌಜ್

ಪಿಯರಿ ಆಗೊಸ್ಟಿನಿ

‘ತೆರಿಗೆ: ಕೇಂದ್ರ ಕಚೇರಿ ನಿರ್ಧರಿಸಲಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ವ್ಯಕ್ತಿಗಳ ನಡುವೆ ವ್ಯವಹಾರಗಳು ನಡೆದಿದ್ದಲ್ಲಿ ಆ ಕುರಿತು ಆದಾಯ ತೆರಿಗೆ ಇಲಾಖೆಯ ಕೇಂದ್ರ ಕಚೇರಿಯಿಂದ ತೆರಿಗೆ ನಿರ್ಧರಣೆ ಅಗತ್ಯ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಆದಾಯ ತೆರಿಗೆಯ ಸಾಮಾನ್ಯ ಲೆಕ್ಕಾಚಾರದ ಬದಲು, ಈ ಪ್ರಕ್ರಿಯೆಯನ್ನು ಕೇಂದ್ರ ವೃತ್ತಕ್ಕೆ ವರ್ಗಾಯಿಸಿದ್ದ ಇಲಾಖೆಯ ಕ್ರಮವನ್ನು ಪ್ರಶ್ನಿಸಿ ಕಾಂಗ್ರೆಸ್ ಮುಖಂಡರಾದ ಸೋನಿಯಾಗಾಂಧಿ, ರಾಹುಲ್‌ಗಾಂಧಿ, ಪ್ರಿಯಾಂಕಾ ಗಾಂಧಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ, ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಸ್.ವಿ.ಎನ್. ಭಟ್ಟಿ ಅವರಿದ್ದ ನ್ಯಾಯಪೀಠ ಈ ಮಾತು ಹೇಳಿತು.

ತೆರಿಗೆ ನಿರ್ಧರಣೆಯನ್ನು ಕೇಂದ್ರ ವೃತ್ತಕ್ಕೆ ವರ್ಗಾವಣೆ ಮಾಡಿದ್ದನ್ನು ಪ್ರಶ್ನಿಸಿ, ಇದೇ ವಿಚಾರವಾಗಿ ಆಮ್ ಆದ್ಮಿ ಪಾರ್ಟಿ (ಎಎಪಿ) ಹಾಗೂ ಇತರ ಐದು ಚಾರಿಟಬಲ್ ಟ್ರಸ್ಟ್‌ಗಳು ಸಲ್ಲಿಸಿದ್ದ ಅರ್ಜಿಗಳನ್ನೂ ನ್ಯಾಯಪೀಠ ವಿಚಾರಣೆ ನಡೆಸಿತು.

ಅರ್ಜಿದಾರರು ಹಾಗೂ ಅವರಿಗೆ ಸಂಬಂಧಿಸಿದ ಟ್ರಸ್ಟ್‌ಗಳ ಪರ ಹಾಜರಿದ್ದ ಹಿರಿಯ ವಕೀಲ ಅರವಿಂದ ದಾತಾರ್, ‘ದೇಶಭ್ರಷ್ಟನಾಗಿರುವ, ಶಸ್ತ್ರಾಸ್ತ್ರಗಳ ವ್ಯಾಪಾರಿ ಸಂಜಯ್ ಭಂಡಾರಿ ಪ್ರಕರಣದಲ್ಲಿ ಶೋಧ ನಡೆಸಲಾಗಿತ್ತು. ಇದೇ ಕಾರಣ ನೀಡಿ ಈ ಎಲ್ಲ ಪ್ರಕರಣಗಳನ್ನು ಪೂರಕ ಪ್ರಕರಣಗಳನ್ನಾಗಿ ಆದಾಯ ತೆರಿಗೆ ಇಲಾಖೆ ಸೇರಿಸಿದೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

‘2019ರಲ್ಲಿ ಅಮೌಖಿಕ ಯೋಜನೆ (ಫೇಸ್‌ಲೆಸ್ ಸ್ಕೀಂ) ಜಾರಿಗೆ ಬಂತು. ನಂತರ ನನ್ನ ಕಕ್ಷಿದಾರರು ಈ ನೂತನ ಯೋಜನೆಯನ್ನು ಆಯ್ಕೆ ಮಾಡಿಕೊಂಡರು. ದಾಖಲೆಗಳನ್ನು ಸಲ್ಲಿಸುವಂತೆ ಅವರಿಗೆ ನೋಟಿಸ್ ಸಹ ನೀಡಲಾಗಿತ್ತಲ್ಲದೇ, ಪರಿಶೀಲನಾ ಕಾರ್ಯ ನಡೆಯುತ್ತಿದೆ. ನಮ್ಮದು ಚಾರಿಟಬಲ್ ಟ್ರಸ್ಟ್. ಹೀಗಾಗಿ ಅಮೌಖಿಕ ಲೆಕ್ಕಾಚಾರ ಯೋಜನೆಯನ್ನು ಆಯ್ಕೆ ಮಾಡಿಕೊಂಡಿದ್ದೇವೆ’ ಎಂದೂ ವಕೀಲ ದಾತಾರ್ ಹೇಳಿದರು.

ಎಎಪಿ ಪರ ವಕೀಲ ಅಭಿಷೇಕ್ ಸಿಂಘ್ವಿ, ‘ಇಂತಹ ಮಹತ್ವದ ವಿಷಯಕ್ಕೆ ಸಂಬಂಧಿಸಿ ಐದು ತಿಂಗಳಷ್ಟು ವಿಳಂಬ ಸಲ್ಲ’ ಎಂದರು.

ಸಂಜೀವ್ ಭಟ್‌ಗೆ ₹3 ಲಕ್ಷ ದಂಡ

ನವದೆಹಲಿ: ವಜಾಗೊಂಡಿರುವ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಸಲ್ಲಿಸಿದ್ದ ಮೂರು ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ಮಾದಕ ವಸ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧದ ಆರೋಪ ಕುರಿತು ವಿಚಾರಣೆ ನಡೆಸುತ್ತಿದ್ದ ಕೆಳಹಂತದ ನ್ಯಾಯಾಲಯದ ನ್ಯಾಯಾಧೀಶರು ತಾರತಮ್ಯ ಮಾಡುತ್ತಿದ್ದಾರೆ ಎಂಬ ಆರೋಪವನ್ನೂ ಒಳಗೊಂಡಿದ್ದ ಅರ್ಜಿಯೂ ಸೇರಿದಂತೆ ಮೂರು ಮೇಲ್ಮನವಿಗಳನ್ನು ಭಟ್ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಂ ನಾಥ್ ಮತ್ತು ರಾಜೇಶ್ ಬಿಂದಾಲ್ ಅವರನ್ನು ಒಳಗೊಂಡ ನ್ಯಾಯಪೀಠವು, ಪ್ರತಿ ಅರ್ಜಿಗೆ ತಲಾ ₹1 ಲಕ್ಷದಂತೆ ₹3 ಲಕ್ಷ ದಂಡ ವಿಧಿಸಿದೆ. ಈ ಹಣವನ್ನು ಗುಜರಾತ್ ಹೈಕೋರ್ಟ್ ವಕೀಲರ ಸಂಘದಲ್ಲಿ ಠೇವಣಿ ಇಡುವಂತೆ ಸೂಚಿಸಿದೆ.

ನಾಯ್ಡು ಅರ್ಜಿ ವಿಚಾರಣೆ ಮುಂದಕ್ಕೆ

ನವದೆಹಲಿ (ಪಿಟಿಐ): ಕೌಶಲ ಅಭಿವೃದ್ಧಿ ನಿಗಮದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ದಾಖಲಿಸಲಾಗಿರುವ ಎಫ್‌ಐಆರ್ ರದ್ದುಪಡಿಸಲು ನಿರಾಕರಿಸಿದ ಆಂಧ್ರ ಪ್ರದೇಶ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್, ಅಕ್ಟೋಬರ್ 9ಕ್ಕೆ ಮುಂದೂಡಿದೆ.

ಮಂಗಳವಾರ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಹಾಗೂ ಬೇಲಾ ಎಂ. ತ್ರಿವೇದಿ ಅವರಿದ್ದ ವಿಭಾಗೀಯ ನ್ಯಾಯಪೀಠವು, ಹೈಕೋರ್ಟ್‌ನಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ಪೀಠದ ಮುಂದೆ ಹಾಜರುಪಡಿಸುವಂತೆ ಆಂಧ್ರಪ್ರದೇಶ ಸರ್ಕಾರದ ಪರ ವಕೀಲ ಮುಕುಲ್ ರೋಹಟಗಿ ಅವರಿಗೆ ಸೂಚಿಸಿತು.

‘ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 17ಎ ಅನ್ವಯ ಸಾರ್ವಜನಿಕ ಸೇವೆಯಲ್ಲಿರುವ ವ್ಯಕ್ತಿಯ ವಿರುದ್ಧ ವಿಚಾರಣೆ ಅಥವಾ ತನಿಖೆ ನಡೆಸುವುದಕ್ಕೂ ಮೊದಲು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಅಗತ್ಯವೆಂದು 2018ರ ಜುಲೈನಲ್ಲಿ ಕಾಯ್ದೆಯಡಿ ಹೊಸದಾಗಿ ಸೇರಿಸಿದ ನಿಬಂಧನೆಯಲ್ಲಿ ಷರತ್ತು ವಿಧಿಸಲಾಗಿದೆ. ಆದರೆ, ಕೌಶಲ ಅಭಿವೃದ್ಧಿ ನಿಗಮದ ಅವ್ಯವಹಾರಕ್ಕೆ ಸಂಬಂಧಿಸಿ 2017ರಿಂದಲೇ ಸಿಬಿಐ ತನಿಖೆ ನಡೆಸುತ್ತಿದೆ. ಹಾಗಾಗಿ, ಎಫ್‌ಐಆರ್ ರದ್ದತಿಗೆ ಈ ಸೆಕ್ಷನ್ ಅನ್ನು ಅನ್ವಯಿಸಲು ಬರುವುದಿಲ್ಲ’ ಎಂದು ರೋಹಟಗಿ ಹೇಳಿದರು.

ಚಂದ್ರಬಾಬು ಪರ ಹಿರಿಯ ವಕೀಲರಾದ ಹರೀಶ್ ಸಾಳ್ವೆ, ಅಭಿಷೇಕ್ ಸಿಂಘ್ವಿ, ಸಿದ್ಧಾರ್ಥ ಲೂತ್ರಾ ಹಾಜರಾಗಿದ್ದರು.



ಚಂದ್ರಬಾಬು ನಾಯ್ಡು

ಬ್ರಿಟನ್: ವೀಸಾ ಶುಲ್ಕ ಹೆಚ್ಚಳ

ಲಂಡನ್ (ಪಿಟಿಐ): ಬ್ರಿಟನ್ ಸರ್ಕಾರದ ಪರಿಷ್ಕೃತ ವೀಸಾ ಶುಲ್ಕ ಬುಧವಾರದಿಂದ ಜಾರಿಗೆ ಬರಲಿದ್ದು, ಇನ್ನು ಮುಂದೆ ಬ್ರಿಟನ್‌ಗೆ ತೆರಳಲು ಇಚ್ಛಿಸುವ ಭಾರತ ಸೇರಿದಂತೆ ಇತರೆ ದೇಶಗಳ ಪ್ರವಾಸಿಗರು ಹಾಗೂ ವಿದ್ಯಾರ್ಥಿಗಳ ಜೇಬಿಗೆ ಹೊರೆಯಾಗಲಿದೆ.

ಆರು ತಿಂಗಳ ಒಳಗಿನ ಸಂದರ್ಶಕರ ವೀಸಾಕ್ಕೆ 15 ಪೌಂಡ್ ಹಾಗೂ ವಿದ್ಯಾರ್ಥಿ ವೀಸಾಕ್ಕೆ 127 ಪೌಂಡ್ ಶುಲ್ಕ ಹೆಚ್ಚಿಸಲಾಗಿದೆ. ಬ್ರಿಟನ್ ಗೃಹ ಇಲಾಖೆ ನೀಡಿರುವ ಮಾಹಿತಿ ಪ್ರಕಾರ, ಇನ್ನು ಮುಂದೆ ಆರು ತಿಂಗಳ ಒಳಗಿನ ಅವಧಿಯ ಸಂದರ್ಶಕರ ವೀಸಾಕ್ಕೆ 115 ಪೌಂಡ್ (₹11,552) ಹಾಗೂ ವಿದ್ಯಾರ್ಥಿ ವೀಸಾಕ್ಕೆ 490 ಪೌಂಡ್ (₹49,224) ಶುಲ್ಕ ಭರಿಸಬೇಕಿದೆ.

‘ನಾವು ಸಾರ್ವಜನಿಕ ಸೇವೆಗೆ ಹೆಚ್ಚಿನ ಬಂಡವಾಳ ಒದಗಿಸಬೇಕಿದೆ. ಅಲ್ಲದೇ, ಆ ವಲಯದ ವೇತನ ಕೊಡುಗೆಯನ್ನೂ ವಿಸ್ತರಿಸುವ ಉದ್ದೇಶ ಹೊಂದಿದ್ದೇವೆ. ಹಾಗಾಗಿ, ವೀಸಾ ಶುಲ್ಕ ಹೆಚ್ಚಿಸುವ ಸರ್ಕಾರದ ನಡೆ ಸರಿಯಾಗಿದೆ’ ಎಂದು ಗೃಹ ಇಲಾಖೆಯ ವಕ್ತಾರರು ಹೇಳಿದ್ದಾರೆ.

ಉದ್ಯೋಗ ಮತ್ತು ಸಂದರ್ಶಕರ ವೀಸಾ ಶುಲ್ಕವನ್ನು ಶೇ 15ರಷ್ಟು ಹೆಚ್ಚಿಸಲಾಗಿದೆ. ಆದ್ಯತೆ, ವಿದ್ಯಾರ್ಥಿ ಹಾಗೂ ಉದ್ಯೋಗದಾತ ಸಂಸ್ಥೆಯು ತನ್ನ ನೌಕರರಿಗೆ ಕಲ್ಪಿಸುವ ವೀಸಾ ಶುಲ್ಕವನ್ನು ಶೇ 20ರಷ್ಟು ಹೆಚ್ಚಿಸಲಾಗಿದೆ.

ಗ್ರಾಮಗಳಲ್ಲಿ 66 ಸರ್ಕಾರಿ ಸೇವೆಗಳು

ಒಂದನೇ ಪುಟದಿಂದ...

ಈ ವ್ಯಾಪ್ತಿಯ 20 ಸಾವಿರದಿಂದ 50 ಸಾವಿರ ಜನರು ವಿವಿಧ ಸರ್ಕಾರಿ ಸೇವೆಗಳನ್ನು ಪಡೆಯಲು ಹೋಬಳಿ ಕೇಂದ್ರಕ್ಕೆ ಹೋಗಬೇಕಾಗಿತ್ತು. ಇದರಿಂದ ಅವರಿಗೆ ತೊಂದರೆಯಾಗಿತ್ತು. ಈ ಸಮಸ್ಯೆ ನಿವಾರಿಸಲು 44 ಸೇವೆ ಆರಂಭಿಸಲಾಗಿದೆ ಎಂದು ಹೇಳಿದೆ.

ಯಾವ ಸೇವೆಗಳು ಲಭ್ಯ: ಜನಸಂಖ್ಯಾ ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಜಾತಿ ಪ್ರಮಾಣ (ಪ್ರವರ್ಗ–ಎ), ಜಾತಿ ಪ್ರಮಾಣ ಪತ್ರ (ಅ.ಜಾ/ಅ.ಪಂ), ಹಿಂದುಳಿದ ವರ್ಗ ಪ್ರ.ಪತ್ರ (ಕೇ.ಸ), ವಾಸಸ್ಥಳ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಗೇಣಿ ರಹಿತ ದೃಢೀಕರಣ ಪತ್ರ, ವಿಧವಾ ದೃಢೀಕರಣ ಪತ್ರ, ಜೀವಂತ ದೃಢೀಕರಣ ಪತ್ರ, ವ್ಯವಸಾಯಗಾರರ ಕುಟುಂಬದ ದೃಢೀಕರಣ ಪತ್ರ, ಮರುವಿವಾಹವಾಗದಿರುವ ಬಗ್ಗೆ ದೃಢೀಕರಣ ಪತ್ರ, ಜಮೀನು ಇಲ್ಲದಿರುವ ಬಗ್ಗೆ ದೃಢೀಕರಣ ಪತ್ರ, ಮೃತರ ಕುಟುಂಬ ಸದಸ್ಯರ ದೃಢೀಕರಣ ಪತ್ರ, ನಿರುದ್ಯೋಗಿ ದೃಢೀಕರಣ ಪತ್ರ, ಸರ್ಕಾರಿ ನೌಕರಿ ಇಲ್ಲದಿರುವ ಬಗ್ಗೆ ಪ್ರಮಾಣ ಪತ್ರ, ವ್ಯವಸಾಯಗಾರ ದೃಢೀಕರಣ ಪತ್ರ, ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರ ಪ್ರಮಾಣ ಪತ್ರ.

ಕೃಷಿ ಕಾರ್ಮಿಕ ಪ್ರಮಾಣ ಪತ್ರ, ಮೇಲುಸ್ತರಕ್ಕೆ ಸೇರಿಲ್ಲವೆಂದು ದೃಢೀಕರಣ ಪತ್ರ, ಭೂ ಹಿಡುವಳಿ ಪ್ರಮಾಣ ಪತ್ರ, ಬೋನಫೈಡ್ ದೃಢೀಕರಣ ಪತ್ರ, ಸಾಲ ತೀರಿಸುವ ಶಕ್ತಿ ಪ್ರಮಾಣ ಪತ್ರ, ನಿವಾಸಿ ಪ್ರಮಾಣ ಪತ್ರ, ಆದಾಯ ದೃಢೀಕರಣ ಪತ್ರ (ಉದ್ಯೋಗದ ಸಲುವಾಗಿ ಮಾತ್ರ), ಆದಾಯ ದೃಢೀಕರಣ ಪತ್ರ (ಅನುಕಂಪದ ಆಧಾರದ ನೇಮಕಾತಿಗೆ), ಕುಟುಂಬ ವಂಶವೃಕ್ಷ ದೃಢೀಕರಣ ಪತ್ರ. ಕಲ್ಯಾಣ ಕರ್ನಾಟಕ ವಿಭಾಗ–ವಲಯದ ವಾಸಸ್ಥಳ ದೃಢೀಕರಣ ಪತ್ರ, ಬೆಳೆ ದೃಢೀಕರಣ ಪತ್ರ, ಅಲ್ಪಸಂಖ್ಯಾತ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ (ಆರ್ಯ ವೈಶ್ಯ), ಆದಾಯ ಹಾಗೂ ಆಸ್ತಿ ಪ್ರಮಾಣಪತ್ರ (EWS), ಜಾತಿ ಪ್ರಮಾಣಪತ್ರ (SC/ST-Migrant), ಅಂಗವಿಕಲ ಪೋಷಣಾ ವೇತನ, ನಿರ್ಗತಿಕ ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆ, ರಾಷ್ಟ್ರೀಯ ಕುಟುಂಬ ಕ್ಷೇಮ ಯೋಜನೆ, ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ, ಮೈತ್ರಿ, ಮನಸ್ವಿನಿ, ಅಂತ್ಯ ಸಂಸ್ಕಾರ ಯೋಜನೆ, ಆಸಿಡ್ ದಾಳಿಗೊಳಗಾದ ಮಹಿಳೆಯ ವೇತನ, ರೈತರ ವಿಧವಾ ವೇತನ ಮತ್ತು ಎಂಡೋಸಲ್ಫಾನ್ ಸಂತ್ರಸ್ತರ ಪಿಂಚಣಿ ವಿತರಣೆ.

ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಮತ್ತೆ ಆರು ಪದಕ; ಅಫ್ಸಲ್‌ಗೆ ಬೆಳ್ಳಿ

ಪಾರುಲ್, ಅನ್ನುರಾಣಿ ಚಿನ್ನ ಸಂಭ್ರಮ

ವಿದ್ಯಾ ರಾಮರಾಜ್

ಪ್ರವೀಣ್ ಚಿತ್ರವೇಲ್

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ಭಾರತದ ಪಾರಮ್ಯ ಮುಂದುವರಿದಿದ್ದು, ಪಾರುಲ್ ಚೌಧರಿ ಮತ್ತು ಅನ್ನುರಾಣಿ ಸಿಂಗ್ ಅವರು ಕ್ರಮವಾಗಿ ಮಹಿಳೆಯರ 5 ಸಾವಿರ ಮೀ. ಓಟ ಹಾಗೂ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನ ಗೆದ್ದುಕೊಂಡರು.

ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಮಂಗಳವಾರ ಭಾರತದ ಅಥ್ಲೀಟ್‌ಗಳು ಆರು ಪದಕಗಳನ್ನು ಬಗಲಿಗೆ ಹಾಕಿಕೊಂಡರು. ಈ ಮೂಲಕ ಅಥ್ಲೆಟಿಕ್ಸ್‌ನಲ್ಲಿ ಒಟ್ಟು ಪದಕಗಳ ಸಂಖ್ಯೆಯನ್ನು 22ಕ್ಕೆ (4 ಚಿನ್ನ, 10 ಬೆಳ್ಳಿ ಮತ್ತು 8 ಕಂಚು) ಹೆಚ್ಚಿಸಿಕೊಂಡರು.

2018ರ ಕೂಟದ ಅಥ್ಲೆಟಿಕ್ಸ್‌ನಲ್ಲಿ ಜಯಿಸಿದ್ದ ಪದಕಗಳ ಸಂಖ್ಯೆಯನ್ನು (20) ಈ ಬಾರಿ ಮೀರಿನಿಲ್ಲಲು ಭಾರತಕ್ಕೆ ಸಾಧ್ಯವಾಗಿದೆ. 1951ರಲ್ಲಿ ನವದೆಹಲಿಯಲ್ಲಿ ನಡೆದಿದ್ದ ಚೊಚ್ಚಲ ಕೂಟದಲ್ಲಿ 34 ಪದಕಗಳನ್ನು ಜಯಿಸಿದ್ದು, ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಭಾರತದ ಅತ್ಯುತ್ತಮ ಸಾಧನೆಯಾಗಿದೆ.

ಭಾರತದ ಅಥ್ಲೀಟ್‌ಗಳಲ್ಲಿ ಮಂಗಳವಾರ ಮಿಂಚಿನ ಸಂಚಲನ ಮೂಡಿಸಿದ್ದು ಪಾರುಲ್. ಏಷ್ಯನ್ ಗೇಮ್ಸ್‌ನಲ್ಲಿ ಮಹಿಳೆಯರ 5,000 ಮೀ. ಓಟದಲ್ಲಿ ಚಿನ್ನ ಗೆದ್ದ ಮೊದಲ ಅಥ್ಲೀಟ್ ಎಂಬ ಗೌರವ ಅವರಿಗೆ ಒಲಿಯಿತು.

ಕೊನೆಯ 40 ಮೀ. ಇದ್ದಾಗ ವೇಗ ಹೆಚ್ಚಿಸಿಕೊಂಡ ಪಾರುಲ್, ಜಪಾನ್‌ನ ರಿರಿಕಾ ಹಿರೊನಾಕ ಅವರನ್ನು ಹಿಂದಿಕ್ಕಿ 15 ನಿ. 14.75 ಸೆ.ಗಳಲ್ಲಿ ಮೊದಲಿಗರಾಗಿ ಗುರಿಮುಟ್ಟಿದರು. ರಿರಿಕಾ 15 ನಿ. 15.34 ಸೆ.ಗಳೊಂದಿಗೆ ಎರಡನೇ ಸ್ಥಾನ ಪಡೆದರು.

28 ವರ್ಷದ ಪಾರುಲ್‌ಗೆ ಈ ಕೂಟದಲ್ಲಿ ದೊರೆತ ಎರಡನೇ ಪದಕ ಇದು. ಸೋಮವಾರ ಅವರು 3000 ಮೀ. ಸ್ಟೀಪಲ್‌ಚೇಸ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದುಕೊಂಡಿದ್ದರು. ಕಂಚಿನ ಪದಕ ಕಜಕಸ್ತಾನದ ಕರೊಲಿನಾ ಚೆಪ್ಕೊಚ್ ಕಿಪ್‌ಕಿರುಯ್ (15 ನಿ. 23.12 ಸೆ.) ಅವರಿಗೆ ಒಲಿಯಿತು.

ಸುನಿತಾ ರಾಣಿ (ಬೆಳ್ಳಿ, 1998; ಕಂಚು, 2002), ಒಪಿ ಜೈಶಾ (ಕಂಚು, 2006), ಪ್ರೀಜಾ ಶ್ರೀಧರನ್ (ಬೆಳ್ಳಿ, 2010) ಮತ್ತು ಕವಿತಾ ರಾವತ್ (ಕಂಚು, 2010) ಅವರು ಏಷ್ಯನ್ ಗೇಮ್ಸ್‌ನಲ್ಲಿ ಮಹಿಳೆಯರ 5000 ಮೀ. ಓಟದಲ್ಲಿ ಈ ಹಿಂದೆ ಭಾರತಕ್ಕೆ ಪದಕ ಗೆದ್ದಿದ್ದರು.

ಅನ್ನುರಾಣಿ ಅವರು ಈ ಋತುವಿನ ಶ್ರೇಷ್ಠ ದೂರ ಎನಿಸಿರುವ 62.92 ಮೀ. ಸಾಧನೆಯೊಂದಿಗೆ ಚಿನ್ನಕ್ಕೆ ಮುತ್ತಿಟ್ಟರು. ತಮ್ಮ ನಾಲ್ಕನೇ ಪ್ರಯತ್ನದಲ್ಲಿ ಅವರು ಈ ದೂರ ಕಂಡುಕೊಂಡರು. ಜಾವೆಲಿನ್ ಥ್ರೋನಲ್ಲಿ ಮಹಿಳೆಯರ ವಿಭಾಗದಲ್ಲಿ ಭಾರತಕ್ಕೆ ಲಭಿಸಿದ ಮೊದಲ ಚಿನ್ನ ಇದು. 31 ವರ್ಷದ ಅನ್ನುರಾಣಿ 2014ರ ಕೂಟದಲ್ಲಿ ಕಂಚಿನ ಪದಕ ಜಯಿಸಿದ್ದರು.

ಚಿನ್ನದ ಪದಕದೊಂದಿಗೆ ಅನ್ನುರಾಣಿ

ಮೇ ತಿಂಗಳಲ್ಲಿ ನಡೆದಿದ್ದ ಫೆಡರೇಷನ್ ಕಪ್‌ನಲ್ಲಿ 59.24 ಮೀ. ದೂರ ಎಸೆದದ್ದು, ಉತ್ತರ ಪ್ರದೇಶದ ಅನ್ನು ಅವರ ಈ ಋತುವಿನ ಅತ್ಯುತ್ತಮ ಸಾಧನೆ ಎನಿಸಿಕೊಂಡಿತ್ತು. ಕಳೆದ ಕೆಲ ತಿಂಗಳಲ್ಲಿ ಲಯ ಕಂಡುಕೊಳ್ಳುವಲ್ಲಿ ವಿಫಲವಾಗಿದ್ದ ಅವರು ಹಾಂಗ್‌ಝೌನಲ್ಲಿ ಉತ್ತಮ ಪ್ರದರ್ಶನ ನೀಡಲೇಬೇಕಾದ ಒತ್ತಡದಲ್ಲಿದ್ದರು. ಜಾವೆಲಿನ್ ಥ್ರೋ ರಾಷ್ಟ್ರೀಯ ದಾಖಲೆ (63.82 ಮೀ.) ಅವರ ಹೆಸರಿನಲ್ಲಿದೆ.

ವಿದ್ಯಾಗೆ ಕಂಚು: ಮಹಿಳೆಯರ 400 ಮೀ. ಹರ್ಡಲ್ಸ್‌ನಲ್ಲಿ ವಿದ್ಯಾ ರಾಮರಾಜ್ ಕಂಚು ಗೆದ್ದುಕೊಂಡರು. ಅವರು 55.68 ಸೆ.ಗಳಲ್ಲಿ ಗುರಿ ತಲುಪಿದರು. ಬಹರೇನ್‌ನ ಮುಜಿದತ್ ಅಡೆಕೊಯಾ (54.45 ಸೆ.) ಮತ್ತು ಚೀನಾದ ಜೆದಿ ಮೊ ಅವರು ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದರು. ವಿದ್ಯಾ ಅವರು ಹೀಟ್ಸ್‌ನಲ್ಲಿ 55.42 ಸೆ.ಗಳೊಂದಿಗೆ ಗುರಿತಲುಪಿ ಪಿ.ಟಿ. ಉಷಾ ಅವರ ದಾಖಲೆ ಸರಿಗಟ್ಟಿದ್ದರು.

ಪುರುಷರ 800 ಮೀ. ಓಟದಲ್ಲಿ ಮೊಹಮ್ಮದ್ ಅಫ್ಸಲ್ ಅವರು 1 ನಿ. 48.43 ಸೆ.ಗಳೊಂದಿಗೆ ಬೆಳ್ಳಿ ತಮ್ಮದಾಗಿಸಿಕೊಂಡರೆ, ಪ್ರವೀಣ್ ಚಿತ್ರವೇಲ್ ಅವರು ಪುರುಷರ ಟ್ರಿಪಲ್‌ಜಂಪ್‌ನಲ್ಲಿ 16.68 ಮೀ. ಸಾಧನೆಯೊಂದಿಗೆ ಕಂಚು ಪಡೆದರು. ಅಬ್ದುಲ್ಲಾ ಅಬೂಬಕರ್ ಇದೇ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಗಳಿಸಿದರು.

ಪದಕ ಪಟ್ಟಿ (ಅಗ್ರ 10 ದೇಶ)					
ರ‍್ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	161	90	46	297
2	ಜಪಾನ್	33	47	50	130
3	ದಕ್ಷಿಣ ಕೊರಿಯಾ	32	42	65	139
4	ಭಾರತ	15	26	28	69
5	ಉಜ್ಬೇಕಿಸ್ತಾನ	14	15	21	50
6	ಚೀನಾ ತೈಪೆ	12	10	18	40
7	ಥಾಯ್ಲೆಂಡ್	10	11	19	40
8	ಉತ್ತರ ಕೊರಿಯಾ	7	10	6	23
9	ಬಹರೇನ್	7	1	4	12
10	ಹಾಂಗ್‌ಕಾಂಗ್	6	15	24	45

ತೇಜಸ್ವಿನ್ ಶಂಕರ್‌ಗೆ ಬೆಳ್ಳಿ

ತೇಜಸ್ವಿನ್ ಶಂಕರ್ ಅವರು ಡೆಕಾಥ್ಲಾನ್‌ನಲ್ಲಿ ಬೆಳ್ಳಿ ಗೆದ್ದು, ಈ ವಿಭಾಗದಲ್ಲಿ ಭಾರತ ಹಲವು ವರ್ಷಗಳಿಂದ ಎದುರಿಸುತ್ತಿದ್ದ ಪದಕ ಬರ ನೀಗಿಸಿದರು. 10 ವಿಭಾಗಗಳನ್ನೊಳಗೊಂಡ ಈ ಸ್ಪರ್ಧೆಯಲ್ಲಿ ಅಮೋಘ ಪ್ರದರ್ಶನ ನೀಡಿದ ಅವರು 7,666 ಪಾಯಿಂಟ್ಸ್ ಕಲೆಹಾಕಿದರು. ಚೀನಾದ ಚುನ್ ಕ್ವಿಹಾವೊ (7,816) ಚಿನ್ನ ತಮ್ಮದಾಗಿಸಿಕೊಂಡರು.

ದೆಹಲಿಯ ತೇಜಸ್ವಿನ್ ಅವರು ಕೊನೆಯ ಸ್ಪರ್ಧೆಯೆನಿಸಿದ 1,500 ಮೀ. ಓಟದಲ್ಲಿ ನಾಲ್ಕನೇ ಸ್ಥಾನ ಪಡೆದುಕೊಂಡರು. ಕ್ವಿಹಾವೊ ಅವರು ಅಂತಿಮ ಸ್ಪರ್ಧೆ ಬಾಕಿಯಿದ್ದಾಗಲೇ ಚಿನ್ನ ಖಚಿತಪಡಿಸಿಕೊಂಡಿದ್ದರು.

1974ರ ಕೂಟದ ಬಳಿಕ ಭಾರತದ ಕ್ರೀಡಾಪಟುವೊಬ್ಬರು ಡೆಕಾಥ್ಲಾನ್ ಪದಕ ಜಯಿಸಿದ್ದು ಇದೇ ಮೊದಲು. ಆ ಕೂಟದಲ್ಲಿ ವಿಜಯ್‌ಸಿಗ್ ಚೌಹಾನ್ ಪದಕ ಗೆದ್ದಿದ್ದರು. ಡೆಕಾಥ್ಲಾನ್‌ನಲ್ಲಿ ರಾಷ್ಟ್ರೀಯ ದಾಖಲೆ ಭಾರತಿಂದರ್ ಸಿಂಗ್ (7,658 ಪಾಯಿಂಟ್ಸ್, 2011 ರಲ್ಲಿ) ಅವರ ಹೆಸರಿನಲ್ಲಿದೆ.

800 ಮೀ. ಓಟದಲ್ಲಿ ಬೆಳ್ಳಿ ಗೆದ್ದ ಮೊಹಮ್ಮದ್ ಅಫ್ಸಲ್—ಪಿಟಿಐ ಚಿತ್ರ

ಕಬಡ್ಡಿ: ಭಾರತ ತಂಡಗಳ ಜಯಭೇರಿ

ಹಾಂಗ್‌ಝೌ (ಪಿಟಿಐ): ಭಾರತದ ಪುರುಷ ಮತ್ತು ಮಹಿಳಾ ಕಬಡ್ಡಿ ತಂಡಗಳು ಮಂಗಳವಾರ ತಮ್ಮ ಗುಂಪುಗಳ ಪಂದ್ಯಗಳಲ್ಲಿ ಜಯಿಸಿದವು.

ಏಷ್ಯನ್ ಕ್ರೀಡಾಕೂಟಗಳಲ್ಲಿ ಏಳು ಚಿನ್ನ ಜಯಿಸಿದ ದಾಖಲೆ ಹೊಂದಿರುವ ಭಾರತ ಪುರುಷರ ತಂಡವು ಇಲ್ಲಿ ನಡೆದ ಎ ಗುಂಪಿನ ಪಂದ್ಯದಲ್ಲಿ 55–18ರಿಂದ ಬಾಂಗ್ಲಾದೇಶ ವಿರುದ್ಧ ಜಯಿಸಿತು.

ಮಹಿಳಾ ತಂಡವು 56–23ರಿಂದ ದಕ್ಷಿಣ ಕೊರಿಯಾದ ಸವಾಲನ್ನು ಮೆಟ್ಟಿನಿಂತಿತು.

ಪುರುಷರ ತಂಡವು ಬಾಂಗ್ಲಾ ಎದುರು ಪಂದ್ಯದ ಮೊದಲಾರ್ಧದಲ್ಲಿ 24–9ರಿಂದ ಮುನ್ನಡೆ ಸಾಧಿಸಿತು.

ಭಾರತ ತಂಡದ ನವೀನ್ ಕುಮಾರ್ ಗೋಯತ್ ಮತ್ತು ಅರ್ಜುನ್ ದೇಶ್ವಾಲ್ ತಮ್ಮ ಚುರುಕಾದ ದಾಳಿಯ ಮೂಲಕ ಪಂದ್ಯದ 12ನೇ ನಿಮಿಷದಲ್ಲಿ ಬಾಂಗ್ಲಾದ ಅಂಕಣವನ್ನು ಖಾಲಿ ಮಾಡಿಸಿದರು.

ನೀರಜ್ ಸ್ಪರ್ಧೆ ಇಂದು

ಪುರುಷರ ಜಾವೆಲಿನ್ ಥ್ರೋ ಬುಧವಾರ ನಡೆಯಲಿದ್ದು, ಭಾರತದ ನೀರಜ್ ಚೋಪ್ರಾ ಅವರು ಚಿನ್ನ ಗೆಲ್ಲುವ ನೆಚ್ಚಿನ ಸ್ಪರ್ಧಿ ಎನಿಸಿದ್ದಾರೆ. ಅವರಿಗೆ ಪೈಪೋಟಿ ನೀಡುವರು ಎಂದು ಭಾವಿಸಲಾಗಿದ್ದ ಪಾಕಿಸ್ತಾನದ ಅರ್ಶದ್ ನದೀಮ್ ಗಾಯದ ಕಾರಣ ಹಿಂದೆ ಸರಿದಿದ್ದಾರೆ. ಇದರಿಂದ ನೀರಜ್, ನಿರಾಯಾಸವಾಗಿ ಚಿನ್ನ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.

ಅರ್ಶದ್ ಅವರು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ನೀರಜ್‌ಗೆ ಪ್ರಬಲ ಪೈಪೋಟಿ ಒಡ್ಡಿ, ಬೆಳ್ಳಿ ಗೆದ್ದಿದ್ದರು. 'ಮಂಡಿ ನೋವಿನಿಂದ ಬಳಲುತ್ತಿರುವ ಅರ್ಶದ್, ವೈದ್ಯರ ಸಲಹೆಯಂತೆ ಸ್ಪರ್ಧಿಸದಿರಲು ನಿರ್ಧರಿಸಿದ್ದಾರೆ. ಗಾಯ ಉಲ್ಬಣಿಸಿದರೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸುವುದಕ್ಕೆ ತೊಡಕಾಗಬಹುದು ಎಂಬ ಕಾರಣ ಮುನ್ನೆಚ್ಚರಿಕೆ ಕ್ರಮವಾಗಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದು ಪಾಕ್ ತಂಡದ ಪ್ರಕಟಣೆ ತಿಳಿಸಿದೆ.

ನೀರಜ್ ಮತ್ತು ಅರ್ಶದ್ ಇದುವರೆಗೆ ಒಂಬತ್ತು ಕೂಟಗಳಲ್ಲಿ ಜತೆಯಾಗಿ ಪಾಲ್ಗೊಂಡಿದ್ದರು. ಎಲ್ಲ ಕೂಟಗಳಲ್ಲಿ ಭಾರತದ ಅಥ್ಲೀಟ್, ಪಾಕ್ ತಂಡದ ಸ್ಪರ್ಧಿಯನ್ನು ಹಿಂದಿಕ್ಕುವಲ್ಲಿ ಯಶಸ್ವಿಯಾಗಿದ್ದರು.

ಕೆನೊಯಿಂಗ್: 1994ರ ಬಳಿಕ ಮೊದಲ ಪದಕ

ಅರ್ಜುನ್- ಸುನಿಲ್‌ಗೆ ಕಂಚು

ಹಾಂಗ್‌ಝೌ (ಪಿಟಿಐ): ಭಾರತದ ಅರ್ಜುನ್ ಸಿಂಗ್ ಮತ್ತು ಸುನಿಲ್ ಸಿಂಗ್ ಅವರು ಏಷ್ಯನ್ ಕ್ರೀಡಾಕೂಟದ ಕೆನೊಯಿಂಗ್‌ನಲ್ಲಿ ಪುರುಷರ ಡಬಲ್ 1000 ಮೀ. ಸ್ಪರ್ಧೆಯಲ್ಲಿ ಕಂಚು ಗೆದ್ದುಕೊಂಡರು.

ಮಂಗಳವಾರ ನಡೆದ ಸ್ಪರ್ಧೆಯನ್ನು ಭಾರತದ ಜೋಡಿ 3 ನಿ. 53.329 ಸೆ.ಗಳಲ್ಲಿ ಪೂರೈಸಿತು. ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಕೆನೊಯಿಂಗ್‌ನಲ್ಲಿ ಭಾರತಕ್ಕೆ ದೊರೆತ ಎರಡನೇ ಪದಕ ಇದು. 1994 ರಲ್ಲಿ ಹಿರೋಷಿಮಾದಲ್ಲಿ ನಡೆದಿದ್ದ ಕೂಟದಲ್ಲಿ ಇದೇ ವಿಭಾಗದಲ್ಲಿ ಸಿಜಿ ಸದಾನಂದನ್ ಮತ್ತು ಜಾನಿ ರೊಮೆಲ್ ಜೋಡಿ ಕಂಚು ಜಯಿಸಿತ್ತು.

ಉಜ್ಬೆಕಿಸ್ತಾನದ ಶೊಕ್‌ಮುರಾದ್ ಖೊಲ್‌ಮುರದೊವ್ ಮತ್ತು ನೂರಿಸ್ಲೊಮ್ ತುಖ್ತಾಸಿನ್ 3 ನಿ. 43.796 ಸೆ.ಗಳೊಂದಿಗೆ ಚಿನ್ನ ಗೆದ್ದರು. ಕಜಕಸ್ತಾನದ ತಿಮೊಫೆಯ್ ಯೆಮೆಲ್‌ಯನೊವ್ ಮತ್ತು ಸೆರ್ಜಿ ಯೆಮೆಲ್‌ಯನೊವ್ ಜೋಡಿಗೆ ಬೆಳ್ಳಿ ಲಭಿಸಿತು. 24 ವರ್ಷದ ಸುನಿಲ್ ಅವರು 2018ರ ಕೂಟದಲ್ಲೂ ಪಾಲ್ಗೊಂಡಿದ್ದರು. 16 ವರ್ಷದ ಅರ್ಜುನ್‌ಗೆ ಇದು ಮೊದಲ ಕೂಟ.

'ಕಳೆದ ಬಾರಿಯ ಕೂಟದಲ್ಲಿ ಪದಕ ಗೆಲ್ಲಬಹುದಿತ್ತು. ಆದರೆ ಸ್ಪರ್ಧೆಯ ದಿನ ನನ್ನ ಜತೆಗಾರ ಅನಾರೋಗ್ಯಕ್ಕೆ ಒಳಗಾದ್ದರಿಂದ ಪೂರ್ಣ ಸಾಮರ್ಥ್ಯ ತೋರಲು ಸಾಧ್ಯವಾಗಿರಲಿಲ್ಲ. ಎರಡನೇ ಪ್ರಯತ್ನದಲ್ಲಿ ಪದಕ ಗೆದ್ದಿರುವುದು ಸಂತಸ ಉಂಟುಮಾಡಿದೆ' ಎಂದು ಸುನಿಲ್ ಪ್ರತಿಕ್ರಿಯಿಸಿದರು.

ಅರ್ಜುನ್ ಸಿಂಗ್ (ಎಡ) ಮತ್ತು ಸುನಿಲ್ ಸಿಂಗ್ –ಪಿಟಿಐ ಚಿತ್ರ

ಚೆಸ್: ಇರಾನ್– ಭಾರತ ಪಂದ್ಯ ಡ್ರಾ

ಹಾಂಗ್‌ಝೌ (ಪಿಟಿಐ): ಅಗ್ರ ಶ್ರೇಯಾಂಕದ ಭಾರತ ಪುರುಷರ ತಂಡ ಏಷ್ಯನ್ ಗೇಮ್ಸ್ ಚೆಸ್‌ನ ಐದನೇ ಸುತ್ತಿನಲ್ಲಿ ಮಂಗಳವಾರ ಇರಾನ್ ಎದುರು 2–2 'ಡ್ರಾ'ಕ್ಕೆ ಸಮಾಧಾನಪಟ್ಟುಕೊಳ್ಳಬೇಕಾಯಿತು. ಎರಡನೇ ಶ್ರೇಯಾಂಕದ ಭಾರತ ಮಹಿಳಾ ತಂಡಕ್ಕೆ, ಮಂಗೋಲಿಯಾ ತಂಡದಿಂದ ಪ್ರತಿರೋಧ ಎದುರಾಗಲಿಲ್ಲ. 4–0 ಪರಿಪೂರ್ಣ ಜಯದಕ್ಕಿತು.

ಪುರುಷರ ಮತ್ತು ಮಹಿಳಾ ತಂಡಗಳು ತಲಾ ಎಂಟು ಮ್ಯಾಚ್ ಪಾಯಿಂಟ್ಸ್ ಸಂಗ್ರಹಿಸಿ ಎರಡನೇ ಸ್ಥಾನದಲ್ಲಿವೆ. ಪುರುಷರ ವಿಭಾಗದಲ್ಲಿ ಇರಾನ್ (9) ಅಗ್ರಸ್ಥಾನದಲ್ಲಿದೆ.

ಪುರುಷರ ವಿಭಾಗದಲ್ಲಿ ಮೊದಲ ಬೋರ್ಡ್‌ನಲ್ಲಿ ಆಡಿದ ಪರ್ಹಾಮ್ ಮಘಸುಡ್ಲೂ (ರೇಟಿಂಗ್ 2707) ಅವರು ಡಿ.ಗುಕೇಶ್ (2758) ಅವರನ್ನು ಸೋಲಿಸಿದರೆ, ರಮೇಶಬಾಬು ಪ್ರಜ್ಞಾನಂದ (2727) ಎರಡನೇ ಬೋರ್ಡ್‌ನಲ್ಲಿ ಸೆಯದಮೊಹಮದಮೀನ್ ತಬತಬೇಯಿ (2685) ಅವರನ್ನು ಮಣಿಸಿದ್ದರಿಂದ ಸ್ಕೋರ್ ಸಮನಾಯಿತು. ಇರಾನ್‌ನ ಇದಾನಿ ಪೌಯ (2633) ಮತ್ತು ದನೇಶ್ವರ್ ಬರ್ದಿಯಾ (2581) ಅವರು ಕ್ರಮವಾಗಿ ವಿದಿತ್ ಗುಜರಾತಿ (2716) ಮತ್ತು ಪಿ.ಹರಿಕೃಷ್ಣ (2711) ಜತೆಗಿನ ಪಂದ್ಯಗಳನ್ನು 'ಡ್ರಾ' ಮಾಡಿಕೊಂಡರು.

ಮಹಿಳಾ ತಂಡ ವಿಭಾಗದಲ್ಲಿ ಕೋನೇರು ಹಂಪಿ, ವೈಶಾಲಿ ಆರ್., ವಂತಿಕಾ ಅಗರವಾಲ್ ಮತ್ತು ಸವಿತಾಶ್ರೀ ಭಾಸ್ಕರ್ ಎಲ್ಲರೂ ತಮ್ಮ ಪಂದ್ಯಗಳನ್ನು ಗೆದ್ದುಕೊಂಡರು.

ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಲವ್ಲಿನಾ

ಬಾಕ್ಸಿಂಗ್ ಸ್ಪರ್ಧೆ: ಪ್ರೀತಿ ಪವಾರ್, ನರೇಂದರ್ ಬೆರ್ವಾಲ್‌ಗೆ ಕಂಚಿನ ಪದಕ

ಹಾಂಗ್‌ಝೌ (ಪಿಟಿಐ): ವಿಶ್ವ ಚಾಂಪಿಯನ್ ಲವ್ಲಿನಾ ಬೋರ್ಗೊಹೈನ್ ಅವರು ಏಷ್ಯನ್ ಗೇಮ್ಸ್ ಬಾಕ್ಸಿಂಗ್ (75 ಕೆ.ಜಿ) ಫೈನಲ್ ತಲುಪುವ ಮೂಲಕ ಪ್ಯಾರಿಸ್ ಒಲಿಂಪಿಕ್ಸ್ ಕೋಟಾಕ್ಕೆ ಅರ್ಹತೆ ಪಡೆದರು. ಇನ್ನೊಂದೆಡೆ ಪ್ರೀತಿ ಪವಾರ್ 54 ಕೆ.ಜಿ. ವಿಭಾಗದಲ್ಲಿ ಮತ್ತು ನರೇಂದರ್ ಬೆರ್ವಾಲ್ (+92 ಕೆ.ಜಿ) ಅವರು ಮಂಗಳವಾರ ಕಂಚಿನ ಪದಕಗಳನ್ನು ಗೆದ್ದುಕೊಂಡರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದ ಬೋರ್ಗೊಹೈನ್ ಅವರು ಚಾಣಾಕ್ಷತೆಯಿಂದ ಹೋರಾಡಿ ಥಾಯ್ಲೆಂಡ್‌ನ ಬೇಸನ್ ಮನಿಕೊನ್ ಅವರನ್ನು 5–0 ಸರ್ವಾನುಮತದ ತೀರ್ಪಿನಿಂದ ಸೋಲಿಸಿದರು. 2024ರ ಒಲಿಂಪಿಕ್ಸ್‌ಗೆ ಈ ಕೂಟದಿಂದ ಅರ್ಹತೆ ಗಿಟ್ಟಿಸಿದ ಭಾರತದ ನಾಲ್ಕನೇ ಬಾಕ್ಸರ್ ಎನಿಸಿದರು. ಮನಿಕೋನ್ ಅವರು ಏಷ್ಯನ್ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತೆಯಾಗಿದ್ದಾರೆ.

ನರೇಂದರ್ ಅವರು ಸೆಮಿಫೈನಲ್‌ನಲ್ಲಿ 0–5 ರಿಂದ ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್‌ಷಿಪ್ ಪದಕವಿಜೇತ ಕಾಮ್ಶಿಬೆಕ್ ಕುನ್ಕಬಯೇರ್ (ಕಜಕಸ್ತಾನ) ಅವರ ಎದುರು ಸೋಲನುಭವಿಸಿದರು.

ಹಾಲಿ ಫ್ಲೈವೇಟ್ ಚಾಂಪಿಯನ್ ಆಗಿರುವ ಚೀನಾದ ಚಾಂಗ್ ಯುವಾನ್ ಮತ್ತು ಪ್ರೀತಿ ಮಧ್ಯೆ ಉತ್ತಮ ಹೋರಾಟ ಕಂಡುಬಂದಿತು. ಎಡಚರಾದ ಇಬ್ಬರೂ ಉತ್ತಮ ನೈಪುಣ್ಯ ಪ್ರದರ್ಶಿಸಿದರು. 19 ವರ್ಷದ ಪ್ರೀತಿ, ಒಂದು ಹಂತದಲ್ಲಿ 'ಡಬಲ್ ಜೇಬ್', ಎರಡು ಬಲಗೈ ಪ್ರಹಾರದ ಮೂಲಕ ಮೇಲುಗೈ ಸಾಧಿಸುವ ಹಂತಕ್ಕೆ ಹೋಗಿದ್ದರು. ಆದರೆ ಚೀನಾ ಬಾಕ್ಸರ್ ಅವರ ಪಂಚ್‌ಗಳು ಪರಿಣಾಮಕಾರಿ ಆಗಿದ್ದವು. ಮೊದಲ ಸುತ್ತಿನಲ್ಲಿ ಐವರ ಪೈಕಿ ನಾಲ್ವರು ತೀರ್ಪುಗಾರರು ಚಾಂಗ್ ಪರ ತೀರ್ಪುನೀಡಿದರು.

ಎರಡನೇ ಸುತ್ತಿನಲ್ಲಿ ಪ್ರೀತಿ, ಎದುರಾಳಿಯ ರಕ್ಷಣೆಯನ್ನು ಭೇದಿಸಲು ಪ್ರಯತ್ನಿಸಿದರು. ಆದರೆ ತವರಿನ ಒಕ್ಕೊರಲ ಬೆಂಬಲ ಪಡೆದಿದ್ದ ಚಾಂಗ್ ಉತ್ತಮ ರಕ್ಷಣೆ ಪ್ರದರ್ಶಿಸುವಲ್ಲಿ ಹಿಂದೆ ಬೀಳಲಿಲ್ಲ. ಎರಡನೇ ಸುತ್ತಿನಲ್ಲಿ ಪ್ರೀತಿ ಅವರ ತಲೆಯ ಹಿಂಭಾಗಕ್ಕೆ ಗುದ್ದಿದ್ದಕ್ಕೆ ಚಾಂಗ್‌ಗೆ ಕೆಲವು ಬಾರಿ ಎಚ್ಚರಿಕೆ ನೀಡಲಾಯಿತು. ಕೊನೆಯ ಮೂರು ನಿಮಿಷ ಅವರು ಉತ್ತಮ ರಕ್ಷಣಾತ್ಮಕ ಕೌಶಲ ಪ್ರದರ್ಶಿಸಿದರು

75 ಕೆ.ಜಿ. ಸೆಮಿಫೈನಲ್‌ನಲ್ಲಿ ಲವ್ಲಿನಾ ಅವರು ದೀರ್ಘ 'ರೀಚ್' ಮತ್ತು ನೇರ ಪಂಚ್‌ಗಳ ಮೂಲಕ ಹೋರಾಟವನ್ನು ತಮ್ಮ ನಿಯಂತ್ರಣಕ್ಕೆ ಪಡೆದರು. ಮನಿಕೋನ್ ಅವರು ನಂತರವೂ ಹೆಚ್ಚು ಪ್ರತಿರೋಧ ಪ್ರದರ್ಶಿಸಲಿಲ್ಲ.

ಭಾರತದ ಪ್ರೀತಿ ಪವಾರ್ (ಕೆಂಪು ಧಿರಿಸು) ಅವರು ಚೀನಾದ ಚಾಂಗ್ ಯುವಾನ್ ಅವರಿಗೆ ಪಂಚ್ ಮಾಡಿದ್ದು ಹೀಗೆ – ಪಿಟಿಐ ಚಿತ್ರ

ಚೀನಾ ಸ್ಪರ್ಧಿ ಪರ ತೀರ್ಪು

ಹಾಂಗ್‌ಝೌ: ಭಾರತದ ಸಚಿನ್ ಸಿವಾಚ್ ಅವರು 57 ಕೆ.ಜಿ. ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ 1–4 ರಿಂದ ಚೀನಾದ ಲಿಯು ಪಿಂಗ್ ಅವರಿಗೆ ಮೂರು ನಿಮಿಷ, ಏಳು ಸೆಕೆಂಡುಗಳ ಸೆಣಸಾಟದಲ್ಲಿ ಸೋತರು. ವಿಲಕ್ಷಣವೆಂಬಂತೆ ಹೋರಾಟದ ವೇಳೆ ಇಬ್ಬರ ತಲೆಗಳು ಡಿಕ್ಕಿಯಾಗಿ, ಚೀನಾದ ಬಾಕ್ಸರ್ ಹಣೆಗೆ ಗಾಯವಾಯಿತು. ಪಿಂಗ್ ಮೊದಲ ಸುತ್ತಿನಲ್ಲಿ 4–1 ಜಯ ಪಡೆದಿದ್ದರು. ರಕ್ತ ಸುರಿಯುತ್ತಿದ್ದ ಕಾರಣ ಅವರು ಪಂದ್ಯ ಮುಂದುವರಿಸುವ ಸ್ಥಿತಿಯಲ್ಲಿರಲಿಲ್ಲ. ತೀರ್ಪುಗಾರರು ಚೀನಾ ಸ್ಪರ್ಧಿ ಪರ ತೀರ್ಪು ನೀಡಿದರು.


ಕಂಚು ಗೆದ್ದ ನರೇಂದರ್ ಬೆರ್ವಾಲ್

ಅಭಿಷೇಕ್ ವರ್ಮಾ

ಜ್ಯೋತಿ ಸುರೇಖಾ –ಪಿಟಿಐ ಚಿತ್ರ

ಆರ್ಚರಿ: ಭಾರತದ ಮೂವರು ಫೈನಲ್‌ಗೆ

ಹಾಂಗ್‌ಝೌ (ಪಿಟಿಐ): ಓಜಸ್ ದೇವತಾಳೆ, ಅಭಿಷೇಕ್ ವರ್ಮಾ ಮತ್ತು ಜ್ಯೋತಿ ಸುರೇಖಾ ಅವರು ಏಷ್ಯನ್ ಕ್ರೀಡಾಕೂಟದ ಆರ್ಚರಿ ಸ್ಪರ್ಧೆಯ ವೈಯಕ್ತಿಕ ಕಾಂಪೌಂಡ್ ವಿಭಾಗದಲ್ಲಿ ಫೈನಲ್ ಪ್ರವೇಶಿಸುವ ಮೂಲಕ ಭಾರತಕ್ಕೆ ಮೂರು ಪದಕಗಳನ್ನು ಖಚಿತಪಡಿಸಿದ್ದಾರೆ.

ಪುರುಷರ ಅಂತಿಮ ಸುತ್ತಿನಲ್ಲಿ ಓಜಸ್ ಮತ್ತು ಅಭಿಷೇಕ್ ಮುಖಾಮುಖಿಯಾಗಲಿದ್ದಾರೆ. ಈ ಮೂಲಕ ಏಷ್ಯನ್ ಕ್ರೀಡಾಕೂಟದಲ್ಲಿ ಆರ್ಚರಿಯ ವೈಯಕ್ತಿಕ ವಿಭಾಗದಲ್ಲಿ ಭಾರತಕ್ಕೆ ಮೊದಲ ಚಿನ್ನ ದೊರೆಯಲಿದೆ.

ಮಹಿಳೆಯರ ಕಾಂಪೌಂಡ್ ವಿಭಾಗದ ಸೆಮಿಫೈನಲ್‌ನಲ್ಲಿ ಜ್ಯೋತಿಗೆ ಮಣಿದ ಸ್ವದೇಶದ ಅದಿತಿ ಸ್ವಾಮಿ ಅವರು ಕಂಚಿನ ಪದಕಕ್ಕೆ ಪೈಪೋಟಿ ನಡೆಸಲಿದ್ದಾರೆ. ಫೈನಲ್‌ನಲ್ಲಿ ಜ್ಯೋತಿ ಅವರು ದಕ್ಷಿಣ ಕೊರಿಯಾದ ಸೊ ಚೇವನ್ ವಿರುದ್ಧ ಸೆಣಸಾಡುವರು.

ವೈಯಕ್ತಿಕ ರಿಕರ್ವ್ ವಿಭಾಗದಲ್ಲಿ ಭಾರತದ ಸವಾಲು ಅಂತ್ಯಗೊಂಡಿತು. ನಿರೀಕ್ಷೆ ಮೂಡಿಸಿದ್ದ ಅತಾನು ದಾಸ್, ಧೀರಜ್ ಬೊಮ್ಮದೇವರ ನಿರಾಸೆ ಅನುಭವಿಸಿದರು.

ಹಾಲಿ ವಿಶ್ವ ಚಾಂಪಿಯನ್ ದೇವತಾಳೆ ಅವರು ಸೆಮಿಫೈನಲ್‌ನಲ್ಲಿ ಏಳನೇ ಶ್ರೇಯಾಂಕದ ದಕ್ಷಿಣ ಕೊರಿಯಾದ ಯಾಂಗ್ ಜೇವೊನ್ ವಿರುದ್ಧ 150–146 ಅಂತರದಿಂದ ಜಯ ಸಾಧಿಸಿ ಫೈನಲ್‌ಗೆ ಮುನ್ನಡೆದರು. ಅಭಿಷೇಕ್ ವರ್ಮಾ ಅವರು ಅಗ್ರ ಶ್ರೇಯಾಂಕದ ದಕ್ಷಿಣ ಕೊರಿಯಾದ ಜೂ ಜೇಹೂನ್ ಅವರನ್ನು 147-145ರಿಂದ ಸೋಲಿಸಿ, ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿದರು.

ಕಾಂಪೌಂಡ್ ಮತ್ತು ರಿಕರ್ವ್ ವಿಭಾಗದಲ್ಲಿ ಭಾರತದ ತಂಡಗಳು ಕ್ವಾರ್ಟರ್ ಫೈನಲ್ ಪ್ರವೇಶಿಸಿವೆ.

ಬ್ಯಾಡ್ಮಿಂಟನ್ ಸಿಂಗಲ್ಸ್: ಕಿದಂಬಿ ಶ್ರೀಕಾಂತ್ ಮುನ್ನಡೆ

ಪ್ರಿ ಕ್ವಾರ್ಟರ್‌ಗೆ ಸಿಂಧು, ಪ್ರಣಯ್

ಹಾಂಗ್‌ಝೌ (ಪಿಟಿಐ): ಗೆಲುವಿನ ಓಟ ಮುಂದುವರಿಸಿದ ಭಾರತದ ಎಚ್.ಎಸ್.ಪ್ರಣಯ್, ಪಿ.ವಿ.ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಅವರು ಏಷ್ಯನ್ ಕ್ರೀಡಾಕೂಟದ ಬ್ಯಾಡ್ಮಿಂಟನ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಪ್ರಣಯ್ 21–9, 21–12 ರಿಂದ ಮಂಗೋಲಿಯದ ಬಟ್ಡವಾ ಮುಂಕಬತ್ ಅವರನ್ನು ಮಣಿಸಿದರು.

ಬೆನ್ನು ನೋವಿನ ಕಾರಣ ತಂಡ ವಿಭಾಗದ ಫೈನಲ್‌ನಲ್ಲಿ ಚೀನಾ ವಿರುದ್ಧ ಆಡದೇ ಇದ್ದ ಪ್ರಣಯ್, 25 ನಿಮಿಷಗಳಲ್ಲಿ ಗೆಲುವು ಸಾಧಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 7ನೇ ಸ್ಥಾನದಲ್ಲಿರುವ ಅವರು ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಕಜಕಸ್ತಾನದ ದಿಮಿತ್ರಿ ಪನರಿನ್ ವಿರುದ್ಧ ಪೈಪೋಟಿ ನಡೆಸುವರು. ಇನ್ನೊಂದು ಪಂದ್ಯದಲ್ಲಿ ಶಿಸ್ತಿನ ಆಟವಾಡಿದ ಶ್ರೀಕಾಂತ್ 21–16, 21–11 ರಿಂದ ಕೊರಿಯಾದ ಲೀ ಯುನ್ ಗ್ಯು ಅವರ ಸವಾಲನ್ನು ಬದಿಗೊತ್ತಿದ್ದರು.

ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಸಿಂಧು 21–10, 21–15 ರಿಂದ ವಿಶ್ವದ 21ನೇ ರ‍್ಯಾಂಕ್‌ನ ಆಟಗಾರ್ತಿ ಚೀನಾ ತೈಪೆಯ ವೆ ಚಿ ಸು ಅವರನ್ನು ಮಣಿಸಿದರು. ಮುಂದಿನ ಪಂದ್ಯದಲ್ಲಿ ಅವರು ಇಂಡೊನೇಷ್ಯಾದ ಪುತ್ರಿ ಕುಸುಮ ವರ್ದಿನಿ ವಿರುದ್ಧ ಪೈಪೋಟಿ ನಡೆಸುವರು.

ಆದರೆ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಕಣದಲ್ಲಿದ್ದ ಇನ್ನೊಬ್ಬ ಆಟಗಾರ್ತಿ ಅಶ್ಮಿತಾ ಚಲಿಹಾ ಅವರ ಸವಾಲಿಗೆ ತೆರೆಬಿತ್ತು. ಇಂಡೊನೇಷ್ಯಾದ ಜಾರ್ಜಿಯಾ ಮರಿಸ್ಕಾ ತುನ್‌ಜುಂಗ್ 21–17, 21–16 ರಿಂದ ಅಶ್ಮಿತಾ ಎದುರು ಗೆದ್ದರು.

ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ವಿಶ್ವದ 17ನೇ ರ‍್ಯಾಂಕ್‌ನ ಜೋಡಿ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ 21–14, 21–12 ರಿಂದ ಆಮಿನತ್ ನಬೀಹಾ ಮತ್ತು ಫಾತಿಮತ್ ನಬೀಹಾ ಅವರನ್ನು ಮಣಿಸಿ ಶುಭಾರಂಭ ಮಾಡಿದರು.

ಇದೇ ವಿಭಾಗದಲ್ಲಿ ಕಣದಲ್ಲಿರುವ ತನಿಶಾ ಕ್ರಾಸ್ಟೊ- ಅಶ್ವಿನಿ ಪೊನ್ನಪ್ಪ ಅವರೂ ಎರಡನೇ ಸುತ್ತು ಪ್ರವೇಶಿಸಿದರು. ಭಾರತದ ಜೋಡಿ 21–2, 12–2 ರಿಂದ ಮುನ್ನಡೆಯಲ್ಲಿದ್ದಾಗ ಮಾಲ್ಡೀವ್ಸ್‌ನ ಎದುರಾಳಿಗಳಾದ ಮಯಿಸಾ ಫತುಹುಲ್ಲಾ ಇಸ್ಮಾಯಿಲ್- ಆಯಿಷತ್ ಅಫ್ನಾನ್ ರಶೀದ್ ಅವರು ಹಿಂದೆ ಸರಿದರು.

ಪಿ.ವಿ.ಸಿಂಧು ಆಟದ ವೈಖರಿ –ಪಿಟಿಐ ಚಿತ್ರ